ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದು ಆರ್‌ಸಿಬಿ – ಡೆಲ್ಲಿ ಸೆಣಸು

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಶನಿವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಆರ್‌ಸಿಬಿ ಸೆಣಸಲಿದೆ. ತವರಿನಲ್ಲಿ ನಡೆದ ಎಲ್ಲ ಪಂದ್ಯಗಳನ್ನು ಗೆದ್ದಿರುವ ರಜತ್ ಪಾಟೀದಾರ್ ಬಳಗ ಸತತ ನಾಲ್ಕನೇ ಗೆಲುವಿನತ್ತ ಕಣ್ಣು ನೆಟ್ಟಿದೆ. ಈವರೆಗೆ ಕೇವಲ ಎರಡು ಪಂದ್ಯ ಗೆದ್ದಿರುವ ಡೆಲ್ಲಿ ತಂಡ ವಿಜಯದ ಹಳಿಗೆ ಮರಳುವ ಕಾತುರದಲ್ಲಿದೆ.

ಸೊಂಪಾದ ಪುಟಗಳು

ಮಹಿಳಾ ಮೀಸಲು: ವಾಗ್ವಾದದಿಂದ ಇತಿಹಾಸದತ್ತ

ವೀಕೆಂಡ್ ವಿತ್ ಮೋಹನ್ | ಮೋಹನ್ ವಿಶ್ವ | 6

ಆಮದಿಂದಲೇ ಅಲ್ಲವೇ ಆಮಯ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ | ಡಾ. ಸಾಧನಶ್ರೀ | 7

ದಾರಿದೀಪೋಕ್ತಿ

ನಮಗೆ ಎದುರಾದ ಸಮಸ್ಯೆಗಳನ್ನು ಬೆಟ್ಟದಂತೆ ನೋಡಬಾರದು, ಅವುಗಳನ್ನು ನಮ್ಮನ್ನು ಎತ್ತರಕ್ಕೆ ಕೊಂಡೊಯ್ಯುವ ಮೆಟ್ಟಿಲುಗಳು ಎಂದು ಭಾವಿಸಿದರೆ ಗುರಿ ತಲುಪುವುದು ಸುಲಭವಾಗುತ್ತದೆ.

ವಕ್ರತುಂಡೋಕ್ತಿ

ಕೆಲಸದ ನಡುವೆ ಐದು ನಿಮಿಷ 'ಚೆಕ್' ಮಾಡಲು ಹೋಗಿ, ಎರಡು ಗಂಟೆಯ ನಂತರ ಯಾರದ್ದೋ ಮಗುವಿನ ನಾಮಕರಣದ ಫೋಟೋ ನೋಡುತ್ತಾ ಕುಳಿತುಕೊಳ್ಳುವ ಜಾಗಕ್ಕೆ 'ಫೇಸ್ ಬುಕ್' ಎಂದು ಹೇಳಬಹುದು.

ಜನಪ್ರಿಯ ನಾಯಕರ ಪಟ್ಟಿಯಲ್ಲಿ ಮೋದಿ

ನವದೆಹಲಿ: ಅಮೆರಿಕ ಮೂಲದ ಮಾರ್ನಿಂಗ್ ಕನ್ಸಲ್ಟ್ ನಡೆಸಿದ ಸಮೀಕ್ಷೆಯಲ್ಲಿ ಪ್ರಧಾನಿ ಮೋದಿ, 'ವಿಶ್ವದ ಅತ್ಯಂತ ಜನಪ್ರಿಯ ನಾಯಕ'ರಾಗಿ ಹೊರಹೊಮ್ಮಿದ್ದಾರೆ. ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೇ-ಮ್ಯುಂಗ್ (ಶೇ. 63) 2ನೇ ಸ್ಥಾನದಲ್ಲಿ, ಜೆಕ್ ಗಣರಾಜ್ಯದ ಪ್ರಧಾನಿ ಆಂಡ್ರೆಜ್ ಬಾಬಿಸ್ (ಶೇ. 55) ಮೂರನೇ ಸ್ಥಾನದಲ್ಲಿದ್ದಾರೆ.

ಎನ್‌ಡಿಎ ಸರಕಾರಕ್ಕೆ ಮುಖಭಂಗ ಮೀಸಲು ಮಸೂದೆಗೆ ಸೋಲು

54 ಮತಗಳ ಅಂತರದಿಂದ ಮಹಿಳಾ ಮೀಸಲು ವಿಧೇಯಕ ತಿರಸ್ಕೃತ
ಕ್ಷೇತ್ರ ಮರುವಿಂಗಡಣೆ ತಿದ್ದುಪಡಿ ಮಸೂದೆ ಮಂಡನೆಗೆ ಹಿಂದೇಟು

ದೆಹಲಿ: ಕೇಂದ್ರ ಸರಕಾರದ ಭಾರೀ ಪ್ರಯತ್ನಗಳ ಹೊರತಾಗಿಯೂ ಮಹತ್ವಾಕಾಂಕ್ಷಿ ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯಲ್ಲಿ ಸೋಲಾಗಿದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರ ಮರುವಿಂಗಡಣೆ ಮಸೂದೆ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನು (ತಿದ್ದುಪಡಿ) ಮಸೂದೆಯನ್ನು ಮತಕ್ಕೆ ಹಾಕದೇ ಲೋಕಸಭೆಯ ದಿನದ ಕಲಾಪವನ್ನು ಮುಂದೂಡಲಾಯಿತು.

ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲು ಕಲ್ಪಿಸುವ 131ನೇ ತಿದ್ದುಪಡಿ ವಿಧೇಯಕ ಅಂಗೀಕಾರಕ್ಕೆ ಲೋಕಸಭೆಯ ಮೂರನೇ ಎರಡರಷ್ಟು ಸಂಸದರ ಬೆಂಬಲ ಅಗತ್ಯವಿತ್ತು.

ಲೋಕಸಭೆಯ 543 ಸದಸ್ಯರ ಪೈಕಿ 528 ಸದಸ್ಯರು ಮತದಾನದಲ್ಲಿ ಪಾಲ್ಗೊಂಡಿದ್ದರು. ಈ ಪೈಕಿ 298 ಸದಸ್ಯರು ಪರವಾಗಿ ಮತ ಚಲಾಯಿಸಿದರು. 230 ಸದಸ್ಯರು ವಿರುದ್ಧ ಮತ ಚಲಾಯಿಸಿದರು. ಮಸೂದೆ ಅಂಗೀಕಾರಕ್ಕೆ ಉಪಸ್ಥಿತ ಸಂಸದರ ಪೈಕಿ 352 ಸದಸ್ಯರ ಮತ ಬೇಕಿತ್ತು. 54 ಮತಗಳ ಕೊರತೆಯಿಂದ ಮಸೂದೆಗೆ ಸೋಲಾಯಿತು.

ಮಸೂದೆ ಸೋಲುತ್ತಿದ್ದಂತೆಯೇ ಸಂಸತ್‌ನ ಹೊರಭಾಗದಲ್ಲಿ ಎನ್‌ಡಿಎ ಸಂಸದರು ಪ್ರತಿಭಟನೆ ನಡೆಸಿದರು. ವಿಪಕ್ಷಗಳ ವಿರುದ್ಧ ಧಿಕ್ಕಾರ ಕೂಗಿದರು. ವಿಪಕ್ಷಗಳು ಮಹಿಳಾ ವಿರೋಧಿಗಳು ಎಂದು ಆಕ್ರೋಶ ಹೊರ ಹಾಕಿದರು. ಈ ಮಧ್ಯೆ, ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿ ಮಾಡಿಯೇ ತೀರುತ್ತೇವೆ ಅಂತ ಎನ್‌ಡಿಎ ಸಂಸದರು ಶಪಥ ಮಾಡಿದ್ದಾರೆ. ಇಂದಲ್ಲ ನಾಳೆ ನಾವು ಈ ಮಸೂದೆಯನ್ನು ಜಾರಿಗೊಳಿಸುತ್ತೇವೆ ಎಂದು ಹೇಳಿದ್ದಾರೆ. ವಿಪಕ್ಷಗಳ ಹಠ, ಅಸಹಕಾರದಿಂದಲೇ ವಿಧೇಯಕಗಳಿಗೆ ಸೋಲಾಗಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಕಿಡಿಕಾರಿದರು.

ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ಮಸೂದೆಗಳು ಸೇರಿದಂತೆ ಸಂಸತ್ತಿನಲ್ಲಿ ಗುರುವಾರ 3 ಪ್ರಮುಖ ಮಸೂದೆಗಳನ್ನು ಪರಿಚಯಿಸಲಾಗಿತ್ತು. ಮೊದಲಿಗೆ ಮಹಿಳಾ ಮೀಸಲಾತಿ ಮಸೂದೆಯನ್ನು ಮತಕ್ಕೆ ಹಾಕಲಾಯಿತು. ಈ ವಿಧೇಯಕಕ್ಕೆ ಸೋಲಾಗುತ್ತಿದ್ದಂತೆ ಮತ್ತೆರಡು ಮಸೂದೆಯನ್ನು ಮತಕ್ಕೆ ತೆಗೆದುಕೊಳ್ಳದೇ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪವನ್ನು ಶನಿವಾರಕ್ಕೆ ಮುಂದೂಡಿದರು.

ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ವಿಂಗಡಣೆಯಿಂದ ಯಾವುದೇ ರಾಜ್ಯದ ಲೋಕಸಭಾ ಸೀಟುಗಳ ಸಂಖ್ಯೆ ಬದಲಾಗದು. ಆದರೂ, ಇಂಡಿ ಮೈತ್ರಿಕೂಟದ ಎಲ್ಲಾ ಸದಸ್ಯರು ಈ ಮಸೂದೆ ವಿರೋಧಿಸಿದ್ದಾರೆ. ಮಸೂದೆ ಕುರಿತ ಮಹತ್ವದ ಚರ್ಚೆಯಲ್ಲಿ 56 ಮಹಿಳಾ ಸದಸ್ಯರು ಮಾತನಾಡಿದ್ದು ಒಂದು ದಾಖಲೆ.

-ಅಮಿತ್ ಶಾ, ಕೇಂದ್ರ ಗೃಹ ಸಚಿವ

ಇದು ಮಹಿಳಾ ಮೀಸಲಾತಿ ಮಸೂದೆಯಲ್ಲ. ಭಾರತದ ನಕ್ಷೆ ಬದಲಿಸಲು ನಾವು ಬಿಡುವುದಿಲ್ಲ. ಓಬಿಸಿ ದಲಿತರ ಹಕ್ಕು ಕಿತ್ತುಕೊಳ್ಳಲು ಬಿಡುವುದಿಲ್ಲ. ಭಾರತೀಯ ಆರ್ಥಿಕತೆಯಲ್ಲಿ ದಲಿತರು, ಓಬಿಸಿ, ಆದಿವಾಸಿಗಳು ಎಲ್ಲಿದ್ದಾರೆ? ಕಾರ್ಯಾಂಗ, ನ್ಯಾಯಾಂಗ, ಖಾಸಗಿ ವಲಯದಲ್ಲಿ ಇವರ ಪ್ರತಿನಿಧಿತ್ವ ಎಲ್ಲಿದೆ? ಓಬಿಸಿ, ದಲಿತರು, ಹಿಂದೂ ಎನ್ನುತ್ತಾರೆ, ಆದರೆ ಅಧಿಕಾರದಲ್ಲಿ ಅವರಿಗೆ ಅವಕಾಶ ನೀಡುವುದಿಲ್ಲ.

-ರಾಹುಲ್ ಗಾಂಧಿ, ಲೋಕಸಭೆ ಪ್ರತಿಪಕ್ಷ ನಾಯಕ

ಸರಕಾರದ ಕ್ರಮಕ್ಕೆ ಹಿನ್ನಡೆ

2023ರ ಸೆಪ್ಟೆಂಬರ್‌ನಲ್ಲಿ ಸಂಸತ್ತು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದ ಸ್ಥಾನಗಳನ್ನು ಮೀಸಲಿಡುವ 'ನಾರಿ ಶಕ್ತಿ ವಂದನ ಅಧಿನಿಯಮ'ವನ್ನು ಅಂಗೀಕರಿಸಿತ್ತು. 2027ರ ಜನಗಣತಿಯ ನಂತರ ನಡೆಯುವ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಗೆ ಇದು ಸಂಬಂಧಿಸಿದ ಕಾರಣ, 2034ಕ್ಕೂ ಮೊದಲು ಈ ಮೀಸಲಾತಿ ಜಾರಿಗೆ ಬರುವುದಿಲ್ಲ ಎಂದು ತಿಳಿಸಲಾಗಿತ್ತು. ಈ ನಡುವೆ 2011ರ ಜನಗಣತಿ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆಯೊಂದಿಗೆ 2029ರ ಚುನಾವಣೆಯಲ್ಲಿ ಈ ಮೀಸಲು ಜಾರಿಗೆ ಕೇಂದ್ರ ಸರಕಾರ ಚಿಂತನೆ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಮಹಿಳಾ ಮೀಸಲು ಕುರಿತ ಸಂವಿಧಾನ (131ನೇ ತಿದ್ದುಪಡಿ) ಮಸೂದೆ, 2026, ಕ್ಷೇತ್ರ ಮರುವಿಂಗಡಣೆ ಮಸೂದೆ, 2026 ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನು (ತಿದ್ದುಪಡಿ) ಮಸೂದೆ ಜಾರಿಗೆ ತರಲು ಸರ್ಕಾರವು ಮುಂದಾಗಿತ್ತು.

ಚುನಾವಣಾ ನಕ್ಷೆ ಬದಲಿಸುವ ಬಿಲ್: ರಾಹುಲ್

ಇದಕ್ಕೂ ಮುನ್ನ ಮಹಿಳಾ ಮಸೂದೆಯ ಜತೆ ಕ್ಷೇತ್ರ ವಿಂಗಡಣೆ ವಿಧೇಯಕವನ್ನು ಜತೆಯಾಗಿ ಮಂಡಿಸಿರುವುದನ್ನು ತೀವ್ರವಾಗಿ ವಿರೋಧಿಸಿದ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಇದು ಮಹಿಳಾ ಮೀಸಲಾತಿ ಮಸೂದೆಯಲ್ಲ. ಇದಕ್ಕೂ ಮಹಿಳಾ ಸಬಲೀಕರಣಕ್ಕೂ ಯಾವುದೇ ಸಂಬಂಧವಿಲ್ಲ. ಇದು ಭಾರತದ ಚುನಾವಣಾ ನಕ್ಷೆಯನ್ನು ಬದಲಾಯಿಸುವ ಪ್ರಯತ್ನವಾಗಿದೆ ಎಂದು ಗುಡುಗಿದರು.

ಯೋಗೇಶ್ ಗೌಡ ಕೊಲೆ ಪ್ರಕರಣದ ಹದಿನಾರು ಆರೋಪಿಗಳಿಗೆ ಜೀವಾವಧಿ ಶಿಕ್ಷೆ | ಆರೋಪಿಗಳ ಜತೆ ಶಾಮೀಲಾದ ಇನ್‌ಸ್ಪೆಕ್ಟರ್‌ಗೆ ಏಳು ವರ್ಷ ಜೈಲು

ಕೈ ಶಾಸಕ ವಿನಯ್‌ಗೆ ಆಜೀವ ಕಾರಾಗೃಹ ಸಜೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ರಾಜಕಾರಣದಲ್ಲಿ ಸಂಚಲನ ಮೂಡಿಸಿದ್ದ ಧಾರವಾಡ ಜಿಲ್ಲಾ ಪಂಚಾಯತ್ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ 16 ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಹತ್ವದ ತೀರ್ಪು ನೀಡಿದೆ. ಇದರೊಂದಿಗೆ 10 ವರ್ಷಗಳ ಹಿಂದಿನ ಪ್ರಕರಣ ತಾತ್ವಿಕ ಅಂತ್ಯ ಕಂಡಿದೆ.

ಪ್ರಕರಣದಲ್ಲಿ ಒಟ್ಟು 17 ಮಂದಿಯನ್ನು ಅಪರಾಧಿಗಳು ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಬುಧವಾರ ತೀರ್ಪು ನೀಡಿದ್ದರು. ಗುರುವಾರ ಶಿಕ್ಷೆಯ ಪ್ರಮಾಣ ಘೋಷಣೆಯಾಗಲಿದೆ ಎಂದು ನಿರೀಕ್ಷಿಸಲಾಗಿತ್ತು. → 4

ಮುಂದಿನ ದಾರಿ ಏನು?

- ತೀರ್ಪಿಗೆ ತಡೆ ಕೋರಿ ಶಾಸಕರು ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದು.
- ವರಿಷ್ಠ ನ್ಯಾಯಾಲಯವು ಜೈಲು ಶಿಕ್ಷೆಯ ಜತೆಗೆ ಅಪರಾಧ ನಿರ್ಣಯದ ಮೇಲೂ ತಡೆಯಾಜ್ಞೆ ನೀಡಿದರೆ ಮಾತ್ರ ಅವರ ಶಾಸಕ ಸ್ಥಾನ ಉಳಿಸಿಕೊಳ್ಳಬಹುದು. ಜಾಮೀನೊಂದೇ ಸಾಕಾಗುವುದಿಲ್ಲ.

ಶಾಸಕತ್ವ ಸ್ಥಾನಕ್ಕೆ ಕುತ್ತು

ಜೀವಾವಧಿ ಶಿಕ್ಷೆಗೊಳಗಾಗಿರುವ ಹಿನ್ನೆಲೆಯಲ್ಲಿ ವಿನಯ್ ಕುಲಕರ್ಣಿ ಶಾಸಕತ್ವ ಸ್ಥಾನ ರದ್ದು ಆಗಲಿದೆ. ನ್ಯಾಯಾಲಯದ ಆದೇಶ ಪ್ರತಿ ಸಿಕ್ಕ 48 ಗಂಟೆಯೊಳಗೆ ವಿಧಾನಸಭೆಯ ಕಾರ್ಯದರ್ಶಿ ಅವರು ಶಾಸಕ ಸ್ಥಾನ ರದ್ದಾಗಿರುವ ಬಗ್ಗೆ ಅಧಿಸೂಚನೆ ಹೊರಡಿಸಲಿದ್ದಾರೆ. ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಯ ಶಿಕ್ಷೆಗೊಳಗಾದ ಹಿನ್ನೆಲೆಯಲ್ಲಿ ಶಾಸಕತ್ವ ರದ್ದುಗೊಳ್ಳಲಿದೆ. ಜನಪ್ರತಿನಿಧಿ ಕಾಯ್ದೆಯ ಪ್ರಕಾರ, ಯಾವುದೇ ಒಬ್ಬ ಶಾಸಕ ಯಾವುದೇ ಅಪರಾಧಕ್ಕಾಗಿ ಕನಿಷ್ಠ ಎರಡು ವರ್ಷಗಳ ಕಾಲ ಜೈಲು ಶಿಕ್ಷೆಗೆ ಗುರಿಯಾದರೆ, ಅವರು ಶಿಕ್ಷೆಯಾದ ಕ್ಷಣದಿಂದಲೇ ಅನರ್ಹರಾಗುತ್ತಾರೆ.

ಏನಿದು ಪ್ರಕರಣ?

ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಸೇರಿ ಒಟ್ಟು 21 ಮಂದಿ ವಿರುದ್ಧ ಆರೋಪ ಕೇಳಿ ಬಂದಿತ್ತು. ಜನಪ್ರತಿನಿಧಿಗಳ ಕೋರ್ಟ್ 17 ಆರೋಪಿಗಳನ್ನು ದೋಷಿಗಳೆಂದು ಗುರುತಿಸಿತ್ತು. ಸೋಮಶೇಖರ್ ನ್ಯಾಮಗೌಡ ಹಾಗೂ ವಾಸುದೇವ್ ನಿಲೇಕಣಿಯನ್ನು ಕೋರ್ಟ್ ಖುಲಾಸೆಗೊಳಿತ್ತು. ಇನ್ನು ಇಬ್ಬರು ನಿರ್ದೋಷಿಗಳನ್ನು ಬಿಟ್ಟು ಉಳಿದವರನ್ನು ಸಿಬಿಐ ವಶಕ್ಕೆ ಪಡೆದಿತ್ತು. ಬಳಿಕ ಬೌರಿಂಗ್ ಆಸ್ಪತ್ರೆಯಲ್ಲಿ 17 ಅಪರಾಧಿಗಳ ವೈದ್ಯಕೀಯ ಪರೀಕ್ಷೆ ನಡೆಸಿ ಪರಪ್ಪನ ಅಗ್ರಹಾರಕ್ಕೆ ಶಿಫ್ಟ್ ಮಾಡಲಾಗಿತ್ತು.

ಅಕಾಲಿಕ ಮಳೆಗೆ ರೈತ, ಜಾನುವಾರು ಸಾವು

ಕೊಪ್ಪಳ/ ಶಿವಮೊಗ್ಗ / ಚಿಕ್ಕಮಗಳೂರು: ಶುಕ್ರವಾರ ಮಧ್ಯರಾತ್ರಿ ಸುರಿದ ಅಕಾಲಿಕ ಮಳೆಗೆ ಕೊಪ್ಪಳ ಜಿಲ್ಲೆ ಗಂಗಾವತಿಯ ಜಬ್ಬಲಗುಡ್ಡದಲ್ಲಿ ಕರಿಯಪ್ಪ ದ್ಯಾವಣ್ಣ ಮ್ಯಾದನೇರಿ (36) ಓರ್ವ ರೈತ ಸಿಡಿಲು ಬಡಿದು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಸಿದ್ದಿಕೇರಿಯಲ್ಲಿ ಕುರಿಹಟ್ಟಿಯ ಮೇಲೆ ಸಿಡಿಲು ಬಡಿದು ಆರು ಆಕಳು ಸಾವನ್ನಪ್ಪಿವೆ. ಚಿಕ್ಕಮಗಳೂರಿನ ಮೂಡಿಗೆರೆಯಲ್ಲಿ ಮಳೆಗೆ 60 ವಿದ್ಯುತ್ ಕಂಬಗಳು, ಹಲವಾರು ಮರಗಳು ಧರೆಗುರುಳಿವೆ. ಶಿವಮೊಗ್ಗ ಜಿಲ್ಲೆಯ ಗಬಡಿ ಗ್ರಾಮದಲ್ಲಿ ಮನೆಯ ಹೆಂಚುಗಳು ಹಾರಿಹೋಗಿದ್ದು, ಅಡಿಕೆ ಮರಗಳು ಮುರಿದು ಬಿದ್ದಿವೆ. ಹಲವು ಗ್ರಾಮಗಳಲ್ಲಿ ಹೊಲ, ಮನೆಗಳಿಗೆ ನೀರು ನುಗ್ಗಿದೆ.

ಬಸ್- ಕಾರು ಅಪಘಾತ: ಪ.ಪಂ.ಸದಸ್ಯನ ಕುಟುಂಬ ಭಸ್ಮ

9 ಮಂದಿ ಸಜೀವ ದಹನ

ಯಾದಗಿರಿ: ಕಾರು ಮತ್ತು ಖಾಸಗಿ ಬಸ್ ಮುಖಾಮುಖಿ ಡಿಕ್ಕಿಯಾಗಿ ಹೊತ್ತಿ ಉರಿದ ಪರಿಣಾಮ, ನಾಲ್ವರು ಮಕ್ಕಳ ಸಹಿತ ಒಂದೇ ಕುಟುಂಬದ 9 ಮಂದಿ ಸಜೀವ ದಹನವಾಗಿರುವ ಘಟನೆ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ದೇವಾಪುರ ಬಳಿ ನಡೆದಿದೆ.

ರಾಯಚೂರು ಜಿಲ್ಲೆ ಸಿರವಾರ ಪಟ್ಟಣ ಪಂಚಾಯಿತಿ ಸದಸ್ಯ ಕೃಷ್ಣನಾಯಕ (52) ಪತ್ನಿ ಅನಂತಕಲಾ (45) ಶರಣಪ್ಪ (36), ನಿಸರ್ಗ ಶರಣಪ್ಪ (30), ಸಿದ್ಧಾರ್ಥ ಶರಣಪ್ಪ (3), ಶಶಿಕಲಾ (30), ಚಂದನ್ (8), ಅದ್ವಿಕಾ ಶರಣಪ್ಪ

(5), ಶ್ರೀನಿಧಿ ಶರಣಪ್ಪ (ಒಂದೂವರೆ ವರ್ಷ) ಮೃತ ದುರ್ದೈವಿಗಳು. ಬದುಕುಳಿದಿರುವ ಮಗು ಶ್ರೀನಿಧಿ ಪರಿಸ್ಥಿತಿ ಗಂಭೀರವಿದ್ದು, ಕಲಬುರಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಕುಟುಂಬಸ್ಥರು ಅಮವಾಸ್ಯೆ ಪೂಜೆ ನಿಮಿತ್ತ ಕಾರಿನಲ್ಲಿ ಕಲಬುರಗಿಯಿಂದ ಸುರಪುರದ ತಿಂಥಣಿ ಮೌನೇಶ್ವರ ದೇವಾಲಯಕ್ಕೆ ತೆರಳುತ್ತಿದ್ದರು.

ಹೊರ್ಮುಜ್ ಜಲಸಂಧಿ 10 ದಿನ ಮುಕ್ತ

ಟೆಹರಾನ್: ಇರಾನ್ ಸುಪರ್ದಿಯಲ್ಲಿರುವ ಹೊರ್ಮುಜ್ ಜಲಸಂಧಿಯನ್ನು ವಾಣಿಜ್ಯ ಹಡಗುಗಳಿಗೆ ತೆರವುಗೊಳಿಸಿರುವುದಾಗಿ ಟೆಹರಾನ್ ಪ್ರಕಟಿಸಿದೆ. ಅಲ್ಲಿನ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಘ್ಚಿ ಈ ವಿಷಯವನ್ನು ತಿಳಿಸಿದ್ದು, ಯಾವುದೇ ದೇಶದ ಹಡಗನ್ನು ನಾವು ತಡೆಯುವುದಿಲ್ಲ



ಎಂದು ಸ್ಪಷ್ಟಪಡಿಸಿದ್ದಾರೆ. ಇಸ್ರೇಲ್-ಲೆಬನಾನ್ ನಡುವೆ 10 ದಿನಗಳ ಕದನ ವಿರಾಮ ಘೋಷಣೆಯಾದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಆ ಕದನ ವಿರಾಮ ಜಾರಿಯಲ್ಲಿರುವವರೆಗೆ ಪೆಟ್ರೋಲಿಯಂ ಹಾಗೂ ಇನ್ನಿತರ ತೈಲೋತ್ಪನ್ನಗಳನ್ನು ಸಾಗಾಣಿಕೆ ಮಾಡುವ ಜಗತ್ತಿನ ಎಲ್ಲಾ ವಾಣಿಜ್ಯ ಹಡಗುಗಳಿಗೆ ಹೊರ್ಮುಜ್ ಜಲಸಂಧಿ ಮುಕ್ತವಾಗಿರುತ್ತದೆ ಎಂದು ಅವರು ತಿಳಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ರಾಜ್ಯದ ಕ್ಯಾಬ್, ಆಟೋ ಚಾಲಕರಿಗೆ 'ಕನ್ನಡ ಕಡ್ಡಾಯ'ಕ್ಕೆ ಆಗ್ರಹ



ಯುನಿಟ್‌ಗೆ 56 ಪೈಸೆ ದರ ಏರಿಸಿ ಕೆಇಆರ್‌ಸಿ ಆದೇಶ

ಬೇಸಿಗೆ ಮಧ್ಯೆ ವಿದ್ಯುತ್ ದರ ಏರಿಕೆ

ಬೆಂಗಳೂರು: ಬಿರುಬೇಸಿಗೆಯಲ್ಲಿ ಗೃಹಬಳಕೆ ಗ್ರಾಹಕರಿಗೆ ವಿದ್ಯುತ್ ದರ ಏರಿಕೆ ಶಾಕ್ ಎದುರಿಸುವಂತಾಗಿದ್ದು, ಯೂನಿಟ್‌ಗೆ 56 ಪೈಸೆ ದರ ಏರಿಕೆ ಮಾಡಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇ ಆರ್‌ಸಿ) ಆದೇಶಿಸಿದೆ.



ಒಂದು ಯೂನಿಟ್ ಗೆ 56 ಪೈಸೆ ಹೆಚ್ಚಳ ಮಾಡಿ ಆದೇಶ ಹೊರಡಿಸಲಾಗಿದ್ದು, ಮೇ ತಿಂಗಳಲ್ಲಿ ಬರುವ ಬಿಲ್‌ನಲ್ಲಿ ಈ ದರ ಏರಿಕೆ ಅನ್ವಯವಾಗಲಿದೆ. ದರ ಏರಿಕೆ ಸಂಬಂಧ ಎಸ್ಕಾಂಗಳು ಸಲ್ಲಿಸಿದ್ದ ಪ್ರಸ್ತಾವನೆಗೆ ಅಸ್ತು ಎಂದಿರುವ ಕೆಇಆರ್‌ಸಿ ಮೇ ತಿಂಗಳಿನಿಂದ ದರ ಏರಿಕೆ ಅನ್ವಯವಾಗುವಂತೆ ಸೂಚಿಸಿದೆ. → 4

ಕರೆಂಟ್ ಶಾಕ್ ಹೇಗೆ?

- 56 ಪೈಸೆ ಹೆಚ್ಚಳ: ಪ್ರತಿ ಯೂನಿಟ್‌ಗೆ 56 ಪೈಸೆ ಟ್ರೂ ಅಪ್ ಚಾರ್ಜ್ ಸಂಗ್ರಹ.
- ಮೇ 1 ರಿಂದ ಪಡೆಯುವ ಮೀಟರ್ ರೀಡಿಂಗ್‌ಗಳಲ್ಲಿ ಹೊಸ ದರ ಅನ್ವಯ.
- **2,068.38** ಕೋಟಿ ರೂ.ಗಳ ಕಂದಾಯ ಕೊರತೆ ತುಂಬಿಕೊಳ್ಳಲು ಕ್ರಮ.

200 ಯುನಿಟ್‌ಗೆ 112 ರು. ಹೆಚ್ಚಳ

ಗೃಹಬಳಕೆದಾರರು ಮಾತ್ರವಲ್ಲದೆ ವಾಣಿಜ್ಯ ಮತ್ತು ಕೈಗಾರಿಕಾ ಉದ್ದೇಶದ ವಿದ್ಯುತ್ ಗ್ರಾಹಕರಿಗೂ ಈ ಏರಿಕೆ ಅನ್ವಯವಾಗಲಿದೆ. ಉದಾಹರಣೆಗೆ, ಒಂದು ಮನೆ ತಿಂಗಳಿಗೆ 200 ಯೂನಿಟ್ ವಿದ್ಯುತ್ ಬಳಸಿದರೆ, ಆ ಮನೆಯ ಬಿಲ್‌ನಲ್ಲಿ ಕನಿಷ್ಠ 112 ರೂಪಾಯಿಗಳಷ್ಟು ಹೆಚ್ಚುವರಿ ಮೊತ್ತ ಸೇರ್ಪಡೆಯಾಗಲಿದೆ. ಬೃಹತ್ ಪ್ರಮಾಣದಲ್ಲಿ ವಿದ್ಯುತ್ ಬಳಸುವ ಕೈಗಾರಿಕೆಗಳಿಗೆ ಈ ದರ ಏರಿಕೆ ದೊಡ್ಡ ಹೊರೆಯಾಗಿ ಪರಿಣಮಿಸಲಿದೆ.

ರಾಜ್ಯದ ಚಾರಣಿಗರಿಗೆ ಎಸ್‌ಒಪಿ ಜಾರಿ, ಆ್ಯಪ್‌ನಲ್ಲಿ ನೋಂದಣಿ, ಗೈಡ್ ಸೌಲಭ್ಯ ಕಡ್ಡಾಯ

ಇನ್ನು ಚಾರಣಕ್ಕೆ ಮುನ್ನ ನೋಂದಣಿ ಕಡ್ಡಾಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಟ್ರೆಕ್ಕಿಂಗ್ ಹೋದ ಯುವತಿಯೊಬ್ಬಳು 4 ದಿನಗಳ ಕಾಲ ನಾಪತ್ತೆಯಾದ ಮತ್ತು ಪ್ರವಾಸಕ್ಕೆ ಬಂದ ಬಾಲಕಿ ಪ್ರಪಾತಕ್ಕೆ ಉರುಳಿ ಮೃತಪಟ್ಟ ಘಟನೆಯ ಬೆನ್ನಲ್ಲೇ ರಾಜ್ಯ ಸರಕಾರ ಚಾರಣಕ್ಕೆ ಹೋಗುವವರಿಗೆ ಪ್ರತ್ಯೇಕ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ. ದೇಶದಲ್ಲಿ ಟ್ರೆಕ್ಕಿಂಗ್ ಹೋಗಲು ಸಾಮಾನ್ಯ ಮಾರ್ಗದರ್ಶಿ ನಿಯಮ (ಎಸ್‌ಒಪಿ) ಬಿಡುಗಡೆ ಮಾಡಿದ ಮೊದಲ ರಾಜ್ಯ ಎನ್ನುವ ಕೀರ್ತಿಗೆ ಕರ್ನಾಟಕ ಪಾತ್ರವಾಗಿದೆ.

ಇಷ್ಟು ದಿನ ಚಾರಣಕ್ಕೆ ಹೋಗುವವರಿಗೆ ಪ್ರತ್ಯೇಕ ಎಸ್‌ಒಪಿ ಇರಲಿಲ್ಲ. ಮಾರ್ಗದರ್ಶಕರಿಲ್ಲದಿದ್ದರೂ, ಸ್ವಯಂ ಚಾರಣಕ್ಕೆ ಅವಕಾಶವಿತ್ತು. ಕೆಲವೆಡೆ ಸ್ಥಳೀಯ ಆಡಳಿತದಿಂದ ನಿರ್ಬಂಧಗಳಿತ್ತೇ ಹೊರತು, ಯಾವ ರೀತಿ ಹೋಗಬೇಕು ಎನ್ನುವುದಕ್ಕೆ ಸ್ಪಷ್ಟನೆ ಇರಲಿಲ್ಲ. ಇದೀಗ ಅರಣ್ಯ ಇಲಾಖೆ ಎಸ್‌ಒಪಿ ಸಿದ್ಧಪಡಿಸಿದ್ದು, ಶುಕ್ರವಾರ ಸಚಿವ ಈಶ್ವರ್ ಖಂಡ್ರೆ ಅಧಿಕೃತವಾಗಿ ಬಿಡುಗಡೆಗೊಳಿಸಿದರು.

ಮಾರ್ಗದರ್ಶಿ ಸೂತ್ರಗಳ ಪ್ರಕಾರ , ರಾಜ್ಯದಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲ ಅನುಮೋದಿತ ಚಾರಣ ಪಥಗಳಲ್ಲಿ ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕ ಇಲ್ಲದೆ ಚಾರಣಕ್ಕೆ ಅವಕಾಶವಿಲ್ಲ. ಪ್ರತಿ 10 ಚಾರಣಿಗರಿಗೆ ಒಬ್ಬರು ಸ್ಥಳೀಯ ಪ್ರಕೃತಿ ಮಾರ್ಗದರ್ಶಕರಿರುತ್ತಾರೆ. ಎಲ್ಲ ಚಾರಣ ಪಥಗಳಲ್ಲಿ ಒಂದು ಬಾರಿಗೆ ಗರಿಷ್ಠ 150 ಜನರಿಗೆ ಮಾತ್ರ ಸೀಮಿತಗೊಳಿಸಲಾಗುವುದು. ಚಾರಣಕ್ಕೆ ಬರುವವರು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯ. ಒಂದೊಮ್ಮೆ ಯಾವುದೇ ದಿನ ಒಬ್ಬರೇ ಚಾರಣಿಗರು ನೋಂದಾಯಿಸಿದ್ದರೂ ಗೈಡ್ ಸೌಲಭ್ಯ ಕಲ್ಪಿಸಲಾಗುವುದು. ಗೈಡ್ ಇಲ್ಲದೆ ಚಾರಣಕ್ಕೆ ಅವಕಾಶ ಇರುವುದಿಲ್ಲ.

ಕೊಡಗಿನ ತಡಿಯಾಂಡಮೋಳ್ ಬೆಟ್ಟದಲ್ಲಿ ಕೇರಳದಿಂದ ಚಾರಣಕ್ಕೆ ಬಂದಿದ್ದ ಮಹಿಳೆ ನಾಪತ್ತೆಯಾಗಿ ಕಾಡಿನಲ್ಲಿ 3 ದಿನ ಕಳೆಯುವಂತಾದ ಹಾಗೂ ಅರಣ್ಯ ವ್ಯಾಪ್ತಿಗೆ ಒಳಪಡದ ಚಿಕ್ಕಮಗಳೂರಿನ ಮಾಣಿಕ್ಯಧಾರಾ ಬಳಿ ನಾಪತ್ತೆಯಾಗಿ ಶವವಾಗಿ ಬಾಲಕಿ ಪತ್ತೆಯಾದ ಹಿನ್ನೆಲೆಯಲ್ಲಿ ಚಾರಣಿಗರ ಸುರಕ್ಷತೆಗಾಗಿ ಈ ಎಸ್‌ಒಪಿ ರೂಪಿಸಲಾಗಿದೆ. ಅರಣ್ಯ ಇಲಾಖೆ ವ್ಯಾಪ್ತಿಯ ಚಾರಣ ಪಥಗಳ ಮುಂಗಡ ಟಿಕೆಟ್ ಕಾಯ್ದಿರಿಸಲು ಆನ್‌ಲೈನ್ ಮೂಲಕ ಅವಕಾಶ ನೀಡಲು ಸೂಚನೆ ನೀಡಲಾಗಿದೆ.

-ಈಶ್ವರ್ ಖಂಡ್ರೆ, ಅರಣ್ಯ ಸಚಿವ

ಜಿಪಿಎಸ್ ಅಳವಡಿಸಿದ ವಾಕಿಟಾಕಿ: ಇನ್ಮುಂದೆ ಪ್ರತಿಯೊಂದು ಚಾರಣಪಥದಲ್ಲೂ ನೇಚರ್ ಗೈಡ್‌ಗಳಿಗೆ ಜಿ.ಪಿ.ಎಸ್. ಅಳವಡಿಸಿದ ವಾಕಿ ಟಾಕಿಯನ್ನು ಕಡ್ಡಾಯವಾಗಿ ನೀಡಲಾಗುವುದು. ಅದೇ ರೀತಿ ಪ್ರತಿಯೊಬ್ಬ ಚಾರಣಿಗರ ಮೊಬೈಲ್‌ಗೆ ಚಾರಣಪಥದ ನಕ್ಷೆ ಸಹಿತ ಆ್ಯಪ್ ಅಳವಡಿಸಲಾಗುವುದು. ಅಕಸ್ಮಾತ್ ಯಾರೇ ಚಾರಣಿಗರು ದಾರಿ ತಪ್ಪಿದರೆ ಅವರ ಶೋಧಕ್ಕೆ ಈ ಆ್ಯಪ್ ಸಹಕಾರಿಯಾಗಲಿದೆ. → 4

ಹೊಸ ನಿಯಮಗಳೇನು ?

- ಎಲ್ಲ ಅನುಮೋದಿತ ಚಾರಣ ಪಥಗಳಲ್ಲಿ ಪ್ರತಿ 10 ಚಾರಣಿಗರಿಗೆ ಒಬ್ಬ ಗೈಡ್
- ಚಾರಣದ ಸಂದರ್ಭ ಮೊಬೈಲ್ ಟ್ರ್ಯಾಕಿಂಗ್ ಆ್ಯಪ್ ಬಳಸುವುದು ಕಡ್ಡಾಯ
- ಎಲ್ಲ ನೇಚರ್ ಗೈಡ್‌ಗಳಿಗೆ ಜಿ.ಪಿ.ಎಸ್. ಅಳವಡಿಸಿದ ವಾಕಿ ಟಾಕಿ ಸೌಲಭ್ಯ
- ಚಾರಣದ ಸ್ಥಳದಲ್ಲಿ ಆಯುಧ ಬಳಕೆ, ಕ್ಯಾಂಪ್ ಫೈರ್‌ಗೆ ಅವಕಾಶ ನಿಷಿದ್ಧ
- 10 ಚಾರಣಿಗರಿಗೆ ಒಬ್ಬ ಗೈಡ್ ಕಡ್ಡಾಯ

ಸಮಾಚಾರ ಸಣ್ಣದಲ್ಲ

ಐಪಿಎಲ್ ಟಿಕೆಟ್ ಮಾರಾಟ: ಒಬ್ಬ ಸೆರೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯಗಳ ಟಿಕೆಟ್‌ಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದವರ ವಿರುದ್ಧ ಸಿಸಿಬಿ ಕಾರ್ಯಾಚರಣೆ ಮುಂದುವರೆದಿದ್ದು, ಓರ್ವ ಆರೋಪಿಯನ್ನು ಬಂಧಿಸಲಾಗಿದೆ. ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಐಪಿಎಲ್ ಟಿಕೆಟ್ ಮಾರಾಟ ಮಾಡುತ್ತಿದ್ದ ಚಿನ್ನಸ್ವಾಮಿ ಕ್ರೀಡಾಂಗಣದ ಶ್ರೀ ಲಕ್ಷ್ಮೀ ಕ್ಯಾಂಟೀನ್‌ನ ನೌಕರ ಪಿ.ಚಂದ್ರಶೇಖರ್ ಬಂಧಿತ ಆರೋಪಿ. ಬುಧವಾರ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಲಕ್ನೋ ಸೂಪರ್ ಜೈಂಟ್ಸ್ (ಎಲ್‌ಎಲ್‌ಜಿ) ನಡುವಿನ ಪಂದ್ಯದ ವೇಳೆ ಟಿಕೆಟ್ ಮಾರುತ್ತಿದ್ದಾಗ ಆರೋಪಿಯನ್ನು ಬಂಧಿಸಲಾಗಿದೆ. ಬಂಧಿತನಿಂದ ಸುಮಾರು 100ಕ್ಕೂ ಅಧಿಕ ಐಪಿಎಲ್ ಟಿಕೆಟ್‌ಗಳನ್ನು ಜಪ್ತಿ ಮಾಡಲಾಗಿದೆ. ಪ್ರಕರಣದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಸದಸ್ಯ ಎನ್ನಲಾದ ವ್ಯಕ್ತಿಯೊಬ್ಬರ ಹೆಸರು ಸಹ ಕೇಳಿ ಬಂದಿದ್ದು, ಅವರ ಪತ್ತೆಗೆ ತನಿಖೆ ಮುಂದುವರೆದಿದೆ ಎಂದು ಸಿಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಕುಡಿದು ಬಂದವನಿಂದ ಟೆಸ್ಟ್ ಡ್ರೈವ್: ನಾಲ್ಕು ವಾಹನಗಳಿಗೆ ಡಿಕ್ಕಿ

ಬೆಂಗಳೂರು: ಮಹದೇವಪುರದ ಮಹೀಂದ್ರಾ ಶೋರೂಂ ಸಿಬ್ಬಂದಿ ಮಾಡಿಕೊಂಡ ಎಡವಟ್ಟಿಗೆ ಹಲವು ಹೊಸ ವಾಹನಗಳು ಜಖಂಗೊಂಡಿವೆ. ಕುಡಿದ ಮತ್ತಿನಲ್ಲಿ ಶೋ ರೂಂಗೆ ಬಂದ ವ್ಯಕ್ತಿಯೊಬ್ಬನಿಗೆ ಮಹೀಂದ್ರಾ ಶೋರೂಂ ಸಿಬ್ಬಂದಿ ಕಾರನ್ನು ಟೆಸ್ಟ್ ಡ್ರೈವ್‌ಗೆ ನೀಡಿದ್ದಾರೆ. ಏಪ್ರಿಲ್ 12ರಂದು ಮಹದೇವಪುರದ ವಿಜ್ಞೇಶ್ವರ ನಗರದಲ್ಲಿರುವ ಮಹೀಂದ್ರಾ ಕಾರ್ ಶೋರೂಂನಲ್ಲಿ ಕುಡಿದು ಬಂದಿದ್ದ ಅಭಿಲಾಶ್ ಎಂಬಾತನಿಗೆ ಟೆಸ್ಟ್ ಡ್ರೈವ್ ವಾಹನ ನೀಡಿದ ಸಿಬ್ಬಂದಿಯ ನಿರ್ಲಕ್ಷ್ಯ ತೋರಿದೆ. ಇದರಿಂದ ನಾಲ್ಕು ವಾಹನಗಳು ಜಖಂಗೊಂಡಿದೆ. ಘಟನೆಯಲ್ಲಿ ಒಬ್ಬರ ಕಾಲು ಮುರಿಯುವಂತಹ ಗಂಭೀರ ಅಪಘಾತಕ್ಕೆ ಕಾರಣವಾಗಿದೆ. ಕುಡಿದ ಮತ್ತಿನಲ್ಲಿ ಅಭಿಲಾಶ್, ರಸ್ತೆಯಲ್ಲಿ ಮನಸೋ ಇಚ್ಛೆ ಕಾರು ಓಡಿಸಿದ್ದಾನೆ. ಆತ ನಾಲ್ಕು ಕಾರುಗಳಿಗೆ ಗುದ್ದಿ ಜಖಂಗೊಳಿಸಿದ್ದಾನೆ. ಅಷ್ಟೇ ಅಲ್ಲದೆ, ರಮೇಶ್ ಎಂಬವರ ಕಾರಿಗೆ ಗುದ್ದಿದ ರಭಸಕ್ಕೆ ಅವರ ಕಾಲು ಮುರಿದಿದೆ. ಗಾಯಗೊಂಡ ರಮೇಶ್ ಪ್ರಸ್ತುತ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಭಿಲಾಶ್ ಕೂಡ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಈ ಘಟನೆ ಸಂಬಂಧ ಮಹದೇವಪುರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಮಹದೇವಪುರ ಸಂಚಾರಿ ಪೊಲೀಸರು ಅಭಿಲಾಶ್‌ಗೆ ನೋಟಿಸ್ ಜಾರಿ ಮಾಡಿದ್ದು, ಐಎಂವಿ ಕಾಯಿದೆ ಹಾಗೂ ಬಿಎನ್‌ಎಸ್ 125(ಎ), 281 ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಬ್ರಿಡ್ಜ್ ಟು ಬೆಂಗಳೂರು ಸಂವಾದ ಕಾರ್ಯಕ್ರಮ ಯಶಸ್ವಿ

ನ.17ರಿಂದ 19ರವರೆಗೆ ಬೆಂಗಳೂರು ಟೆಕ್ ಶೃಂಗಸಭೆ | ವಿಶ್ವದ ಜತೆಗಿನ ಪಾಲುದಾರಿಕೆಗೂ ಕರ್ನಾಟಕ ತೀವ್ರ ಒಲವು: ಸಿಎಂ

ದೆಹಲಿ/ಬೆಂಗಳೂರು: ಕರ್ನಾಟಕ ಸರಕಾರದ ಜಾಗತಿಕ ನಾವೀನ್ಯತೆ ಮತ್ತು ಹೂಡಿಕೆ ಕ್ಷೇತ್ರದಲ್ಲಿ ತನ್ನ ಸ್ಥಾನವನ್ನು ಮತ್ತಷ್ಟು ಬಲಪಡಿಸುವ ದಿಶೆಯಲ್ಲಿ ಶುಕ್ರವಾರ ದೆಹಲಿಯಲ್ಲಿ ಬ್ರಿಡ್ಜ್ ಟು ಬೆಂಗಳೂರು 2026- ರಾಜತಾಂತ್ರಿಕರ ಜತೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಕರ್ನಾಟಕವು ಜಾಗತಿಕ ಪಾಲುದಾರಿಕೆಗೆ ಸನ್ನದ್ಧವಾಗಿದ್ದು, ತಂತ್ರಜ್ಞಾನ ಮಾತ್ರವಲ್ಲದೆ ವ್ಯಾಪಾರ, ನಾವೀನ್ಯತೆ ಮತ್ತು ಜನರ ಸಹಯೋಗಕ್ಕೂ ಹೆಚ್ಚಿನ ಮಹತ್ವ ನೀಡುತ್ತಿದೆ ಎಂದರು.

ಈ ವೇಳೆ ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಕರ್ನಾಟಕವು ಕೇವಲ ಹೂಡಿಕೆಗಿಂತ ದೂರವಾಗಿ ದೀರ್ಘಾವಧಿಯ ಫಲಿತಾಂಶ ಆಧಾರಿತ ನಾವೀನ್ಯತಾ ಪಾಲುದಾರಿಕೆಗಳಿಗೆ ಆದ್ಯತೆ ನೀಡುತ್ತಿದೆ. ಈ ಸಂವಾದದಲ್ಲಿ 45ಕ್ಕೂ ಹೆಚ್ಚು ದೇಶಗಳ ರಾಯಭಾರಿಗಳು ಹಾಗೂ ಹೈಕಮಿಷನರ್‌ಗಳು ಸೇರಿ 140ಕ್ಕೂ ಹೆಚ್ಚು ಜಾಗತಿಕ ಪ್ರತಿನಿಧಿಗಳು ಪಾಲ್ಗೊಂಡು, ಕರ್ನಾಟಕದ ಬೆಳೆಯುತ್ತಿರುವ ನಾವೀನ್ಯತೆ ಪರಿಸರ ವ್ಯವಸ್ಥೆಯ ಬಗ್ಗೆ ಚರ್ಚಿಸಿದ್ದಾರೆ. ಸ್ವಿಟ್ಜರ್ಲೆಂಡ್, ಜರ್ಮನಿ, ಜಪಾನ್, ಸೌದಿ ಅರೇಬಿಯಾ, ಡೆನ್ಮಾರ್ಕ್, ಫ್ರಾನ್ಸ್, ಈಜಿಪ್ಟ್ ಸೇರಿದಂತೆ ಹಲವು ದೇಶಗಳ ಪ್ರತಿನಿಧಿಗಳು ರಾಜ್ಯದೊಂದಿಗೆ ಗಾಢ ಸಹಭಾಗಿತ್ವ ಬೆಳೆಸಲು ಆಸಕ್ತಿ ವ್ಯಕ್ತಪಡಿಸಿದ್ದಾರೆ ಎಂದರು.

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದ ಜಾಗತಿಕ ನಾವೀನ್ಯತಾ ಮೈತ್ರಿಕೂಟ (ಜಿಐಎ) 2.0 ಉಪಕ್ರಮ ಅನಾವರಣಗೊಂಡಿದ್ದು, ಇದು ಸರಕಾರಗಳು, ಉದ್ಯಮಗಳು, ನವೋದ್ಯಮಗಳು ಮತ್ತು ಸಂಶೋಧನಾ ಸಂಸ್ಥೆಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವ ಗುರಿ ಹೊಂದಿದೆ. ಕೃತಕ ಬುದ್ಧಿಮತ್ತೆ, ಡೀಪ್‌ಟೆಕ್, ಬಯೋಟೆಕ್ ಮತ್ತು ಸೆಮಿಕಂಡಕ್ಟರ್ ಕ್ಷೇತ್ರಗಳಲ್ಲಿ ಜಾಗತಿಕ ಸಹಯೋಗವನ್ನು ಹೆಚ್ಚಿಸಲು ಇದು ಸಹಕಾರಿಯಾಗಲಿದೆ. ಕರ್ನಾಟಕದಲ್ಲಿ ಈಗಾಗಲೇ 18,000ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಹಾಗೂ 570ಕ್ಕೂ ಹೆಚ್ಚು ಜಾಗತಿಕ ಸಾಮರ್ಥ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯವನ್ನು ವಿಶ್ವದ ಪ್ರಮುಖ ನಾವೀನ್ಯತಾ ಕೇಂದ್ರಗಳಲ್ಲಿ ಒಂದಾಗಿ ರೂಪಿಸಿವೆ. ಈ ಹಿನ್ನೆಲೆಯಲ್ಲಿ ಬ್ರಿಡ್ಜ್ ಟು ಬೆಂಗಳೂರು ವೇದಿಕೆ ಜಾಗತಿಕ ಹೂಡಿಕೆ ಮತ್ತು ತಂತ್ರಜ್ಞಾನ ವಿನಿಮಯಕ್ಕೆ ಪ್ರಮುಖ ದಾರಿಯಾಗಲಿದೆ ಎಂದರು.

ಬ್ರಿಡ್ಜ್ ಟು ಬೆಂಗಳೂರು ಸಂವಾದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ಉಪಸ್ಥಿತರಿದ್ದರು.

ಸಂವಾದದಲ್ಲಿ ಮಂಡಿಸಲಾದ ವಿಷಯಗಳು

- ಕರ್ನಾಟಕದ ತಂತ್ರಜ್ಞಾನ ಮತ್ತು ನಾವೀನ್ಯತೆ ಪರಿಸರ ವ್ಯವಸ್ಥೆ ಹೂಡಿಕೆ ಮತ್ತು ನೀತಿ ಅವಕಾಶಗಳು
- ಕೃತಕ ಬುದ್ಧಿಮತ್ತೆ (ಎಐ), ಡೀಪ್ ಟೆಕ್, ಜೈವಿಕ ತಂತ್ರಜ್ಞಾನ, ಸೆಮಿಕಂಡರ್‌ಗಳು ಮತ್ತು ಡಿಜಿಟಲ್ ಆರ್ಥಿಕತೆಗಳಲ್ಲಿ ಸಹಯೋಗ
- ಸಹ-ಸೃಷ್ಟಿ, ಹೂಡಿಕೆ ಪಾಲುದಾರಿಕೆಗಳು ಮತ್ತು ಪರಿಸರ ವ್ಯವಸ್ಥೆಯ ಸಂಯೋಜನೆಯಲ್ಲಿ ಹೆಚ್ಚಿನ ಆಸಕ್ತಿ

ಈ ಸಂವಾದವು ನವೆಂಬರ್ 17ರಿಂದ 19ರವರೆಗೆ ನಡೆಯಲಿರುವ ಬೆಂಗಳೂರು ಟೆಕ್ ಶೃಂಗಸಭೆ 2026ಗೆ ಮುನ್ನುಡಿಯಾಗಿ ಪರಿಣಮಿಸಿದೆ. ಎಐ ಮತ್ತು ಬಿಯಾಂಡ್ ಆಶಯದಡಿ ನಡೆಯಲಿರುವ ಈ ಶೃಂಗಸಭೆಯಲ್ಲಿ 25,000ಕ್ಕೂ ಹೆಚ್ಚು ಪ್ರತಿನಿಧಿಗಳು, 1,800 ಪ್ರದರ್ಶಕರು ಮತ್ತು 75ಕ್ಕೂ ಹೆಚ್ಚು ದೇಶಗಳ ಭಾಗವಹಿಸುವ ನಿರೀಕ್ಷೆಯಿದೆ.

–ಪ್ರಿಯಾಂಕ್ ಖರ್ಗೆ ಐಟಿ, ಬಿಟಿ ಸಚಿವ

ಬೆಂಗಳೂರು ಕೇವಲ ಒಂದು ನಗರವಲ್ಲ, ಇದು ಕನಸುಗಳನ್ನು ಕಟ್ಟುವ ಮತ್ತು ಭವಿಷ್ಯ ರೂಪಿಸುವ ಜಾಗತಿಕ ಕೇಂದ್ರವಾಗಿದೆ .

– ಡಿ. ಕೆ. ಶಿವಕುಮಾರ್ ಉಪ ಮುಖ್ಯಮಂತ್ರಿ

ಜಾಗತಿಕ ಸುಸ್ಥಿರ ಇಂಧನ ಸಮ್ಮೇಳನ ಉದ್ಘಾಟಿಸಲಿರುವ ಸಿಜೆಐ

ಬೆಂಗಳೂರು: ಸುಸ್ಥಿರ ಇಂಧನ, ಭಾರತದ ಕಾರ್ಯಸೂಚಿ 2047-ಇಂಧನ ಭದ್ರತೆಗಾಗಿ ಕಾನೂನು, ನೀತಿ ಹಾಗೂ ಆವಿಷ್ಕಾರಗಳ ಹೊಸ ಚಿಂತನೆ ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಏಪ್ರಿಲ್ 18 ರಂದು ಬೆಂಗಳೂರಿನ ಶಾಂಗ್ರಿ-ಲಾ ಹೋಟೆಲ್‌ನಲ್ಲಿ ನಡೆಯಲಿದ್ದು, ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ.

ಕಾಮನ್ವೆಲ್ತ್ ಲೀಗಲ್ ಎಜುಕೇಷನ್ ಅಸೋಸಿಯೇಷನ್ ಮತ್ತು ಇಂಧನ ಇಲಾಖೆ ಜಂಟಿಯಾಗಿ ಆಯೋಜಿಸುತ್ತಿರುವ ಈ ಸಮ್ಮೇಳನವು ದೇಶ-ವಿದೇಶಗಳ ಪ್ರಮುಖ ನ್ಯಾಯಶಾಸ್ತ್ರಜ್ಞರು, ನೀತಿ ನಿರೂಪಕರು, ಉದ್ಯಮ ತಜ್ಞರು ಮತ್ತು ಶಿಕ್ಷಣ ತಜ್ಞರನ್ನು ಈ ವೇದಿಕೆಯಲ್ಲಿ ಒಟ್ಟುಗೂಡಿಸಲಾಗುತ್ತದೆ. ಉದ್ಘಾಟನಾ ಸಮಾರಂಭದ ನೇತೃತ್ವ ವಹಿಸಲಿರುವ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಉದ್ಘಾಟನಾ ಭಾಷಣ ಮಾಡಲಿದ್ದಾರೆ. ಸುಸ್ಥಿರತೆ, ನಾವೀನ್ಯತೆ ಮತ್ತು ಇಂಧನ ಭದ್ರತೆಗೆ ಒತ್ತು ನೀಡಲಿರುವ ಈ ಉನ್ನತ ಮಟ್ಟದ ಉದ್ಘಾಟನಾ ಅಧಿವೇಶನವು ದೇಶದ ಇಂಧನ ಭವಿಷ್ಯದ ಕುರಿತ ಚರ್ಚೆಗಳಿಗೆ ನಾಂದಿ ಹಾಡಲಿದೆ.

ಇಂಧನ ಸಚಿವ ಕೆ.ಜೆ. ಜಾರ್ಜ್ ಮತ್ತು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ನೇತೃತ್ವದಲ್ಲಿ ಸಮ್ಮೇಳನ ನಡೆಯಲಿದ್ದು, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ರಾಮ್ ಪ್ರಸಾತ್ ಮನೋಹರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್. ಶಿವಶಂಕರ್ ಮತ್ತು ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಸೇರಿದಂತೆ ಇತರ ಅಧಿಕಾರಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ವಿಕಸನದ ಹಾದಿಯಲ್ಲಿ ವೈದ್ಯಕೀಯ ಕ್ಷೇತ್ರ

ಬೆಂಗಳೂರು: ವೈದ್ಯಕೀಯ ಶಿಕ್ಷಣವು ವಿಕಸನಗೊಳ್ಳುತ್ತಲೇ ಇರುವುದರಿಂದ ಸ್ಥಾಪಿತ ತರಬೇತಿ ವಿಧಾನಗಳು ಮತ್ತು ಉದಯೋನ್ಮುಖ ತಂತ್ರಜ್ಞಾನಗಳನ್ನು ಸಂಯೋಜನೆ ಮಾಡುವ ಸಮತೋಲಿತ ವಿಧಾನವನ್ನು ಅಳವಡಿಸಿಕೊಳ್ಳುವುದು ಮುಖ್ಯವಾಗಿದೆ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಬಿ.ಸಿ.ಭಗವಾನ್ ತಿಳಿಸಿದರು.

ಬೆಂಗಳೂರಿನ ಗ್ಲೋಬಲ್ ಸರ್ಜಿಕಲ್ ಇನ್ಸಿಟ್ಯೂಟ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಸಾಂಪ್ರದಾಯಿಕ ಕ್ಲಿನಿಕಲ್ ತರಬೇತಿಯ ಜತೆಗೆ ಬಳಸಿದಾಗ ಸಿಮ್ಯುಲೇಶನ್ ಆಧಾರಿತ ಕಲಿಕೆಯು ಕೌಶಲ್ಯಾಭಿವೃದ್ಧಿ ಹೆಚ್ಚಿಸುವಲ್ಲಿ ಅಮೂಲ್ಯವಾದ ಪಾತ್ರವನ್ನು ವಹಿಸುತ್ತದೆ. ಇಂತಹ ಉಪಕ್ರಮಗಳು ಆರೋಗ್ಯ ಶಿಕ್ಷಣದ ಒಟ್ಟಾರೆ ಗುಣಮಟ್ಟವನ್ನು ಬಲಪಡಿಸಲು ಕೊಡುಗೆ ನೀಡುತ್ತವೆ ಮತ್ತು ಅಂತಿಮವಾಗಿ ರೋಗಿಗಳ ಆರೈಕೆಗೆ ಪ್ರಯೋಜನವನ್ನು ನೀಡುತ್ತವೆ ಎಂದು ಅಭಿಪ್ರಾಯಪಟ್ಟರು.

- ಬೆಂಗಳೂರಿನ ಗ್ಲೋಬಲ್ ಸರ್ಜಿಕಲ್ ಇನ್ಸಿಟ್ಯೂಟ್‌ಗೆ ಚಾಲನೆ

ಹೆಲ್ತ್ ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್‌ನ ಅಧ್ಯಕ್ಷ ಮತ್ತು ಸಿಇಒ ಡಾ. ಬಿ.ಎಸ್. ಅಜಯ್ ಕುಮಾರ್ ಮಾತನಾಡಿ, ಭಾರತವು ವೈದ್ಯಕೀಯ ಕ್ಷೇತ್ರದಲ್ಲಿ ಶ್ರೇಷ್ಠತೆಯ ಬಲವಾದ ಪರಂಪರೆಯನ್ನು ಹೊಂದಿರುವ ರಾಷ್ಟ್ರವಾಗಿದೆ. ಆರೋಗ್ಯ ರಕ್ಷಣೆ ವಿಕನಸಗೊಳ್ಳುತ್ತಿರುವಂತೆ ತರಬೇತಿಗೆ ನಮ್ಮ ವಿಧಾನವೂ ಸಹ ಇರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಿಮ್ಯುಲೇಶನ್ ಆಧಾರಿತ ಕಲಿಕೆಯು ವೈದ್ಯರು ರಚನಾತ್ಮಕವಾದ ವಾತಾವರಣದಲ್ಲಿ ತಮ್ಮ ಕೌಶಲ್ಯಗಳನ್ನು ಪರಿಷ್ಕರಿಸಲು ಅನುವು ಮಾಡಿಕೊಡುವ ಮೂಲಕ ಶಸ್ತ್ರಚಿಕಿತ್ಸಾ ಸಿದ್ಧತೆಯನ್ನು ಹೆಚ್ಚಿಸಲು ಅವಕಾಶವನ್ನು ಕಲ್ಪಿಸುತ್ತದೆ ಎಂದು ತಿಳಿಸಿದರು.

ವಾಸ್ತು ಹೆಸರಲ್ಲಿ ಗರ್ಭಿಣಿಗೆ ಲೈಂಗಿಕ ದೌರ್ಜನ್ಯ: ದೂರು ದಾಖಲು

ಬೆಂಗಳೂರು: ವಾಸ್ತು ಹೇಳುವ ನೆಪದಲ್ಲಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಗರ್ಭಿಣಿ ಮಹಿಳೆ ದೂರು ನೀಡಿದ್ದು, ಇತ್ತ ಹಣಕ್ಕೆ ಬೇಡಿಕೆಯಿಟ್ಟು ಕೇಸ್ ಹಾಕುತ್ತೇನೆ ಎಂದು ಬೆದರಿಕೆ ಹಾಕಿದ್ದಾರೆಂದು ಗುರೂಜಿ ಪ್ರತಿದೂರು ದಾಖಲಿಸಿದ್ದಾರೆ.

ಅಪರಾಧ ಸುದ್ದಿಗಳು

ವಾಸ್ತು ಹೇಳುವ ನೆಪದಲ್ಲಿ ಗರ್ಭಿಣಿ ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಆರೋಪ ಕೇಳಿಬಂದಿದೆ. ವಿಜಯನಗರದ ಅನಂತ್ ಮೆಡಿಕಲ್ ಸಲ್ಯೂಷನ್ಸ್‌ನಲ್ಲಿ ಏ.4ರಂದು ಘಟನೆ ನಡೆದಿದೆ. ತಮ್ಮ ವಾಸದ ಮನೆಯ ವಾಸ್ತು ವಿಚಾರಿಸಲು ಹೋದಾಗ ಸಂತ್ರಸ್ತೆಗೆ ಈ ಕಹಿ ಅನುಭವವಾಗಿದೆ. ಘಟನೆ ನಡೆದಾಗ ಶಾಂತಕುಮಾರ್, ಭರತ್, ಶಾಂತಕುಮಾರ್ ಪತ್ನಿ ಹಾಗೂ ಸಿಬ್ಬಂದಿ ಸ್ಥಳದಲ್ಲಿದ್ದರು ಎನ್ನಲಾಗಿದೆ.

ಈ ಬಗ್ಗೆ ಸಂತ್ರಸ್ತೆ ಗೋವಿಂದರಾಜನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. ವಾಸ್ತು ಹೇಳುವ ನೆಪದಲ್ಲಿ ಶಾಂತಕುಮಾರ್ ಎಂಬುವವರು ಅಸಭ್ಯವಾಗಿ ವರ್ತಿಸಿದ್ದು, ಎದೆ ಮತ್ತು ಹೊಟ್ಟೆಯ ಭಾಗವನ್ನು ಅನುಚಿತವಾಗಿ ಸ್ಪರ್ಶಿಸಿದ್ದಾರೆ. ಇದನ್ನು ಪ್ರಶ್ನಿಸಿದಾಗ, ಆರೋಪಿಗಳು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ವಾಸ್ತು ಸಲಹೆ ನೀಡಲು 15 ಸಾವಿರ ರು. ನಗದು ಹಣ ಪಡೆದಿದ್ದಾರೆ ಎಂದು ಆರೋಪಿಸಿದ್ದಾರೆ.

ಸಂತ್ರಸ್ತೆಯ ದೂರಿನ ಬೆನ್ನಲ್ಲೇ ಶಾಂತಕುಮಾರ್ ಅವರು ಕೂಡ ಸಂತ್ರಸ್ತೆ ಹಾಗೂ ಸಹಚರರ ವಿರುದ್ಧ ದೂರು ದಾಖಲಿಸಿದ್ದು, ಪ್ರತಿಯಾಗಿ ಎಫ್‌ಐಆರ್ ದಾಖಲಾಗಿದೆ. ಸಂತ್ರಸ್ತೆ, ಜಮಾಲ್ ಮತ್ತು ಅಮೃತಲಿಂಗಂ ಎಂಬ ಮೂವರು ವ್ಯಕ್ತಿಗಳು ತಮ್ಮ ಕಚೇರಿಗೆ ಬಂದು ಹಣಕ್ಕೆ ಬೇಡಿಕೆ ಇಟ್ಟು ಬ್ಲ್ಯಾಕ್‌ಮೇಲ್ ಮಾಡಿದ್ದಾರೆ. ಹಣ ನೀಡಲು ನಿರಾಕರಿಸಿದಾಗ, ತಮ್ಮ ಮೇಲೆ ಹಲ್ಲೆ ನಡೆಸಿ ಅಸಭ್ಯವಾಗಿ ವರ್ತಿಸಿದ್ದಾರೆಂದು ಆರೋಪಿಸಿದ್ದಾರೆ. ನನ್ನ ಪತ್ನಿ ಬಿಡಿಸಲು ಬಂದಾಗ, ಅವರ ಮೇಲೆಯೂ ಜಮಾಲ್ ಮತ್ತು ಅಮೃತಲಿಂಗಂ ಹಲ್ಲೆ ನಡೆಸಿ ದೌರ್ಜನ್ಯ ಎಸಗಿದ್ದಾರೆ. ಅಲ್ಲದೇ ಆರೋಪಿಗಳು ಸಂಘಟನೆ ಹಾಗೂ ಪೊಲೀಸ್ ಇಲಾಖೆಗೆ ಸೇರಿದವರು ಹಾಗೂ ಮಾಧ್ಯಮದವನು ಎಂದು ಹೇಳಿ ಹಣಕ್ಕೆ ಬೇಡಿಕೆಯಿಟ್ಟಿದ್ದಾರೆ. ಹಣ ನೀಡದಿದ್ದರೆ ಮಾನ ಹರಾಜು ಹಾಕುವುದಾಗಿ ಬೆದರಿಸಿದ್ದಾ. ಅಲ್ಲದೇ 1 ಲಕ್ಷ ರು. ಮೌಲ್ಯದ ಮೊಬೈಲ್ ಫೋನ್ ಅನ್ನು ಕಿತ್ತುಕೊಂಡಿದ್ದಾರೆ.

ಮೂವರು ಸೇರಿಕೊಂಡು ನನ್ನ ಹಾಗೂ ನನ್ನ ಹೆಂಡತಿಯನ್ನು ಬಲವಂತವಾಗಿ ಆಟೋದಲ್ಲಿ ಕುಳ್ಳಿರಿಸಿಕೊಂಡು ಜಯನಗರದ ಕಡೆಗೆ ಕರೆದೊಯ್ದಿದ್ದಾರೆ. ಆಟೋದಲ್ಲಿ ಹೋಗುವಾಗ ಸಂತ್ರಸ್ತೆ ನನ್ನ ಬಟ್ಟೆಯನ್ನು ನಾನೇ ಬಿಚ್ಚಿಕೊಂಡು, ನಿನ್ನ ಮೇಲೆ ಲೈಂಗಿಕ ದೌರ್ಜನ್ಯ ಮಾಡಿದೆ ಎಂದು ಕೇಸ್ ಹಾಕಿ, ಮಾನ ಕಳೆಯುತ್ತೇನೆ ಎಂದು ಬೆದರಿಕೆ ಹಾಕಿದ್ದಾಳೆ. ದಾರಿಯುದ್ದಕ್ಕೂ ಹಲ್ಲೆ ಮುಂದುವರಿದಾಗ ನಾನು ಕಿರುಚಿಕೊಂಡೆ. ಆಗ ಆಟೋ ನಿಲ್ಲಿಸಿದ್ದು, ಅಲ್ಲಿಂದ ತಪ್ಪಿಸಿಕೊಂಡು ಬಂದು ದೂರು ನೀಡಿದ್ದೇನೆ ಎಂದು ತಿಳಿಸಿದ್ದಾರೆ. ಸದ್ಯ ಈ ಎರಡೂ ದೂರುಗಳ ಆಧಾರದ ಮೇಲೆ ಪೊಲೀಸರು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ **ಶ್ರೀಮತಿ ಸಪ್ನ ಜಿ.ಆರ್, ಕೋಂ ಧರ್ಮೇಶ್ವರ್.ಎಸ್,** ಇವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಮಾಲೀಕರಾಗಿದ್ದು ಅವರು 1/03/1997 ರಂದು ದಾಖಲೆ ಸಂಖ್ಯೆ 5711 / 1996-97 ಹೊಂದಿರುವ ಪುಸ್ತಕ-1 ರ ಮೂಲ ಮಾರಾಟ ಪತ್ರವನ್ನು ಕಳೆದುಕೊಂಡಿದ್ದಾರೆ, ಇದನ್ನು ಸಿ.ಡಿ. ಸಂಖ್ಯೆ 10 ರಲ್ಲಿ ಸಂಗ್ರಹಿಸಲಾಗಿದೆ, ಇದನ್ನು ಶ್ರೀ. ನಂಜುಂಡ ರೆಡ್ಡಿ ಅವರು ಶ್ರೀ.ಗಣೇಶ್.ಎಂ.ವಿ ಅವರ ಪರವಾಗಿ ಕಾರ್ಯಗತಗೊಳಿಸಿದ್ದಾರೆ, ಇದನ್ನು ಆನೇಕಲ್‌ನ ಉಪ-ನೋಂದಾಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಲಾಗಿದೆ. ಮತ್ತು ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ ಏಳು ದಿನಗಳ ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯ ಶಾಂತಿಪುರ ಗ್ರಾಮದ ಚಿಕ್ಕನಾಗಮಂಗಲ ದಾಖಲೆಯಲ್ಲಿದೆ, ಪ್ರಸ್ತುತ ಬೆಂಗಳೂರಿನ ಶಾಂತಿಪುರ ಗ್ರಾಮ ಪಂಚಾಯತ್ ಮಿತಿಯಲ್ಲಿರುವ ಖಾಲಿ ನಿವೇಶನದ ಸೈಟ್ ಸಂಖ್ಯೆ. 221/29/3, ಇ-ಖಾತಾ ಸಂಖ್ಯೆ. 150200100500400219, (ಹಳೆಯ ಸಂಖ್ಯೆ 26 ರಿಂದ 30, ಅಸೆಸ್ಮೆಂಟ್ ಸಂಖ್ಯೆ. 29/3) ಹೊಂದಿರುವ ಮನೆಯ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: ಒಟ್ಟು 40 ಅಡಿ, ಒಟ್ಟಾರೆ ಅಳತೆ 2400 ಚದರ ಅಡಿ ಈ ಸ್ವತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ : ಸ್ವತ್ತಿನ ನಂ.29ರ ಆಸ್ತಿಯ ಉಳಿದ ಭಾಗ, ಪಶ್ಚಿಮಕ್ಕೆ : ಬಿ.ಸಿ. ರಾಮಚಂದ್ರ ಅವರ ಆಸ್ತಿ, ಉತ್ತರಕ್ಕೆ : ಖಾಸಗಿ ಆಸ್ತಿ, ದಕ್ಷಿಣಕ್ಕೆ : ರಸ್ತೆ ಮತ್ತು ಉಳಿದ ಆಸ್ತಿ.

ಎನ್. ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್. ಕಾಲೋನಿ ಹತ್ತಿರ ಬಸ್ ನಿಲ್ದಾಣ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು-560019.

ವೈದ್ಯಕೀಯ ನೂತನ ತಂತ್ರಜ್ಞಾನ ಅಳವಡಿಕೆ ಅಗತ್ಯ: ಭಗವಾನ್

ಬೆಂಗಳೂರು: ವೈದ್ಯಕೀಯ ಶಿಕ್ಷಣವು ವಿಕಸನಗೊಳ್ಳುತ್ತಲೇ ಇರುವುದರಿಂದ ಸ್ಥಾಪಿತ ತರಬೇತಿ ವಿಧಾನಗಳು ಮತ್ತು ಉದಯೋನ್ಮುಖ ತಂತ್ರಜ್ಞಾನಗಳನ್ನು ಸಂಯೋಜನೆ ಮಾಡುವ ಸಮತೋಲಿತ ವಿಧಾನವನ್ನು ಅಳವಡಿಸಿಕೊಳ್ಳುವುದು ಮುಖ್ಯವಾಗಿದೆ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಉಪಕುಲಪತಿ ಡಾ.ಬಿ.ಸಿ.ಭಗವಾನ್ ತಿಳಿಸಿದರು.

ಬೆಂಗಳೂರಿನ ಗ್ಲೋಬಲ್ ಸರ್ಜಿಕಲ್ ಇನ್ಸಿಟ್ಯೂಟ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಸಾಂಪ್ರದಾಯಿಕ ಕ್ಲಿನಿಕಲ್ ತರಬೇತಿಯ ಜತೆಗೆ ಬಳಸಿದಾಗ ಸಿಮ್ಯುಲೇಶನ್ ಆಧಾರಿತ ಕಲಿಕೆಯು ಕೌಶಲಾಭಿವೃದ್ಧಿ ಹೆಚ್ಚಿಸುವಲ್ಲಿ ಅಮೂಲ್ಯ ವಾದ ಪಾತ್ರವನ್ನು ವಹಿಸುತ್ತದೆ. ಇಂತಹ ಉಪಕ್ರಮಗಳು ಆರೋಗ್ಯ ಶಿಕ್ಷಣದ ಒಟ್ಟಾರೆ ಗುಣಮಟ್ಟವನ್ನು ಬಲಪಡಿಸಲು ಕೊಡುಗೆ ನೀಡುತ್ತವೆ ಎಂದು ಅಭಿಪ್ರಾಯಪಟ್ಟರು.

ಹೆಲ್ತ್ ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್‌ನ ಅಧ್ಯಕ್ಷ ಮತ್ತು ಸಿಇಒ ಡಾ. ಅಜಯ್ ಕುಮಾರ್ ಮಾತನಾಡಿ, ದೇಶವೈದ್ಯಕೀಯ ಕ್ಷೇತ್ರದಲ್ಲಿ ಶ್ರೇಷ್ಠತೆಯ ಬಲವಾದ ಪರಂಪರೆ ಹೊಂದಿದೆ.ಆರೋಗ್ಯ ರಕ್ಷಣೆ ವಿಕನಸಗೊ ಳ್ಳುತ್ತಿರುವಂತೆ ತರಬೇತಿಗೆ ನಮ್ಮ ವಿಧಾನವೂ ಸಹ ಇರಬೇಕಾಗುತ್ತದೆ ಎಂದರು.

ಮಹಿಳಾ ಮೀಸಲು ಜಾರಿಗೆ ವಿಳಂಬ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು: ಲೋಕಸಭಾ ಚುನಾವಣೆಗೆ ಸುಮಾರು ಮೂವತ್ತು ತಿಂಗಳು ಕಳೆದಿರುವ ಸಂದರ್ಭದಲ್ಲಿ ಮಹಿಳಾ ಮೀಸಲಾತಿ ಬಿಲ್ ಜಾರಿಗೆ ವಿಳಂಬವಾಗಿರುವುದನ್ನು ಖಂಡಿಸಿ ಕಾಂಗ್ರೆಸ್ ಪಕ್ಷದ ಮಹಿಳಾ ಪದಾಧಿಕಾರಿಗಳು ಹಾಗೂ ನಾಯಕಿಯರು ನಗರದ ಕೆಪಿಸಿಸಿ ಕಚೇರಿಯ ಎದುರು ಶುಕ್ರವಾರ ಬಿಜೆಪಿ ಸರಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ಮಾಡಿದರು.

ಪ್ರತಿಭಟನೆ ವೇಳೆ ಮಾತನಾಡಿದ ಕೆಪಿಸಿಸಿ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಮಾತನಾಡಿ, ಮಹಿಳಾ ಮುಖಂಡರು, ಮಹಿಳೆಯರ ಬಗ್ಗೆ ನಿಜವಾದ ಕಾಳಜಿ ಇದ್ದಿದ್ದರೆ 543 ಲೋಕಸಭಾ ಕ್ಷೇತ್ರಗಳಲ್ಲಿ ತಕ್ಷಣವೇ ಶೇ.33ರಷ್ಟು ಮೀಸಲಾತಿ ಜಾರಿಗೆ ತರಬೇಕಾಗಿತ್ತು. ಆದರೆ 3 ವರ್ಷ ಕಳೆದರೂ ಬಿಜೆಪಿ ಸರಕಾರ ಯಾವುದೇ ಕ್ರಮಕೈಗೊಂಡಿಲ್ಲ. ಮಹಿಳಾ ಮೀಸಲಾತಿ ಬಿಲ್ ಅನ್ನು ಪಾಸು ಮಾಡಿದರೂ ಅದನ್ನು ಜನಗಣತಿ ಹಾಗೂ ಕ್ಷೇತ್ರ ಮರುಹಂಚಿಕೆ (ಡಿಲಿಮಿಟೇಶನ್) ಪ್ರಕ್ರಿಯೆಗೆ ಕಟ್ಟಿ ಹಾಕಿರುವುದು ಸರಿಯಲ್ಲ. ಇದರಿಂದ ಮಹಿಳೆಯರಿಗೆ ನ್ಯಾಯ ಸಿಗುವುದಿಲ್ಲ. ತಕ್ಷಣವೇ ಪ್ರತ್ಯೇಕವಾಗಿ ಮೀಸಲಾತಿ ಜಾರಿಗೊಳಿಸಬೇಕು ಎಂದರು.

ಇದಲ್ಲದೆ, ಒಬಿಸಿ ಮಹಿಳೆಯರಿಗೆ ಮೀಸಲಾತಿಯಲ್ಲಿ ಪ್ರತ್ಯೇಕ ಒಳಗೊಂಡಿಕೆ (ಇನ್‌ಕ್ಲೂಷನ್) ನೀಡಬೇಕು ಎಂಬುದು ಸಹ ನಮ್ಮ ಹಕ್ಕೊತ್ತಾಯವಾಗಿದೆ. ನಿಜವಾದ ಸಬಲೀಕರಣಕ್ಕೆ ಸ್ಪಷ್ಟ ಕ್ರಮ ಅಗತ್ಯ. ದಕ್ಷಿಣ ಭಾರತದ ರಾಜ್ಯಗಳಿಗೆ ಕ್ಷೇತ್ರ ಮರುಹಂಚಿಕೆ ಪ್ರಕ್ರಿಯೆಯಿಂದ ಅನ್ಯಾಯವಾಗುವ ಸಾಧ್ಯತೆ ಇದ್ದು, ಇದರಿಂದ ಕರ್ನಾಟಕ ಸೇರಿದಂತೆ ದಕ್ಷಿಣ ರಾಜ್ಯಗಳ ಪ್ರತಿನಿಧಿತ್ವ ಕಡಿಮೆಯಾಗುವ ಆತಂಕ ಇದೆ. ಇದು ದಕ್ಷಿಣ ಭಾರತ ವಿರೋಧಿ ಧೋರಣೆ. ಚುನಾವಣೆಗಳು ಸಮೀಪಿಸುತ್ತಿರುವ ಸಂದರ್ಭದಲ್ಲಿ ಮಾತ್ರ ಈ ವಿಚಾರವನ್ನು ಚರ್ಚೆಗೆ ತರುವುದು ರಾಜಕೀಯ ಲಾಭಕ್ಕಾಗಿ ಎನ್ನುವ ಅನುಮಾನ ಮೂಡಿಸುತ್ತದೆ. ಎಲ್ಲಾ ವರ್ಗಗಳ ಮಹಿಳೆಯರಿಗೆ ಸಮಾನ ಅವಕಾಶ ನೀಡಬೇಕು ಎಂಬುದು ನಮ್ಮ ಪ್ರಮುಖ ಆಗ್ರಹವಾಗಿದೆ ಎಂದರು.

ಮಹಿಳಾ ಮೀಸಲಾತಿ ಬಿಲ್ ಜಾರಿಗೆ ವಿಳಂಬವಾಗಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ರೆಡ್ಡಿ ನೇತೃತ್ವದಲ್ಲಿ ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 07.05.2026 (ಬೆಳಿಗ್ಗೆ 10.30 ರಿಂದ 11.30 ರವರೆಗೆ)** ರಂದು [ಮಾರಾಟ ಮುಗಿಯುವವರೆಗೆ ತಲಾ 5 ನಿಮಿಷಗಳ ಅವಧಿಯನ್ನು ವಿಸ್ತರಿಸಲಾಗಿದೆ], ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 99,75,694.83/- (ರೂಪಾಯಿ ತೊಂಭತ್ತೊಂಭತ್ತು ಲಕ್ಷದ ಎಪ್ಪತ್ತೈದು ಸಾವಿರದ ಆರುನೂರ ತೊಂಭತ್ತನಾಲ್ಕು ಮತ್ತು ಎಂಭತ್ತಮೂರು ಪೈಸೆ ಮಾತ್ರ) ಜೊತೆಗೆ ದಿನಾಂಕ: 26.03.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಶಕ್ತಿವೇಲ್ ನಟರಾಜನ್,** ನಂ. 105 ಸಿ ಬ್ಲಾಕ್ 1ನೇ ಮಹಡಿ, ಪೂರ್ವಿ ಲೋಟಸ್ ಅಪಾರ್ಟ್‌ಮೆಂಟ್, ಸೋಮಸಂದ್ರಪಾಳ್ಯ ಮುಖ್ಯ ರಸ್ತೆ, ಬೆಂಗಳೂರು- 560068 **(2) ಅಮೃತಾ ಶಕ್ತಿವೇಲ್,** ನಂ. 105 ಸಿ ಬ್ಲಾಕ್ 1ನೇ ಮಹಡಿ, ಪೂರ್ವಿ ಲೋಟಸ್ ಅಪಾರ್ಟ್‌ಮೆಂಟ್, ಸೋಮಸಂದ್ರಪಾಳ್ಯ ಮುಖ್ಯ ರಸ್ತೆ, ಬೆಂಗಳೂರು-560068, ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 06.05.2026 ರ ಸಂಜೆ 6.00 ಗಂಟೆಯೊಳಗೆ** ಠೇವಣಿ ಮಾಡಬೇಕು. **(₹. ಲಕ್ಷಗಳಲ್ಲಿ)**

ಕ್ರ. ಸಂ	ಸ್ಥಿರಾಸ್ತಿ/ಚರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಅಪಾರ್ಟ್‌ಮೆಂಟ್ ಫ್ಲಾಟ್ ನಂ. ಸಿ-04, ನೆಲಮಹಡಿ, ಸಿ ಬ್ಲಾಕ್, "ಕಿಂಗ್ಸ್ ಸ್ಕ್ವೇರ್", ಅಪಾರ್ಟ್‌ಮೆಂಟ್ ಸ್ವತ್ತಿನ ಸರ್ವೆ ನಂ. 189, ಈ ಆಸ್ತಿಯು ಕೊಡತ್ತಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560035ರಲ್ಲಿದೆ. ಪ್ಲಿಂತ್ ಪ್ರದೇಶ: 950 ಚದರ ಅಡಿ, ಕಾರ್ಪೆಟ್ ಪ್ರದೇಶ: 665 ಚದರ ಅಡಿ, ಯುಎಸ್‌ಡಿ: 475 ಚದರ ಅಡಿ, ಚಕ್ಕುಬಂದಿ : ಪೂರ್ವಕ್ಕೆ : ಶಿವನಂಜಪ್ಪ ರವರ ಭೂಮಿಯ ಸರ್ವೆ ನಂ. 188, ಪಶ್ಚಿಮಕ್ಕೆ : ಶಿವಹನುಮಂತಪ್ಪ ರವರ ಸ್ವತ್ತಿನ ಸರ್ವೆ ನಂ. 190, ಉತ್ತರಕ್ಕೆ : ಕೃಷ್ಣ ರೆಡ್ಡಿ ರವರ ಭೂಮಿಯ ಸರ್ವೆ ನಂ. 192, ದಕ್ಷಿಣಕ್ಕೆ : 40 ಅಡಿ ರಸ್ತೆ, ನಂತರ ಸರ್ವೆ ನಂ. 79	₹. 36.55	₹. 3.66	₹. 1.00	27.04.2026 ಬೆಳಿಗ್ಗೆ 10.00 ರಿಂದ ಸಂಜೆ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ
2	ಅಪಾರ್ಟ್‌ಮೆಂಟ್ ಫ್ಲಾಟ್ ನಂ. ಬಿ-04, ನೆಲಮಹಡಿ, ಬಿ ಬ್ಲಾಕ್, "ಕಿಂಗ್ಸ್ ಸ್ಕ್ವೇರ್", ಅಪಾರ್ಟ್‌ಮೆಂಟ್ ಸ್ವತ್ತಿನ ಸರ್ವೆ ನಂ. 189, ಈ ಆಸ್ತಿಯು ಕೊಡತ್ತಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560035ರಲ್ಲಿದೆ. ಪ್ಲಿಂತ್ ಪ್ರದೇಶ: 950 ಚದರ ಅಡಿ, ಕಾರ್ಪೆಟ್ ಪ್ರದೇಶ: 665 ಚದರ ಅಡಿ, ಯುಎಸ್‌ಡಿ: 475 ಚದರ ಅಡಿ, ಚಕ್ಕುಬಂದಿ : ಪೂರ್ವಕ್ಕೆ : ಶಿವನಂಜಪ್ಪ ರವರ ಭೂಮಿಯ ಸರ್ವೆ ನಂ. 188, ಪಶ್ಚಿಮಕ್ಕೆ : ಶಿವಹನುಮಂತಪ್ಪ ರವರ ಸ್ವತ್ತಿನ ಸರ್ವೆ ನಂ. 190, ಉತ್ತರಕ್ಕೆ : ಕೃಷ್ಣ ರೆಡ್ಡಿ ರವರ ಭೂಮಿಯ ಸರ್ವೆ ನಂ. 192, ದಕ್ಷಿಣಕ್ಕೆ : 40 ಅಡಿ ರಸ್ತೆ, ನಂತರ ಸರ್ವೆ ನಂ. 79	₹. 36.55	₹. 3.66	₹. 1.00	

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: 9535093706 ಮತ್ತು 9039609346)** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 17.04.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ ಕನಕಪುರ
ಸಿ.ಮಿಸ್.ನಂ.29/2026

ಅರ್ಜಿದಾರರು: 1. ಶ್ರೀ ಮುನಿಬೈರಯ್ಯ ಬಿನ್ ಲೇಟ್ ಗವಿಯಯ್ಯ, ವಯಸ್ಸು 55 ವರ್ಷ, 2. ಶ್ರೀ ಶ್ರೀಕಾಂತ್ ಬಿ.ಎಂ. ಬಿನ್ ಮುನಿಬೈರಯ್ಯ, ವಯಸ್ಸು 27 ವರ್ಷ, 3. ಶ್ರೀಮತಿ ಸೌಮ್ಯ ಬಿನ್ ಮುನಿಬೈರಯ್ಯ, ವಯಸ್ಸು 25 ವರ್ಷ. 4. ಶ್ರೀಮತಿ ಪುಷ್ಪ ಬಿನ್ ಮುನಿಬೈರಯ್ಯ ವಯಸ್ಸು 23 ವರ್ಷ. 5. ಶ್ರೀ ದರ್ಶನ್ ಬಿನ್ ಮುನಿಬೈರಯ್ಯ, ವಯಸ್ಸು 20 ವರ್ಷ, ಅರ್ಜಿದಾರರ ಎಲ್ಲರ ವಾಸ: ಬೆಟ್ಟಹಳ್ಳಿಕಾವಲ್ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ವಿರುದ್ಧ

ಎದುರುದಾರರು: 1. ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
2.ಗ್ರಾಮ ಲೆಕ್ಕಾಧಿಕಾರಿಗಳು, ಬೆಟ್ಟಹಳ್ಳಿಕಾವಲ್ ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣದ 1ನೇ ಅರ್ಜಿದಾರರ ತಂದೆಯಾದ ಮತ್ತು 2 ರಿಂದ 5ನೇ ಅರ್ಜಿದಾರರ ತಾತನಾದ ಶ್ರೀ ಗವಿಯಯ್ಯ ಬಿನ್ ಲೇಟ್ ಗವಿಸಿದ್ದಯ್ಯ ರವರು ಬೆಟ್ಟಹಳ್ಳಿಕಾವಲ್ ಗ್ರಾಮದಲ್ಲಿ, ದಿನಾಂಕ: 12-05-1955 ರಂದು ಮರಣ ಹೊಂದಿದ್ದು, ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 22-05-2026ರ ಬೆಳಿಗ್ಗೆ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು.

ದಿನಾಂಕ: 10/04/2026ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದಂತೆ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು: ವಕೀಲರು.
ಸ್ಥಳ: ಕನಕಪುರ
ದಿನಾಂಕ: 18-03-2026

ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ ಕನಕಪುರ
ಸಿ.ಮಿಸ್.ನಂ. 30/2026

ಅರ್ಜಿದಾರರು: 1. ಶ್ರೀ ಮುನಿಬೈರಯ್ಯ ಬಿನ್ ಲೇಟ್ ಗವಿಯಯ್ಯ, ವಯಸ್ಸು 55 ವರ್ಷ, 2. ಶ್ರೀ ಶ್ರೀಕಾಂತ್ ಬಿ.ಎಂ. ಬಿನ್ ಮುನಿಬೈರಯ್ಯ, ವಯಸ್ಸು 27 ವರ್ಷ, 3. ಶ್ರೀಮತಿ ಸೌಮ್ಯ ಬಿನ್ ಮುನಿಬೈರಯ್ಯ, ವಯಸ್ಸು 25 ವರ್ಷ. 4. ಶ್ರೀಮತಿ ಪುಷ್ಪ ಬಿನ್ ಮುನಿಬೈರಯ್ಯ ವಯಸ್ಸು 23 ವರ್ಷ. 5. ಶ್ರೀ ದರ್ಶನ್ ಬಿನ್ ಮುನಿಬೈರಯ್ಯ, ವಯಸ್ಸು 20 ವರ್ಷ, ಅರ್ಜಿದಾರರ ಎಲ್ಲರ ವಾಸ: ಬೆಟ್ಟಹಳ್ಳಿಕಾವಲ್ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ವಿರುದ್ಧ

ಎದುರುದಾರರು: 1. ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
2.ಗ್ರಾಮ ಲೆಕ್ಕಾಧಿಕಾರಿಗಳು, ಬೆಟ್ಟಹಳ್ಳಿಕಾವಲ್ ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪತ್ರಿಕಾ ಪ್ರಕಟಣೆ

[illegible]

ದಿನಾಂಕ: 10/04/2026ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದಂತೆ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು: ವಕೀಲರು.
ಸ್ಥಳ: ಕನಕಪುರ
ದಿನಾಂಕ: 18-03-2026

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು, ನ್ಯಾಯಾಲಯ ಮತ್ತು ಜೆ. ಎಂ. ಎಫ್ ಸಿ. ಕನಕಪುರ
ಸಿ. ಮಿಸ್. ನಂ.295/2024

ಅರ್ಜಿದಾರರು : ಶ್ರೀಮತಿ ಮಾಯಮ್ಮ ಮತ್ತು ಇತರರು ಗೂಗಾರದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ ಮತ್ತು ತಾಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು : ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು. ಹಾರೋಹಳ್ಳಿ ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಗೂಗಾರದೊಡ್ಡಿ ಗ್ರಾಮ, ದೊಡ್ಡ ಮುದುವಾಡಿ ವೃತ್ತ, ಹಾರೋಹಳ್ಳಿ ಹೋಬಳಿ ಮತ್ತು ತಾಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1ನೇ ಅರ್ಜಿದಾರರು ತಾಯಿ, 2 ಮತ್ತು 3 ನೇ ಅರ್ಜಿದಾರರು ಸಹೋದರರು ಮತ್ತು 4 ಮತ್ತು 5 ನೇ ಅರ್ಜಿದಾರರು ಸಹೋದರಿಯರು ಶ್ರೀ ವೆಂಕಟರಾಜು ಬಿನ್ ಲೇಟ್ ಹೊನ್ನಯ್ಯ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಗೂಗಾರದೊಡ್ಡಿ ಗ್ರಾಮ ದಿನಾಂಕ: 24/10/2017 ರಂದು ಮರಣ ಹೊಂದಿರುತ್ತಾರೆ. ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ 26/05/26ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ನಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2026 ಏಪ್ರೀಲ್ 9ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು:
ಸಿದ್ದಾರ್ಥ ವಕೀಲರು,ಕನಕಪುರ,
ದಿನಾಂಕ 27/03/2026
ಸ್ಥಳ: ಕನಕಪುರ

ಎಲ್‌ಪಿಜಿ ಕೊರತೆ ನೀಗಿಸಲು ಮುಂದಾದ ಇಂಡಿಯನ್ ಆಯಿಲ್

ಬೆಂಗಳೂರು: ನಗರದಲ್ಲಿ ಆಟೋ ಎಲ್‌ಪಿಜಿ ಬೇಡಿಕೆ ಏಕಾಏಕಿ ಹೆಚ್ಚಾದ ಹಿನ್ನೆಲೆ ಎಲ್‌ಪಿಜಿ ಸರಬರಾಜನ್ನು ಶೇ.300ರಷ್ಟು ಹೆಚ್ಚಿಸುವ ಮೂಲಕ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಮಹತ್ವದ ಕ್ರಮ ಕೈಗೊಂಡಿದೆ.

ಖಾಸಗಿ ವಲಯದ ಸರಬರಾಜು ವ್ಯವಸ್ಥೆಯಲ್ಲಿನ ವ್ಯತ್ಯಯದಿಂದಾಗಿ ಉಂಟಾದ ಸಂಕಷ್ಟವನ್ನು ನಿಭಾಯಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಇಂಡಿಯನ್ ಆಯಿಲ್ ಸಂಸ್ಥೆ ತಿಳಿಸಿದೆ.

ಬೆಂಗಳೂರಿನಲ್ಲಿ ದಿನಕ್ಕೆ ಸುಮಾರು 23 ಟನ್ ಆಟೋ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿತ್ತು. ಆದರೆ, ಏಪ್ರಿಲ್ 15ರಂದು ಈ ಪ್ರಮಾಣವು ಏಕಾಏಕಿ 75.53 ಟನ್‌ಗೆ ಏರಿಕೆಯಾಗಿದೆ. ಇದು ನಗರದಲ್ಲಿ ಬೇಡಿಕೆ ಎಷ್ಟು ತೀವ್ರವಾಗಿ ಏರಿಕೆಯಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಕೇವಲ ಬೆಂಗಳೂರು ಮಾತ್ರವಲ್ಲದೆ, ರಾಜ್ಯದೆಲ್ಲೆಡೆ ಇದೇ ಪರಿಸ್ಥಿತಿ ಮುಂದುವರಿದಿದೆ. ನಿತ್ಯದ ಸರಬರಾಜು 43.5 ಟನ್‌ನಿಂದ 83 ಟನ್‌ಗೆ ಏರಿಕೆಯಾಗಿದೆ. ಈ ಬೇಡಿಕೆ ಏರಿಕೆಗೆ ಪ್ರಮುಖ ಕಾರಣ ಖಾಸಗಿ ಆಟೋ ಎಲ್‌ಪಿಜಿ ಪಂಪ್‌ಗಳ ಸ್ಥಗಿತ ಅಥವಾ ವ್ಯತ್ಯಯ ಉಂಟಾಗಿರುವುದು.

ಬೆಂಗಳೂರಿನಲ್ಲಿ ಮತ್ತು ರಾಜ್ಯದಾದ್ಯಂತ ಆಟೋ ಎಲ್‌ಪಿಜಿ ಮಾರುಕಟ್ಟೆಯ ಸುಮಾರು ಶೇ.80ರಷ್ಟು ಪಾಲನ್ನು ಖಾಸಗಿ ಸಂಸ್ಥೆಗಳು ಹೊಂದಿದ್ದವು. ಅವುಗಳಲ್ಲಿ ಬಹುತೇಕ ಪಂಪ್‌ಗಳು ಮುಚ್ಚಲ್ಪಟ್ಟಿರುವುದು ಅಥವಾ ಸರಬರಾಜು ಕಡಿಮೆಯಾಗಿರುವುದು ಗ್ರಾಹಕರನ್ನು ಸರಕಾರಿ ಪಂಪ್‌ಗಳತ್ತ ಮುಖ ಮಾಡುವಂತೆ ಮಾಡಿದೆ. ಇದರಿಂದ ಇಂಡಿಯನ್ ಆಯಿಲ್ ಪಂಪ್‌ಗಳಲ್ಲಿ ವಾಹನಗಳ ದೀರ್ಘ ಸಾಲುಗಳು ಪ್ರತಿನಿತ್ಯ ಕಂಡುಬರುತ್ತಿದ್ದು, ಆಟೋ ಚಾಲಕರು ಮತ್ತು ಇತರೆ ವಾಹನ ಚಾಲಕರು ಗಂಟೆಗಳ ಕಾಲ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಆಟೋ ರಿಕ್ಷಾ ಚಾಲಕರಿಗೆ ಇದು ದೊಡ್ಡ ಸವಾಲಾಗಿ ಪರಿಣಮಿಸಿದೆ.

ಈ ಸಂಕಷ್ಟವನ್ನು ನಿಭಾಯಿಸಲು ಇಂಡಿಯನ್ ಆಯಿಲ್ ಹಲವು ತುರ್ತು ಕ್ರಮಗಳನ್ನು ಕೈಗೊಂಡಿದ್ದು, ನಗರದಲ್ಲಿನ ಎಲ್ಲ ಆಟೋ ಎಲ್‌ಪಿಜಿ ಪಂಪ್‌ಗಳನ್ನು 24 ಗಂಟೆಗಳ ಕಾಲ ನಿರಂತರವಾಗಿ ಕಾರ್ಯನಿರ್ವಹಿಸುವಂತೆ ಮಾಡಲಾಗಿದೆ. ಜತೆಗೆ, ಎಲ್‌ಪಿಜಿ ಬಾಟಲಿಂಗ್ ಘಟಕಗಳು ಮತ್ತು ಲೋಡಿಂಗ್ ಕೇಂದ್ರಗಳು ಕಳೆದ ಒಂದು ವಾರದಿಂದ ನಿರಂತರ ಕಾರ್ಯಾಚರಣೆ ನಡೆಸುತ್ತಿವೆ. ಇದರಿಂದ ಸರಬರಾಜು ಸರಪಳಿಯಲ್ಲಿ ಯಾವುದೇ ಅಡಚಣೆ ಆಗದಂತೆ ನೋಡಿಕೊಳ್ಳಲಾಗಿದೆ.

ಸಮಾಚಾರ ಸಣ್ಣದಲ್ಲ

50 ವಿದ್ಯಾರ್ಥಿಗಳಿಗೆ ಉಚಿತ ಸಮಗ್ರ ಪದವಿ

ಬೆಂಗಳೂರು: ನಗರದ ಆರೋಹಿ ಫೌಂಡೇಶನ್ ವತಿಯಿಂದ ರಾಜ್ಯದ 50 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನೊಳಗೊಂಡ 4 ವರ್ಷದ ಉಚಿತ ಸಮಗ್ರ ಪದವಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಟಿ.ವಿ.ರಾಜು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಕಾರ್ಯಕ್ರಮದ ಮೂಲಕ ಕರ್ನಾಟಕದಾದ್ಯಂತ 12ನೇ ತರಗತಿಯಲ್ಲಿ ಉತ್ತಮ ಸಾಧನೆ ಮಾಡಿರುವ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧನೆ ಮಾಡಲು ಉತ್ಸಾಹ ಹೊಂದಿರುವ ಸುಮಾರು 50 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಸಂಪೂರ್ಣ ವಸತಿ ವ್ಯವಸ್ಥೆಯೊಂದಿಗೆ 4 ವರ್ಷದ ಉಚಿತ ಶೈಕ್ಷಣಿಕ ಕಾರ್ಯಕ್ರಮವನ್ನು ನೀಡಲಾಗುತ್ತದೆ ಎಂದರು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೊಂದುವ ಪಠ್ಯಕ್ರಮ, ಅನುಭವಿ ವಿಷಯತಜ್ಞರು ಹಾಗೂ ತರಬೇತು ದಾರರಿಂದ ನಿರಂತರ ಮಾರ್ಗದರ್ಶನ, ವೈಯಕ್ತಿಕ ಗಮನ ಮತ್ತು ಮೆಂಟರಿಂಗ್ ಜತೆಗೆ ನಾಯಕತ್ವ, ನೈತಿಕತೆ ಮತ್ತು ಸಂವಹನ ಕೌಶಲ್ಯಗಳ ಅಭಿವೃದ್ಧಿಗೆ ತರಬೇತಿ ನೀಡಲಾಗುತ್ತದೆ ಎಂದರು. ನಮ್ಮ ಗುರಿ ಕೇವಲ ಪರೀಕ್ಷೆ ಪಾಸಾಗುವ ವಿದ್ಯಾರ್ಥಿಗಳನ್ನು ತಯಾರಿಸುವುದಲ್ಲ ಬದಲಿಗೆ ಸಮಾಜಕ್ಕೆ ಹೊಣೆಗಾರಿಕೆಯಿಂದ ಸೇವೆ ಸಲ್ಲಿಸುವ ಉತ್ತಮ ನಾಯಕರನ್ನು ರೂಪಿಸುವುದಾಗಿದೆ ಎಂದರು. ಅರ್ಜಿ ವಿಧಾನ, ಅರ್ಹತೆ ಮತ್ತು ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿಗಾಗಿ ಆರೋಹಿ ಫೌಂಡೇಶನ್ ವೆಬ್‌ಸೈಟ್‌ಗೆ ಭೇಟಿ ನೀಡುವಂತೆ ಸೂಚಿಸಿದರು. ಸಂಸ್ಥೆಯ ಉಪಾಧ್ಯಕ್ಷ ಗಣಪತಿ ಹೆಗ್ಡೆ ಸೇರಿದಂತೆ ಮತ್ತಿತರರು ಇದ್ದರು.

ವಿಶೇಷ ಉಪನ್ಯಾಸ ಕಾರ್ಯಕ್ರಮ ಇಂದು

ಬೆಂಗಳೂರು: ಜೈನ್ ಮಿಲನ್ ಬೆಂಗಳೂರು ಸೆಂಟ್ರಲ್ ಹಾಗೂ ಚಕ್ರೇಶ್ವರಿ ಮಹಿಳಾ ಸಮಾಜ ವತಿಯಿಂದ ಏ.18ರಂದು ಸಂಜೆ 4.15ಕ್ಕೆ ಜಯನಗರದ ಚಕ್ರೇಶ್ವರಿ ಮಹಿಳಾ ಸಮಾಜದಲ್ಲಿ ನಾಗಚಂದ್ರ ಕವಿಯ ಪಂಪ ರಾಮಾಯಣದ ವೈಶಿಷ್ಟ್ಯ ಒಂದು ನೋಟ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆ ತಿಳಿಸಿದೆ. ಈ ವೇಳೆ ಕಾರ್ಯಕ್ರಮದಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನ ಅಧ್ಯಕ್ಷ ಡಾ.ಬೈರಮಂಗಲ ರಾಮೇಗೌಡ, ಇಸ್ರೋದ ನಿವೃತ್ತ ಯೋಜನೆ ಸಹಾಯಕ ಕಠಾರಿ ವಿಜಯ ಕುಮಾರ್ ಸಿ., ಜೈನ್ ಮಿಲನ್ ಜೈನ್ ಮಿಲನ್ ಬೆಂಗಳೂರು ಸೆಂಟ್ರಲ್ ಅಧ್ಯಕ್ಷೆ ಮಮತ ಕಾಂತರಾಜ್, ಚಕ್ರೇಶ್ವರಿ ಮಹಿಳಾ ಸಮಾಜ ಅಧ್ಯಕ್ಷೆ ನಾಗಶ್ರೀ ಮುಪ್ಪಾನೆ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ರೈತ ರತ್ನ ರಿಯಾಲಿಟಿ ಶೋ ಆರಂಭ

ಬೆಂಗಳೂರು: ದೂರದರ್ಶನ ಚಂದನ ವಾಹಿನಿಯಲ್ಲಿ ವಿಭಿನ್ನ ಹಾಗೂ ವಿನೂತನ ರೀತಿಯಲ್ಲಿ ಕೃಷಿಗೆ

ಸಂಬಂಧಿಸಿದ ರೈತರ ರಿಯಾಲಿಟಿ ಶೋ 'ರೈತ ರತ್ನ' ಕಾರ್ಯಕ್ರಮವು ಮೂಡಿ ಬರಲಿದೆ. ಏಪ್ರಿಲ್ ಮೂರನೇ ವಾರದಿಂದ ಪ್ರಾರಂಭವಾಗುವ ಈ ವಿಶಿಷ್ಟ ಸರಣಿಯು ಪ್ರತಿ ಶನಿವಾರ ಚಂದನ ವಾಹಿನಿಯಲ್ಲಿ ಒಂದು ಘಂಟೆಗಳ ಕಾಲ ಪ್ರಸಾರವಾಗಲಿದೆ. 26 ಕಂತುಗಳಲ್ಲಿ ಮೂಡಿಬರಲಿರುವ ಈ ಸರಣಿ ಕಾರ್ಯಕ್ರಮವು ನಾಡಿನ ಸಾಧಕ ರೈತರನ್ನು ಅಸಂಖ್ಯೆ ವೀಕ್ಷಕರಿಗೆ ಪರಿಚಯಿಸಲಿದೆ. ರೈತನೇ ಬಂದು ಹಾಟ್ ಸೀಟ್ ಮೇಲೆ ಕುಳಿತು ಆಮಂತ್ರಿತ ವೀಕ್ಷಕರ ಸಮ್ಮುಖದಲ್ಲಿ ಮಾತನಾಡುವ ಪ್ರಸ್ತುತ ಕಾರ್ಯಕ್ರಮವು ಒಂದು ವಿನೂತನ ಮಾದರಿಯಲ್ಲಿ ಮೂಡಿಬರಲಿದೆ. ಈಗಾಗಲೇ ಈ ಸರಣಿಯ ಉದ್ಘಾಟನೆಯನ್ನು ಕೃಷಿ ಮಂತ್ರಿಗಳಾದ ಎನ್. ಚಲುವರಾಯಸ್ವಾಮಿ ನೆರವೇರಿಸಿದ್ದು, ದೂರದರ್ಶನ ತಂಡದ ಆಲೋಚನಾ ಕ್ರಮ ಮತ್ತು ರೈತಪರ ಕಾಳಜಿಯನ್ನು ಶ್ಲಾಘಿಸಿದ್ದಾರೆ. ಈ ಸುಗ್ಗಿ ಸರಣಿಯಲ್ಲಿ ಸಮಗ್ರ ಕೃಷಿ, ಸಾವಯವ ಕೃಷಿ, ನೈಸರ್ಗಿಕ ಕೃಷಿ, ಅಲ್ಲದೇ ವಿಲಕ್ಷಣ ಕೃಷಿ ಮಾಡಿ ಯಶಸ್ಸು ಕಂಡ ರೈತ ಮಹನೀಯರು ಮತ್ತು ಮಹಿಳೆಯರು ಇರಲಿದ್ದಾರೆ. ಕಾರ್ಯಕ್ರಮದಲ್ಲಿ 26 ರೈತರ ಪೈಕಿ ಮೂವರು 'ರೈತರತ್ನ ಪ್ರಶಸ್ತಿ'ಗೆ ಆಯ್ಕೆಯಾಗಲಿದ್ದು, ತೀರ್ಪುಗಾರರಾಗಿ ಬೆಂಗಳೂರು ಕೃಷಿ ವಿವಿಯ ಸಹ ವಿಸ್ತರಣಾ ನಿರ್ದೇಶಕ ಡಾ.ಕೆ.ಪಿ.ರಘುಪ್ರಸಾದ್ ಮತ್ತು ಧಾರವಾಡದಲ್ಲಿ ಸಹಾಯಕ ಕೃಷಿ ನಿರ್ದೇಶಕರಾಗಿರುವ ಚನ್ನಪ್ಪ ಅಂಗಡಿ ಕಾರ್ಯನಿರ್ವಹಿಸಲಿದ್ದಾರೆ. ಕಾರ್ಯಕ್ರಮವನ್ನು ನಿರೂಪಿಸಿ ಪ್ರಸ್ತುತಪಡಿಸಲು ಲಕ್ಷ್ಮಿರಾಜ್ ಸಜ್ಜಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ಆಯೋಜಕರು ತಿಳಿಸಿದ್ದಾರೆ.

ಜನತಾ ಸಹಕಾರ ಬ್ಯಾಂಕ್ 14.75 ಕೋಟಿ ರು. ಲಾಭ

ಬೆಂಗಳೂರು: 2025-26ನೇ ಆರ್ಥಿಕ ವರ್ಷದಲ್ಲಿ ಜನತಾ ಸಹಕಾರ ಬ್ಯಾಂಕ್ ಉತ್ತಮ ಆರ್ಥಿಕ ಸಾಧನೆ ತೋರಿದ್ದು, ಒಟ್ಟು 14.75 ಕೋಟಿ ರು. ಲಾಭ ದಾಖಲಿಸಿದೆ ಎಂದು ಬ್ಯಾಂಕ್ ಅಧ್ಯಕ್ಷ ಸಿ.ಎಲ್.

ಮರಿಗೌಡ ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ ಅವರು, ಬ್ಯಾಂಕ್‌ನ ವ್ಯವಹಾರ ವಿಸ್ತರಣೆ ಮತ್ತು ಸಮರ್ಥ ನಿರ್ವಹಣೆಯ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ. ವ್ಯವಹಾರಿಕ ಹಾಗೂ ಆಡಳಿತಾತ್ಮಕ ವೆಚ್ಚಗಳನ್ನು ಕಡಿತಗೊಳಿಸಿ, ಬ್ಯಾಂಕ್ 11.45 ಕೋಟಿ ರು. ನಿಕರ ಲಾಭ (ನೆಟ್ ಪ್ರಾಫಿಟ್) ಗಳಿಸಿದೆ. ಜತೆಗೆ ಬ್ಯಾಂಕ್‌ನ ಅಸಮರ್ಪಕ ಸಾಲಗಳ ಪ್ರಮಾಣವನ್ನು ನಿಯಂತ್ರಣದಲ್ಲಿಟ್ಟಿರುವುದು ವಿಶೇಷ. ಬ್ಯಾಂಕ್‌ನ ಬೆಳವಣಿಗೆಗೆ ಕಾರಣರಾದ ಷೇರುದಾರರು, ಗ್ರಾಹಕರು ಹಾಗೂ ಸಿಬ್ಬಂದಿಗೆ ಅಭಿನಂದನೆಗಳು. ಮುಂದಿನ 2026-27ನೇ ಆರ್ಥಿಕ ವರ್ಷದಲ್ಲಿಯೂ ಇದೇ ರೀತಿಯ ಉತ್ತಮ ಸಾಧನೆ ಮುಂದುವರಿಸಲು ಎಲ್ಲಾ ಸಿಬ್ಬಂದಿ ಶ್ರಮಿಸಬೇಕು ಎಂದರು. ಈ ವೇಳೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ವಿನೋದ ಶಿವರಾಮಯ್ಯ ಮಾತನಾಡಿ, ಮಾ.31, 2026ರ ತನಕ ಬ್ಯಾಂಕ್‌ನ ಒಟ್ಟು ಆಸ್ತಿಗಳು 1089 ಕೋಟಿ ರು. ಆಗಿದ್ದು, ಠೇವಣಿಗಳು 442 ಕೋಟಿ ರು. ಮತ್ತು ಮುಂಗಡಗಳು 334 ಕೋಟಿ ರು. ತಲುಪಿವೆ. ಬ್ಯಾಂಕ್‌ನ ಸ್ವಂತ ನಿಧಿ 158.33 ಕೋಟಿ ರು. ಆಗಿದೆ ಎಂದರು.

ಬತ್ತುತ್ತಿರುವ ಕೊಳವೆ ಬಾವಿಗಳು | ಟ್ಯಾಂಕರ್ ನೀರಿಗೆ ಮೊರೆ | ಸಂಚಾರಿ ಕಾವೇರಿಗೆ ಬೇಡಿಕೆ ಹೆಚ್ಚಳ

ನಗರದಲ್ಲಿ ಹೆಚ್ಚುತ್ತಿರುವ ನೀರಿನ ಹಾಹಾಕಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ಕೊಳವೆ ಬಾವಿಗಳು ಬತ್ತುತ್ತಿರುವುದರಿಂದ ಹಲವು ಬಡಾವಣೆಗಳಲ್ಲಿ ನೀರಿನ ಹಾಹಾಕಾರ ಹೆಚ್ಚಾಗುತ್ತಿದ್ದು, ಜಲಮಂಡಳಿಯ ಸಂಚಾರಿ ಟ್ಯಾಂಕರ್‌ಗೆ ಬೇಡಿಕೆ ಹೆಚ್ಚಾಗಿದೆ.

ನಗರದಲ್ಲಿ ಬಿಸಿಲಿನ ಬೇಗೆ ಹೆಚ್ಚಾಗುತ್ತಿದ್ದು, ನೀರಿನ ಹಾಹಾಕಾರವೂ ಮುಗಿಲು ಮುಟ್ಟಿದೆ. ಇದಕ್ಕೆ ಸಾಕ್ಷಿಯಂತೆ ಕಳೆದ ಮೂರು ತಿಂಗಳಿನಿಂದ ನಗರದಲ್ಲಿ ಜಲಮಂಡಳಿಯ ಸಂಚಾರಿ ಟ್ಯಾಂಕರ್‌ಗೂ ಬೇಡಿಕೆ ಹೆಚ್ಚಿದ್ದು, ಜಲಮಂಡಳಿಯಲ್ಲಿ ನೀರಿನ ವಹಿವಾಟು ದಾಖಲೆ ಪ್ರಮಾಣದಲ್ಲಿ ಹೆಚ್ಚಾಗಿದೆ. ಕೊಳವೆ ಬಾವಿಗಳಲ್ಲಿ ಸಾಕಷ್ಟು ನೀರು ಸಿಗದ ಕಾರಣ ಈಗ ನಗರದ ಹೆಚ್ಚಿನ ನಾಗರಿಕರು ಟ್ಯಾಂಕರ್ ನೀರಿನ ಮೊರೆ ಹೋಗುತ್ತಿದ್ದಾರೆ. ಜಲ ಮಂಡಳಿಯು ಸಂಚಾರಿ ಕಾವೇರಿ ಉಪಕ್ರಮದಡಿ ಟ್ಯಾಂಕರ್ ನೀರು ಸರಬರಾಜು ಮಾಡಿ, ಕಳೆದೆರಡು ತಿಂಗಳಲ್ಲಿ 1.19 ಕೋಟಿ ರು. ಆದಾಯ ಸಂಗ್ರಹಿಸಿದೆ.

ಗ್ರಾಹಕರ ನೊಂದಣಿಯಲ್ಲೂ ಹೆಚ್ಚಳ: ನಗರದಲ್ಲಿ ನೀರಿನ ಅಭಾವ ಹೆಚ್ಚಾದಂತೆ ಸಂಚಾರಿ ಕಾವೇರಿಗೆ ಬೇಡಿಕೆ ಹೆಚ್ಚಿದ್ದು, ನೋಂದಾಯಿಸಿಕೊಳ್ಳುವ ಹೊಸ ಗ್ರಾಹಕರ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. ಟ್ಯಾಂಕರ್ ಸೇವೆ ಆರಂಭವಾದಾಗಿನಿಂದ, 2025ರ ಮೇನಿಂದ ಇದುವರೆಗೂ 14,419 ಮಂದಿ ನೋಂದಾಯಿಸಿದ್ದು, ಜನವರಿಯಿಂದ ಇದುವರೆಗೂ 3,810 ಗ್ರಾಹಕರು ಆ್ಯಪ್ ಮತ್ತು ವೆಬ್‌ಸೈಟ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ. ಜನವರಿಯಲ್ಲಿ 687, ಫೆಬ್ರವರಿಯಲ್ಲಿ 1078, ಮಾರ್ಚ್‌ನಲ್ಲಿ 1693 ಹಾಗೂ ಏಪ್ರಿಲ್‌ನ 8 ದಿನಗಳಲ್ಲಿ 352 ಹೊಸ ಗ್ರಾಹಕರು ನೋಂದಾ ಯಿತರಾಗಿದ್ದಾರೆ. 2025ರ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ಮೂರು ತಿಂಗಳಲ್ಲಿ ಕೇವಲ 1642 ಗ್ರಾಹಕರು ನೋಂದಣಿ ಮಾಡಿಕೊಂಡಿದ್ದರು.ಸದ್ಯ ನೀರಿನ ಬೇಡಿಕೆಯು ಶೇ.20-25ರಷ್ಟು ಹೆಚ್ಚಾಗುತ್ತಿದ್ದು, ನಗರದಾದ್ಯಂತ ವಿಶ್ವಾಸಾರ್ಹ ನೀರಿನ ಸೌಲಭ್ಯವನ್ನು ಪಡೆದು ಕೊಳ್ಳಲು ಪ್ರಯತ್ನ ಮಾಡಲಾಗುತ್ತಿದೆ. ಈಗಾಗಲೇ 220ಕ್ಕೂ ಅಧಿಕ ಟ್ಯಾಂಕರ್‌ಗಳನ್ನು ನಿಯೋಜಿಸಲಾಗಿದೆ. 90ಕ್ಕೂ ಅಧಿಕ ಹೆಚ್ಚುವರಿ ನೀರು ತುಂಬಿಸುವ ಕೇಂದ್ರ ಗಳು, 190ಕ್ಕೂ ಅಧಿಕ ಆರ್.ಓ. ಘಟಕಗಳ ಮರುಪೂರಣ ಕೆಲಸವೂ ನಡೆಯುತ್ತಿದೆ. ಮಂಡಳಿಯಲ್ಲಿ ನೀರಿದ್ದು, ಬೇಸಿಗೆಯ ಗರಿಷ್ಠ ಸಮಯದಲ್ಲಿಯೂ ಸಮರ್ಥವಾಗಿ ನೀರು ಪೂರೈಕೆ ಮಾಡುವ ನಿಟ್ಟಿನಲ್ಲಿ ವ್ಯವಸ್ಥೆಯನ್ನು ಬಲಪಡಿಸಲಾಗಿದೆ ಎಂದು ಜಲಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಚಾರಿ ಕಾವೇರಿಯಿಂದ 4.68 ಕೋಟಿ ಆದಾಯ

ಮೇ 2025	ಏಪ್ರಿಲ್ 8, 2026
ಒಟ್ಟು ಆರ್ಡರ್‌ಗಳು	45,448
ಒಟ್ಟು ಆದಾಯ	4.68 ಕೋಟಿ
ನೋಂದಾಯಿತ ಗ್ರಾಹಕರು	4,419

ಆರ್ಡರ್ ವಿಭಾಗವಾರು ವಿವರ

ಆನ್‌ಲೈನ್ ಆರ್ಡರ್‌ಗಳು	26,803	2.51 ಕೋಟಿ
ಬಲ್ಕ್ ಆರ್ಡರ್ ಗಳು	18,645	2.17 ಕೋಟಿ

ಜಲಮಂಡಳಿ ಆದಾಯ ಹೆಚ್ಚಳ

ನೀರು ಸರಬರಾಜು ಆದಾಯ	ಮೂರು ತಿಂಗಳ ಹೋಲಿಕೆ	
ವರ್ಷ/ತಿಂಗಳು	ಆರ್ಡರ್‌ಗಳು	ಆದಾಯ
2025 ಅಕ್ಟೋಬರ್-ಡಿಸೆಂಬರ್	11,681	1.20 ಕೋಟಿ
2026 (ಜನವರಿ-ಏಪ್ರಿಲ್ 8)	15,731	1.67 ಕೋಟಿ

ತಿಂಗಳವಾರು ವಿವರ

ತಿಂಗಳು	ಆರ್ಡರ್	ಆದಾಯ
ಜನವರಿ	4,241	48.49 ಲಕ್ಷ
ಫೆಬ್ರವರಿ	5,980	65.38 ಲಕ್ಷ
ಮಾರ್ಚ್-ಏಪ್ರಿಲ್ 8	5,510	53.64 ಲಕ್ಷ
ಅಪಾರ್ಟ್‌ಮೆಂಟ್, ಕೈಗಾರಿಕೆಗಳಿಗೆ ಪೂರೈಕೆ	5,819	70.87 ಲಕ್ಷ

ನೀರಿನ ಸಮಸ್ಯೆ ಬಗೆಹರಿಸಲು ಅಧಿಕಾರಿಗಳಿಗೆ ಸೂಚನೆ

ನಗರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶಾಸಕ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಸಭೆ ನಡೆಯಿತು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯತೀಶ್, ಬೆಂಗಳೂರು ದಕ್ಷಿಣ ತಾಲ್ಲೂಕು ಇಒ ಎಸ್.ನಾರಾಯಣಾ, ಡಿ.ಎಸ್. ನೋಮೇಶ್ ಕುಮಾರ್ , ಮಾಜಿ ಅಧ್ಯಕ್ಷ ಕೆಂಪೇಗೌಡ, ಚಿಕ್ಕರಾಜು ಇದ್ದರು.

ಬೆಂಗಳೂರು: ಹಲವು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳೆಷ್ಟು? ಸ್ಥಳೀಯ ಸಮಸ್ಯೆಗಳೇನು ಎಂಬುದರ ಅರಿವು ಇರುವುದಿಲ್ಲ. ಖಾತೆ, ಭೂ ವ್ಯಾಜ್ಯಗಳು ಹಾಗೂ ಅದರಿಂದ ಬರುವ ಆದಾಯಗಳಿಗೆ ಸೀಮಿತರಾಗಿದ್ದಾರೆ ಎಂದು ಗ್ರಾಮ ಪಂಚಾಯಿತಿ ಸದಸ್ಯರು, ಅಧ್ಯಕ್ಷರು ಹಾಗೂ ಮುಖಂಡರು ದೂರಿದರು.

ನಗರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶಾಸಕ ಎಸ್ .ಟಿ.ಸೋಮಶೇಖರ್ ನೇತೃತ್ವದಲ್ಲಿ ನೀರಿನ ಸಮಸ್ಯೆ ಹಾಗೂ ಇತರೆ ಕುಂದು ಕೊರತೆಗಳ ಬಗ್ಗೆ ವಿವಿಧ ಇಲಾಖಾ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಸಮಸ್ಯೆಗಳ ಸುರಿಮಳೆಗೈದ ಮುಖಂಡರು ಜಲಜೀವನ್ ಮಿಷನ್ ಹಳ್ಳ ಹಿಡಿದಿದೆ. ಅರ್ಧಂಬರ್ಧ ಕಾಮಗಾರಿ ಮುಗಿಸಿ ಕೈ ಬಿಡಲಾಗಿದೆ. ಅಗೆಯಲಾದ ರಸ್ತೆಗಳು ಗುಂಡಿಗಳಾಗಿವೆ. ಹಲವೆಡೆ ನೀರಿನ ಸಂಪರ್ಕ ನೀಡದೆ ತೊಂದರೆ ಉಂಟು ಮಾಡಲಾಗುತ್ತಿವೆ ಎಂದು ಅಲವತ್ತು ಕೊಂಡರು. ತಾವರೆಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಚರಂಡಿ ಸ್ವಚ್ಛತೆ ಕಾಮಗಾರಿ ಪೂರ್ಣಗೊಳಿಸದೆ ಬಿಲ್ ಪಡೆಯಲಾಗಿದೆ ಎಂದು ಆರೋಪಿಸಿದರು. ಶಾಲಾ ಕಾಂಪೌಂಡ್, ರಸ್ತೆ ಒತ್ತುವರಿ ಸೇರಿದಂತೆ ಹತ್ತು ಹಲವಾರು ಸಮಸ್ಯೆಗಳನ್ನು ಪ್ರಸ್ತಾಪಿಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ರಾಮೋಹಳ್ಳಿ ಗ್ರಾಮ ಹಾಗೂ ಅಗರ ಪಂಚಾಯಿತಿ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೇರಳವಾಗಿದೆ , ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೈಸ್ ಸಂಸ್ಥೆ ಗೋಮಾಳ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಟ್ಯಾಂಕ್ ನಿರ್ಮಾಣಕ್ಕೆ ಅನುವು ಮಾಡಿಕೊಡುತ್ತಿಲ್ಲ, ಶೀಘ್ರವೇ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದರು

ಶಾಸಕ ಎಸ್.ಟಿ.ಸೋಮಶೇಖರ್ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದೆ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸಮಸ್ಯೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಿ, ಎಲ್ಲೆಲ್ಲಿ ಬೋರ್‌ವೆಲ್‌ಗಳು ಸಮಸ್ಯೆಯಾಗಿವೆ ಅಂತಹವುಗಳನ್ನು ಶೀಘ್ರದಲ್ಲಿ ಸರಿಪಡಿಸಬೇಕು, ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಟ್ಯಾಂಕರ್ ಮೂಲಕ ನೀರನ್ನು ಮನೆ ಮನೆಗೆ ತಲುಪಿಸುವ ಕೆಲಸ ಮಾಡಬೇಕೆಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಹೃದ್ರೋಗ ಚಿಕಿತ್ಸೆಗೆ ಬೆಂಗಳೂರು ಬೆಸ್ಟ್

ಬೆಂಗಳೂರು: ಹೃದಯ ಸಮಸ್ಯೆಗೆ ಒಳಗಾದವರಿಗೆ ನಾವು ಉನ್ನತ ತಂತ್ರಜ್ಞಾನ ಬಳಸಿ ಬೆಂಗಳೂರಿನಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಪ್ರಮುಖ ಹೃದಯ ಚಿಕಿತ್ಸಾ ಕೇಂದ್ರವಾಗಿ ಜಾಗತಿಕ ಮಟ್ಟದಲ್ಲೂ ಬೆಂಗಳೂರು ನಗರ ಗುರುತಿಸಿಕೊಳ್ಳುತ್ತಿದೆ ಎಂದು ನಾರಾಯಣ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯಾಕ್ ಸೈನ್ಸಸ್‌ನ ಹೃದ್ರೋಗ ತಜ್ಞ ಡಾ.ಸಂಜಯ್ ಮೆಹ್ರೋತಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವೈದ್ಯರು ಅತ್ಯಾಧುನಿಕ ಚಿಕಿತ್ಸಾ ವಿಧಾನಗಳಾದ ಟಿಎವಿಆರ್ (ಟ್ರಾನ್ಸ್ ಕ್ಯಾತಿಟರ್ ಅಯೋ ರ್ಟಿಕ್ ವಾಲ್ವ್ ರಿಪ್ಲೇಸ್ಮೆಂಟ್) ಮತ್ತು ಟಿಎಂವಿಆರ್ (ಟ್ರಾನ್ಸ್ ಕ್ಯಾತಿಟರ್ ಮಿಟ್ರಲ್ ವಾಲ್ವ್ ರಿಪ್ಲೇಸ್‌ಮೆಂಟ್) ತಂತ್ರಜ್ಞಾನಗಳನ್ನು ಬಳಸುತ್ತಿದ್ದಾರೆ. ಈ ವಿಧಾನಗಳು ಹಳೆಯ ಸಾಂಪ್ರದಾಯಿಕ ವಿಧಾನವಾದ ತೆರೆದ ಹೃದಯ ಚಿಕಿತ್ಸೆಗಳಿಲ್ಲದೆ, ಸಂಕೀರ್ಣ ಸಮಸ್ಯೆಗಳನ್ನೂ ಪರಿಹರಿಸುತ್ತಿವೆ ಎಂದರು.

ಸಾಂಪ್ರದಾಯಿಕ ಮುಕ್ತ ಹೃದಯ ಶಸ್ತ್ರಚಿಕಿತ್ಸೆಗೆ ಒಳ ಗಾದ ರೋಗಿಗಳು ವಾರಗಟ್ಟಲೆ ಆಸ್ಪತ್ರೆಯಲ್ಲಿ ಕಳೆಯಬೇಕಾಗಿತ್ತು. ಆದರೆ, ಟಿಎವಿಆರ್ ಚಿಕಿತ್ಸೆಗೆ ಒಳಗಾದವರು ಕೇವಲ 24 ರಿಂದ 72 ಗಂಟೆಗಳ ಒಳಗೆ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳಲು ಶಕ್ತರಾಗುತ್ತಿದ್ದಾರೆ. ಇದು ರೋಗಿಗಳ ಸಮಯ ಮತ್ತು ವೆಚ್ಚ ಎರಡನ್ನೂ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಈ ತಂತ್ರಜ್ಞಾನಗಳು ವಿಶೇಷವಾಗಿ ಎರಡನೇ ಬಾರಿ ಹೃದಯ ಚಿಕಿತ್ಸೆಯ ಅಗತ್ಯವಿರುವ ರೋಗಿಗಳಿಗೆ ವರದಾನವಾಗಿವೆ. ಹಿಂದೆ, ಪುನರಾ ವರ್ತಿತ ಶಸ್ತ್ರಚಿಕಿತ್ಸೆಗಳು ಅತ್ಯಂತ ಅಪಾಯಕಾರಿಯಾಗಿದ್ದವು. ಆದರೆ ಈಗ ವೈದ್ಯರು ಎದೆಯನ್ನು ಮತ್ತೆ ಸೀಳುವ ಅಗತ್ಯ ವಿಲ್ಲದೆಯೇ ಇಂತಹ ಸಂಕೀರ್ಣ ಪ್ರಕರಣಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಪಶ್ಚಿಮ ಪಾಲಿಕೆಯಲ್ಲಿ ಜನಗಣತಿ ಸಂಬಂಧ ಪರಿಶೀಲನೆ

ಬೆಂಗಳೂರು: ಪದ್ಮನಾಭನಗರ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ, ಸ್ವಚ್ಛತಾ ವ್ಯವಸ್ಥೆ ಹಾಗೂ ಜನಗಣತಿ-2027 ಕ್ಕೆ ಸಂಬಂದಿಸಿದಂತೆ ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ ಅವರು ಸ್ಥಳ ಪರಿಶೀಲನೆ ನಡೆಸಿದರು.

ಪದ್ಮನಾಭನಗರ ವ್ಯಾಪ್ತಿ ಪ್ರಸಕ್ತ ಆಯ ವ್ಯಯ ದಲ್ಲಿನ ಬಿ-ಸ್ಮೈಲ್‌ನಡಿ ಪ್ರಸ್ತಾಪಿತ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಇಟ್ಟಮಡು ರಸ್ತೆಯ ಸುಮಾರು 1.2 ಕಿ.ಮೀ ಉದ್ದದ ಭಾಗಕ್ಕೆ ಭೇಟಿ ನೀಡಿ ಪರಿಶೀಲಿಸಿ, ಸರ್ವೇಯರ್‌ಗಳು, ನಗರ ಯೋಜಕರು ಹಾಗೂ ಕಂದಾಯ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆಯೊಂದಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.ಹೊಸಕೆರೆಹಳ್ಳಿ ವಾರ್ಡ್ ನ ಇಟ್ಟಮಡು ರಸ್ತೆಯಲ್ಲಿ ಸ್ವಚ್ಛತಾ ವ್ಯವಸ್ಥೆಯನ್ನು ಪರಿಶೀಲಿಸಿ, ಆರೋಗ್ಯ ಮೇಲ್ವಿಚಾರಕರು ಹಾಗೂ ಮಾರ್ಷಲ್ ಗಳಿಗೆ ರಸ್ತೆಗಳಲ್ಲಿ ಕಸ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಹಾಗೂ ಅನಧಿಕೃತವಾಗಿ ಕಸ ಹಾಕುವವರ ವಿರುದ್ಧ ದಂಡಾತ್ಮಕ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ನಿರ್ದೇಶನ ನೀಡಿದರು.

ಗಣತಿದಾರರಿಗೆ ಮಾರ್ಗದರ್ಶನ: ಹೊಸಕೆರೆಹಳ್ಳಿ ವಾಡ್ ್ನ 5ನೇ ಅಡ್ಡರಸ್ತೆ, ಟಿ.ಜಿ. ಲೇಔಟ್ ನಲ್ಲಿ ಭಾರತ ಜನಗಣತಿ 2027 ಭಾಗವಾಗಿ ಗಣತಿದಾರರು ಮತ್ತು ಮೇಲ್ವಿಚಾರಕರೊಂದಿಗೆ ಬ್ಲಾಕ ವಾರು ಹಾಗೂ ಮನೆಗಳ ಪಟ್ಟಿ ಸಿದ್ದಪಡಿಸುವದರ ಬಗ್ಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿದರು. ಜನಗಣತಿ ಮಾಹಿತಿ ಸಂಗ್ರಹಣೆ ಪ್ರಕ್ರಿಯೆಯನ್ನು ವೀಕ್ಷಿಸಿ, ಗಣತಿದಾರರಿಗೆ ಅಗತ್ಯ ಮಾಹಿತಿ ನೀಡುವಂತೆ ಸೂಚಿಸಿದರು. ಜತೆಗೆ, ಆಸ್ತಿ ಮಾಲೀಕರು ಪ್ರಸಕ್ತ ಸಾಲಿನ ಕಂದಾಯವನ್ನು ಪಾವತಿಸುವಂತೆ ಹಾಗೂ ಇ-ಆಸ್ತಿ ಪಡೆಯುವ ಕುರಿತು ಜಾಗೃತಿ ಮೂಡಿಸಲು ಕರೆ ನೀಡಿದರು.

ಈ ವೇಳೆ ಉಪ ಆಯುಕ್ತರು (ಆಡಳಿತ) ಸಾಯಿದಾ ಆಫ್ರಿನ್ ಭಾನು, ಅಧೀಕ್ಷಕ ಅಭಿಯಂತರರು ಜಯಶಂಕರ್, ನಗರ ಯೋಜಕರು, ಕಾರ್ಯಪಾಲಕ ಅಭಿಯಂತರರು, ಕಂದಾಯ ಅಧಿಕಾರಿಗಳು, ಗಣತಿದಾರರು ಹಾಗೂ ಸಂಬಂಧಪಟ್ಟ ಅಧಿಕಾರಿ, ಸಿಬ್ಬಂದಿ ಇದ್ದರು.

ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ, ಕೆ.ವಿ ಅವರು ಪದ್ಮನಾಭನಗರ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ, ಸ್ವಚ್ಛತಾ ವ್ಯವಸ್ಥೆ ಹಾಗೂ ಜನಗಣತಿ-2027 ಕ್ಕೆ ಸಂಬಂದಿಸಿದಂತೆ ಸ್ಥಳ ಪರಿಶೀಲನೆ ನಡೆಸಿದರು.

ಗುತ್ತಿಗೆದಾರರ ವಿರುದ್ಧ ಕ್ರಮ: ಕೆ.ಎನ್.ರಮೇಶ್

ಬೆಂಗಳೂರು: ತೃಪ್ತಿಕರವಾಗಿ ಕಾರ್ಯನಿರ್ವಹಿಸಿದ ಘನತ್ಯಾಜ್ಯ ನಿರ್ವಹಣಾ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಹಿರಿಯ ಅಧಿಕಾರಿಗಳಿಗೆ ಆಯುಕ್ತ ಕೆ.ಎನ್.ರಮೇಶ್ ಸೂಚನೆ ನೀಡಿದರು.

ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ. ಎನ್. ರಮೇಶ್ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಮಸ್ಯೆ ಹೆಚ್ಚಾಗಿರುವ ಹಿನ್ನೆಲೆ ಘನತ್ಯಾಜ್ಯ ನಿರ್ವಹಣಾ ವಿಭಾಗದ ಹಿರಿಯ ಅಧಿಕಾರಿಗಳೊಂದಿಗೆ ಮಹತ್ವದ ಸಭೆ ನಡೆಸಿ, ನಗರದ ಸ್ವಚ್ಛತೆಯನ್ನು ಕಾಪಾಡುವ ನಿಟ್ಟಿನಲ್ಲಿ ಆಯುಕ್ತರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು. ಪಾಲಿಕೆ ವ್ಯಾಪ್ತಿಯಲ್ಲಿ ಬೃಹತ್ ತ್ಯಾಜ್ಯ ಉತ್ಪಾದಕರ ಸಮೀಕ್ಷೆ ನಡೆಸಿ, ಅಧಿಕೃತ ಎಂಪನೆಲ್ಡ್ ವೆಂಡರ್‌ಗಳ ಮೂಲಕವೇ ಕಸ ಸಂಗ್ರಹಣೆಯಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸೂಚಿಸಿದರು. ಪ್ರತಿನಿತ್ಯ ಆಟೋ ಟಿಪ್ಪರ್‌ಗಳು ಮತ್ತು ಕಾಂಪಾಕ್ಟರ್‌ಗಳ ಕಾರ್ಯಕ್ಷಮತೆ ಹಾಗೂ ಮಾರ್ಷಲ್‌ಗಳು, ಲಿಂಕ್ ವರ್ಕರ್ಸ್, ಪಿಕೆಗಳ (ಪೌರಕಾರ್ಮಿಕರು) ಮೇಲ್ವಿಚಾರಕರ ಹಾಜರಾತಿ ಮತ್ತು ಜವಾಬ್ದಾರಿಗಳ ಕುರಿತು ನಿರ್ದೇಶನ ನೀಡಿದರು.

ಸಾರ್ವಜನಿಕರ ಹಿತದೃಷ್ಟಿಯಿಂದ ತೃಪ್ತಿಕರವಾಗಿ ಕೆಲಸ ಮಾಡದ ಗುತ್ತಿಗೆದಾರರಿಗೆ ನೋಟಿಸ್ ನೀಡಿ ವಜಾಗೊಳಿಸಲು ಸೂಚಿಸಿದರು. ಮತ್ತು ರಸ್ತೆಗಳಲ್ಲಿ ಕಸ ಎಸೆಯುವವರಿಗೆ ಭಾರಿ ಪ್ರಮಾಣದಲ್ಲಿ ದಂಡ ವಿಧಿಸಿ. ಏಕಬಳಕೆಯ ಪ್ಲಾಸ್ಟಿಕ್ ಮೇಲಿನ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಸಂಬಂಧ ಅಂಗಡಿ ಮುಂಗಟ್ಟುಗಳ ಮೇಲೆ ಆಗಿಂದಾಗ್ಗೆ ದಾಳಿ ಮಾಡಲು ಸೂಚಿಸಿದರು. ಸಾರ್ವಜನಿಕರಲ್ಲಿ ಏಕ ಬಳಕೆ ಪ್ಲಾಸ್ಟಿಕ್ ನಿಷೇಧ ಕುರಿತು ಅರಿವು ಮೂಡಿಸಿ. ಹಸಿ ಮತ್ತು ಒಣ ಕಸವನ್ನು ಮನೆಮಟ್ಟದಲ್ಲೇ ವಿಂಗಡಿಸುವ ಪ್ರಕ್ರಿಯೆಯನ್ನು ಸುಧಾರಿಸಲು ಕ್ರಮಕೈಗೊಳ್ಳುವಂತೆ ಸೂಚಿಸಿದರು.

ಈ ವೇಳೆ ಪಾಲಿಕೆಯ ಘನತ್ಯಾಜ್ಯ ವಿಭಾಗದ ಡಿ.ಜಿ.ಎಂ, ಎ.ಜಿ.ಎಂ. ಹಾಗೂ ಅಧಿಕಾರಿಗಳು ಮತ್ತು ಸ್ವಯಂ ಸೇವಕರು ಇದ್ದರು.

ಆಯುಕ್ತರಿಂದ ಜನಗಣತಿ ಕಾರ್ಯಗಳ ಪರಿಶೀಲನೆ

ಆಯುಕ್ತರು ಜೆಪಿ ನಗರದ ಶಾಕಾಂಬರಿ ನಗರಕ್ಕೆ ಭೇಟಿ ನೀಡಿ ಜನಗಣತಿ ಕಾರ್ಯದ ಅಂಗವಾಗಿ ನಡೆಯುತ್ತಿರುವ ಬ್ಲಾಕ್‌ಗಳ ಸೃಜನೆ ಮತ್ತು ಮನೆಗಳ ಪಟ್ಟಿ ಮಾಡುವಿಕೆ ಕಾರ್ಯವನ್ನು ಖುದ್ದಾಗಿ ಪರಿಶೀಲಿಸಿ ಜನಗಣತಿ ಪ್ರಕ್ರಿಯೆಯಲ್ಲಿ ಯಾವುದೇ ಲೋಪದೋಷಗಳಿಲ್ಲದೆ ಶೇ.100ರಷ್ಟು ನಿಖರತೆಯನ್ನು ಕಾಪಾಡಿಕೊಳ್ಳುವಂತೆ ಸಿಬ್ಬಂದಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಚಾರ್ಜ್ ಆಫೀಸರ್ ಮನು ಗೌಡ ಮತ್ತು ಹಿರಿಯ ಅಧಿಕಾರಿಗಳು ಇದ್ದರು.

ಪೌರಕಾರ್ಮಿಕರಿಗೆ ಕೂಲಿಂಗ್ ಕಿಟ್ ವಿತರಣೆ

ಬೆಂಗಳೂರು: ಉತ್ತರ ನಗರ ಪಾಲಿಕೆ ಹಾಗೂ ಇ40 ಸಂಸ್ಥೆಗಳ ಸಹಯೋಗದಲ್ಲಿ ನಗರದ ಬಿಸಿಲಿನ ತೀವ್ರತೆಯನ್ನು ಗಮನದಲ್ಲಿಟ್ಟುಕೊಂಡು ಹೀಟ್-ಹೆಲ್ತ್ ಪ್ರೋಟೋಕಾಲ್ ಜಾರಿಗೆ ತರಲಾಗುತ್ತಿದೆ.

ಈ ಸಂಬಂಧ ಯಲಹಂಕ ನ್ಯೂಟೌನ್‌ನ ಅಂಬೇಡ್ಕರ್ ಭವನದಲ್ಲಿ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧ್ಯಕ್ಷತೆಯಲ್ಲಿ ತರಬೇತಿ ಹಾಗೂ ಕೂಲಿಂಗ್ ಕಿಟ್ (ಟೆಂಪರೇಚರ್ ಮತ್ತು ಹುಮಿಡಿಟಿ ಚೆಕ್ಕರ್, ನೆಕ್ ಕಾಲರ್ ಫ್ಯಾನ್, ನೀರು ಕುಡಿಯಲು ಬಾಟಲ್, ಟೋಪಿ, ಹ್ಯಾಂಡ್ ಸ್ಲೀವ್ಸ್) ವಿತರಣೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತರು, ಒಣತ್ಯಾಜ್ಯ ಸಂಗ್ರಹಣಾ ಕೇಂದ್ರ ಸಿಬ್ಬಂದಿ ಹಾಗೂ ಪೌರ ಕಾರ್ಮಿಕರಿಗೆ ಬಿಸಿಲಿನ ಪರಿಣಾಮಗಳು ಹಾಗೂ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಅರಿವು ಮೂಡಿಸಲಾಯಿತು. ಪೈಲಟ್ ಹಂತದಲ್ಲಿ ನಾಗವಾರ (ವಾರ್ಡ್ 23) ಮತ್ತು ಎಚ್‌ಬಿಆರ್ (ವಾರ್ಡ್ 24) ಪ್ರದೇಶಗಳಲ್ಲಿ ಕಾರ್ಯನಿರ್ವ ಹಿಸುತ್ತಿರುವ ಪೌರಕಾರ್ಮಿಕರಿಗೆ ಕೂಲಿಂಗ್ ಕಿಟ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಆಯುಕ್ತರು, ಬೆಂಗಳೂರಿನಲ್ಲಿ ತಾಪಮಾನ ಏರಿಕೆಯಾಗುತ್ತಿರುವ ಹಿನ್ನೆಲೆ ಪೌರಕಾರ್ಮಿಕರ ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸಬೇಕು. ಪ್ರಸ್ತುತ ಪೈಲಟ್ ಹಂತದಲ್ಲಿ ಕಿಟ್‌ಗಳನ್ನು ವಿತರಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಎಲ್ಲಾ ಪೌರಕಾರ್ಮಿಕರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದು. ಘನತ್ಯಾಜ್ಯ ನಿರ್ವಹಣೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಧಿಕಾರಿಗಳು ಹಾಗೂ ಪೌರಕಾರ್ಮಿಕರು ಹೆಚ್ಚಿನ ಶ್ರಮ ವಹಿಸಬೇಕು ಹಾಗೂ ಬಿಸಿಲು, ಮಳೆ, ಚಳಿ ಎನ್ನದೇ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುವಂತೆ ಸೂಚಿಸಿ, ಸರಕಾರದ ಕೆಲಸ ದೇವರ ಕೆಲಸ ಎಂಬ ಮನೋಭಾವದಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು. ಈ ವೇಳೆ ಜಂಟಿ ಆಯುಕ್ತ ಪಲ್ಲವಿ, ಮೊಹಮ್ಮದ್ ನಯೀಮ್ ಮೊಮಿನ್ ಇದ್ದರು.

ಜಲಮಂಡಳಿಗೆ ಐಎಸ್‌ಒ ಪ್ರಮಾಣ ಪತ್ರದ ಹೆಗ್ಗಳಿಕೆ

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಮತ್ತೊಂದು ಐತಿಹಾಸಿಕ ಮೈಲುಗಲ್ಲನ್ನು ದಾಖಲಿಸಿದ್ದು, ಅಂತಾರಾಷ್ಟ್ರೀಯ ಮಟ್ಟದ ಐಎಸ್‌ಒ 50001:2018 ಪ್ರಮಾಣ ಪತ್ರವನ್ನು ಪಡೆದ ಭಾರತದ ಪ್ರಥಮ ಜಲ ಮಂಡಳಿಯಾಗಿ ಹೊರಹೊಮ್ಮಿದೆ.

ಜಲಮಂಡಳಿಯು ಇಂಧನ ನಿರ್ವಹಣೆಯಲ್ಲಿ ತನ್ನ ದಕ್ಷತೆ ಮತ್ತು ಬದ್ಧತೆಯನ್ನು ಜಾಗತಿಕ ಮಟ್ಟದಲ್ಲಿ ಸಾಬೀತುಪಡಿಸುವ ಮೂಲಕ ಬೆಂಗಳೂರಿಗೆ ವಿಶ್ವದರ್ಜೆಯ ನೀರು ಸರಬರಾಜು ವ್ಯವಸ್ಥೆಯನ್ನು ಒದಗಿಸುವತ್ತ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಏ.14 ರಂದು ಬ್ಯೂರೋ ವೆರಿಟಾಸ್ ಅಧಿಕೃತವಾಗಿ ನೀಡಿರುವ ಈ ಪ್ರಮಾಣ ಪತ್ರವು ಮಂಡಳಿಯ ಅತ್ಯುತ್ತಮ ಇಂಧನ ನಿರ್ವಹಣಾ ವ್ಯವಸ್ಥೆಗಳನ್ನು ಔಪಚಾರಿಕವಾಗಿ ಗುರುತಿಸಿದೆ. ಟಿಕೆಹಳ್ಳಿ, ಹಾರೋಹಳ್ಳಿ ಮತ್ತು ತಾತಗುಣಿಯಲ್ಲಿರುವ ಬೃಹತ್ ನೀರುವ ಸರಬರಾಜು ಪಂಪಿಂಗ್ ಸ್ಟೇಷನ್‌ಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಿರ್ವಹಿಸುತ್ತಿರುವುದಕ್ಕೆ ಈ ಪ್ರಮಾಣ ಪತ್ರ ನೀಡಲಾಗಿದೆ.

ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಮಾತನಾಡಿ, ಪ್ರತಿ ಮನೆಗೂ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ಒದಗಿಸಲು ಬೆಂಗಳೂರು ಜಲ ಮಂಡಳಿ ಬದ್ಧವಾಗಿದೆ. ಅಂತಾ ರಾಷ್ಟ್ರೀಯ ಮಾನದಂಡಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ನಾವು ನಿರಂತರವಾಗಿ ನಮ್ಮ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿ ಸುತ್ತಿದ್ದೇವೆ. ಈ ಐತಿಹಾಸಿಕ ಪ್ರಮಾಣಪತ್ರವು ಜಲಮಂಡಳಿಯಲ್ಲಿನ ಪ್ರತಿಯೊಬ್ಬರ ಕಠಿಣ ಪರಿಶ್ರಮ ಮತ್ತು ಸಮರ್ಪಣಾಭಾವದ ನೇರ ಫಲಿತಾಂಶವಾಗಿದೆ. ಈ ಮೈಲುಗಲ್ಲನ್ನು ಸಾಧಿಸುವಲ್ಲಿ ಮುಖ್ಯ ಅಭಿಯಂತರ (ಯೋಜನೆ) ಡಾ. ರಾಜೀವ್ ಮತ್ತು ಮುಖ್ಯ ಅಭಿಯಂತರ (ಕೆ-ಒಎಂ)ರಾಜಶೇಖರ್ ಅವರ ಸಂಘಟಿತ ಪ್ರಯತ್ನವನ್ನು ನಾವು ಶ್ಲಾಘಿಸುತ್ತೇವೆ ಎಂದರು.

ಈ ಹೊಸ ಜಾಗತಿಕ ಮಾನ್ಯತೆಯು ಮಂಡಳಿಯ ಇತ್ತೀಚಿನ ರಾಷ್ಟ್ರೀಯ ವಿಜಯಗಳಿಗೆ ಪೂರಕವಾಗಿದೆ. ಕಳೆದ ವರ್ಷವಷ್ಟೇ, ಕೊಳವೆ ಮೂಲಕ ಕುಡಿಯುವ ನೀರು ಸರಬರಾಜು ನಿರ್ವಹಣಾ ವ್ಯವಸ್ಥೆಗಾಗಿ ಪ್ರತಿಷ್ಠಿತ ಭಾರತೀಯ ಮಾನದಂಡಗಳ ಬ್ಯೂರೋ ಪ್ರಮಾಣ ಪತ್ರವನ್ನು ಪಡೆದ ಭಾರತದ ಮೊದಲ ಜಲ ಮಂಡಳಿ ಎಂಬ ಹೆಗ್ಗಳಿಕೆಗೆ ಜಲಮಂಡಳಿ ಪಾತ್ರವಾಗಿ ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿತ್ತು. ಬಿಐಎಸ್ ನಿಂದ ಸತತ ಆರು ತಿಂಗಳ ಕಠಿಣ ಮೌಲ್ಯಮಾಪನದ ನಂತರ ದೊರೆತ ಈ ರಾಷ್ಟ್ರೀಯ ಪ್ರಶಸ್ತಿಯು, ಇದೀಗ ಹೊಸ ಅಂತಾರಾಷ್ಟ್ರೀಯ ಐಎಸ್‌ಒ 50001:2018 ಪ್ರಮಾಣೀಕರಣದೊಂದಿಗೆ ಸೇರಿಕೊಂಡು, ಜಲಮಂಡಳಿಯ ತ್ವರಿತ ಸಾಂಸ್ಥಿಕ ರೂಪಾಂತರವನ್ನು ಹಾಗೂ ಬೆಂಗಳೂರಿನ ನಾಗರಿಕರಿಗೆ ನೀಡಲಾಗುತ್ತಿರುವ ರಾಜಿಯಾಗದ ಸೇವೆಯ ಗುಣಮಟ್ಟವನ್ನು ಎತ್ತಿ ತೋರಿಸುತ್ತದೆ.

ಸ್ಮರಣೀಯ ಸಾಧನೆ

ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿ, ಪ್ರತಿಷ್ಠಿತ ಐಎಸ್‌ಒ 50001:2018 ಪ್ರಮಾಣಪತ್ರ ಪಡೆದುಕೊಂಡಿರುವುದು ಒಂದು ಸ್ಮರಣೀಯ ಸಾಧನೆ. ನಗರಕ್ಕೆ ವಿಶ್ವ ದರ್ಜೆಯ, ಸುಸ್ಥಿರ ಜಲ ಮೂಲ ಸೌಕರ್ಯವನ್ನು ನಿರ್ಮಿಸುವಲ್ಲಿ ನಮ್ಮ ಸರಕಾರದ ಬದ್ಧತೆಯನ್ನು ಇದು ಪ್ರತಿಬಿಂಬಿಸುತ್ತದೆ. ಈ ಬೃಹತ್ ನೀರು ಸರಬರಾಜು ಪಂಪಿಂಗ್ ಸ್ಟೇಷನ್‌ಗಳಾದ್ಯಂತ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಮೂಲಕ, ಬೆಂಗಳೂರು ಜಲಮಂಡಳಿ ಕೇವಲ ಗಮನಾರ್ಹವಾದ ರಾಷ್ಟ್ರೀಯ ಮಾನದಂಡವನ್ನು ಸ್ಥಾಪಿಸಿಲ್ಲ. ಬದಲಾಗಿ ಲಕ್ಷಾಂತರ ನಾಗರಿಕರಿಗೆ ವಿಶ್ವಾಸಾರ್ಹ ಮತ್ತು ತಡೆ ರಹಿತ ನೀರಿನ ಸೇವೆ ಪೂರೈಸುವುದನ್ನು ಖಚಿತಪಡಿಸುತ್ತಿದೆ ಎಂದರು.

ಹಳಕಟ್ಟಿಯವರ ಕಾರ್ಯ ಸ್ಮರಣೀಯ



ಡಾ.ಫ.ಗು.ಹಳಕಟ್ಟಿ ಅವರ ಕುರಿತಾದ ಮುದ್ರಣ ಗುಮ್ಮಟ ಕೃತಿಯನ್ನು ಬೃಹತ್ ಮತ್ತು ಸಣ್ಣ ಕೈಗಾರಿಕೆಗಳ ಸಚಿವ ಡಾ.ಎಂ.ಬಿ.ಪಾಟೀಲ ಅನಾವರಣಗೊಳಿಸಿದರು.

ಬೆಂಗಳೂರು: ಕನ್ನಡದ ಅಮೂಲ್ಯ ಸಾಹಿತ್ಯ ಪರಂಪರೆಯಲ್ಲಿ ವಚನಗಳಿಗೆ ಅಗ್ರಸ್ಥಾನವಿದೆ. ತಾಳೆಗರಿ, ಹಸ್ತಪ್ರತಿಗಳಲ್ಲಿದ್ದ ವಚನಗಳನ್ನು ಸಂಗ್ರಹಿಸಿ, ಕನ್ನಡಿಗರಿಗೆ ಸಮರ್ಪಕವಾಗಿ ತಲುಪಿಸುವಲ್ಲಿ ಡಾ.ಫ.ಗು.ಹಳಕಟ್ಟಿಯವರ ಕಾರ್ಯ ಸ್ಮರಣೀಯ ಎಂದು ಸಚಿವ ಡಾ. ಎಂ.ಬಿ.ಪಾಟೀಲ ತಿಳಿಸಿದರು.

ಕನ್ನಡ ಮುದ್ರಣಾಲಯಗಳ ಇತಿಹಾಸ ಸಂಶೋಧನಾ ಕೇಂದ್ರದ ವತಿಯಿಂದ ಬೆಂಗಳೂರಿನಲ್ಲಿ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಅವರ ಕುರಿತಾದ ಮುದ್ರಣ ಗುಮ್ಮಟ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿ, ಫ.ಗು.ಹಳಕಟ್ಟಿ ಅವರು ವಚನಗಳನ್ನು ಜನರಿಗೆ ತಲುಪಿಸುವುದಕ್ಕಾಗಿ ತಮ್ಮ ಮನೆಯನ್ನೇ ಮಾರಿ ಮುದ್ರಣ ಯಂತ್ರವನ್ನು ಖರೀದಿಸಿದವರು. ಈ ಮೂಲಕ ಬಸವನಾಡಿಗೆ ಮುದ್ರಣ ಯಂತ್ರಗಳನ್ನು ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಈ ವೇಳೆ ಅಖಿಲ ಭಾರತ ಮುದ್ರಣಕಾರ ಒಕ್ಕೂಟದ ಮಾಜಿ ಅಧ್ಯಕ್ಷ ಸಿ.ಆರ್. ಜನಾರ್ದನ್, ಕರ್ನಾಟಕ ರಾಜ್ಯ ಮುದ್ರಣಕಾರರ ಸಂಘದ ಅಧ್ಯಕ್ಷ ಬಿ.ಆರ್.ಅಶೋಕ್ ಕುಮಾರ, ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಕಾರ್ಯದರ್ಶಿ ಎಚ್. ಎಂ.ರೇಣುಕಾ ಪ್ರಸನ್ನ, ಕನ್ನಡಪರ ಹೋರಾಟಗಾರ ಪಾಲನೇತ್ರ, ಕರ್ನಾಟಕ ಇತಿಹಾಸ ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಕೆ.ಎಲ್ ರಾಜಶೇಖರ ಉಪಸ್ಥಿತರಿದ್ದರು.

> ಡಾ. ಫ.ಗು. ಹಳಕಟ್ಟಿ ಅವರ ಅಪೂರ್ವ ತ್ಯಾಗ ಹಾಗೂ ಸಾಹಿತ್ಯ ಸೇವೆಯನ್ನು ಈ ಕೃತಿಯು ಸಮಗ್ರವಾಗಿ ಬಿಂಬಿಸುತ್ತದೆ. ಅರ್ಥಪೂರ್ಣ ಕೃತಿಯನ್ನು ಹೊರತಂದ ಸ್ವಾನ್ ಪ್ರಿಂಟರ್ಸ್‌ನ ಎಂ. ಕೃಷ್ಣಮೂರ್ತಿ ಅವರಿಗೆ ಅಭಿನಂದನೆ.
> - ಡಾ.ಎಂ.ಬಿ.ಪಾಟೀಲ
> ಬೃಹತ್ ಮತ್ತು ಸಣ್ಣ ಕೈಗಾರಿಕೆ ಸಚಿವ

ಅಮಾನತು ಹಿಂಪಡೆಯಿರಿ ಡಿಕೆಶಿಗೆ ಸತೀಶ್ ಒತ್ತಡ

ಅಮಾನತಿನಿಂದ ಮುಸ್ಲಿಂ ಸಮುದಾಯಕ್ಕೆ ಕೆಟ್ಟ ಸಂದೇಶ ರವಾನೆ

ಡಿಕೆಶಿ ದೆಹಲಿ ಪ್ರಯಾಣಕ್ಕೂ ಮೊದಲು ಭೇಟಿಯಾದ ಸತೀಶ್

ಬೆಂಗಳೂರು: ದಾವಣಗೆರೆ ದಕ್ಷಿಣ ಕ್ಷೇತ್ರದ ಗೊಂದಲದಲ್ಲಿ ಅಬ್ದುಲ್ ಜಬ್ಬಾರ್ ಅವರ ಅಮಾನತನ್ನು ಹಿಂಪಡೆಯುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮೇಲೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಒತ್ತಡ ಹೇರಿದ್ದಾರೆ.

ಡಿ.ಕೆ.ಶಿವಕುಮಾರ್ ಅವರ ಸರಕಾರಿ ನಿವಾಸಕ್ಕೆ ಭೇಟಿ ನೀಡಿದ ಸತೀಶ್ ಜಾರಕಿಹೊಳಿ, ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶ ಬರುವ ಮುನ್ನವೇ ಅಬ್ದುಲ್ ಜಬ್ಬಾರ್ ಅವರನ್ನು ಪಕ್ಷದಿಂದ ಅಮಾನತು ಮಾಡಿರುವುದು ಹಾಗೂ ನಸೀರ್ ಅಹ್ಮದ್ ಅವರನ್ನು ಸಿಎಂ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ವಜಾಗೊಳಿಸಿರುವುದು ಸರಿಯಲ್ಲ. ಈ ವಿಚಾರದಲ್ಲಿ ನಾನು ಹೈಕಮಾಂಡ್ ನಾಯಕರೊಂದಿಗೆ ಚರ್ಚಿಸುವೆ, ನೀವು ಚರ್ಚಿಸಿ ಆದೇಶ ಹಿಂಪಡೆಯಿರಿ ಎಂದಿದ್ದಾರೆ.

ಈಗಾಗಲೇ ಕೆ.ಎನ್.ರಾಜಣ್ಣ ಅವರನ್ನು ಸಂಪುಟದಿಂದ ಕೈ ಬಿಟ್ಟಿದ್ದರಿಂದ ನಾಯಕ ಸಮಾಜ ಸರಕಾರದ ವಿರುದ್ಧ ಅಸಮಾಧಾನಗೊಂಡಿದೆ. ಈಗ ಮುಸ್ಲಿಂ ನಾಯಕರ ವಿರುದ್ಧ ಕ್ರಮ ಕೈಗೊಳ್ಳುವುದರಿಂದ ಅವರ ವಿರೋಧವು ಕಟ್ಟಿಕೊಳ್ಳಬೇಕಾಗುತ್ತದೆ. ಇದು ಪಕ್ಷದ ಹಿತದೃಷ್ಟಿಯಿಂದ ಹಾಗೂ 2028ರ ಚುನಾವಣೆಯ ಹಿನ್ನೆಲೆಯಲ್ಲಿ ಉತ್ತಮ ಬೆಳವಣಿಗೆಯಲ್ಲ ಎಂದು ಶಿವಕುಮಾರ್‌ಗೆ ಅವರು ಕಿವಿಮಾತು ಹೇಳಿದ್ದಾರೆ.

ಮಾಧ್ಯಮಗಳು ನಮ್ಮನ್ನು ಇಬ್ಭಾಗವಾಗಿಸಿವೆ: ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಮತ್ತು ನಾನು ಒಟ್ಟಿಗೇ ಇದ್ದೇವೆ. ಪ್ರತಿದಿನ ಜತೆಯಲ್ಲೇ ಕೂರುತ್ತೇವೆ, ಚರ್ಚಿಸುತ್ತೇವೆ. ಎಲ್ಲಿದೆ ನಮ್ಮಲ್ಲಿ ಗುಂಪು? ಎಲ್ಲರೂ ನಮ್ಮ ಶಾಸಕರೇ. ಮಾಧ್ಯಮಗಳೇ ನಮ್ಮನ್ನು ಇಬ್ಭಾಗ ಮಾಡುತ್ತಿವೆ ಎಂದಿದ್ದಾರೆ.

ದೆಹಲಿ ಭೇಟಿ ವೇಳೆ ಸಂಪುಟ ಪುನಾರಚನೆ ಬಗ್ಗೆ ಚರ್ಚಿಸಲ್ಲ. ಮೊದಲು ಚುನಾವಣೆಗಳನ್ನು ಮುಗಿಸೋಣ. ಪಕ್ಷದಲ್ಲಿ ಯಾವುದೇ ಗುಂಪಿಲ್ಲ. 139 ಶಾಸಕರು ನನ್ನದೇ ಗುಂಪು. ಕಾಂಗ್ರೆಸ್ ಗುಂಪು. ನಮಗೆ ಪಕ್ಷ ಹಾಗೂ ಪಕ್ಷದ ಹಿತ ಮುಖ್ಯ. ಪಕ್ಷದ ಅಭಿವೃದ್ಧಿಗೆ ಹಾಗೂ ಅದರ ಒಳಿತಿಗೆ ಏನು ಬೇಕು ಎಂಬುದರ ಬಗ್ಗೆ ಚರ್ಚೆ ನಡೆಸಿದ್ದೇವೆ. ನಾವೆಲ್ಲ ಒಟ್ಟಿಗೆ ಸೇರಿ ಕೆಲಸ ಮಾಡುತ್ತಿದ್ದೇವೆ, ಮಾಡುತ್ತೇವೆ.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಅಬ್ದುಲ್ ಜಬ್ಬಾರ್‌ರನ್ನು ಪಕ್ಷದಿಂದ ಅಮಾನತು ಮಾಡಿರುವ ಬಗ್ಗೆ ಡಿ.ಕೆ. ಶಿವಕುಮಾರ್ ಜತೆ ಚರ್ಚಿಸಿದ್ದೇನೆ. ಅವರ ಬಳಿ ಕೆಲವು ವರದಿಗಳು ಇವೆ. ದಲಿತರು, ಅಲ್ಪಸಂಖ್ಯಾತರು ನಮ್ಮ ಮತದಾರರು. ಜಬ್ಬಾರ್ ತಮ್ಮ ಸ್ಪಷ್ಟೀಕರಣ ನೀಡಲಿ. ಹೈಕಮಾಂಡ್ ಈ ಬಗ್ಗೆ ಆಲೋಚನೆ ಮಾಡಲಿ. ಆನಂತರ ತೀರ್ಮಾನ ಕೈಗೊಂಡರೆ ಉತ್ತಮ. ಕೆಲವೊಮ್ಮೆ ಇಂತಹ ನಿರ್ಧಾರಗಳು ಆಗಿ ಬಿಡುತ್ತವೆ. ಅವುಗಳನ್ನು ಸರಿಪಡಿಸಬೇಕಾಗುತ್ತದೆ.

–**ಸತೀಶ್ ಜಾರಕಿಹೊಳಿ** ಲೋಕೋಪಯೋಗಿ ಸಚಿವ

ದೆಹಲಿಗೆ ತೆರಳುವ ಮೊದಲು ಸುದ್ದಿಗಾರರೊಂದಿಗೆ ಮಾತನಾಡುವ ವೇಳೆ, ಮಾಧ್ಯಮದವರು ಕೇಳಿದ 'ಸಿದ್ದರಾಮಯ್ಯ ಅವರೊಟ್ಟಿಗೆ ಒಂದೇ ವಿಮಾನದಲ್ಲಿ ಬಹಳ ದಿನಗಳ ನಂತರ ಪ್ರಯಾಣ ಮಾಡುತ್ತಿದ್ದೀರಲ್ಲಾ' ಎನ್ನುವ ಪ್ರಶ್ನೆಗೆ ಗರಂ ಆದ ಡಿಕೆಶಿ, ನನ್ನ ಮತ್ತು ಸಿದ್ದರಾಮಯ್ಯ ನಡುವೆ ಗುಂಪು ಎಲ್ಲಿದೆ? ನೀವೇ ಗುಂಪು ಸೃಷ್ಟಿ ಮಾಡುತ್ತಿದ್ದೀರಿ. ದೆಹಲಿಯಲ್ಲಿ ಸಿದ್ದರಾಮಯ್ಯ ಅವರ ಗುಂಪು ಎಂದು ಹೇಳಿದ್ದೀರಿ. ಅವರೇನೂ ಸಿದ್ದರಾಮಯ್ಯ ಗುಂಪು ಎಂದು ಬೋರ್ಡ್ ಹಾಕಿಕೊಂಡಿದ್ದಾರೆಯೇ? ಅಥವಾ ನನ್ನ ಗುಂಪು ಎಂದು ನಾನು ಬೋರ್ಡ್ ಹಾಕಿಕೊಂಡಿದ್ದೇನೆಯೇ? ಎಲ್ಲ 139 ಶಾಸಕರು ನನ್ನ ಹಾಗೂ ಸಿದ್ದರಾಮಯ್ಯ ಅವರ ಶಾಸಕರೇ ಆಗಿದ್ದಾರೆ. ಯಾವ ಗುಂಪೂ ಇಲ್ಲ, ಬೋರ್ಡೂ ಇಲ್ಲ. ನಿಮಗೆ ಗೊತ್ತಿದೆಯೇ ಯಾರ್ಯಾರ ಗುಂಪು ಏನಿದೆ ಅಂತ? ನಿಮಗೆ ಹೆಂಗೆ ಬೇಕೋ ಹಂಗೆ ಚಟಕ್ಕೆ ಬರೆಯುತ್ತಾ ಇದ್ದೀರಿ ಎಂದರು.

ಅಬ್ದುಲ್ ಜಬ್ಬಾರ್ ಹಾಗೂ ನಸೀರ್ ಅಹ್ಮದ್ ಅವರ ವಿರುದ್ಧ ಕ್ರಮ ಕೈಗೊಂಡಿರುವುದರ ಬಗ್ಗೆಯೂ ಮಾತನಾಡುತ್ತೇನೆ ಎಂದು ಸತೀಶ್ ಜಾರಕಿಹೊಳಿ ಅವರು ಹೇಳಿದ್ದರ ಬಗ್ಗೆ ಕೇಳಿದಾಗ, ಇಲ್ಲಿ ಯಾವುದೇ ವೈಯಕ್ತಿಕ ವಿಚಾರಗಳು ಇಲ್ಲ. ಪಕ್ಷಕ್ಕೆ ತನ್ನದೇ ಆದ ರೀತಿ-ರಿವಾಜುಗಳಿವೆ. ಎಂಎಲ್ಎ, ಎಂಎಲ್‌ಸಿ ವಿಚಾರವಾಗಿ ದೆಹಲಿ ನಾಯಕರು ಏನೂ ಹೇಳದೇ, ಅವರು ಏನೂ ಸೂಚನೆ ಕೊಡದೆ, ನಾವು ಏನೂ ಮಾಡಲೂ ಆಗುವುದಿಲ್ಲ. ಕೆಲವನ್ನು ಮಾರ್ಗದರ್ಶನದ ಅನುಸಾರವಾಗಿ ಮಾಡಬೇಕಾಗುತ್ತದೆ. ಕೆಲವರು ನನ್ನ ಮೇಲೆ ದೂರಬಹುದು. ಹಾಗೇ ನನ್ನ ಮೇಲೆ ಹೇಳಿದರೂ ಚಿಂತೆಯಿಲ್ಲ. ಪಕ್ಷದ ಶಿಸ್ತಿನ ಚೌಕಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡಬೇಕಾಗುತ್ತದೆ ಎಂದರು.

ಭೂ ದಾಖಲೆಗಳ ಸ್ಕ್ಯಾನಿಂಗ್ ಬಗ್ಗೆ ಅಸಡ್ಡೆ

ತಹಸೀಲ್ದಾರ್‌ಗಳ ಮೇಲೆ ಕೃಷ್ಣ ಬೈರೇಗೌಡ ಗರಂ

ಬೆಂಗಳೂರು: ಕಂದಾಯ ಸಚಿವ ಕೃಷ್ಣ ಬೈರೇಗೌಡ ಶುಕ್ರವಾರ ವಿಕಾಸಸೌಧದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ರಾಜ್ಯದ ಎಲ್ಲಾ ತಹಸೀಲ್ದಾರ್‌ಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಈ ವೇಳೆ ಭೂ ಸುರಕ್ಷಾ ಯೋಜನೆ ಬಗ್ಗೆ ಸಭೆಯಲ್ಲಿ ಗಂಭೀರ ಚರ್ಚೆ ನಡೆಸಿದರು.

ಭೂ ದಾಖಲೆ ಸ್ಕ್ಯಾನಿಂಗ್ ಬಗ್ಗೆ ಅಸಡ್ಡೆ ತೋರುತ್ತಿರುವ ತಹಸೀಲ್ದಾರರುಗಳ ವಿರುದ್ಧ ಗರಂ ಆದ ಸಚಿವರು, ದಿನಕ್ಕೆ ಸರಾಸರಿ 12,000 ಪುಟ ಸ್ಕ್ಯಾನ್ ಮಾಡಬೇಕು ಎಂಬುದು ಗುರಿ. ಆದರೆ, ಕೆಲ ತಾಲೂಕುಗಳಲ್ಲಿ ಸ್ಕ್ಯಾನಿಂಗ್ 8,000 ಪುಟ ದಾಟುತ್ತಿಲ್ಲ. ಸ್ಕ್ಯಾನಿಂಗ್ ಕೆಲಸಕ್ಕೆ ಪ್ರತಿ ತಾಲೂಕಿಗೆ ತಲಾ 8 ಜನ ಡೇಟಾ ಆಪರೇಟರ್ ನೀಡಿದರೂ ಕೆಲ ತಾಲೂಕುಗಳಲ್ಲಿ ಪ್ರಗತಿ ಕುಂಠಿತವಾಗಿದೆ ಎಂದರು. ಅಸಮರ್ಪಕ ಉತ್ತರ ನೀಡಿದ ಗದಗ ಜಿಲ್ಲೆ ಶಿರಹಟ್ಟಿ ತಹಸೀಲ್ದಾರ್‌ಗೆ ಕ್ಲಾಸ್ ತೆಗೆದುಕೊಂಡರು.

ತಹಸೀಲ್ದಾರ್ ಕೋರ್ಟ್ ಪ್ರಕರಣ ವಿಲೇವಾರಿಯಲ್ಲಿ ಉತ್ತಮ ಪ್ರಗತಿಯಾಗಿದೆ. ಹಳೆಯ ಬಹುತೇಕ ಪ್ರಕರಣ ವಿಲೇವಾರಿಯಾಗಿದೆ. ಆದರೂ, ಶಿಗ್ಗಾಂವ್, ಶಿರಾ, ಮುಳಬಾಗಿಲು ಸೇರಿ ಕೆಲ ತಾಲೂಕುಗಳಲ್ಲಿ ಮಾತ್ರ 90 ದಿನಕ್ಕೆ ಮೀರಿದ ಪ್ರಕರಣ ಬಾಕಿ. ಅದನ್ನೂ ಶೀಘ್ರ ವಿಲೇವಾರಿಗೊಳಿಸಬೇಕು. ಕೋರ್ಟ್ ಪ್ರಕರಣಗಳನ್ನು 10700 ರಿಂದ 140ಕ್ಕೆ ಇಳಿಸಲಾಗಿದೆ. ಈ ಪ್ರಕರಣಗಳನ್ನೂ ಶೀಘ್ರ ವಿಲೇವಾರಿಯಾಗಬೇಕಿದೆ.

–**ಕೃಷ್ಣಬೈರೇಗೌಡ** ಕಂದಾಯ ಸಚಿವ

ಚಿಕ್ಕಮಗಳೂರು, ಕೊಡಗು, ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿ ಸ್ಕ್ಯಾನಿಂಗ್ ಕೆಲಸ ಸಂಪೂರ್ಣ ಮುಗಿದಿದೆ. ಆದರೆ, ಬೆಂಗಳೂರು ನಗರ, ಶ್ರೀರಂಗಪಟ್ಟಣ, ಮದ್ದೂರು, ಪಾಂಡವಪುರ ಮೈಸೂರಿನ ಇತರೆ ತಾಲೂಕಿನಲ್ಲಿ ಈ ಕೆಲಸ ಏಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸಿದರು. ನಾಲ್ಕೂ ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತರು ಕಡಿಮೆ ಸ್ಕ್ಯಾನ್ ಆಗುತ್ತಿರುವ ತಾಲೂಕುಗಳ ಮೇಲೆ ನಿಗಾವಹಿಸಲು ಸೂಚಿಸಿದರು. 19 ಲಕ್ಷ ಪುಟ ಭೂ ದಾಖಲೆಗಳನ್ನು ಜನ ಈಗಾಗಲೇ ಆನ್‌ಲೈನ್ ಮೂಲಕ ಪಡೆದಿದ್ದಾರೆ. ಭೂ ದಾಖಲೆಗಳಿಗಾಗಿ ಜನ ನಮ್ಮ ಕಚೇರಿಗೆ ಬರಬೇಡಿ ಎಂದು ತಹಸೀಲ್ದಾರರು ಜನರಲ್ಲಿ ಅರಿವು ಮೂಡಿಸಿ. ಜನ ಅನಗತ್ಯವಾಗಿ ಸರಕಾರಿ ಕಚೇರಿಗಳಿಗೆ ಅಲೆದಾಡುವುದು ಕಡಿಮೆಯಾದರೆ, ಅಧಿಕಾರಿಗಳ ಕೆಲಸದ ಒತ್ತಡ ಕಡಿಮೆಯಾಗುತ್ತೆ, ಮಧ್ಯವರ್ತಿಗಳ ಹಾವಳಿಯೂ ಕಡಿಮೆಯಾಗುತ್ತದೆ ಎಂದರು.

ಬಡವರ ಕೆಲಸ ಉದಾಸೀನ ಮಾಡಬೇಡಿ: 1 ರಿಂದ 10 ಮಂಜೂರಿದಾರಷ್ಟೇ ಇರುವ ಎಲ್ಲಾ ಸರ್ವೆ ನಂಬರ್‌ಗಳ 1 ರಿಂದ 5 ಕೆಲಸವನ್ನು ಮುಂದಿನ ಒಂದು ವಾರದಲ್ಲಿ ಪೂರ್ಣಗೊಳಿಸಬೇಕು ಎಂದು ಎಲ್ಲಾ ತಹಶೀಲ್ದಾರರಿಗೂ ಕಟ್ಟುನಿಟ್ಟಿನ ಸೂಚನೆ ನೀಡಿದರು. ಆಲೂರು, ನಂಜನಗೂಡು ಯಲಹಂಕ, ಚಿಟಗುಪ್ಪ, ಯಳಂದೂರು, ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ, ಕೊಳ್ಳೆಗಾಲ, ಜೇವರ್ಗಿ, ಹನೂರು ತಾಲೂಕುಗಳಲ್ಲಿ ಕಂದಾಯ ಗ್ರಾಮಗಳ ರಿಜಿಸ್ಟ್ರೇಷನ್ ಕಡಿಮೆ ಆಗಿದೆ. ಇದು ಬಡವರ ಕೆಲಸ, ಅರ್ಧಂಬರ್ಧ ಮಾಡಿಕೊಟ್ಟರೆ ಜನರಿಗೆ ಅನ್ಯಾಯವಾಗುತ್ತೆ. ಹೀಗಾಗಿ ಕಂದಾಯ ಗ್ರಾಮಗಳ ಕೆಲಸ ಪೂರ್ತಿ ಮಾಡಿಕೊಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕೈ ಶಾಸಕ ವಿನಯ್‌ಗೆ ಆಜೀವ ಕಾರಾಗೃಹ ಸಜೆ

← ಮೊದಲಪುಟದಿಂದ

ಆದರೆ, ಅಪರಾಧಿಗಳ ಮನವಿಯನ್ನು ಆಲಿಸಿದ ಬಳಿಕ ಶಿಕ್ಷೆಯ ಘೋಷಣೆಯನ್ನು ಶುಕ್ರವಾರಕ್ಕೆ ನಿಗದಿ ಮಾಡಲಾಗಿತ್ತು. ಪ್ರಕರಣದ ಎ 9 ಅಪರಾಧಿ ಪೊಲೀಸ್ ಇನ್ಸ್‌ಪೆಕ್ಟರ್ ಚನ್ನಕೇಶವ ಟಿಂಗರಿಕರ್‌ಗೆ 7 ವರ್ಷಗಳ ಶಿಕ್ಷೆ ನೀಡಲಾಗಿದೆ. ಉಳಿದ 16 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ನೀಡಿ ತೀರ್ಪು ನೀಡಲಾಗಿದೆ. ಅಪರಾಧಿಗಳಿಗೆ ಐಪಿಸಿ ಸೆಕ್ಷನ್ 302(ಕೊಲೆ) ಅಡಿಯಲ್ಲಿ ಜೀವಾವಧಿ ಶಿಕ್ಷೆ ಮತ್ತು ಸೆಕ್ಷನ್ 120(ಬಿ) (ಕೊಲೆಗೆ ಪಿತೂರಿ) ಅಡಿಯಲ್ಲಿ 7 ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ. ಎರಡೂ ಶಿಕ್ಷೆಗಳನ್ನು ಏಕಕಾಲಕ್ಕೆ ಅನುಭವಿಸಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಯೋಗೇಶ್ ಕುಟುಂಬಕ್ಕೆ 16 ಲಕ್ಷ ರು. ಪರಿಹಾರ: 9ನೇ ಆರೋಪಿಗೆ ಇನ್ಸ್‌ಪೆಕ್ಟರ್ ಚನ್ನಕೇಶವ ಟಿಂಕರಿಕರ್ ಕೊಲೆ ಪ್ರಕರಣದಲ್ಲಿ ಭಾಗಿಯಾಗದೇ ಇದ್ದರೂ, ಭ್ರಷ್ಟಾಚಾರ ಎಸಗಿದ್ದಾರೆ ಎಂಬ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಕೋರ್ಟ್ ಏಳು ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಿದೆ.

ಇನ್ನುಳಿದಂತೆ ಬಸವರಾಜ್ ಮುತ್ತಗಿಗೆ ಮಾಫಿ ಸಾಕ್ಷಿ ಸ್ಥಾನ ಖಚಿತಪಡಿಸಿದೆ. ಎ17 ಶಿವಾನಂದ ಮಾಫಿ ಸಾಕ್ಷಿಯಾದ ಬಳಿಕವೂ ಪ್ರತಿಕೂಲ ಹೇಳಿಕೆ ನೀಡಿದ್ದಾರೆ. ಹೀಗಾಗಿ ಮತ್ತೆ ಎ17 ಆರೋಪಿ ಯನ್ನಾಗಿಸುವಂತೆ ಸಿಬಿಐ ಅರ್ಜಿ ಸಲ್ಲಿಸಿದೆ. ಮೃತ ಯೋಗೀಶ್ ಗೌಡ ಮಕ್ಕಳಿಗೆ 16 ಲಕ್ಷ ರು. ಪರಿಹಾರ ನೀಡಲು ವಿನಯ್ ಕುಲಕರ್ಣಿಗೆ ಕೋರ್ಟ್ ಸೂಚನೆ ನೀಡಿದೆ.

ಇನ್ನು ಚಾರಣಕ್ಕೆ ಮುನ್ನ ನೋಂದಣಿ ಕಡ್ಡಾಯ

← ಮೊದಲಪುಟದಿಂದ

ಚಾರಣ ಆರಂಭಕ್ಕೂ ಮುನ್ನ ಮೂಲ ನೆಲೆಯಲ್ಲಿ ಚಾರಣಿಗರಿಗೆ ಸಂಕ್ಷಿಪ್ತವಾಗಿ ಚಾರಣದ ದೂರ, ಅವಧಿ ಮತ್ತು ಅಲ್ಲಿನ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಲಾಗುವುದು. ಅದೇ ರೀತಿ ವನ್ಯಜೀವಿಗಳು ಎದುರಾದರೆ ಏನು ಮಾಡಬೇಕು ಎಂದೂ ತಿಳಿಸಲಾಗುವುದು. ಹೆಚ್ಚು ಶಬ್ದ ಮಾಡುವ ಯಾವುದೇ ಸಾಧನಗಳಿಗೆ, ಹರಿತವಾದ ಲೋಹದ ವಸ್ತು, ಆಯುಧಗಳನ್ನು ತೆಗೆದುಕೊಂಡು ಹೋಗಲು ಮತ್ತು ಕ್ಯಾಂಪ್ ಫೈರ್ ಮಾಡಲು ಚಾರಣ ಪಥದಲ್ಲಿ ಅವಕಾಶ ಇರುವುದಿಲ್ಲ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸ್ಪಷ್ಟಪಡಿಸಿದರು.

ಗೈಡ್‌ಗಳಿಗೆ ಹೊಣೆ: ಪ್ರಕೃತಿ ಮಾರ್ಗದರ್ಶಕರು ಯಾವುದೇ ಚಾರಣಿಗ ತಮಗಿಂತ ಮುಂದೆ ಹೋಗಿಲ್ಲ ಹಾಗೂ ಹಿಂದೆ ಉಳಿದಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಬೇಸ್ ಕ್ಯಾಂಪ್, ವಿಶ್ರಾಂತಿ ತಾಣಗಳಲ್ಲಿ ಕಡ್ಡಾಯವಾಗಿ ಚಾರಣಿಗರ ಎಣಿಕೆ ಮಾಡಬೇಕು. ಪ್ರತಿ ಅರ್ಧ ಗಂಟೆಗೊಮ್ಮೆ ತಮ್ಮ ವಾಕಿಟಾಕಿ ಮೂಲಕ ಬೇಸ್ ಕ್ಯಾಂಪ್‌ನೊಂದಿಗೆ ಸಂವಹನ ನಡೆಸಬೇಕು. ಚಾರಣಿಗರ ಜವಾಬ್ದಾರಿ ಹೊರುವಂತೆ ಅವರಿಗೆ ಹೊಣೆಗಾರಿಕೆ ನೀಡಲಾಗುವುದು. ಚಾರಣ ಆರಂಭವಾದ ಒಂದು ಗಂಟೆಯೊಳಗೆ ವಾಕಿಟಾಕಿ ಸಂವಹನ ಗೈಡ್ ಕಡೆಯಿಂದ ನಡೆಯದಿದ್ದರೆ ಬೇಸ್ ಕ್ಯಾಂಪ್ ಸಿಬ್ಬಂದಿಯೇ ಕರೆ ಮಾಡಿ ಖಚಿತಪಡಿಸಿಕೊಳ್ಳಬೇಕು ಎಂದು ಎಸ್‌ಒಪಿಯಲ್ಲಿ ಸ್ಪಷ್ಟಪಡಿಸಿದೆ.

ಅಪ್ರಾಪ್ತರ ಚಾರಣಕ್ಕೆ ಪೋಷಕರ ಅನುಮತಿ ಅಗತ್ಯ

ಅಪ್ರಾಪ್ತ ವಯಸ್ಕರು ಚಾರಣಕ್ಕೆ ತೆರಳಲು ಅವರ ಪಾಲಕರ, ಪೋಷಕರ ಅನುಮತಿ ಪತ್ರ ಕಡ್ಡಾಯ. ಅದೇ ರೀತಿ ಹಿರಿಯ ನಾಗರಿಕರು ಚಾರಣ ಕೈಗೊಳ್ಳಲು ತಮ್ಮ ದೈಹಿಕ ಸಾಮರ್ಥ್ಯ ಮತ್ತು ಸದೃಢತೆಯ ಪ್ರಮಾಣ ಪತ್ರ ಒದಗಿಸಬೇಕಾಗುತ್ತದೆ. ಯಾವುದೇ ಚಾರಣಿಗರಿಗೆ ಆರೋಗ್ಯ ಸಮಸ್ಯೆ ಆದರೆ ಅವರ ಆರೈಕೆಗಾಗಿ ಗೈಡ್ ತಮ್ಮೊಂದಿಗೆ ಪ್ರಥಮ ಚಿಕಿತ್ಸಾ ಕಿಟ್ ಅನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಫ್ಲ್ಯಾಶ್ ಬಳಸಿ ಫೋಟೋ ತೆಗೆಯುವುದನ್ನು, ಏಕ ಬಳಕೆ ಪ್ಲಾಸ್ಟಿಕ್ ಹಾಗೂ ಕ್ಯಾರಿ ಬ್ಯಾಗ್ ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ. ಅದೇ ರೀತಿ ತ್ಯಾಜ್ಯವನ್ನು ಚಾರಣಿಗರು ತಂದು ಬೇಸ್ ಕ್ಯಾಂಪ್‌ನಲ್ಲಿಯೇ ವಿಲೇವಾರಿ ಮಾಡಬೇಕು.

...ಬೇಸಿಗೆ ನಡುವೆ ವಿದ್ಯುತ್ ದರ ಏರಿಕೆ ಶಾಕ್

← ಮೊದಲಪುಟದಿಂದ

2024-25 ಆರ್ಥಿಕ ವರ್ಷದಲ್ಲಿ 34 ಸಾವಿರದ 84 ಕೋಟಿ ರುಗಳನ್ನು ವಿದ್ಯುತ್ ಮಾರಾಟದಿಂದ ಆದಾಯವನ್ನು ಕೆಇಆರ್‌ಸಿ ನಿರೀಕ್ಷೆ ಮಾಡಿತ್ತು. ಆದರೆ, 32 ಸಾವಿರದ 19 ಕೋಟಿಯಷ್ಟೇ ಆದಾಯವಷ್ಟೇ ಬಂದಿದ್ದು, 2 ಸಾವಿರದ 68 ಕೋಟಿ ಕೊರತೆಯುಂಟಾಗಿದೆ. ಈ 2 ಸಾವಿರದ 68 ಕೋಟಿ ಕೊರತೆಯನ್ನ ಗ್ರಾಹಕರಿಂದ ಸಂಗ್ರಹಿಸಲು ಮುಂದಾದ ಇಲಾಖೆ ಮುಂದಾಗಿದ್ದು, ಒಂದು ಯೂನಿಟ್ ಗೆ 56 ಪೈಸೆ ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ.

ಯಾವಾಗಿನಿಂದ ಜಾರಿಗೆ ಬರಲಿದೆ?: ಕೆಇಆರ್‌ಸಿಯ ಆದೇಶವು ಏಪ್ರಿಲ್ 17, 2026 ರಂದು ಹೊರಬಿದ್ದಿದ್ದು, ಪರಿಷ್ಕೃತ ದರವು 2026 ರ ಮೇ 1 ರಿಂದ ಜಾರಿಗೆ ಬರಲಿದೆ. ಮೇ ತಿಂಗಳಿನಲ್ಲಿ ಬರುವ ವಿದ್ಯುತ್ ಬಿಲ್‌ಗಳಲ್ಲಿ ಗ್ರಾಹಕರು ಈ ಹೆಚ್ಚುವರಿ 56 ಪೈಸೆ 'ಟ್ರೂ ಅಪ್' ದರವನ್ನು ಪಾವತಿಸಬೇಕಾಗುತ್ತದೆ. ಈ ವಸೂಲಾತಿಯು 2026-27ರ ಇಡೀ ಆರ್ಥಿಕ ವರ್ಷದಲ್ಲಿ ಅನ್ವಯವಾಗಲಿದ್ದು, ಏಪ್ರಿಲ್ 30, 2027 ರವರೆಗೆ ಮುಂದುವರಿಯಲಿದೆ.

ಲೋಕಾ ಬಲೆಗೆ ಕರವಸೂಲಿಗಾರ

ಚಿಕ್ಕಬಳ್ಳಾಪುರ: ಇ ಖಾತೆಯಲ್ಲಿ ಅರ್ಜಿದಾರರ ತಂದೆಯ ಹೆಸರು ತಿದ್ದುಪಡಿ ಮಾಡಲು ಲಂಚ ಬೇಡಿಕೆ ಇಟ್ಟಿದ್ದ ಗೊಲ್ಲಹಳ್ಳಿ ಗ್ರಾಪಂ ಕರವಸೂಲಿಗಾರ ದ್ಯಾವಪ್ಪ ಲೋಕಾ ಬಲೆಗೆ ಬಿದ್ದಿದ್ದಾರೆ. 10 ಸಾವಿರ ಲಂಚಕ್ಕೆ ಬೇಡಿಕೆಯಿಟ್ಟಿದ್ದು 9500 ಹಣ ಪಡೆಯುವಾಗ ಲೋಕಾ ಟ್ರ್ಯಾಪ್ ಮಾಡಿದೆ. ನೀರುಘಂಟಿ ರಾಜಪ್ಪ ಎಂಬುವರ ಖಾತೆಗೆ 9500 ಹಣ ಹಾಕಿಸಿಕೊಂಡಿದ್ದಾರೆ.

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ.
ಸಂಖ್ಯೆ:ಸಅಸಂ.ಚನ್ನಗಿರಿ:ಟೆಂಡರ್.ಸಿ.ಆರ್-01/2026-27-2. ದಿ:16-04-2026.
(ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ)
2026-27 ನೇ ಸಾಲಿಗೆ ಭದ್ರಾವತಿ ವಿಭಾಗ ಕಛೇರಿ ಹಾಗೂ ವಿಭಾಗ ವ್ಯಾಪ್ತಿಯ ವಲಯಗಳಲ್ಲಿ ಈ ಕೆಳಕಂಡ ಅನುಸೂಚಿಯಲ್ಲಿ ಅಗತ್ಯವಿರುವ ವಲಯಗಳಿಗೆ ಗಣಕಯಂತ್ರ ನಿರ್ವಾಹಕರು/ವಾಹನ ಚಾಲಕರು/ ಕಾವಲುಗಾರರು/ರಕ್ಷಣಾಕ್ಯಾಂಪ್ ಕಾವಲುಗಾರರು/ ಕಳ್ಳಬೇಟೆ ತಡೆ ಶಿಬಿರಕ್ಕೆ ಕಾವಲುಗಾರರು ಇತ್ಯಾದಿ ಸೇವೆಯನ್ನು ಒದಗಿಸಲು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಕರ್ನಾಟಕ ಸಾರ್ವಜನಿಕ ಸರಬರಾಜು ಸಂಗ್ರಹಣೆಗಳಿಗೆ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:04-05-2026 ರ ಸಂಜೆ 5.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://Kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪವಿಭಾಗ, ಚನ್ನಗಿರಿ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/87/04/101

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು-560001
ದೂರವಾಣಿ : 080-25581383, ಫ್ಯಾಕ್ಸ್ : 080-25586321
ಸಂಖ್ಯೆ: ಮಾನಿಮಂ/05/ಕ/2026-27/147 ದಿನಾಂಕ: 15/04/2026
ಟೆಂಡರ್‌ಗಾಗಿ ಆಹ್ವಾನ – ಕರೆ-1
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ http://kppp.karnataka.gov.in ಮುಖಾಂತರ)
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಸದಸ್ಯ ಕಾರ್ಯದರ್ಶಿಗಳು ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ http://kppp.karnataka.gov.in ಮುಖಾಂತರ ಕೆಳಕಂಡ ಕೆಲಸಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಕೆಲಸದ ಹೆಸರು: ಬಳ್ಳಾರಿಯ ವಿವಿಧ ಸ್ಥಳಗಳಲ್ಲಿ ಇಂಟೆಗ್ರೇಟೆಡ್ ನೋಯ್ಸ್ ಮಾನಿಟರಿಂಗ್ ಟರ್ಮಿನಲ್‌ನೊಂದಿಗೆ (ಐಎನ್‌ಎಂಟಿ) ಕೆಎಸ್‌ಪಿಸಿಬಿ ಸಿಎಕ್ಯೂಎಂ ಕೇಂದ್ರಕ್ಕಾಗಿ ಪ್ಲಾಟ್‌ಫಾರಂ ನಿರ್ಮಾಣ. **ಕೆಲಸದ ಅಂದಾಜು ಮೌಲ್ಯ:** ರೂ.41.18 ಲಕ್ಷಗಳು. ಟೆಂಡರ್ ಬೆಲೆ, ಇಎಂಡಿ ಇತ್ಯಾದಿ, ಮುಂತಾದ ಪಾವತಿಗಳನ್ನು ಇ-ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸಬೇಕು.
ಹೆಚ್ಚಿನ ವಿವರಗಳನ್ನು, ದಯವಿಟ್ಟು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ವೀಕ್ಷಿಸಿ.
ಸಹಿ/- ಮುಖ್ಯ ಪರಿಸರ ಅಧಿಕಾರಿ-2
ವಾ.ಸಾ.ಸಂ.ಇ/ವಾಪ್ರ/235/ಆಕಾರ್/2026-27
ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ : ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979
e-mail-ids:directorbmcrcbellary@gmail.com, website : https://vims.karnataka.gov.in
ಸಂ:ಬಿಎಂಸಿಆರ್‌ಸಿ/ಸಾಮಾನ್ಯ-3/ಟೆಂಡರ್/2026-27 ದಿನಾಂಕ:16-04-2026
ಇ-ಟೆಂಡರ್ ಅಧಿಸೂಚನೆ
ಬಳ್ಳಾರಿಯ ಬಿಎಂಸಿಆರ್‌ಸಿ ಸಂಸ್ಥೆಯಲ್ಲಿ ವಿವಿಧ ಈ ಕೆಳಗಿನ ಕಾಮಗಾರಿಗಳನ್ನು ಪೂರೈಸಲು ಕೆ.ಟಿ.ಪಿ.ಪಿ ಅಧಿನಿಯಮ-1999-2000ರಂತೆ ದ್ವಿ-ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ ಇ-ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್ ನಲ್ಲಿ DME/2026-27/BD/WORK_INDENT73 ಅಂದಾಜು ಮೊತ್ತ ರೂ.165.95 ಲಕ್ಷಗಳು, DME/2026-27/OW/WORK_INDENT75 ಅಂದಾಜು ಮೊತ್ತ ರೂ.100.09 ಲಕ್ಷಗಳು, DME/2026-27/BD/WORK_INDENT76 ಅಂದಾಜು ಮೊತ್ತ ರೂ.165.96 ಲಕ್ಷಗಳು & DME/2026-27/BC/WORK_INDENT74 ಅಂದಾಜುಮೊತ್ತ ರೂ.107.11 ಲಕ್ಷಗಳು ದಿನಾಂಕ 16.04.2026 ರಿಂದ 02.05.2026ರ ಸಂಜೆ5.00ರ ಒಳಗೆ ಟೆಂಡರ್‌ನಲ್ಲಿ ಭಾಗವಹಿಸಲು ಕೋರಿದೆ. ಹೆಚ್ಚಿನ ವಿವರಗಳನ್ನು ವೆಬ್ ಸೈಟ್ www.bmcrc.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/- ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/64

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ. ದೂ:08539-220054.
ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2026-27/124 ದಿ: 13/04/2026
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಯ ಟೆಂಡರ ಕಾಮಗಾರಿಗಾಗಿ 4702 ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 05 ಕಾಮಗಾರಿಗಳ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಅಂದಾಜು ಮೊತ್ತ ರೂ.**100.00** ಲಕ್ಷಗಳರಿಂದ **500.00** ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: **17-04-2026** ರಿಂದ ದಿನಾಂಕ: **28-04-2026** ಸಂಜೆ. 16.00 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ: **27-04-2026** ರಂದು ಬೆಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: **30-04-2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: **02-05-2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆ.ಪಿ.ಪಿ" ವೆಬ್‌ಸೈಟ್ Karnataka Public Procurement Portal ನಲ್ಲಿ ಪಡೆಯಬಹುದು.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ಡಿಐಪಿಆರ್/ಕೊಪ್ಪಳ/30/ಕೆಎಸ್‌ಎಂಸಿಎ/2026-27

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿ, ನಂ.6 ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಪಾಂಡವಪುರ, ಮಂಡ್ಯ ಜಿಲ್ಲೆ.
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಸಂ:01/2026-27/ ದಿನಾಂಕ:16.04.2026 INDENT2130/CALL-4 (ದ್ವಿ-ಲಕೋಟಿ ಪದ್ಧತಿ)
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ. ಬೆಂಗಳೂರು. ಇವರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (KW-4) ಹಾಗೂ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆ ಇಲ್ಲಿ ನೋಂದಾಯಿಸಿರುವ 1ನೇ ದರ್ಜೆ ಗುತ್ತಿಗೆದಾರರಿಂದ (ದ್ವಿ ಲಕೋಟಿ ಪದ್ಧತಿಯಲ್ಲಿ) 1 ಕಾಮಗಾರಿಗೆ ಐಟಂವಾರು (kppp ಪೋರ್ಟಲ್ ಮೂಲಕ ಮಾತ್ರ) ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ಅಂದಾಜು ಮೊತ್ತ. ಮುಂಗಡ ಠೇವಣಿ (ಇ.ಎಂ.ಡಿ) ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಗಳಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು, ಸೂಚನೆಗಳು ಮತ್ತು ನಿಬಂಧನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ http://kppp.kamataka.gov.in ಪೋರ್ಟಲ್‌ನಲ್ಲಿ ದಿ:16.04.2026 ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ.6, ಹೇ.ಎ.ದ.ನಾಲಾ ವಿಭಾಗ, ಕಾ.ನೀ.ನಿ.ನಿ., ಪಾಂಡವಪುರ.
ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿ&ಎ/046/2026-27

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ,
"ಅಭಿವೃದ್ಧಿ ಭವನ", ಐವಾನ-ಎ-ಶಾಹಿ, ಕಲಬುರಗಿ-585 102, ದೂರವಾಣಿ: 08472-256767, 239556 ಫ್ಯಾಕ್ಸ್ (08472) 227527, ಇ-ಮೇಲ್: hkadbgulb@gmail.com, website:kkrdb.karnataka.gov.in
ಸಂಖ್ಯೆ:KKRDB/ACC/AS-2/332025-26/504 ದಿನಾಂಕ:17.04.2026
ಅಲ್ಪಾವಧಿ ಇ- ಹರಾಜು ಪ್ರಕಟಣೆ
ಕರ್ನಾಟಕ ಸರ್ಕಾರದ ಇ-ಪೋರ್ಟಲ್‌ನಲ್ಲಿ ಇ-ಹರಾಜಿನ ಮೂಲಕ ಕೆಕೆಆರ್‌ಡಿಬಿ ಹೆಚ್ಚುವರಿ ನಿಧಿಯ ಹೂಡಿಕೆ
ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಎಫ್‌ಡಿ 91 ಟಿ..ಎ.ಆರ್ 2022, ಬೆಂಗಳೂರು, ದಿ:02.07.2022 ಮತ್ತು ಸಂಬಂಧಿತ ಅನುಬಂಧಗಳು/ಸುತ್ತೋಲೆಗಳ ಪ್ರಕಾರ 365 ದಿನಗಳವರೆಗೆ ಸ್ಥಿರ ಠೇವಣಿ ಮೂಲಕ ಹೆಚ್ಚುವರಿ ನಿಧಿಯನ್ನು ಹೂಡಿಕೆ ಮಾಡಲು **ಭಾರತದ ಅರ್ಹ ಪ್ರಾದೇಶಿಕ/ವಲಯ/ಮುಖ್ಯ ಕಚೇರಿಯಿಂದ** ಸುಮಾರು 20.00 ಕೋಟಿಗಳ ರೂಪಾಯಿಗೆ ಬಡ್ಡಿದರಗಳಿಗಾಗಿ ಹರಾಜು ಮೂಲಕ ಆಹ್ವಾನಿಸಲಾಗಿದೆ.
1) ಆಸಕ್ತ ಬಿಡ್ಡರ್‌ಗಳು ದಿನಾಂಕ:17.04.2026 ರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ ಅರ್ಜಿ ಶುಲ್ಕವನ್ನು ಪಾವತಿಸುವ ಮೂಲಕ www.kppp.karnataka.gov.in ನಿಂದ ದಾಖಲೆಗಳನ್ನು ಪಡೆಯಬಹುದು. 2) ತಿದ್ದುಪಡಿ/ಅನುಬಂಧ/ಮಾರ್ಪಾಡುಗಳು/ತಿದ್ದುಪಡಿಗಳನ್ನು ವೆಬ್‌ಸೈಟ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. **ಟೆಂಡರ್ (ಇ-ಹರಾಜು) ಗಾಗಿ ವೇಳಾಪಟ್ಟಿ ಈ ಕೆಳಗಿನಂತಿದೆ:**
ಕ್ರ.ಸಂ.01, ವಿವರಣೆ : ಹರಾಜು ದಸ್ತಾವೇಜನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೋಳ್ಳುವ ಪ್ರಾರಂಭ ದಿನಾಂಕ : 17.04.2026, 02) ಕ್ವೆರೀಸ್ ಸಲ್ಲಿಸುವ ದಿನಾಂಕ: 23.04.2026 ಮಧ್ಯಾಹ್ನ 01.30 ವರೆಗೆ, 03) ಪ್ರಿ-ಬಿಡ್ ಸಭೆ ದಿನಾಂಕ : 24.04.2026 ಬೆಳಿಗ್ಗೆ 10.30 ಕ್ಕೆ, 04) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 02.05.2026 ಸಾಯಂಕಾಲ 5.00ರ ವರೆಗೆ, 05) ಎವಲ್ಯೂಯೇಷನ್ ದಿನಾಂಕ : 04.05.2026 ಬೆಳಿಗ್ಗೆ 10.30 ಕ್ಕೆ, 06) ಇ-ಹರಾಜು ದಿನಾಂಕ : 08.05.2026ರಂದು ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 01.30 ಗಂಟೆ ವರೆಗೆ, 07) ಡೆಲ್ಟಾ ಸಮಯ : 15 ಮಿನಿಟ್ಸ್
ಸಹಿ/- ಉಪ ಕಾರ್ಯದರ್ಶಿಗಳು ಕ.ಕ.ಪ್ರ.ಅ.ಮಂಡಳಿ ಕಲಬುರಗಿ
ವಾ.ಸಾ.ಸಂ.ಇ.ಕಲಬುರಗಿ/44/ದೇಶಪಾಂಡೆ ಪಬ್ಲಿಸಿಟಿ/2026-27/

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.
ಸಂ: ಬೆಂಅಪ್ರಾ/ನಯೋಸ/CLU-401/209/2025-26/(E-177726) ದಿನಾಂಕ: 17.04.2026
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಚಂದ್ರಶೇಖರ್ ಮತ್ತು ಇತರರು	ಬೆಂಗಳೂರು ಪೂರ್ವ	ಬಿದರಹಳ್ಳಿ	ಕಾಡಅಗ್ರಹಾರ	119	2-00	ವ್ಯವಸಾಯ	ವಸತಿ
2					120	2-00		
3					121	2-00		
4					122	2-00		
5					123	2-00		
6					124	4-00		
7					125	2-00		
8					126	2-00		
9					127	2-00		
10					128	6-00		
			ಒಟ್ಟು			26-00		

ಷರಾ: ಪ್ರಶ್ನಿತ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ, ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತದೆ ಮತ್ತು ಭೂಬದಲಾವಣೆ ಸಂಬಂಧ/ಸರ್ಕಾರೇತರ ಪ್ರಾಧಿಕಾರ ವಿಧಿಸುವ ಎಲ್ಲಾ ಷರತ್ತುಗಳಿಗೆ ಬದ್ಧನಾಗಿರುತ್ತೇವೆ ಎಂದು ಅರ್ಜಿದಾರರು ತಿಳಿಸುತ್ತಾ, **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ. ಸಹಾಯವಾಣಿ/ವಾಟ್ಸಪ್: 94831 66622 (24x7). X @BDAOfficialGoK
ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು-560070.
ಸಂ: ಕಾಅ/ಗ್ರಾ.ಕುನೀ&ನೈವಿ/ಬೆ.ನ/ಟೆಂಡರ್/01/2026-27 ದಿನಾಂಕ: 17.04.2026
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ ನೋಟೀಸ್
2025-26 ನೇ ಸಾಲಿನ ಬೆಂಗಳೂರು ನಗರ ಜಿಲ್ಲಾ ಪಂಚಾಯತಿಯಲ್ಲಿ ಬರುವ MRF ಘಟಕಗಳ ಕಾರ್ಯಚರಣೆ ನಿರ್ವಹಣೆಗಾಗಿ (Pre-Qualification) ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ವಿವಿಧ ಲೆಕ್ಕಶೀರ್ಷಿಕೆಯಡಿ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಾಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ: 02.05.2026 ರ ಸಂಜೆ 4.00 ಗಂಟೆ**ಯವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ https://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯಪಾಲಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ, ಬೆಂಗಳೂರು
ವಾಸಾಸಂಇ/ವಾಪ್ರ/ಶಿರಡಿ ಸಾಯಿ/72/2026-27

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಚಳ್ಳಕೆರೆ., ಚಿತ್ರದುರ್ಗ (ಜಿ)
ಸಂ.ತಾ.ಸಾ.ಆ.(ಚ) ನಾ.ಕ್ಲಿ.ಟೆಂ/ಟೆಂಡರ್/1/2025-26/21 ದಿನಾಂಕ: 15.04.2026
ಇ-ಟೆಂಡರ್ ಪ್ರಕಟಣೆ
(ದ್ವಿ ಲಕೋಟೆ ಪದ್ಧತಿಯಲ್ಲಿ)
2026-27ರ ಸಾಲಿಗಾಗಿ ನಾನ್ ಕ್ಲಿನಿಕಲ್ ಮತ್ತು ಗ್ರೂಪ್ ಡಿ ಸೇವೆ ನಿರ್ವಹಿಸಲು ಮುಖ್ಯ ವೈದ್ಯಾಧಿಕಾರಿಗಳು, ತಾ.ಸಾ.ಆಸ್ಪತ್ರೆ, ಚಳ್ಳಕೆರೆ ಇವರ ಹೆಸರಿನಲ್ಲಿ ಪ್ರತಿಷ್ಠಿತ ನೊಂದಾಯಿತ ಸಂಸ್ಥೆಯವರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ-ಟೆಂಡರ್‌ನ್ನು ಕರೆಯಲಾಗಿದ್ದು, ಇ-ಟೆಂಡರ್ ನಮೂನೆಗಳನ್ನು http://kppp.karnataka.gov.in ರಲ್ಲಿ ಅಂತರ್ ಜಾಲದಲ್ಲಿ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ::15.04.2026 ರಿಂದ 14.05.2026 ರ ವರೆಗೆ ಮತ್ತು ಅಂತರ್ ಜಾಲದಲ್ಲಿ ಭರ್ತಿ ಮಾಡಲು ಕೊನೆಯ ದಿನಾಂಕ:14.05.2026 ರ ಅಪರಾಹ್ನ 5.00ಗಂಟೆಯ ವರೆಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ 16.05.2026 ರ ಬೆಳಿಗ್ಗೆ 11 ಗಂಟೆಗೆ. ಕಾರಣಾಂತರದಿಂದ ಆನ್‌ಲೈನ್‌ನಲ್ಲಿ ಅಪ್ ಲೋಡ್ ಮಾಡುವ, ಡೌನ್ ಲೋಡ್ ಮಾಡುವ ಹಾಗೂ ತೆರೆಯುವ ದಿನಾಂಕಗಳಂದು ಸರ್ಕಾರಿ ರಜೆ ಘೋಷಿಸಿದಲ್ಲಿ ಅದರ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ http://kppp.karnataka.gov.in ರಲ್ಲಿ ಪಡೆಯಬಹುದು.
DIPR/CTA/KSMCA/45/2026-27
ಸಹಿ/- ಮುಖ್ಯ ವೈದ್ಯಾಧಿಕಾರಿಗಳು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಚಳ್ಳಕೆರೆ.

ತೋಟಗಾರಿಕೆ ಇಲಾಖೆ
ಇ ಹರಾಜು ಪ್ರಕಟಣೆ (KPPP ಮೂಲಕ ಮಾತ್ರ)
2026-27ನೇ ಸಾಲಿನಲ್ಲಿ ಕೊಡಗು ಜಿಲ್ಲೆಯ ವಿವಿಧ ತೋಟಗಾರಿಕೆ ಕ್ಷೇತ್ರಗಳಲ್ಲಿರುವ ತೆಂಗು, ಸೀಬೆ, ಮಾವು, ಹಲಸು, ಕೋಕಂ, ಗೋಡಂಬಿ, ಬೆಣ್ಣೆಹಣ್ಣು ಮತ್ತು ಲಕ್ಷ್ಮಣ ಫಲ ಫಸಲನ್ನು ರೂಢಿಸಿಕೊಳ್ಳಲು ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಹರಾಜಿಗೆ ದಿನಾಂಕ: 16.04.2026ರಂದು ಪ್ರಕಟಣೆಯನ್ನು ಕರ್ನಾಟಕ ರಾಜ್ಯ ಪಾರದರ್ಶಕತೆ ಅಧಿನಿಯಮ 2000ರ ನಿಯಮಗಳಡಿ ಕರೆಯ ಲಾಗಿದ್ದು, ಆಸಕ್ತರು ದಿನಾಂಕ:13.05.2026ರ ಸಂಜೆ:5.30ರ ಒಳಗೆ ಭಾಗವಹಿಸಬಹುದಾಗಿರುತ್ತದೆ. ಇ-ಹರಾಜು ಪ್ರಕ್ರಿಯೆಯು ದಿನಾಂಕ: 15.05.2026ರ ಬೆಳಿಗ್ಗೆ:10.00 ರಿಂದ ದಿನಾಂಕ:16.05.2026ರ ಸಂಜೆ:4.00ರ ಒಳಗೆ ಕೆ.ಪಿ.ಪಿ.ಪಿ. ಪೋರ್ಟ್ಲ್ ಮೂಲಕ ನಡೆಸಲಾಗುತ್ತದೆ. ಇ-ಹರಾಜಿನಲ್ಲಿ ಫಸಲಿನ ಹರಾಜು ಆಗದೇ ಇದ್ದಲ್ಲಿ ಉಳಿಕೆ ಫಸಲಿಗೆ ಟೆಂಡರ್-ಯಾ-ಬಹಿರಂಗ ಹರಾಜನ್ನು ದಿನಾಂಕ:18.05.2026ರಂದು ಬೆಳಿಗ್ಗೆ:11.00 ಗಂಟೆಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಮಡಿಕೇರಿ ಕಛೇರಿಯಲ್ಲಿ ಎಲ್ಲಾ ಕ್ಷೇತ್ರಾಧಿಕಾರಿಗಳ ಸಮ್ಮುಖದಲ್ಲಿ ಕರೆಯಲಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗಳನ್ನು http://kppp.karnataka.gov.in ಅಂತರ್ಜಾಲದ ಮೂಲಕ ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಮಡಿಕೇರಿ ರವರ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾ ಗಿರುತ್ತದೆ.
ಹಿರಿಯ ಸಹಾಯಕ, ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ ಮಡಿಕೇರಿ)

ಸಮಾಚಾರ ಸಣ್ಣದಲ್ಲ

ಪಾಲಿಕೆ ಚುನಾವಣೆ ಮಾಡಲು ಭಯ



ಮೈಸೂರು: ಸ್ಥಳೀಯ ಸಂಸ್ಥೆ ಚುನಾವಣೆ ಮಾಡಲು ರಾಜ್ಯ ಸರಕಾರಕ್ಕೆ ಭಯವಿದೆ ಎಂದು ಮಾಜಿ ಸಚಿವ ಸಾರಾ ಮಹೇಶ್ ಹೇಳಿದ್ದಾರೆ. ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲುವುದು ಖಚಿತ. ಹೀಗಾಗಿ ಚುನಾವಣೆ ನಡೆಸುತ್ತಿಲ್ಲ. ಸಿಎಂ ಹಾಗೂ ಸಿಎಂ ಪುತ್ರ ಮಾತ್ರ ಅಧಿಕಾರದಲ್ಲಿ ಇದ್ದರೆ ಸಾಲದು. ಸ್ಥಳೀಯ ಮುಖಂಡರಿಗೂ ಅಧಿಕಾರ ಬೇಕು ಎಂದು ಕಿಡಿಕಾರಿದರು. ಜಿಟಿಡಿ ನಮ್ಮ ಪಕ್ಷದಲ್ಲಿ ಇಲ್ಲ. ಅವರ ಬಗ್ಗೆ ಏನೂ ಕೇಳಬೇಡಿ. ಎಚ್‌ಡಿ ಕುಮಾರಸ್ವಾಮಿ ಅವರೇ ಜಿಟಿಡಿ ನಮ್ಮ ಪಕ್ಷದಲ್ಲಿ ಇಲ್ಲ ಎಂದು ಹೇಳಿದ್ದಾರೆ. ಅಲ್ಲಿಗೆ ಎಲ್ಲವೂ ಮುಗಿಯಿತು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜನರೊಂದಿಗೆ ಜನತಾದಳ ಕಾರ್ಯಕ್ರಮ ಸಮಾರೋಪ ಮಾಡುತ್ತೇವೆ ಎಂದರು. ನಮ್ಮದು ಕುಟುಂಬ ರಾಜಕಾರಣ ಅಲ್ಲ ಎಂಬ ಸಿಎಂ ಪುತ್ರನ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ವಿಧಾನ ಪರಿಷತ್ ಸದಸ್ಯ, ಆಶ್ರಯ ಸಮಿತಿ ಸದಸ್ಯ, ಗ್ರೇಟರ್ ಬೆಂಗಳೂರು ಸಮಿತಿ ಸದಸ್ಯ ಎಲ್ಲವೂ ಯತೀಂದ್ರ ಆಗಿದ್ದಾರೆ. ಇದಕ್ಕಿಂತಾ ಕುಟುಂಬ ರಾಜಕಾರಣ ಬೇಕಾ ಎಂದು ತಿರುಗೇಟು ನೀಡಿದರು.

ಅಪಘಾತ: ಮೃತರ ಸಂಖ್ಯೆ 9ಕ್ಕೆ ಏರಿಕೆ

ಹಾಸನ: ರಾಯರ ದರ್ಶನಕ್ಕೆ ತೆರಳುತ್ತಿದ್ದ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಕುಟುಂಬಸ್ಥರು ಮಂತ್ರಾಲಯದ ಸಮೀಪ ಗುರುವಾರ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಮೃತರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಮೃತರಲ್ಲಿ ಚಿಕ್ಕಮಗಳೂರು ಜಿಲ್ಲೆಯಿಂದ ಪ್ರಯಾಣಿಸುತ್ತಿದ್ದ ಇಬ್ಬರು ಸಂಬಂಧಿಕರೂ ಸೇರಿದ್ದಾರೆ. ಗಂಭೀರವಾಗಿ ಗಾಯಗೊಂಡ 16 ವರ್ಷದ ಬಾಲಕಿ ತೇಜಸ್ವಿನಿ ಶುಕ್ರವಾರ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಇವರು ಬೇಲೂರಿನ ಶೆಟ್ಟಿಗೆರೆ ಗ್ರಾಮದ ನಿವಾಸಿ. ತೇಜಸ್ವಿನಿಯ ತಾಯಿ ಲೋಲಾಕ್ಷಿ ಸೇರಿದಂತೆ ಒಂದೇ ಕುಟುಂಬದ ಆರು ಮಂದಿ ಗುರವಾರ ಸ್ಥಳದಲ್ಲೇ ಸಾವನ್ನಪ್ಪಿದ್ದರು. ಮಂತ್ರಾಲಯ ತಲುಪಲು ಕೆಲವೇ ನಿಮಿಷಗಳಿರುವಾಗ ಗುರುವಾರ ಮುಂಜಾನೆ ರಾಷ್ಟ್ರೀಯ ಹೆದ್ದಾರಿ-167ರಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿತ್ತು. ಚಿಲಕಲಡೋನ ತಿರುವಿನಲ್ಲಿ 22 ಭಕ್ತರಿದ್ದ ವಾಹನ ಸಿಮೆಂಟ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿತ್ತು.

56 ಸಾವಿರ ಹುದ್ದೆಗಳ ಭರ್ತಿಗೆ ಕ್ರಮ: ಪರಂ

ಬೆಳಗಾವಿ: ರಾಜ್ಯದ ವಿವಿಧ ಇಲಾಖೆ, ನಿಗಮಗಳಲ್ಲಿ ಖಾಲಿ ಇರುವ 56 ಸಾವಿರ ಸರಕಾರಿ ಹುದ್ದೆಗಳನ್ನು ನಾವು ಭರ್ತಿ ಮಾಡಿಯೇ ತೀರುತ್ತೇವೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಘೋಷಣೆ ಮಾಡಿದರು. ಬೆಳಗಾವಿ ನಗರದಲ್ಲಿ ಪೊಲೀಸ್ ಕಟ್ಟಡಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಸಮಾರಂಭ ಆಗಮಿಸಿದ್ದ ಅವರು ಸುದ್ದಿಗಾರರ ಜತೆ ಈ ವಿಚಾರ ಹಂಚಿಕೊಂಡರು. ರಾಜ್ಯ ಬಜೆಟ್‌ನಲ್ಲಿ ಈ ಘೋಷಣೆ ಮಾಡಲಾಗಿದೆ. ಮೀಸಲಾತಿ ಗೊಂದಲ ಸರಿಪಡಿಸಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು ಎಂದರು. 224 ಜನ ಶಾಸಕರು ಸಚಿವರಾಗಲು ಅರ್ಹತೆ ಇದೆ. ಆದರೆ ನಮಗೆ ಇರುವುದೇ 15% ಶಾಸಕರು ಸಚಿವ ಸ್ಥಾನ ಕೇಳುವುದು ತಪ್ಪಿಲ್ಲ. ಇದನ್ನು ಹೈಕಮಾಂಡ್ ನಿರ್ಧಾರ ಮಾಡಲಿದೆ ಎಂದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಕೌಠಾ (ಕೆ), ಔರಾದ್

ಸಮಸ್ಯೆಯೇನು..?

- ಅಪಾಯಕಾರಿ ಸ್ಥಿತಿಯಲ್ಲಿರುವ ವಿದ್ಯುತ್ ಕಂಬ ಹಾಗೂ ತಂತಿಗಳನ್ನು ಸರಿಪಡಿಸುವ ಬಗ್ಗೆ.
- **ಪರಿಹಾರ:** ಬೀದರ್ ಜಿಲ್ಲೆ ಔರಾದ್ ತಾಲೂಕಿನ ಕೌಠಾ (ಕೆ) ಗ್ರಾಮದ ಜಮೀನೊಂದರಲ್ಲಿ ಅಪಾಯಕಾರಿ ಸ್ಥಿತಿಯಲ್ಲಿ ಜೋತು ಬಿದ್ದ ವಿದ್ಯುತ್ ತಂತಿಗಳನ್ನು ಸರಿಪಡಿಸಲು ಆಗ್ರಹಿಸಿ ವಿದ್ಯಾವಾನ ಎಸ್.ಶೆರಿಕರ್ ಎಂಬುವರು ಜನಸ್ಪಂದನ ಪೋರ್ಟಲ್‌ನಲ್ಲಿ ಅಹವಾಲು ಸಲ್ಲಿಸಿದ್ದರು. ಈ ಸಂಬಂಧ ಸ್ಥಳ ಪರಿಶೀಲನೆ ನಡೆಸಿದ ಜೆಸ್ಕಾಂ ಅಧಿಕಾರಿಗಳು ವಿದ್ಯುತ್ ಕಂಬ ಹಾಗೂ ತಂತಿಗಳನ್ನು ಸರಿಪಡಿಸಿದ್ದಾರೆ.

ದಿನ ವಿಶೇಷ

18 ಏಪ್ರಿಲ್ 2026 ಶನಿವಾರ

» ಸೂರ್ಯೋದಯ	: 6-08
» ಸೂರ್ಯಾಸ್ತ	: 6-46
» ತಿಥಿ	: ಪ್ರಥಮ
» ನಕ್ಷತ್ರ	: ರೇವತಿ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ವಸಂತ
» ಮಾಸ	: ವೈಶಾಖ
» ಪಕ್ಷ	: ಕೃಷ್ಣಪಕ್ಷ

ಜೈಲು ಪಾಲಾದ ಶಾಸಕ ವಿನಯ್ ಕುಲಕರ್ಣಿ, ಸಹಚರರು | ಪ್ರಕರಣಕ್ಕೆ ಮಹತ್ವದ ತಿರುವು ನೀಡಿದ ಸಿಬಿಐ ತನಿಖೆ

ಯೋಗೇಶ್ ಕೊಲೆ: ವಿನಯ್ ಕುಲಕರ್ಣಿ ಜೈಲಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಜೆಪಿ ಮುಖಂಡ ಯೋಗೇಶ್ ಗೌಡ ಹತ್ಯೆ ಪ್ರಕರಣದ ತೀರ್ಪಿನಿಂದ ಮತ್ತೆ ಕಂಬಿ ಎಣಿಸುವಂತಾಗಿದೆ. ಶಾಸಕ ವಿನಯ್ ಕುಲಕರ್ಣಿ ಕಾನೂನು ಕುಣಿಕೆಗೆ ಸಿಲುಕಿ ಜೈಲು ಪಾಲಾಗಿದ್ದಾರೆ.

2016ರ ಜೂನ್ 15ರಂದು ಧಾರವಾಡದ ಸಪ್ತಾಪುರ ಬಡಾವಣೆಯಲ್ಲಿ ನಡೆದ ಯೋಗೇಶ್ ಗೌಡ ಅವರ ಹತ್ಯೆ ಕೇವಲ ಒಂದು ಅಪರಾಧ ಪ್ರಕರಣವಾಗಿರಲಿಲ್ಲ. ಅದು ಎರಡು ರಾಜಕೀಯ ಶಕ್ತಿಗಳ ನಡುವಿನ ಸಂಘರ್ಷದ ಅಂತ್ಯವಾಗಿತ್ತು. ಯೋಗೇಶ್ ಗೌಡ ಬಿಜೆಪಿ ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದರು ಮತ್ತು ವಿನಯ್ ಕುಲಕರ್ಣಿ ಅವರೊಂದಿಗೆ ರಾಜ ಕೀಯವಾಗಿ ಮುಖಾಮುಖಿಯಾಗಿದ್ದರು. ಸಪ್ತಾ ಪುರದ ಉದಯ ಜಿಮ್‌ನಲ್ಲಿ ನಡೆದ ಈ ಭೀಕರ ಹತ್ಯೆಯ ನಂತರ, ಆರಂಭದಲ್ಲಿ ಸ್ಥಳೀಯ ಪೊಲೀ ಸರು ತನಿಖೆ ನಡೆಸಿದ್ದರು. ಆದರೆ, ಈ ತನಿಖೆಯಲ್ಲಿ ಪ್ರಭಾವಿಗಳ ಕೈವಾಡವಿದೆ ಎಂದು ಮೃತರ ಕುಟುಂಬಸ್ಥರು ಆರೋಪಿಸಿದ ಹಿನ್ನೆಲೆಯಲ್ಲಿ, 2020ರಲ್ಲಿ ಪ್ರಕರಣವು ಸಿಬಿಐಗೆ ಹಸ್ತಾಂತರವಾಯಿತು. ಸಿಬಿಐ ತನಿಖೆಯು ಪ್ರಕರಣಕ್ಕೆ ಹೊಸ ಆಯಾಮ ನೀಡಿತು. ವಿನಯ್ ಅವರನ್ನು 15ನೇ ಆರೋಪಿಯನ್ನಾಗಿ ಹೆಸರಿಸಿದ ಸಿಬಿಐ, ಅವರನ್ನು 2020ರ ನ.5ರಂದು ಬಂಧಿಸಿತು. ಜಿ.ಪಂ. ಸಭೆಯಲ್ಲಿ ನಡೆದಿದ್ದ ಜಗಳವೇ ಈ ಕೊಲೆಗೆ ಸಂಚು ರೂಪಿಸಲು ಪ್ರೇರಣೆ ಎಂಬುದು ಸಿಬಿಐ ವಾದವಾಗಿತ್ತು.

2021ರ ಆಗಸ್ಟ್‌ನಲ್ಲಿ ಸುಪ್ರೀಂಕೋರ್ಟ್ ವಿನಯ್ ಕುಲಕರ್ಣಿ ಅವರಿಗೆ ಜಾಮೀನು ನೀಡಿತ್ತು. ಆದರೆ, ಧಾರವಾಡ ಜಿಲ್ಲೆ ಪ್ರವೇಶಿಸಬಾರದು ಎಂಬ ಕಠಿಣ ಷರತ್ತನ್ನು ವಿಧಿಸಿತ್ತು. ಈ ಅವಧಿಯಲ್ಲಿ ಅವರು ಬೆಳಗಾವಿ ಜಿಲ್ಲೆಯ ಕಿತ್ತೂರನ್ನು ತಮ್ಮ ಕಾರ್ಯಸ್ಥಾನವನ್ನಾಗಿ ಮಾಡಿಕೊಂಡಿದ್ದರು. ಆದರೆ, ಸಿಬಿಐ ಈ ಜಾಮೀನನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿತು. ಜಾಮೀನು ರದ್ದತಿಗೆ ಸಿಬಿಐ ನೀಡಿದ ಕಾರಣಗಳು ಅತ್ಯಂತ ಗಂಭೀರವಾಗಿದ್ದವು. ಮಾಫಿ ಸಾಕ್ಷಿಗಳಿಗೆ ಒಂದು ಲಕ್ಷ ರು.ಆಮಿಷ ಒಡ್ಡಿ ಪ್ರಭಾವ ಬೀರಲು ಯತ್ನಿಸಲಾಗಿದೆ. ಸಾಕ್ಷಿಗಳನ್ನು ಬೆದರಿಸುವ ಮೂಲಕ ನ್ಯಾಯಾಲಯದ ಷರತ್ತುಗಳನ್ನು ಉಲ್ಲಂಘಿಸಲಾಗಿದೆ ಎಂದು ಸಿಬಿಐ ಸಾಕ್ಷ್ಯಾಧಾರಗಳೊಂದಿಗೆ ವಾದಿಸಿತು. ಈ ವಾದವನ್ನು ಪುರಸ್ಕರಿಸಿದ ನ್ಯಾಯಾಲಯವು ಜಾಮೀನು ರದ್ದುಗೊಳಿಸಿತು. ಇದು ವಿನಯ್ ಕುಲಕರ್ಣಿ ಅವರಿಗೆ ದೊಡ್ಡ ಹಿನ್ನಡೆಯಾಯಿತು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಂತಹ ಪ್ರಭಾವಿ ನಾಯಕರನ್ನು ಭೇಟಿ ಮಾಡಿ ಮನವಿ ಮಾಡಿದರೂ, ಕಾನೂನು ಪ್ರಕ್ರಿಯೆಯ ಮುಂದೆ ರಾಜಕೀಯ ಪ್ರಭಾವಗಳು ಕೆಲಸ ಮಾಡಲಿಲ್ಲ.

ಹತ್ಯೆಯಲ್ಲಿ ವಿನಯ್ ಪಾತ್ರವೇನು?

ಯೋಗೇಶ್ ಗೌಡ ಹತ್ಯೆ ಪ್ರಕರಣದಲ್ಲಿ ಮಾಜಿ ಸಚಿವ ಹಾಗೂ ಹಾಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ದೋಷಿ ಎಂದು ಜನಪ್ರತಿನಿಧಿಗಳ ಕೋರ್ಟ್ ತೀರ್ಪು ನೀಡಿತ್ತು. ಯೋಗೀಶ್ ಗೌಡ ಹತ್ಯೆಯ ಹಿಂದಿನ ಕ್ರಿಮಿನಲ್ ಒಳಸಂಚು ಮತ್ತು ಕೊಲೆ ಸೇರಿದಂತೆ ಹಲವು ಸೆಕ್ಷನ್‌ಗಳ ಅಡಿಯಲ್ಲಿ ವಿನಯ್ ಕುಲಕರ್ಣಿ ದೋಷಿ ಎಂದು ಘೋಷಿಸಲಾಗಿದೆ. ಸಿಬಿಐ ತನಿಖೆಯ ಪ್ರಕಾರ, ಈ ಕೊಲೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಮಾಸ್ಟರ್ ಮೈಂಡ್ ಅಥವಾ ಪ್ರಮುಖ ಸಂಚುಕಾರಿ ಆಗಿದ್ದರು. ರಾಜಕೀಯ ದ್ವೇಷ ಮತ್ತು 4 ಎಕರೆ ಜಮೀನು ವಿವಾದದ ಹಿನ್ನೆಲೆ ಯೋಗೇಶ್ ಗೌಡ ಅವರನ್ನು ಹತ್ಯೆ ಮಾಡಲು ಸಂಚು ರೂಪಿಸಿದ್ದರು ಎಂದು ಸಿಬಿಐ ಆರೋಪಿಸಿತ್ತು. 2016ರ ಜೂನ್ 15ರಂದು ಧಾರವಾಡದಲ್ಲಿ ಉದಯ್ ಜಿಮ್ ಎಂಬಲ್ಲಿ ಯೋಗೀಶ್ ಗೌಡ ಅವರ ಮೇಲೆ ಖಾರದ ಪುಡಿ ಎರಚಿ, ಅಟ್ಯಾಕ್ ಮಾಡಿ, ಹತ್ಯೆ ಮಾಡಲಾಗಿತ್ತು. ಈ ಭೀಕರ ಹತ್ಯೆಗೆ ಸಂಬಂಧಿಸಿದಂತೆ, ಇತರ ಆರೋಪಿಗಳೊಂದಿಗೆ ಸೇರಿ ಕೃತ್ಯ ಯೋಜಿಸಿ ಜಾರಿಗೊಳಿಸಿದ್ದರು ಎಂದು ಕೋರ್ಟ್ ಹೇಳಿದೆ.

ಸುಳ್ಳಿನ ಕಂತೆಯಲ್ಲಿ ಸಪ್ತ ಪೊಲೀಸರು

ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನೀಡಿದ್ದಕ್ಕಾಗಿ ಪೊಲೀಸ್ ಅಧಿಕಾರಿಗಳಾದ ಶಿವಾನಂದ ಚಲವಾದಿ, ಬಾಬು ಕಟಗಿ, ಶಂಕರಗೌಡ ಬಸನಗೌಡ ಪಾಟೀಲ್ ಹಾಗೂ ಇತರ ಸ್ವತಂತ್ರ ಸಾಕ್ಷಿಗಳಾದ ದತ್ತಾತ್ರೇಯ ಗುಡಗಂಟಿ, ಆನಂದ ಈರಪ್ಪ ಉದ್ದಣ್ಣವರ್, ವಿನಾಯಕ ಬಿಂಜಿಯವರ್, ಮೋಹನ್ ಈಚರಪ್ಪ ಮಲ್ಲುತ್ತಲ್, ವಿವೇಕಾನಂದ ದಳವಾಯಿ, ನಟರಾಜ್ ಸರದೇಸಾಯಿ ಮತ್ತು ವಿಜಯ್ ಕುಲಕರ್ಣಿ ವಿರುದ್ಧ ಸುಳ್ಳು ಸಾಕ್ಷ್ಯದ ಪ್ರಕರಣವನ್ನು ದಾಖಲಿಸಲು ಸಿಟಿ ಸಿವಿಲ್ ನ್ಯಾಯಾಲಯದ ರಿಜಿಸ್ಟ್ರಾರ್‌ಗೆ ನಿರ್ದೇಶಿಸಲಾಗಿದೆ.

ನಾನು ಹತ್ತು ವರ್ಷ ಪಟ್ಟ ಕಷ್ಟಕ್ಕೆ ನ್ಯಾಯ ಸಿಕ್ಕಿದೆ. ನ್ಯಾಯಾಲಯದ ತೀರ್ಪನ್ನು ಸ್ವಾಗತ ಮಾಡುವೆ. ನನಗೆ ಇದು ಸಮಾಧಾನ ತಂದಿಲ್ಲ. ನನ್ನ ಗಂಡನ ಸ್ಥಾನದಲ್ಲಿ ನನ್ನ ಮಗ ಬರಬೇಕು. ನಮ್ಮ ಕ್ಷೇತ್ರದ ಜನ ಮಗನನ್ನು ಮಡಿಲಲ್ಲಿ ಹಾಕಿಕೊಳ್ಳಬೇಕು. ಅವರ ತಂದೆಯಂತೆ ಮಗ ಬೆಳೆಯಬೇಕು.
-ಮಲ್ಲಮ್ಮ, ಯೋಗೇಶ್ ಗೌಡ ಪತ್ನಿ

ಅಸಲಿ ಕೊಲೆಯನ್ನು ನಕಲಿಯಾಗಿಸಿದ ಮಾಜಿ ಇನ್‌ಸ್ಪೆಕ್ಟರ್ ಟಿಂಗರಿಕರ್

ಬೆಂಗಳೂರು: ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಸಾಕ್ಷಿ ನಾಶ ಮಾಡಲು ಸಹಕರಿಸಿದ ಪೊಲೀಸ್ ಅಧಿಕಾರಿಯೂ ಶಿಕ್ಷೆಗೆ ಗುರಿಯಾಗಿದ್ದಾರೆ. ಧಾರವಾಡ ಉಪನಗರ ಪೊಲೀಸ್ ಠಾಣೆಯ ಮಾಜಿ ಇನ್‌ಸ್ಪೆಕ್ಟರ್ ಚೆನ್ನಕೇಶವ ಟಿಂಗರಿಕರ್ (ಅಪರಾಧಿ-19) ಅವರಿಗೆ 7 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಐತಿಹಾಸಿಕ ಆದೇಶ ಹೊರಡಿಸಿದೆ.

ಆರಂಭದಲ್ಲಿ ಸ್ಥಳೀಯ ಪೊಲೀಸರು ನಡೆಸಿದ ತನಿಖೆಯಲ್ಲಿ ಅನೇಕ ಲೋಪದೋಷಗಳಿದ್ದವು. ನಂತರ ಈ ಪ್ರಕರಣವನ್ನು ಸಿಬಿಐ ಕೈಗೆತ್ತಿಕೊಂಡಾಗ, ತನಿಖಾಧಿಕಾರಿಗಳು ಕೇವಲ ಕೊಲೆಗಡುಕರನ್ನು ಮಾತ್ರವಲ್ಲದೆ, ಅವರಿಗೆ ವ್ಯವಸ್ಥಿತವಾಗಿ ಬೆಂಬಲ ನೀಡಿದ ಒಳಸಂಚುಗಾರರನ್ನು ಪತ್ತೆಹಚ್ಚಿದ್ದರು. ಈ ವೇಳೆ ಇನ್‌ಸ್ಪೆಕ್ಟರ್ ಟಿಂಗರಿಕರ್ ಅವರ ಪಾತ್ರ ಸ್ಪಷ್ಟವಾಗಿ ಕಾಣಿಸಿತು. ಅವರು ತನಿಖೆಯ ದಿಕ್ಕು ತಪ್ಪಿಸಲು ಯತ್ನಿಸಿದ್ದು, ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಿದ್ದು ಮತ್ತು ಮಹತ್ವದ ಪುರಾವೆಗಳನ್ನು ನಾಶಪಡಿಸಿದ್ದು ಸಿಬಿಐ ತನಿಖೆಯಲ್ಲಿ ಸಾಬೀತಾಯಿತು. ಹೀಗಾಗಿ ಅವರನ್ನು ಪ್ರಕರಣದ 19ನೇ ಆರೋಪಿಯನ್ನಾಗಿ ಹೆಸರಿಸಲಾಯಿತು. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಇನ್‌ಸ್ಪೆಕ್ಟರ್ ಟಿಂಗರಿಕರ್ ಅವರ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿದರು. ಒಬ್ಬ ರಕ್ಷಕನೇ ಭಕ್ಷಕನಾದಾಗ ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುತ್ತದೆ ಎಂಬ ಅಂಶವನ್ನು ಆಧರಿಸಿ, ಇನ್‌ಸ್ಪೆಕ್ಟರ್ ಟಿಂಗರಿಕರ್‌ಗೆ 7 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು. ಸಾಕ್ಷಿ ನಾಶ ಮತ್ತು ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯಡಿ ಇವರ ಮೇಲಿನ ಆರೋಪಗಳು ಸಾಬೀತಾಗಿವೆ.

ಯಾದಗಿರಿ: ಖಾಸಗಿ ಬಸ್-ಕಾರಿನ ನಡುವೆ ಭೀಕರ ರಸ್ತೆ ಅಪಘಾತ

ಒಂದೇ ಕುಟುಂಬದ 9 ಮಂದಿ ಸಜೀವ ದಹನ

ಯಾದಗಿರಿ: ಅಮವಾಸ್ಯೆ ನಿಮಿತ್ತ ಸುರಪುರದ ವೇಣುಗೋಪಾಲ ಸ್ವಾಮಿ ದರ್ಶನ ಪಡೆದು ವಾಪಸ್ ಆಗುತ್ತಿದ್ದ ಕುಟುಂಬ ದುರಂತ ಅಂತ್ಯ ಕಂಡಿದೆ. ರಾಯಚೂರು ಜಿಲ್ಲೆ ಸಿರವಾರ ಪಟ್ಟಣ ಪಂಚಾಯಿತಿ ಸದಸ್ಯ ಕೃಷ್ಣನಾಯಕ ಸಮೇತ ಕಾರಿನಲ್ಲಿದ್ದ 9 ಮಂದಿ ಬೆಂಕಿಯಲ್ಲಿ ಬೆಂದು ಸಜೀವ ದಹನಗೊಂಡಿದ್ದಾರೆ. ದುರಂತದಲ್ಲಿ ಮೂವರು ಮಕ್ಕಳು ಸಾವನ್ನಪ್ಪಿದ್ದಾರೆ.

ಇಂತದ್ದೊಂದು ದುರ್ಘಟನೆ ನಡೆದಿದ್ದು, ರಾಷ್ಟ್ರೀಯ ಹೆದ್ದಾರಿ 150ರಲ್ಲಿ, ಯಾದಗಿರಿ ಜಿಲ್ಲೆ ಸುರಪುರ ತಾಲೂಕಿನ ಶಾಂತಪುರ ಕ್ರಾಸ್ ಬಳಿ ಖಾಸಗಿ ಸ್ಲಿಪರ್ ಬಸ್ ಹಾಗೂ ಕೃಷ್ಣನಾಯಕ ಕುಟುಂಬ ಹೊರಟ್ಟಿದ್ದ ಕಾರು ಮುಖಾಮುಖಿ ಡಿಕ್ಕಿ ಆಗಿವೆ. ಕ್ಷಣಾರ್ಧದಲ್ಲೇ ಕಾರು ಸ್ಫೋಟಗೊಂಡು, 9 ಮಂದಿ ದುರ್ಮರಣ ಹೊಂದಿದ್ದಾರೆ. ಬೆಂಕಿ ವ್ಯಾಪಿಸಿ ಬಸ್ ಕೂಡ ಸಂಪೂರ್ಣ ಸುಟ್ಟು ಹೋಗಿದೆ. ಬಸ್ ಚಾಲಕರ ಸಮಯಪ್ರಜ್ಞೆಯಿಂದ ಬಸ್‌ನಲ್ಲಿದ್ದವರೂ ಪಾರಾಗಿದ್ದಾರೆ.

ಬೆಂಕಿ ವ್ಯಾಪಿಸಿದ ಕೂಡಲೇ ಬಸ್‌ನಲ್ಲಿದ್ದವರನ್ನು ಕೆಳಗೆ ಇಳಿಸಿ ಅನಾಹುತದಿಂದ ಬಸ್‌ನಲ್ಲಿದ್ದ ಎಲ್ಲರನ್ನು ಪಾರು ಮಾಡಿದ್ದಾರೆ. ಬೆಂಗಳೂರಿನಿಂದ ಸುರಪುರ ಮಾರ್ಗವಾಗಿ

ಕೃಷ್ಣನಾಯಕ್ ಅವರ ಕುಟುಂಬ.

ಸ್ಲೀಪರ್ ಬಸ್ ಕಲಬುರಗಿಗೆ ತೆರಳುತ್ತಿತ್ತು, ಸುರಪುರದ ಕಡೆಯಿಂದ ಬಂದ ಕಾರು ಅಪಘಾತಕ್ಕೀಡಾಗಿದೆ. ಕಾರಿನಲ್ಲಿದ್ದ ಎಂಟು ಜನರು ಸಜೀವ ದಹನಗೊಂಡಿದ್ದರೆ, ಒಂದೂವರೆ ವರ್ಷದ ಮಗುವನ್ನು ಯಾದಗಿರಿಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿ ನಗರದ ಆಸ್ಪತ್ರೆಗೆ ಸಾಗಿಸುವ ವೇಳೆ ಮಾರ್ಗ ಮಧ್ಯೆ ಮೃತ ಪಟ್ಟಿದೆ. ಹತ್ತು ಜನರಲ್ಲಿ, ಬಾಲಕ ವಿರಾಟ್ ಬದುಕಿ ಉಳಿದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕಾರಿನಲ್ಲಿದ್ದ 8 ಜನರು ಸ್ಥಳದಲ್ಲೇ ಸುಟ್ಟು ಕರಕಲಾಗಿದ್ದಾರೆ. ಸ್ಥಳಕ್ಕೆ ಅಗ್ನಿಶಾಮಕ ದಳ, ಸ್ಥಳೀಯರು ಹಾಗೂ ಪೊಲೀಸರ ನೆರವಿನಿಂದ ಬಸ್ ಹಾಗೂ ಕಾರಿನ ಬೆಂಕಿ ನಂದಿಸಲಾಗಿದೆ.

ಸ್ಥಳಕ್ಕೆ ಸುರಪುರ ಶಾಸಕ ರಾಜಾ ವೇಣುಗೋಪಾಲ ನಾಯಕ್, ಎಸ್ಪಿ ಪೃಥ್ವಿಕ್ ಶಂಕರ್, ಡಿವೈಎಸ್ಪಿ ಇನಾಂದಾರ, ಸರ್ಕಲ್ ಇನ್‌ಸ್ಪೆಕ್ಟರ್ ಉಮೇಶ್ ಸೇರಿದಂತೆ ಅನೇಕರು ಭೇಟಿ ನೀಡಿದರು.

9 ಮಂದಿ ದುರ್ಮರಣ

ಬಸ್ ಹಾಗೂ ಕಾರು ಅಪಘಾತದಲ್ಲಿ ಕಾರಿನಲ್ಲಿದ್ದ ರಾಯಚೂರು ಜಿಲ್ಲೆ ಸಿರವಾರ ಪಟ್ಟಣ ಪಂಚಾಯಿತಿ ಸದಸ್ಯ ಕೃಷ್ಣನಾಯಕ್ (52), ಅನಂತಕಲಾ (45), ಶರಣಪ್ಪ (36), ನಿಸರ್ಗ (30), ಸಿದ್ಧಾರ್ಥ (3), ಶಶಿಕಲಾ (30), ಚಂದನ್ (8) ಅದ್ವಿಕಾ, ಶ್ರೀನಿಧಿ ಮೃತ ದುರ್ದೈವಿಗಳಾಗಿದ್ದಾರೆ.

ಸಜೀವ ದಹನಗೊಂಡು ಕಾಣಿಸುತ್ತಿರುವ ಕಾರಿನಲ್ಲಿದ್ದವರ ಅಸ್ಥಿಪಂಜರ.

ಕಾರಿನಲ್ಲಿ ಒಂದೇ ಕುಟುಂಬದ 10 ಜನ ಪ್ರಯಾಣಿಸುತ್ತಿದ್ದರು. ಆ ಪೈಕಿ ಮಗುಸೇರಿ9 ಜನರು ಮೃತಪಟ್ಟಿದ್ದಾರೆ. ಚಿಕಿತ್ಸೆ ಫಲಿಸದೆ ಒಂದು ಮಗು ಮೃತಪಟ್ಟಿದ್ದು, ಇನ್ನೊಂದು ಮಗುವಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಸುರಪುರ ಗೋಪಾಲಸ್ವಾಮಿ ದೇವರ ದರ್ಶನ ಮುಗಿಸಿಕೊಂಡು ವಾಪಸ್ ಹೋಗುವಾಗ ದುರ್ಘಟನೆ ನಡೆದಿದ್ದು, ಕಾರು ಓವರ್ಟೇಕ್ ಮಾಡಲು ಹೋದಾಗ ಅಪಘಾತ ಸಂಭವಿಸಿದೆ.
-ಪೃಥ್ವಿಕ್ ಶಂಕರ್, ಯಾದಗಿರಿ ಎಸ್ಪಿ

ಸಹ ಶಿಕ್ಷಕರ ಬಡ್ತಿ ಪರೀಕ್ಷೆ ಮುಂದಕ್ಕೆ

ಬೆಂಗಳೂರು: ಸರಕಾರಿ ಪ್ರೌಢಶಾಲಾ ಸಹಶಿಕ್ಷಕರಿಂದ ಸರಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ವೃಂದದ ಹುದ್ದೆಗೆ ನಡೆಯಬೇಕಿದ್ದ ಬಡ್ತಿ ಅರ್ಹತಾ ಪರೀಕ್ಷೆ ಮುಂದೂಡಿ ಆದೇಶ ಹೊರಡಿಸಿದೆ. ಏ.21ರಿಂದ 24ರ ವರೆಗೆ ಅರ್ಹತಾ ಪರೀಕ್ಷೆ ನಿಗದಿ ಆಗಿತ್ತು. ಜನಗಣತಿ ಕಾರ್ಯಕ್ಕೆ ಬಹುತೇಕ ಶಿಕ್ಷಕರನ್ನು ನಿಯೋಜಿಸಲಾಗಿದ್ದು, ಕರ್ತವ್ಯದಲ್ಲಿ ತೊಡಗಿರುತ್ತಾರೆ. ಶಿಕ್ಷಕರ ಹಿತದೃಷ್ಟಿಯಿಂದ ಪರೀಕ್ಷೆ ಮುಂದೂಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ತಿಳಿಸಿದೆ.

ಧರ್ಮಸ್ಥಳ: ಮಂಜುನಾಥಸ್ವಾಮಿ ದರ್ಶನ ಸಮಯ ಬದಲಾವಣೆ

ಧರ್ಮಸ್ಥಳ: ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ವಿಷು ಜಾತ್ರೆ ಹಾಗೂ ವಿಶೇಷ ಪೂಜಾ ಕಾರ್ಯಕ್ರಮಗಳ ಹಿನ್ನೆಲೆ ಏ.17ರಿಂದ 22ರ ವರೆಗೆ ಮಂಜುನಾಥಸ್ವಾಮಿ ದೇವರ ದರ್ಶನ ದೇವರ ಸಮಯ ಬದಲಾವಣೆ ಮಾಡಲಾಗಿದ್ದು, ಭಕ್ತರು ಸಹಕರಿಸಬೇಕು ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿದೆ. ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳು ನಡೆಯಲಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಬೆಳಗ್ಗೆ 8:30ರ ನಂತರವಷ್ಟೇ ಗರ್ಭಗುಡಿಯ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಪೂಜಾ ಕಾರ್ಯಕ್ರಮಗಳು ಸುಗಮವಾಗಿ ನಡೆಯಲು ಭಕ್ತಾದಿಗಳು ನಿಗದಿತ ಸಮಯದಂತೆ ಆಗಮಿಸಬೇಕು ಎಂದು ಪ್ರಕಟಣೆಯಲ್ಲಿ ಕೋರಲಾಗಿದೆ. ರಾತ್ರಿಯ ದರ್ಶನ ಸಮಯದಲ್ಲೂ ಮಾರ್ಪಾಡು ಮಾಡಲಾಗಿದ್ದು, ರಾತ್ರಿ 8 ಗಂಟೆ ನಂತರ ಭಕ್ತರಿಗೆ ಗರ್ಭಗುಡಿಯ ಒಳಗೆ ಪ್ರವೇಶವಿರುವುದಿಲ್ಲ. ಬದಲಾಗಿ ದೇವಸ್ಥಾನದ ಹೊರಾಂಗಣದಿಂದಲೇ ದರ್ಶನ ಪಡೆಯಲು ವ್ಯವಸ್ಥೆ ಮಾಡಲಾಗಿದೆ. ಏ.22ರವರೆಗೆ ಈ ನಿಯಮ ಜಾರಿಯಲ್ಲಿರಲಿದೆ.

ಮೈಸೂರು-ಹೈದರಾಬಾದ್‌ಗೆ ಮತ್ತೊಂದು ವಿಮಾನ

ಮೈಸೂರು: ಸಾಂಸ್ಕೃತಿಕ ನಗರಿಯ ಜನತೆಯ ಅನುಕೂಲಕ್ಕಾಗಿ ಮೈಸೂರಿನಿಂದ ಮುತ್ತಿನ ನಗರಿ ಹೈದರಾಬಾದ್‌ಗೆ ಮತ್ತೊಂದು ವಿಮಾನ ಸಂಚಾರ ಅತಿ ಶೀಘ್ರದಲ್ಲೇ ಆರಂಭವಾಗಲಿದೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಈ ವಿಷಯವನ್ನು ಹಂಚಿಕೊಂಡಿದ್ದಾರೆ.

ಮೈಸೂರಿನಿಂದ ಹೈದರಾಬಾದ್‌ಗೆ ಮೇ 1ರಿಂದ ಈ ವಿಮಾನ ಸೇವೆ ಆರಂಭವಾಗಲಿದೆ. ಮಧ್ಯಾಹ್ನ 2.20ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ಹೊರಡಲಿರುವ ವಿಮಾನ ಮಧ್ಯಾಹ್ನ 4 ಗಂಟೆಗೆ ಹೈದರಾಬಾದ್ ತಲುಪಲಿದೆ. ಈಗಾಗಲೇ ಎರಡು ವಿಮಾನಗಳು ಚೆನ್ನೈ ಹಾಗೂ ಹೈದರಾಬಾದ್‌ಗೆ ತೆರಳುತ್ತಿದ್ದು, ಈ ವಿಮಾನ ಸೇವೆಯಿಂದ ನಾಗರಿಕರಿಗೆ ಮತ್ತಷ್ಟು ಅನುಕೂಲವಾಗಲಿದೆ. ಈ ಕುರಿತು ಪತ್ರಿಕಾ ಹೇಳಿಕೆ ಮೂಲಕ ಮಾಹಿತಿ ಹಂಚಿಕೊಂಡಿರುವ ಸಂಸದ ಯದುವೀರ್ ಒಡೆಯರ್, ಮುಂದಿನ ದಿನಗಳಲ್ಲಿ ಮೈಸೂರಿನಿಂದ ಹೆಚ್ಚುವರಿ ವಿಮಾನ ಸಂಚಾರ ಆರಂಭವಾಗಲಿದೆ ಎಂದು ತಿಳಿಸಿದ್ದಾರೆ.

ಏರ್ ಟ್ರಾಫಿಕ್ ಹೆಚ್ಚಳದ ಗುರಿ: ಮೈಸೂರಿನಿಂದ ವಾಯು ಸಂಚಾರ ಹೆಚ್ಚಳಕ್ಕೆ ಈಗಾಗಲೇ ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಹಲವಾರು ಬಾರಿ ಕೇಂದ್ರ ಸಚಿವರೊಂದಿಗೆ ಮಾತುಕತೆ ನಡೆಸಿದ್ದೇನೆ. ವಿಮಾನ ನಿಲ್ದಾಣ ವಿಸ್ತರಣೆಗೆ ತೊಡಕಾಗಿರುವ ಭೂ ಸ್ವಾಧೀನ ಪ್ರಕ್ರಿಯೆ ಕೂಡ ಬಹುತೇಕ ಪೂರ್ಣಗೊಂಡಿದೆ. ಮುಂದಿನ ಕೆಲವೇ ದಿನಗಳಲ್ಲಿ ಇದು ಹಸ್ತಾಂತರಗೊಂಡ ನಂತರ ಕೇಂದ್ರದ ಮೇಲೆ ಇನ್ನಷ್ಟು ಒತ್ತಡ ಹೇರಿ ವಿಮಾನ ನಿಲ್ದಾಣ ವಿಸ್ತರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಂಸದರು ವಿವರಿಸಿದ್ದಾರೆ.

ವಿಮಾನ ನಿಲ್ದಾಣ ವಿಸ್ತರಣೆಗೊಂಡ ನಂತರ ದೇಶದ ನಾನಾ ಪ್ರಮುಖ ನಗರಗಳಿಗೆ ಮೈಸೂರಿನಿಂದ ನೇರ ವಿಮಾನ ಸಂಚಾರ ಸೇವೆ ಆರಂಭಗೊಳ್ಳಲಿದೆ. ಇದರೊಂದಿಗೆ ಮೈಸೂರಿನ ಅಭಿವೃದ್ಧಿಯೂ ಸಮಾನಾಂತರವಾಗಿ ಆಗಲಿದೆ.
-ಯದುವೀರ್ ಒಡೆಯರ್, ಸಂಸದ

ದಹನಕಾರಿ ತ್ಯಾಜ್ಯದಿಂದ ಹಸಿರು ಕಲ್ಲಿದ್ದಲು | ಸ್ವಚ್ಛ-ಸುಂದರ ಹುಬ್ಬಳ್ಳಿ-ಧಾರವಾಡವಾಗಿಸಲು ತ್ಯಾಜ್ಯ ವಿಂಗಡಣೆಯೊಂದೇ ಮಾರ್ಗ

ಹುಬ್ಬಳ್ಳಿ-ಧಾರವಾಡದ ತ್ಯಾಜ್ಯವಿನ್ನು ಹಸಿರು ಕಲ್ಲಿದ್ದಲು

ಪರಿಸರ ಕಾಳಜಿ
ಟಿ.ಎನ್.ಶ್ರೀಧರ
vveditoped@gmail.com

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಸದ್ಯ ಅಂದಾಜು 14 ಲಕ್ಷ ಜನ ಸಂಖ್ಯೆ ಹೊಂದಿದ್ದು, ರಾಜ್ಯದ ಎರಡನೇ ಅತೀ ದೊಡ್ಡ ಮಹಾನಗರ ಪಾಲಿಕೆಯಾಗಿದೆ. ಮಹಾನಗರಗಳಲ್ಲಿ ತಲಾ ಘನತ್ಯಾಜ್ಯ ಉತ್ಪಾದನೆ 400 ರಿಂದ 600 ಗ್ರಾಂ ಎಂದು ಅಂದಾಜಿಸಲಾಗಿದ್ದು, ಪಾಲಿಕೆಯ ಅಂದಾಜು ಜನಸಂಖ್ಯೆಗೆ ತಾಳೆ ಮಾಡಿದರೆ, 550 ಮೆಟ್ರಿಕ್ ಟನ್ ಘನತ್ಯಾಜ್ಯ ನಿತ್ಯ ಉತ್ಪತ್ತಿಯಾಗುತ್ತಿದೆ. ಈ ತ್ಯಾಜ್ಯದಲ್ಲಿ ಸುಮಾರು ಶೇ.65ರಿಂದ 70ರಷ್ಟು ಒಣತ್ಯಾಜ್ಯವಿದ್ದು, ಉಳಿದಂತೆ ಶೇ.25ರಿಂದ 30ರಷ್ಟು ಹಸಿ ತ್ಯಾಜ್ಯದ ಪಾಲಿದೆ.

ಪ್ರಸ್ತುತ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಹಸಿ ತ್ಯಾಜ್ಯವನ್ನು ಪ್ರತ್ಯೇಕಿಸಿ ಹುಬ್ಬಳ್ಳಿ ಮತ್ತು ಧಾರವಾಡ ವಿಭಾಗದ ತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ವಿಂಡ್ರೋ ಕಂಪೋಸ್ಟಿಂಗ್ ಪ್ರಕ್ರಿಯೆಗಳ ಮೂಲಕ ಗೊಬ್ಬರ ತಯಾರಿಕೆ ಮಾಡಲಾಗುತ್ತಿದೆ.

ಒಣ ತ್ಯಾಜ್ಯ ಉತ್ಪಾದನೆಯಲ್ಲಿ ಸಿಂಹ ಪಾಲು ಹೊಂದಿರುವ ಪಾಲಿಕೆಗೆ ಈವರೆಗೆ ಸೂಕ್ತ ಪರಿಹಾರದ ತಂತ್ರಜ್ಞಾನವಿಲ್ಲದೇ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಸುರಿಯುತ್ತಿದ್ದ ಒಣ ತ್ಯಾಜ್ಯಕ್ಕೆ ರಾಸಾಯನಿಕ ಪ್ರಕ್ರಿಯೆಗಳಿಂದಾಗಿ ಆಕಸ್ಮಿಕ ಬೆಂಕಿ ತಗಲುವುದರಿಂದ ಸುತ್ತಮುತ್ತಲಿನ ಪ್ರದೇಶಗಳು ಹೊಗೆಯಿಂದ ತುಂಬಿ ವಾಯು ಮಾಲಿನ್ಯಕ್ಕೆ ಕಾರಣವಾಗಿ, ಈ ಸಂಬಂಧ ಜನರಿಂದ ಪಾಲಿಕೆಯು ತೀವ್ರ ಟೀಕೆಗೆ ಒಳಗಾಗುತ್ತಿದೆ. ಆದರೆ ಇನ್ನು ಮುಂದೆ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಒಣ ತ್ಯಾಜ್ಯದ ವೈಜ್ಞಾನಿಕ ವಿಲೇವಾರಿಗೆ ಸೂಕ್ತ ಸಂಸ್ಕರಣಾ ವಿಧಾನವನ್ನು ಕಂಡುಕೊಂಡಿದೆ. ಅದೇ ದಹನಕಾರಿ ತ್ಯಾಜ್ಯದಿಂದ ಹಸಿರು ಕಲ್ಲಿದ್ದಲು.

ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮ ನಿಯಮಿತದ ಅಂಗ ಸಂಸ್ಥೆಯಾದ ವಿದ್ಯುತ್ ವ್ಯಾಪಾರ ನಿಗಮದೊಂದಿಗೆ ದಹನಕಾರಿ ತ್ಯಾಜ್ಯದಿಂದ ಇಂಧನ ಉತ್ಪಾಧಿಸುವ ಸ್ಥಾವರ ಸ್ಥಾಪಿಸಲು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ 2019-20ರಲ್ಲಿ ಒಪ್ಪಂದ ಮಾಡಿಕೊಂಡಿದ್ದು, ಈಗಾಗಲೇ ಎನ್‌ವಿವಿಎನ್ ಪಾಲಿಕೆಯ ಹಳೇ ಗಬ್ಬೂರಿನಲ್ಲಿನ 10 ಎಕರೆ ಪ್ರದೇಶದಲ್ಲಿ 200 ಟಿಪಿಡಿ ಸಾಮರ್ಥ್ಯದ ಹಸಿರು ಕಲ್ಲಿದ್ದಲು (Torrified Charcoal) ಉತ್ಪಾದನಾ ಘಟಕ ಸ್ಥಾಪಿಸಿ ಪ್ರಾಯೋಗಿಕವಾಗಿ ಪ್ರಾರಂಭಿಸಿದೆ.

ಹಸಿರು ಕಲ್ಲಿದ್ದಲು ಉತ್ಪಾದನೆಯ ಕ್ರಮ: ಪಾಲಿಕೆಯಿಂದ ದಿನಂಪ್ರತಿ ಸಾಗಾಟ ಮಾಡುವ 150ರಿಂದ 200 ಟನ್ ದಹನಕಾರಿ ತ್ಯಾಜ್ಯದಿಂದ ಸುಮಾರು 65



ರಿಂದ 70 ಟನ್ ಹಸಿರು ಕಲ್ಲಿದ್ದಲಾಗಿ ಪರಿವರ್ತಿಸುವುದು ಮುಖ್ಯ ಉದ್ದೇಶ. ಆಮ್ಲಜನಕ ರಹಿತ ವಾತಾವರಣದಲ್ಲಿ 250 ರಿಂದ 350 ಉಷ್ಣತೆಯಲ್ಲಿ ದಹನಕಾರಿ ತ್ಯಾಜ್ಯವನ್ನು ಸೂಕ್ತ ತಂತ್ರಜ್ಞಾನದೊಂದಿಗೆ ಬಿಸಿ ಮಾಡುವ ಮೂಲಕ ಹಸಿರು ಕಲ್ಲಿದ್ದಲು ಉತ್ಪತ್ತಿಯಾಗುತ್ತಿದೆ. ಉತ್ಪಾದನೆಯಾಗುವ ಹಸಿರು ಕಲ್ಲಿದ್ದಲು 17 ರಿಂದ 25 ಎಂಜೆ/ಕೆಜಿ ಕ್ಯಾಲೋರಿಫೇಕ್ ಮೌಲ್ಯ ಹೊಂದಿದ್ದು, ಇದು ಸಿಮೆಂಟ್ ಕಾರ್ಖಾನೆ, ಉಷ್ಣ ವಿದ್ಯುತ್ ಸ್ಥಾವರ ಹಾಗೂ ಇತರೆ ಕೈಗಾರಿಕೆಗಳ ಬಳಕೆಗೆ ಸೂಕ್ತವಾಗಿದೆ.

ದಹನಕಾರಿ ತ್ಯಾಜ್ಯದಿಂದ ಉತ್ಪಾದಿಸುವ ಹಸಿರು ಕಲ್ಲಿದ್ದಲು ಸುಲಭವಾಗಿ ಪುಡಿಯಾಗುವುದರಿಂದ ಮತ್ತು ಕ್ಯಾಲೋರಿಫೇಕ್ ಮೌಲ್ಯವು ಬಹುತೇಕ ಕಲ್ಲಿದ್ದಲಿನಷ್ಟೇ ಇರುವುದರಿಂದ ಮುಂದಿನ ದಿನಗಳಲ್ಲಿ ಕೈಗಾರಿಕೆಗಳಲ್ಲಿ ಉಪಯೋಗಿಸುವ ಕಲ್ಲಿದ್ದಲಿಗೆ ಪರ್ಯಾಯವಾಗಿ ಟೋರಿಫೈಯಡ್ ಚಾರಕೋಲ್‌ನ್ನು ಬಳಸಬಹುದಾಗಿದೆ.

ಒಣ ತ್ಯಾಜ್ಯವನ್ನು ಟೋರಿಫೈಯಡ್ ಚಾರಕೋಲ್‌ಲಾಗಿ ಮಾಡುವುದರಿಂದಾಗಿ ಲ್ಯಾಂಡ್ ಪೀಲ್‌ಗೆ ಹೋಗುವ ತ್ಯಾಜ್ಯ ಪ್ರಮಾಣವನ್ನು ತಡೆಯಬಹುದಾಗಿದೆ ಹಾಗೂ ತ್ಯಾಜ್ಯಕ್ಕೆ ಆಕಸ್ಮಿಕ ಬೆಂಕಿ ತಗಲುವುದರಿಂದ ನಗರ ಪ್ರದೇಶಗಳಲ್ಲಿ ಉಂಟಾಗುವ ವಾಯು ಮಾಲಿನ್ಯವನ್ನು ಹಾಗೂ ಹಸಿರು ಮನೆ ಪರಿಣಾಮಗಳನ್ನು ಕಡಿಮೆ ಮಾಡಲು ಟೋರಿಫೈಯಡ್ ಚಾರಕೋಲ್ ಉತ್ಪಾದನೆ ವಿಶ್ವಾಸರ್ಹ ಮಾರ್ಗವಾಗಿದೆ.

ಶಾಸನಾತ್ಮಕ ಉತ್ತೇಜನ: ದಹನಕಾರಿ ತ್ಯಾಜ್ಯದಿಂದ ನಗರ ವ್ಯಾಪ್ತಿಯಲ್ಲಿ ಟೋರಿಫೈಯಡ್ ಚಾರಕೋಲ್‌ನಂತಹ ಹಸಿರು ಕಲ್ಲಿದ್ದಲ್ಲನ್ನು ಉತ್ಪಾದಿಸಲು ಸರಕಾರವು ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದು, ಉಷ್ಣ ವಿದ್ಯುತ ಸ್ಥಾವರಗಳು, ಸಿಮೆಂಟ್ ಕಾರ್ಖಾನೆಗಳು ಹಾಗೂ ಕಲ್ಲಿದ್ದಲನ್ನು ಬಳಸುವ ಇತರೆ ಕಾರ್ಖಾನೆಗಳು ಕಲ್ಲಿದ್ದಲಿನೊಂದಿಗೆ ಕೋಫೈರಿಂಗ್ ಇಂಧನವಾಗಿ ಹಸಿರು ಕಲ್ಲಿದ್ದಲನ್ನು ಕಡ್ಡಾಯಗೊಳಿಸುವಂತೆ ಕೇಂದ್ರ ಸರಕಾರವು ಶಾಸನ ರಚಿಸಿದೆ.

ಎಸೆಯದಿರಿ ಕಸ-ಹರಡದಿರಿ ವಿಷ: ಸ್ವಚ್ಛತೆಗೆ ಪಣ, ಸುಂದರ ನಗರದ ನಿರ್ಮಾಣ ಸ್ವಚ್ಛತೆಯೇ ಸ್ವಾಸ್ಥ್ಯ ಜೀವನ, ಮಾಲಿನ್ಯವೇ ಮರಣ.

(ಲೇಖಕರು: ಹವ್ಯಾಸಿ ಬರಹಗಾರರು, ಪರಿಸರ ಅಭಿಯಂತರರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ)

ದಕ್ಷಿಣ ಭಾರತದಲ್ಲಿಯೇ ಮೊದಲು

ಸದ್ಯ ಭಾರತದಲ್ಲಿ ವಾರಣಾಸಿ ನಗರವು 800 ಟಿಪಿಡಿ ಸಾಮರ್ಥ್ಯದ ತ್ಯಾಜ್ಯದಿಂದ ಟೋರಿಫೈಯಡ್ ಚಾರಕೋಲ್‌ನ್ನು ಉತ್ಪಾದಿಸುವ ಘಟಕವನ್ನು ಹೊಂದಿದ್ದು, ದಕ್ಷಿಣ ಭಾರತದಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಒಣ ತ್ಯಾಜ್ಯದಿಂದ ಹಸಿರು ಕಲ್ಲಿದ್ದಲು ಸ್ಥಾಪಿಸುವ ಘಟಕ ಹೊಂದಿರುವ ಏಕೈಕ ಮಹಾನಗರ ಪಾಲಿಕೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರತಿದಿನ ಉತ್ಪತ್ತಿಯಾ ಗುವ ಮನೆ-ಮನೆ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯದೇ ಹಸಿ ಮತ್ತು ಒಣ ತ್ಯಾಜ್ಯವನ್ನಾಗಿ ವಿಂಗಡಿಸಿ ಪಾಲಿಕೆಯ ತ್ಯಾಜ್ಯ ವಿಲೇವಾರಿ ವಾಹನ ಗಳಿಗೆ ಕಡ್ಡಾಯವಾಗಿ ನೀಡಬೇಕು ಹಾಗೂ ಪಾಲಿಕೆಯ ಸಿಬ್ಬಂದಿಗಳು ಜನರು ನೀಡುವ ತ್ಯಾಜ್ಯ ವನ್ನು ಆಯಾ ದಿನದಂದೇ ಹಸಿ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಮತ್ತು ಟೋರಿಫೈಯಡ್ ಚಾರಕೋಲ್ ಘಟಕಕ್ಕೆ ಸಾಗಾಣಿಕೆ ಮಾಡಬೇಕು. ವಿಂಗಡಣೆ, ಸಂಗ್ರಹಣೆ ಮತ್ತು ಸಾಗಾಣಿಕೆಯ ಹಂತದಲ್ಲಿ ಪಾಲಿ ಕೆಯ ವ್ಯಾಪ್ತಿಯ ನಾಗರೀಕರು, ಸಂಘ-ಸಂಸ್ಥೆಗಳು, ಜನಪತ್ರಿನಿಧಿಗಳು, ಅಧಿಕಾರಿ ವರ್ಗದವರು ಜವಾಬ್ದಾರಿಯುತ ಸಹಭಾಗಿತ್ವದಲ್ಲಿ ಕಾರ್ಯಾನಿರ್ವ ಹಿಸದ್ದಲ್ಲಿ ಮುಂದಿನ ದಿನಗಳಲ್ಲಿ ತ್ಯಾಜ್ಯ ಮುಕ್ತ ಸ್ವಚ್ಛ-ಸುಂದರ ಹುಬ್ಬಳ್ಳಿ-ಧಾರವಾಡ ಮಹಾ ನಗರ ಪಾಲಿಕೆ ಆಗುವುದರಲ್ಲಿ ಸಂಶಯವಾಗುವುದಿಲ್ಲ.

ಸಂಪಾದಕೀಯ

ಕುಲಕರ್ಣಿಗೆ ಜೈಲು: ಎಲ್ಲರಿಗೂ ಪಾಠ

ಬಿಜೆಪಿ ನಾಯಕ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿಗೆ ಜೀವಾವಧಿ ಜೈಲು ಶಿಕ್ಷೆ ವಿಧಿಸಲಾಗಿದೆ. 2016ರಲ್ಲಿ ಧಾರವಾಡ ಜಿಲ್ಲಾ ಪಂಚಾಯ್ತಿ ಸದಸ್ಯರಾಗಿದ್ದ ಯೋಗೇಶ್ ಗೌಡ (ಬಿಜೆಪಿ ನಾಯಕ) ಅವರ ಕೊಲೆಯಾಗಿತ್ತು. ಇದರ ವಿರುದ್ಧ ದೀರ್ಘವಾಗಿ ವಿಚಾರಣೆ ನಡೆದು ಶುಕ್ರವಾರ ಶಿಕ್ಷೆ ಪ್ರಮಾಣ ಪ್ರಕಟವಾಗಿದೆ. ಸಿಬಿಐ ಸತತವಾಗಿ ವಿಚಾರಣೆ ನಡೆಸಿ ಕೊಲೆ ಪ್ರಕರಣದಲ್ಲಿ, ಆಡಳಿತ ಪಕ್ಷದ ನಾಯಕನಿಗೆ ಶಿಕ್ಷೆ ಕೊಡಿಸಲು ಯಶಸ್ವಿಯಾಗಿದೆ. ಇದು ಜನಪ್ರತಿನಿಧಿ ನ್ಯಾಯಾಲಯದ ತೀರ್ಪು. ಇದನ್ನು ಪ್ರಶ್ನಿಸಿ ಮೇಲಿನ ನ್ಯಾಯಾಲಯಕ್ಕೆ ಕುಲಕರ್ಣಿ ಹೋಗುವುದು ಖಚಿತ. ಅಲ್ಲಿ ಏನಾಗುತ್ತದೆ ಎನ್ನುವುದನ್ನು ಕಾದು ನೋಡಬೇಕು. ಈ ಹಿನ್ನೆಲೆಯನ್ನೆಲ್ಲ ಬದಿಗಿಟ್ಟು ಪ್ರಕರಣವನ್ನೇ ನೋಡುವುದಾದರೆ, ನ್ಯಾಯದ ಮುಷ್ಟಿಯಿಂದ ಎಂತಹ ಪ್ರಬಲರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಇಲ್ಲಿ ಸಾಬೀತಾಗಿದೆ. ಇದು ಎಲ್ಲರಿಗೂ ಒಂದು ಪಾಠ. ಹಿಂದೊಂದು ಕಾಲವಿತ್ತು. ಕೊಲೆ, ಸುಲಿಗೆಗಳನ್ನು ಮಾಡಿ ಸಾಕ್ಷಿಗಳ ಕೊರತೆಯಿಂದ ಸಲೀಸಾಗಿ ಪಾರಾಗುತ್ತಿದ್ದರು. ಇದು ಡಿಜಿಟಲ್ ಯುಗ. ಇಲ್ಲಿ ಸಾಕ್ಷಿಗಳನ್ನು ಕೊಡುವುದು ಸುಲಭ. ನಾವು ಎಲ್ಲ ಕಡೆಯೂ ಸಿಸಿಟಿವಿಯ ಕಣ್ಗಾವಲಿನಲ್ಲಿರುತ್ತೇವೆ. ತಂತ್ರಜ್ಞಾನ ಎಷ್ಟು ಬೆಳೆದಿದೆ ಎಂದರೆ ಕೊಲೆಯಾದ ಸ್ಥಳದಲ್ಲಿ ಆರೋಪಿ ಸಣ್ಣದೇ ಕುರುಹು ಉಳಿಸಿದರೂ ಬಚಾವಾಗಲು ಸಾಧ್ಯವಿಲ್ಲ. ಪೊಲೀಸರು ಒಂದು ಪ್ರಕರಣವನ್ನು ಭೇದಿಸಬೇಕೆಂದು ತೀರ್ಮಾನಿಸಿದರೆ, ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವ ಮಟ್ಟಿಗೆ ತಂತ್ರಜ್ಞಾನದ ನೆರವು ಸಿಗುತ್ತದೆ. ಈ ಕಾಲಘಟ್ಟದಲ್ಲಿ ಹಿಂದಿನ ಕಾಲದಲ್ಲಿ ಮಾಡಿದಂತೆ ಬೇಕಾಬಿಟ್ಟಿ ಅನ್ಯಾಯವೆಸಗಿ ಪಾರಾಗಲು ಸಾಧ್ಯವಿಲ್ಲ. ಒಂದು ಕಾಲದಲ್ಲಿ ಜನ ಆತ್ಮಸಾಕ್ಷಿಯ ಮೇಲೆ ನಂಬಿಕೆಯಿಟ್ಟಿದ್ದರು. ನ್ಯಾಯಾಲಯದಲ್ಲಿ ಒಬ್ಬ ವ್ಯಕ್ತಿ ಮೌಖಿಕವಾಗಿ ಹೇಳುವ ಸಾಕ್ಷಿಯೇ ಪ್ರಧಾನವಾಗಿರುತ್ತಿತ್ತು. ಈಗ ಅವರ ಮಾತುಗಳನ್ನು ಎಲ್ಲ ರೀತಿಯಿಂದಲೂ ಪರಿಶೀಲನೆ ಮಾಡಲಾಗುತ್ತದೆ. ಸುಳ್ಳುಗಳನ್ನು ಹೇಳಿ ನಂಬಿಸಲು ಸಾಧ್ಯವೇ ಇಲ್ಲ. ಒಬ್ಬ ವ್ಯಕ್ತಿ ತಾನೇ ಕೊಲೆ ಮಾಡಿದ್ದು ಎಂದರೂ ಅದನ್ನು ಆತ ಸಾಕ್ಷಿ ಸಮೇತ ಸಾಬೀತು ಮಾಡಬೇಕಾಗುತ್ತದೆ! ಯೋಗೇಶ್ ಕೊಲೆ ಪ್ರಕರಣದಲ್ಲಿ ಬರೀ ಜನನಾಯಕರು ಮಾತ್ರವಲ್ಲ, ಜನರೂ ಕಲಿಯಬೇಕಾಗಿದ್ದು ಬೇಕಾದಷ್ಟಿದೆ.

ಸೊಂಪಾದಕೀಯ

ರೋಲ್ಸ್‌ರಾಯ್ಸ್‌ನಲ್ಲಿ ಟೀ ಕುಡಿಬೇಕಾ?

ಉತ್ತರ ಭಾರತದ ನಗರವೊಂದರಲ್ಲಿ ಒಬ್ಬ ಟೀ ಮಾರುವ ಹುಡುಗ ಒಂದು ಹೊಸ ಐಡಿಯಾ ಮಾಡಿದ್ದು ಅದು ನೆಟ್ಟಿಗರ ಮನಗೆದ್ದಿದೆ. ಆತ, ಒಂದು ರೋಲ್ಸ್ ರಾಯ್ಸ್ ಕಾರನ್ನು ಒಂದು ದಿನದ ಮಟ್ಟಿಗೆ ಬಾಡಿಗೆ ಪಡೆದು, 'ಬನ್ನಿ ರೋಲ್ಸ್ ರಾಯ್ಸ್‌ನಲ್ಲಿ ಕುಳಿತು ರಾಯಲ್ ಚಹಾ ಸೇವಿಸಿ' ಎಂಬ ಪೋಸ್ಟರ್ ಡಿಸೈನ್ ಮಾಡಿಸಿ, ಸಂಜೆಗೆ ಒಂದು ಜನನಿಬಿಡ ರಸ್ತೆಯ ಬದಿಯಲ್ಲಿ ಕಾರಿನೊಂದಿಗೆ ಬಂತು ಅಲ್ಲಿ ಈ ಪೋಸ್ಟರ್ ಹಾಕಿದ್ದಾನೆ. ಕಾರಿನ ಪಕ್ಕದ ಇಡಲಾದ ಟೇಬಲ್ಲಿನ ಮೇಲೆ ಚಹಾ ತುಂಬಿದ ಕೆಟಲ್, ಹೈಕ್ವಾಲಿಟಿ ಬಿಸ್ಕೇಟ್ಸ್, ಸ್ನ್ಯಾಕ್ಸ್ ರೆಡಿ ಇರುತ್ತವೆ. 'ಏನಿದು..?' ಅಂತ ಕುತೂಹಲದಿಂದ ಬರುವವರಿಗೆ ತನ್ನ ಕಾನ್ಸೆಪ್ಟ್ ವಿವರಿಸಿ, ಅವರ ಕೈಗೆ ಟೀ-ಬಿಸ್ಕೇಟ್ಸ್- ಸ್ನ್ಯಾಕ್ಸ್ ಇರುವ ಪುಟಾಣಿ ಪ್ಲೇಟ್ ಕೊಟ್ಟು ಅವರನ್ನು ಕಾರಲ್ಲಿ ಕೂರಿಸಿ ಒಂದು ರೌಂಡ್ ಕರೆದುಕೊಂಡು ಹೋಗಿ ಪುನಃ ಅದೇ ಜಾಗಕ್ಕೆ ಕರೆತರುತ್ತಾನೆ. ಈ ಸೇವೆಗೆ ಶುಲ್ಕ ಪಡೆಯುತ್ತಾನೆ. ಇದಕ್ಕೆ ಪ್ರತಿಕ್ರಿಯಿಸಿರುವ ವ್ಯಕ್ತಿಯೊಬ್ಬರು, 'ನೀನು ಇದೇ ವ್ಯಾಪಾರವನ್ನು ಬೆಂಗಳೂರಲ್ಲಿ ಮಾಡಿದರೆ ಇನ್ನೂ ಹೆಚ್ಚು ದುಡೀಬಹುದು' ಅಂತ ಸಲಹೆ ನೀಡಿದ್ದಾರೆ. ಅದು ನಿಜ. ಈಗಿನ ವ್ಯಾಪಾರದ ತಂತ್ರಗಾರಿಕೆ ಹೇಗಿದೆಯೆಂದರೆ, ನೀವು ಏನು ಮಾರುತ್ತಿದ್ದೀರಿ ಅನ್ನೋದು ಮುಖ್ಯವಲ್ಲ. ಹೇಗೆ ಪ್ರೆಸೆಂಟ್ ಮಾಡ್ತೀರಿ ಅನ್ನೋದು ಮುಖ್ಯವಾಗುತ್ತೆ. ಬೆಂಗಳೂರಿನ ರಾಮೇಶ್ವರಂ ಕೆಫೆ ಎಂಬ ಹೋಟೆಲನ್ನು ದೇವಸ್ಥಾನದಂತೆ ಪರಿವರ್ತಿಸಿ 60 ರೂ.ಗಳಿಗೆ ಕಾಫಿ ಮಾರಲಾಗುತ್ತೆ. ಅಲ್ಲಿನ ದುಬಾರಿ ಕಾಫಿ,ಟೀ, ತಿನಿಸು ಸವಿಯಲು ಜನರು ಹತ್ತಾರು ಮೀಟರ್ ಕ್ಯೂನಲ್ಲಿ ನಿಂತು ಹೋಗಿ ತಿನ್ನುತ್ತಾರೆ. ಒಟ್ಟಿನಲ್ಲಿ ಬ್ರಾಂಡಿಂಗ್, ಪ್ರೆಸೆಂಟೇಷನ್ ಮೂಲಕ ಜನರಿಗೆ ರುಚಿ ಹತ್ತಿಸಿದರೆ ಸಾಕು. ಹೀಗಿದೆ ಇಂದಿನ ಜಗತ್ತಿನ ವ್ಯಾಪಾರದ ಹೊಸ ಟೆಕ್ನಿಕ್!

ಸಂಪಾದಕರ ಸದ್ಯಶೋಧನೆ

ಆರೋಗ್ಯ ಅಪಹರಿಸಿದ ಇಂಟರ್‌ನೆಟ್

ಖ್ಯಾತ ತನಿಖಾ ಪತ್ರಕರ್ತೆ ಮತ್ತು ವೈದ್ಯಕೀಯ ವರದಿಗಾರ್ತಿ ಡೆಬೋರಾ ಕೊಹೆನ್ ಬರೆದ 'Bad Influence: How the Internet Hijacked Our Health' ಕೃತಿಯನ್ನು ಓದುತ್ತಿದ್ದೆ. ಇದು ಇಂದಿನ ಡಿಜಿಟಲ್ ಯುಗದಲ್ಲಿ ಆರೋಗ್ಯ ಮತ್ತು ತಂತ್ರಜ್ಞಾನದ ನಡುವಿನ ಅಪಾಯಕಾರಿ ಸಂಬಂಧವನ್ನು ಬಿಚ್ಚಿಡುತ್ತದೆ. ನಮ್ಮ ಕೈಯಲ್ಲಿರುವ ಸ್ಮಾರ್ಟ್‌ಫೋನ್‌ಗಳು ನಮಗೆ ಆರೋಗ್ಯದ ಬಗ್ಗೆ ಮಾಹಿತಿ ನೀಡುವ ಸಾಧನಗಳಂತೆ ಕಂಡರೂ, ಅವು ವಾಸ್ತವದಲ್ಲಿ ನಮ್ಮ ಆರೋಗ್ಯವನ್ನು ಹೇಗೆ ಹೈಜಾಕ್ ಮಾಡುತ್ತಿವೆ ಎಂಬುದನ್ನು ಕೊಹೆನ್ ಇಲ್ಲಿ ವಿವರಿಸಿದ್ದಾರೆ. ತಂತ್ರಜ್ಞಾನ ಕಂಪನಿಗಳು ಕೇವಲ ಲಾಭಕ್ಕಾಗಿ ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಜತೆ ಹೇಗೆ ಆಟವಾಡುತ್ತಿವೆ ಎಂಬುದು ಈ ಪುಸ್ತಕದ ಮುಖ್ಯ ವಸ್ತು. ಈ ಪುಸ್ತಕದಲ್ಲಿ ಅಲ್ಗಾರಿದಮ್‌ಗಳ ಬಗ್ಗೆ ಚರ್ಚಿಸಲಾಗಿದೆ. ನಾವು ಒಮ್ಮೆ ತೂಕ ಇಳಿಸುವ ಬಗ್ಗೆ ಅಥವಾ ಯಾವುದೋ ಕಾಯಿಲೆಯ ಬಗ್ಗೆ ಸರ್ಚ್ ಮಾಡಿದರೆ, ಇಂಟರ್‌ನೆಟ್ ನಮಗೆ ಅಂಥ ಸಾವಿರಾರು ಮಾಹಿತಿಗಳ ಸುರಿಮಳೆಗೈಯುತ್ತದೆ. ಇದರಲ್ಲಿ ವೈಜ್ಞಾನಿಕವಾಗಿ ಸಾಬೀತಾಗದ ಸೂಪರ್ ಫುಡ್‌ಗಳು, ಅಪಾಯಕಾರಿ ಡಯಟ್‌ಗಳು ಮತ್ತು ನಕಲಿ ಔಷಧಿಗಳ ಜಾಹೀರಾತುಗಳೇ ಹೆಚ್ಚಿರುತ್ತವೆ. ಇದನ್ನು ಕೊಹೆನ್ ಮಾಹಿತಿಯ 'ವಿಷಪೂರಿತ ಆಹಾರ' ಎಂದು ಕರೆಯುತ್ತಾರೆ. ನಮ್ಮ ಸರ್ಚ್ ಹಿಸ್ಟರಿ ಮತ್ತು ನಡವಳಿಕೆಯನ್ನು ನೋಡಿ ಅಲ್ಗಾರಿದಮ್‌ಗಳು ನಮಗೆ ನೀಡುವ ಜಾಹೀರಾತುಗಳು ಎಷ್ಟು ಭೀಕರವಾಗಿರುತ್ತವೆ ಎಂದರೆ, ಒಬ್ಬ ವ್ಯಕ್ತಿ ಮಾನಸಿಕವಾಗಿ ಕುಗ್ಗಿದಾಗ ಅಥವಾ ಯಾವುದೋ ಆರೋಗ್ಯದ ಸಮಸ್ಯೆಯಿಂದ ಆತಂಕಗೊಂಡಾಗ ಅಲ್ಗಾರಿದಮ್‌ಗಳು ಅದನ್ನು ಪತ್ತೆಹಚ್ಚುತ್ತವೆ. ಅಂಥ ಸಮಯದಲ್ಲಿ ನಮಗೆ ಅತ್ಯಂತ ದುಬಾರಿ ಮತ್ತು ಅನಗತ್ಯವಾದ 'ಆರೋಗ್ಯ ಉತ್ಪನ್ನ'ಗಳನ್ನು ಮಾರಾಟ ಮಾಡುವ ಜಾಲ ಸಕ್ರಿಯವಾಗುತ್ತದೆ. ನಾವು ಬಳಸುವ ಫಿಟ್ನೆಸ್ ಆಪ್‌ಗಳಲ್ಲಿ 'ಡಾರ್ಕ್ ಪ್ಯಾಟರ್ನ್ಸ್' ಎಂಬ ತಂತ್ರವನ್ನು ಬಳಸಲಾಗುತ್ತದೆ. ಉದಾಹರಣೆಗೆ, ನಿಮ್ಮ ವ್ಯಾಯಾಮವನ್ನು ಒಂದು ಆಟದಂತೆ ಬಿಂಬಿಸಿ, ನೀವು ಒಂದು ದಿನ ವ್ಯಾಯಾಮ ಮಾಡದಿದ್ದರೆ ಅದು ನಿಮಗೆ ಅಪರಾಧ ಪ್ರಜ್ಞೆ ಮೂಡಿಸುತ್ತದೆ. ಇದು ಆರೋಗ್ಯದ ಮೇಲೆ ಧನಾತ್ಮಕ ಪರಿಣಾಮ ಬೀರುವ ಬದಲು ಒತ್ತಡವನ್ನು ಹೆಚ್ಚು ಮಾಡುತ್ತದೆ. ಈ ಆಪ್‌ಗಳಿಂದ ಹೊರಬರುವುದು ಅಥವಾ ನಿಮ್ಮ ಡೇಟಾ ಅಳಿಸುವುದು ಎಷ್ಟು ಸಂಕೀರ್ಣವಾಗಿರುತ್ತದೆ ಎಂದರೆ, ಜನರು ಅನಿವಾರ್ಯವಾಗಿ ಅದರ ಭಾಗವಾಗಿಯೇ ಉಳಿಯುತ್ತಾರೆ. ಇಂದಿನ ಕಾಲದಲ್ಲಿ ಜನರು ವೈದ್ಯರಿಗಿಂತ ಹೆಚ್ಚಾಗಿ ಇನ್ಸ್ಟಾಗ್ರಾಮ್ ಅಥವಾ ಯೂಟ್ಯೂಬ್ ಇನ್ಫ್ಲುಯೆನ್ಸರ್‌ಗಳನ್ನು ನಂಬುತ್ತಿದ್ದಾರೆ. ಅನೇಕ ಇನ್ಫ್ಲುಯೆನ್ಸರ್‌ಗಳು ಯಾವುದೇ ವೈದ್ಯಕೀಯ ಹಿನ್ನೆಲೆ ಇಲ್ಲದಿದ್ದರೂ ತಮಗೆ ಹಣ ನೀಡುವ ಕಂಪನಿಗಳ ಉತ್ಪನ್ನಗಳನ್ನು 'ಆರೋಗ್ಯವರ್ಧಕ' ಎಂದು ಪ್ರಚಾರ ಮಾಡುತ್ತಾರೆ. ಇದು ಯುವಜನತೆಯಲ್ಲಿ ತಪ್ಪು ತಿಳಿವಳಿಕೆ ಮತ್ತು ಹೊಸ ರೀತಿಯ ಕಾಯಿಲೆಗಳಿಗೆ ಕಾರಣವಾಗುತ್ತಿದೆ. ನಾವು ಬಳಸುವ ಹೆಲ್ತ್ ಆಪ್‌ಗಳು ನಮ್ಮನ್ನು ನಿರಂತರವಾಗಿ ನೋಟಿಫಿಕೇಶನ್‌ಗಳ ಮೂಲಕ ಆತಂಕಕ್ಕೆ ತಳ್ಳುತ್ತವೆ. ಇಷ್ಟು ಹೆಜ್ಜೆ ನಡೆದಿಲ್ಲ, ನಿಮ್ಮ ಹೃದಯ ಬಡಿತದಲ್ಲಿ ವ್ಯತ್ಯಾಸವಾಗಿದೆ ಎಂಬ ಎಚ್ಚರಿಕೆಗಳು ಜನರಲ್ಲಿ ಸೈಬರ್ಕೊಂಡ್ರಿಯಾ ಎಂಬ ಹೊಸ ರೀತಿಯ ಮಾನಸಿಕ ಸಮಸ್ಯೆಯನ್ನು ಹುಟ್ಟುಹಾಕುತ್ತಿವೆ. ಅಂದರೆ, ಸಣ್ಣ ಪುಟ್ಟ ಲಕ್ಷಣಗಳಿಗೂ ಇಂಟರ್‌ನೆಟ್ ನೋಡಿ ದೊಡ್ಡ ಕಾಯಿಲೆ ಇರಬಹುದೆಂದು ಹೆದರುವುದು. ನಾವು ನಮಗೇ ಅರಿಯದಂತೆ ನಮ್ಮ ಆರೋಗ್ಯದ ಡೇಟಾವನ್ನು ಈ ಆಪ್‌ಗಳಿಗೆ ನೀಡುತ್ತೇವೆ. ಈ ಡೇಟಾವನ್ನು ವಿಮಾ ಕಂಪನಿಗಳು ಮತ್ತು ಫಾರ್ಮಾ ಕಂಪನಿಗಳು ಖರೀದಿಸುತ್ತವೆ. ನಿಮ್ಮ ಅನಾರೋಗ್ಯದ ಸ್ಥಿತಿಯನ್ನು ನೋಡಿ ನಿಮಗೆ ಹೆಚ್ಚಿನ ಬೆಲೆಯ ವಿಮೆ ಅಥವಾ ಅನಗತ್ಯ ಔಷಧಿಗಳನ್ನು ಮಾರಾಟ ಮಾಡುವ ಜಾಲವನ್ನು ಈ ಕೃತಿಯಲ್ಲಿ ಬಯಲು ಮಾಡಲಾಗಿದೆ. ಸಾಮಾಜಿಕ ಜಾಲತಾಣಗಳು ಸೃಷ್ಟಿಸಿರುವ ಪರ್ಫೆಕ್ಟ್ ಬಾಡಿ ಚಿತ್ರಣವು ಹದಿಹರೆಯದವರಲ್ಲಿ ಖಿನ್ನತೆ ಮತ್ತು ಈಟಿಂಗ್ ಡಿಸಾರ್ಡರ್‌ಗಳಿಗೆ ಹೇಗೆ ಕಾರಣವಾಗುತ್ತಿದೆ ಎಂಬುದನ್ನು ಕೊಹೆನ್ ಅಂಕಿಅಂಶಗಳ ಸಮೇತ ವಿವರಿಸಿದ್ದಾರೆ. ನೊಬೆಲ್ ಪ್ರಶಸ್ತಿ ಪುರಸ್ಕೃತರ ಸಂಶೋಧನೆಗಳಿಗಿಂತ ಹೆಚ್ಚಾಗಿ ಕ್ಲಿಕ್‌ಬೈಟ್ ಹೆಡ್ಲೈನ್‌ಗಳು ಹೇಗೆ ವೈರಲ್ ಆಗುತ್ತವೆ ಎಂಬುದನ್ನು ವಿವರಿಸಲಾಗಿದೆ. ಕ್ಯಾನ್ಸರ್ ಗುಣಪಡಿಸುವ ಸಣ್ಣ ಮನೆಮದ್ದು ಎಂಬ ಸುಳ್ಳು ಸುದ್ದಿಗಳು ಜಾಗತಿಕ ಆರೋಗ್ಯ ವ್ಯವಸ್ಥೆಗೆ ಎಷ್ಟು ದೊಡ್ಡ ಪೆಟ್ಟು ನೀಡುತ್ತಿವೆ ಎಂಬುದನ್ನು ಅವರು ಕೊಹೆನ್ ಎಚ್ಚರಿಸಿದ್ದಾರೆ. ಈ ಪುಸ್ತಕವು ನಮ್ಮ ಫೋನ್‌ಗಳು ನಮಗೆ ಉಪಕಾರಿಯಾಗಿದೆಯೇ ಅಥವಾ ನಮ್ಮನ್ನು ರೋಗಿಗಳನ್ನಾಗಿ ಮಾಡುತ್ತಿವೆಯೇ ಎಂಬ ಗಂಭೀರ ಪ್ರಶ್ನೆಯನ್ನು ಎತ್ತುತ್ತದೆ.

ಮಹಿಳಾ ಮೀಸಲು: ವಾಗ್ದಾನದಿಂದ ಇತಿಹಾಸದತ್ತ

ಬೇಟಿ ಬಚಾವೋ ಬೇಟಿ ಪಡಾವೋ ಮೂಲಕ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದೆ. ಉಜ್ವಲ ಯೋಜನೆ ಮೂಲಕ 10 ಕೋಟಿಗೂ ಅಧಿಕ ಮನೆಗಳಿಗೆ ಅಡುಗೆ ಅನಿಲ ಸಂಪರ್ಕದಿಂದ ಹೆಣ್ಣುಮಕ್ಕಳ ಆರೋಗ್ಯ ಮತ್ತು ಜೀವನ ಪದ್ಧತಿಯಲ್ಲಿ ಮಹತ್ವದ ಬದಲಾವಣೆ ತಂದಿದೆ.

ಮೋಹನ್ ವಿಶ್ವ
ವೀಕೆಂಡ್ ವಿತ್ ಮೋಹನ್
vveditoped@gmail.com

ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಹಿಳೆಯರ ಸಮಾನ ಪ್ರತಿನಿಧಿತ್ವ ಎಂಬುದು ಹಲವು ದಶಕಗಳ ಕನಸಾಗಿತ್ತು. ಈ ಕನಸಿಗೆ ವಾಸ್ತವ ರೂಪ ನೀಡಿದ ಮಹತ್ವದ ಹೆಜ್ಜೆ 'ನಾರಿ ಶಕ್ತಿ ವಂದನ ಅಧಿನಿಯಮ, 2023'. ಸುಮಾರು 27 ವರ್ಷಗಳ ಕಾಲ ರಾಜಕೀಯ ಚರ್ಚೆ, ವಿಳಂಬ ಮತ್ತು ವೈಫಲ್ಯಗಳ ನಡುವೆ ಸಿಲುಕಿದ್ದ ಮಹಿಳಾ ಮೀಸಲಾತಿ ಪ್ರಶ್ನೆಗೆ ಕೊನೆಗೂ ಪರಿಹಾರ ದೊರೆತಿದೆ. ಅನೇಕ ಸರಕಾರಗಳು ಬಂದು ಹೋಗಿದ್ದರೂ, ಈ ಮಹತ್ವದ ಮಸೂದೆ ಕಾನೂನಾಗಿ ರೂಪುಗೊಳ್ಳಲಿಲ್ಲ. ಆದರೆ, 2023ರಲ್ಲಿ ಅದು ಸಾಧ್ಯವಾಯಿತು. ಇದು ಕೇವಲ ಒಂದು ಕಾನೂನು ಬದಲಾವಣೆ ಮಾತ್ರವಲ್ಲ, ಭಾರತೀಯ ಪ್ರಜಾಪ್ರಭುತ್ವದ ದಿಕ್ಕನ್ನು ಬದಲಿಸುವ ಐತಿಹಾಸಿಕ ತಿರುವಾಗಿದೆ.

ಈ ಅಧಿನಿಯಮದ ಮೂಲಕ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ಖಚಿತಪಡಿಸಲಾಗಿದೆ. ಇದರಲ್ಲೂ ಎಸ್‌ಸಿ ಮತ್ತು ಎಸ್‌ಟಿ ವರ್ಗಗಳಿಗೆ ಮೀಸಲಾದ ಸ್ಥಾನಗಳಲ್ಲಿ ಕೂಡ ಮಹಿಳೆಯರಿಗೆ ಮೀಸಲಾಗುತ್ತದೆ. ಇದರಿಂದ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಹೆಚ್ಚುವುದಷ್ಟೇ ಅಲ್ಲದೇ, ಸಾಮಾಜಿಕ ನ್ಯಾಯಕ್ಕೂ ಬಲ ಸಿಗುತ್ತದೆ. ಭಾರತದಲ್ಲಿ ಮಹಿಳೆಯರು ದೇಶದ ಜನಸಂಖ್ಯೆಯ ಅರ್ಧ ಭಾಗವಾಗಿದ್ದರೂ, ಅವರ ರಾಜಕೀಯ ಪ್ರತಿನಿಧಿತ್ವ ಕಡಿಮೆ ಇರುವುದು ಒಂದು ದೊಡ್ಡ ಸಮಸ್ಯೆಯಾಗಿತ್ತು, ಈ ಕಾಯ್ದೆ ಆ ಕೊರತೆಯನ್ನು ನೀಗಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಮಹಿಳಾ ಮೀಸಲಾತಿ ಮಸೂದೆ ಮೊದಲ ಬಾರಿಗೆ 1996ರಲ್ಲಿ ಪರಿಚಯಿಸಲಾಯಿತು, ನಂತರ ಹಲವು ಬಾರಿ ಅದನ್ನು ಸಂಸತ್ತಿನಲ್ಲಿ ಮಂಡಿಸಲಾಯಿತಾದರೂ, ಅದು ಕಾನೂನಾಗಲಿಲ್ಲ. ಈ ವಿಳಂಬಕ್ಕೆ ಮುಖ್ಯ ಕಾರಣಗಳು ರಾಜಕೀಯ ಇಚ್ಛಾಶಕ್ತಿ ಕೊರತೆ, ಪಕ್ಷಗಳ ಒಳಗಿನ ಭಿನ್ನಾಭಿಪ್ರಾಯಗಳು, ಮತಗಟ್ಟೆ ರಾಜಕೀಯದ ಲೆಕ್ಕಾಚಾರ ಮತ್ತು ಸಮನ್ವಯದ ಕೊರತೆಯಾಗಿತ್ತು. ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ಈ ವಿಷಯವನ್ನು ರಾಷ್ಟ್ರದ ಅಗತ್ಯವೆಂದು ಪರಿಗಣಿಸುವುದಕ್ಕಿಂತ, ರಾಜಕೀಯವಾಗಿ ಅಸೌಕರ್ಯಕರ ವಿಷಯವೆಂದು ನೋಡಿದವು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಈ ಪರಿಸ್ಥಿತಿಯನ್ನು ಬದಲಿಸಿದ್ದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರಕಾರ. 2023ರ ಸೆಪ್ಟೆಂಬರ್‌ನಲ್ಲಿ ಹೊಸ ಸಂಸತ್ ಭವನದಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸುವ ಮೂಲಕ ಸರಕಾರ ತನ್ನ ಸ್ಪಷ್ಟ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿತು. ಹೊಸ ಸಂಸತ್ ಭವನದಲ್ಲಿ ಮೊದಲ ಪ್ರಮುಖ ಕಾನೂನಾಗಿ ಈ ಮಸೂದೆಯನ್ನು ಪರಿಚಯಿಸುವ ಮೂಲಕ ಮಹಿಳಾ ಸಬಲೀಕರಣವನ್ನು ಆಡಳಿತದ ಕೇಂದ್ರಬಿಂದುವಾಗಿ ರೂಪಿಸಿತು. ಇದು ಕೇವಲ ಪ್ರತೀಕಾತ್ಮಕ ಹೆಜ್ಜೆಯಲ್ಲ, ಬಲವಾದ ರಾಜಕೀಯ ಸಂದೇಶವೂ ಆಗಿತ್ತು.

ಮೋದಿ ಸರಕಾರ ಈ ಮಸೂದೆಯನ್ನು ಕೇವಲ ಮೀಸಲಾತಿ ನೀತಿಯಾಗಿ ನೋಡದೆ, 'ನಾರಿ ಶಕ್ತಿ' ಎಂಬ ವಿಶಾಲ ದೃಷ್ಟಿಕೋನದ ಭಾಗವಾಗಿ ಮಂಡಿಸಿದೆ. ಮಹಿಳೆಯರ ಅಭಿವೃದ್ಧಿಯನ್ನು ಕೇಂದ್ರವಾಗಿಟ್ಟುಕೊಂಡು, ಕಳೆದ ಹನ್ನೆರಡು ವರ್ಷಗಳಲ್ಲಿ ಹಲವು ಯೋಜನೆಗಳನ್ನು ಮೋದಿ ನೇತೃತ್ವದ ಸರಕಾರ ಜಾರಿಗೊಳಿಸಲಾಗಿದೆ. ಬೇಟಿ ಬಚಾವೋ ಬೇಟಿ ಪಡಾವೋ ಮೂಲಕ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದೆ. ಉಜ್ವಲ ಯೋಜನೆ ಮೂಲಕ 10 ಕೋಟಿಗೂ ಅಧಿಕ ಮನೆಗಳಿಗೆ ಅಡುಗೆ ಅನಿಲ ಸಂಪರ್ಕ ನೀಡುವ ಮೂಲಕ ಹೆಣ್ಣುಮಕ್ಕಳ ಆರೋಗ್ಯ ಮತ್ತು ಜೀವನ ಪದ್ಧತಿಯಲ್ಲಿ ಮಹತ್ವದ ಬದಲಾವಣೆಯನ್ನು ತಂದಿದೆ, ಸುಕನ್ಯಾ ಸಮೃದ್ಧಿ ಯೋಜನೆ ಮೂಲಕ ಹೆಣ್ಣುಮಕ್ಕಳ ಭವಿಷ್ಯದ ಖರ್ಚಿಗೆ ಅನುಕೂಲ ಮಾಡಿಕೊಟ್ಟಿದೆ, ತ್ರಿವಳಿ ತಲಾಕ್ ರದ್ದು ಮಾಡುವ ಮೂಲಕ ಮುಸ್ಲಿಂ ಧರ್ಮದ ಹೆಣ್ಣುಮಕ್ಕಳ ಜೀವನವನ್ನು ರಕ್ಷಿಸುವ ಕೆಲಸ ಮಾಡಿದೆ. ಕಾರ್ಪೊರೇಟ್ ಜಗತ್ತಿನಲ್ಲಿ ಹೆಣ್ಣುಮಕ್ಕಳು ಸಂಸ್ಥೆಯ ನಿರ್ದೇಶಕರಾಗಿದ್ದರೆ ಆ ಸಂಸ್ಥೆಗೆ ಸರಕಾರದಿಂದ ಅನೇಕ ರೀತಿಯ ಸವಲತ್ತುಗಳನ್ನು ನೀಡುವ ಯೋಜನೆಯನ್ನು ಜಾರಿಗೆ ತಂದಿದೆ, ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ ನರೇಂದ್ರ ಮೋದಿ ನೇತೃತ್ವದ ಸರಕಾರ 'ಸ್ವಚ್ಛ ಭಾರತ್' ಅಭಿಯಾನದಡಿಯಲ್ಲಿ ದೇಶದಾದ್ಯಂತ 10 ಕೋಟಿಗೂ ಅಧಿಕ ಶೌಚಾಲಯಗಳನ್ನು ನಿರ್ಮಿಸುವ

ಮೂಲಕ ಬಯಲು ಮುಕ್ತ ಶೌಚ ಮಾಡಿದೆ. ದೇಶದಾದ್ಯಂತ 55 ಕೋಟಿಗೂ ಅಧಿಕ ಜನರಿಗೆ 'ಜನ್ ಧನ್' ಯೋಜನೆ ಮೂಲಕ ಬ್ಯಾಂಕಿಂಗ್ ಸೌಲಭ್ಯ ಕಲ್ಪಿಸಲಾಗಿದೆ. ಇವೆಲ್ಲವೂ ಸಹ ದೇಶದ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಬಲ ನೀಡಿವೆ, ಇವುಗಳ ಜತೆಗೆ ಮಹಿಳೆಯರ ರಾಜಕೀಯ ಪ್ರಾತಿನಿಧ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ತೆಗೆದುಕೊಂಡ ದಿಟ್ಟ ನಿರ್ಧಾರ ನಾರಿಶಕ್ತಿ ವಂಧನಾ ಅಧಿನಿಯಮ, 2023. ಈ ಹಿನ್ನೆಲೆಯಲ್ಲಿ ಮಹಿಳೆಯರ ರಾಜಕೀಯ ಸಬಲೀಕರಣ, ನರೇಂದ್ರ ಮೋದಿಯವರ ಮುಂದುವರಿದ ಹೆಜ್ಜೆಯಾಗಿದೆ. ಮುಖ್ಯವಾಗಿ, ಈ ಮಸೂದೆಯನ್ನು ಕೇವಲ ಪ್ರಸ್ತಾಪವಾಗಿ ಬಿಡದೆ, ಕಾಯ್ದೆಯಾಗಿ ರೂಪಿಸಲಾಗಿದೆ. ರಾಜಕೀಯ ಚರ್ಚೆಯಿಂದ ಸಂವಿಧಾನಿಕ ಭದ್ರತೆಗೆ ಈ ಬದಲಾವಣೆ ಬಹುಮುಖ್ಯವಾಗಿದ್ದು, ಇದು ಮಹಿಳೆಯರ ರಾಜಕೀಯ ಹಕ್ಕುಗಳನ್ನು ಸ್ಥಿರಗೊಳಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ.

ನಮ್ಮ ದೇಶದ ವಿಪರ್ಯಾಸವೆಂದರೆ ಇಂದಿರಾಗಾಂಧಿ ಮಹಿಳಾ ಪ್ರಧಾನಮಂತ್ರಿಯಾದರೂ ಸಹ ತಮ್ಮ ಅವಧಿಯಲ್ಲಿ ಈ ಮಸೂದೆಯನ್ನು ಜಾರಿಗೆ ತರುವ ಸಣ್ಣ ಪ್ರಯತ್ನವನ್ನೂ ಮಾಡಲಿಲ್ಲ. ಕಾಂಗ್ರೆಸ್ಸಿನ ನಾಯಕಿ ಸೋನಿಯಾ ಗಾಂಧಿ ಹಿಡಿತದಲ್ಲಿ ಹತ್ತು ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಸರಕಾರ ಕೂಡ ಈ ಮಸೂದೆಯನ್ನು ಜಾರಿಗೆ ತರುವಲ್ಲಿ ವಿಫಲವಾಯಿತು. ಕಾಂಗ್ರೆಸ್ಸಿನ ಮತಬ್ಯಾಂಕ್ ಓಲೈಕೆ ರಾಜಕಾರಣ ಯಾವ ಮಟ್ಟಕ್ಕಿತ್ತೆಂದರೆ, ಮುಸ್ಲಿಂ ಮಹಿಳೆಯರ ಹಕ್ಕುಗಳ ವಿಷಯದಲ್ಲಿ 'ಶಾ ಬಾನು' ಪ್ರಕರಣದಲ್ಲಿ ನ್ಯಾಯಾಲಯ ಮಹಿಳೆಯರ ಪರವಾಗಿ ನೀಡಿದ ತೀರ್ಪನ್ನು ಶೂನ್ಯಗೊಳಿಸುವ ನಿಟ್ಟಿನಲ್ಲಿ ಕಾಯ್ದೆಗೆ ತಿದ್ದುಪಡಿಯನ್ನು ತಂದು ಅವರ ಹಕ್ಕುಗಳನ್ನು ಕಿತ್ತುಕೊಳ್ಳುವ ಕೆಲಸ ಮಾಡಿದ್ದು ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಸರಕಾರ. ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವುದನ್ನು ಸದಾ ವಿರೋಧಿಸಿಕೊಂಡು ಬಂದಿರುವುದು ಕಾಂಗ್ರೆಸ್ಸಿನ ದಶಕಗಳ ಚಾಳಿ, ಆ ಪಕ್ಷದ ಪಾಲಿಗೆ ಹೆಣ್ಣುಮಕ್ಕಳ ರಾಜಕೀಯ ಮೀಸಲು ಕೇವಲ ನೆಹರು ಕುಟುಂಬಕ್ಕೆ ಮಾತ್ರ ಮೀಸಲಾಗಿದೆ.

ಕುಟುಂಬ ನಿರ್ವಹಣೆಯಲ್ಲಿ ಹೆಣ್ಣಿನ ಪಾತ್ರ ಬಹಳ ದೊಡ್ಡದು, ಕಷ್ಟ ಬಂದಾಗ ಕುಟುಂಬವನ್ನು ಸಂಬಾಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುವವರು ಮಹಿಳೆಯರು. ಅದೇ ರೀತಿಯಲ್ಲಿ ಕೋವಿಡ್ ಸಂದರ್ಭದಲ್ಲಿ ಇಡೀ ಜಗತ್ತಿನ ಆರ್ಥಿಕತೆ ಸ್ತಬ್ಧವಾಗಿತ್ತು, ಭಾರತದ ಆರ್ಥಿಕತೆ ಸುಮಾರು ಎರಡು ವರ್ಷಗಳ ಕಾಲ ಸ್ತಬ್ದವಾಗಿತ್ತು. ಅಂತಹ ಸಂದಿಗ್ಧ ಸಂದರ್ಭದಲ್ಲಿ ಭಾರತದ ಆರ್ಥಿಕತೆಯನ್ನು ಮುಂದುವರೆಸಿದ ಕೀರ್ತಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಲ್ಲಬೇಕು. ಸಂಕಷ್ಟದ ಸಂದರ್ಭದಲ್ಲಿ ಹೆಣ್ಣು ಕುಟುಂಬ ನಿರ್ವಹಿಸಿದ ರೀತಿಯಲ್ಲಿ ನಿರ್ಮಲಾ ಅವರು ದೇಶದ ಆರ್ಥಿಕತೆಯನ್ನು ನಿರ್ವಹಿಸಿದ್ದರು, ಆರ್ಥಿಕತೆ ಸ್ತಬ್ದವಾದ ಪರಿಣಾಮ ಸರಕಾರಕ್ಕೆ ತೆರಿಗೆ ಹಣ ಬರುತ್ತಿರಲಿಲ್ಲ, ಮತ್ತೊಂದೆಡೆ ಜನರ ಆರೋಗ್ಯವನ್ನು ಕಾಪಾಡುವ ಮಹತ್ತರವಾದ ಜವಾಬ್ದಾರಿ, ಎರಡನ್ನೂ ಒಬ್ಬ ಮಹಿಳೆಯಾಗಿ ಅವರು ನಿರ್ವಹಿಸಿದ ರೀತಿಯನ್ನು ಇಡೀ ಜಗತ್ತು ನೋಡಿದೆ.

ಭಾರತವನ್ನು ತಾಯಿಗೆ ಹೋಲಿಸಿ ಭಾರತಮಾತೆಯಾಗಿ ಸಾವಿರಾರು ವರ್ಷಗಳಿಂದ ಪೂಜಿಸುತ್ತಾ ಬಂದಿದ್ದೇವೆ, ಇಂತಹ ನೆಲದಲ್ಲಿ ಅನೇಕ ಬಾರಿ ಸಂಕಷ್ಟದ ಸಮಯದಲ್ಲಿ ನಾರಿಯ ಶಕ್ತಿ ಪ್ರದರ್ಶನವಾಗಿದೆ. ಇಂತಹ ದೇಶದಲ್ಲಿ ಮಹಿಳೆಯ ರಾಜಕೀಯ ಪ್ರತಿನಿಧಿತ್ವಕ್ಕಾಗಿ ಏಳು ದಶಕಗಳ ಸಮಯ ಈಗಾಗಲೇ ವ್ಯರ್ಥವಾಗಿದೆ. ದೇಶದ ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರಿದ್ದರೂ ಸಹ, ಪುರುಷ ಪ್ರಧಾನ ಸಮಾಜದಲ್ಲಿ ಇಚ್ಛಾಶಕ್ತಿ ಕೊರತೆಯಿಂದ ಈ ಮೀಸಲಾತಿ ವಿಳಂಬವಾಗಿತ್ತು. ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ನರೇಂದ್ರ ಮೋದಿಯವರ 'ನಾರಿ ಶಕ್ತಿ ವಂದನಾ ಅಧಿನಿಯಮ' ಜಾರಿಗೆ ಬರುವ ಮೂಲಕ ಏಳು ದಶಕಗಳ ಕನಸು ನನಸಾಗುತ್ತಿದೆ. ಒಟ್ಟಿನಲ್ಲಿ, ನಾರಿ ಶಕ್ತಿ ವಂದನ ಅಧಿನಿಯಮ ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಮಹತ್ವದ ತಿರುವಾಗಿದೆ. ಹಲವು ವರ್ಷಗಳಿಂದ ವಿಳಂಬವಾಗಿದ್ದ ಸುಧಾರಣೆಯನ್ನು ಕಾನೂನಾಗಿ ರೂಪಿಸುವತ್ತ ದಿಟ್ಟಹೆಜ್ಜೆ ಇಟ್ಟಿರುವ ಮೋದಿ ಸರಕಾರ ನಿರ್ಣಾಯಕ ಪಾತ್ರ ವಹಿಸಿದೆ. ರಾಜಕೀಯ ಇಚ್ಛಾಶಕ್ತಿ, ಸಮನ್ವಯ ಮತ್ತು ದೀರ್ಘಕಾಲೀನ ದೃಷ್ಟಿಕೋನದ ಮೂಲಕ ಈ ಸಾಧನೆ ಸಾಧ್ಯವಾಗಿದೆ. ಇದು ಕೇವಲ ಮಹಿಳೆಯರಿಗೆ ಸ್ಥಾನ ಮೀಸಲಿಡುವ ಕಾನೂನು ಮಾತ್ರವಲ್ಲ, ಭಾರತದ ಭವಿಷ್ಯವನ್ನು ರೂಪಿಸುವಲ್ಲಿ ಮಹಿಳೆಯರಿಗೆ ನಾಯಕತ್ವ ನೀಡುವ ಮಹತ್ವದ ಹೆಜ್ಜೆಯಾಗಿದೆ.

ಪಾಕ್ ಮಧ್ಯಸ್ಥಿಕೆ: ನಮಗೇಕೆ ಚಿಂತೆ ?

ಕದನ ವಿರಾಮದಲ್ಲಿ ಪಾಕಿಸ್ತಾನಕ್ಕೆ ರಾಜತಾಂತ್ರಿಕ ಜಯವೇನೂ ಸಿಕ್ಕಿಲ್ಲ. ಶಹಬಾಜ್ ಷರೀಫ್ ಮತ್ತು ಆಸಿಮ್ ಮುನೀರ್ ಸಂದೇಶವಾಹಕರ ಕೆಲಸವನ್ನಷ್ಟೇ ಮಾಡಿದ್ದಾರೆ. ಇಷ್ಟಕ್ಕೂ ಯುಎಇ ಏಕೆ ಪಾಕ್ ಬಳಿ ಸಾಲ ವಾಪಸ್ ಕೇಳುತ್ತಿದೆ? ಭಾರತ-ಬಾಂಗ್ಲಾ ಮಾತುಕತೆ ನೋಡಿ ಪಾಕ್‌ಗೆ ಏಕೆ ಹೊಟ್ಟೆ ಉರಿಯುತ್ತಿದೆ?

ಸಂಗತ
ಡಾ. ವಿಜಯ್ ದರಡಾ
vveditoped@gmail.com

ಏಪ್ರಿಲ್ 7ರಂದು ಜಗತ್ತು ಉಸಿರು ಬಿಗಿಹಿಡಿದು ಕುಳಿತಿತ್ತು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಗಷ್ಟೇ ಭಯಾನಕ ಎಚ್ಚರಿಕೆಯೊಂದನ್ನು ನೀಡಿದ್ದರು. ಹೊರ್ಮುಜ್ ಜಲಸಂಧಿಯನ್ನು ಎಲ್ಲ ದೇಶದ ಹಡಗುಗಳಿಗೆ ಇರಾನ್ ಈಗಿಂದೀಗಲೇ ಮುಕ್ತಗೊಳಿಸದಿದ್ದರೆ ಸಂಜೆಯೊಳಗೆ ಅಲ್ಲಿನ ನಾಗರಿಕತೆಯನ್ನೇ ನಾಶಪಡಿಸುವುದಾಗಿ ಧಮಕಿ ಹಾಕಿದ್ದರು. ಅವರು ವಾರ್ನಿಂಗ್ ಕೊಟ್ಟು ಬಾಯಿ ಮುಚ್ಚುವುದರೊಳಗೇ ಪಾಕಿಸ್ತಾನದ ಪ್ರಧಾನ ಮಂತ್ರಿ ಶಹಬಾಜ್ ಷರೀಫ್ ಅಚ್ಚರಿಯೆಂಬಂತೆ 'ಅಮೆರಿಕ ಮತ್ತು ಇರಾನ್ ಕದನ ವಿರಾಮಕ್ಕೆ ಒಪ್ಪಿಕೊಂಡಿವೆ' ಎಂದು ಘೋಷಣೆ ಮಾಡಿದ್ದರು. ಇನ್ನೂ ಅಚ್ಚರಿಯೆಂಬಂತೆ, ಟ್ರಂಪ್ ಯಾವೊತ್ತಿನಂತೆ ಗುಡುಗುವುದನ್ನು ಬಿಟ್ಟು ತಮ್ಮ ಧ್ವನಿಯನ್ನು ಮೆತ್ತಗಾಗಿಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಎರಡು ವಾರಗಳ ಕದನ ವಿರಾಮವನ್ನು ಪ್ರಕಟಿಸಿದ್ದರು.

ತಕ್ಷಣ ಪಾಕಿಸ್ತಾನದ ಸಾಧನೆಯ ಬಗ್ಗೆ ಜಗತ್ತಿನಾದ್ಯಂತ ಮೆಚ್ಚುಗೆಯ ಮಹಾಪೂರವೇ ಹರಿದು ಬರತೊಡಗಿತು. ಯಾವುದು ಸಾಧ್ಯವೇ ಇರಲಿಲ್ಲವೋ ಅದನ್ನು ಪಾಕಿಸ್ತಾನ ಸಾಧ್ಯವಾಗಿಸಿ ತೋರಿಸಿದೆ ಎಂದು ಕೆಲ ರಾಜಕೀಯ ಪಂಡಿತರು ವ್ಯಾಖ್ಯಾನಿಸಿದರು. ಭಾರತದಲ್ಲಂತೂ ಪ್ರಧಾನಿ ನರೇಂದ್ರ ಮೋದಿಯವರ ಟೀಕಾಕಾರರಿಗೆ ರಾಜಕೀಯ ಜಾಕ್‌ಪಾಟ್ ಹೊಡೆದಿತ್ತು. ಏಕೆ ಭಾರತಕ್ಕೆ ಇಂತಹದ್ದೊಂದು ಮಧ್ಯಸ್ಥಿಕೆ ವಹಿಸಿ ಶಾಂತಿ ಒಪ್ಪಂದ ಮಾಡಿಸಲು ಸಾಧ್ಯವಾಗಲಿಲ್ಲ ಎಂಬ ಪ್ರಶ್ನೆಗಳು ಬರತೊಡಗಿದವು. ಯುದ್ಧದ ವಿಷಯದಲ್ಲಿ ಪಾಕಿಸ್ತಾನ ಬಹುದೊಡ್ಡ ರಾಜತಾಂತ್ರಿಕ ದಿಗ್ವಿಜಯ ಸಾಧಿಸಿದೆ ಎಂದೂ, ಭಾರತ ತೀವ್ರ ಹಿನ್ನಡೆ ಅನುಭವಿಸಿದೆ ಎಂದೂ ವ್ಯಾಖ್ಯಾನಗಳು ಕೇಳಿಬಂದವು. ಅವುಗಳನ್ನು ಕೇಳಿ ನನಗೆ ಆಶ್ಚರ್ಯವಾಯಿತು. ವಿದೇಶಾಂಗ ವ್ಯವಹಾರಗಳನ್ನು ದೇಸಿ ರಾಜಕೀಯದ ಕನ್ನಡಕದಲ್ಲಿ ನೋಡುವುದು ಸರಿಯೇ? ಅದರ ಬದಲು, ಏಕೆ ಪಾಕಿಸ್ತಾನ ಈ ವಿಷಯದಲ್ಲಿ ಮಧ್ಯಸ್ಥಿಕೆದಾರನಾಯಿತು ಎಂಬುದನ್ನು ವಿಶ್ಲೇಷಿಸಬೇಕಲ್ಲವೇ? ಈ ವಿಷಯದಲ್ಲಿ ಭಾರತ ನಿಜವಾಗಿಯೂ ಏನನ್ನಾದರೂ ಮಾಡುವ ಅಗತ್ಯವಿತ್ತೇ ಎಂಬುದನ್ನು ವಿಶ್ಲೇಷಣೆ ಮಾಡಬೇಕಲ್ಲವೇ? ನನ್ನ ಪ್ರಕಾರ ಈ ವ್ಯವಹಾರದಲ್ಲಿ ಭಾರತ ವಹಿಸಬಹುದಾದ ಪಾತ್ರವೇನೂ ಇರಲಿಲ್ಲ. ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದಲ್ಲಿ ಭಾರತಕ್ಕೇನು ಕೆಲಸವಿದೆ?

ಭಾರತಕ್ಕೆ ಇಸ್ರೇಲ್ ಅತ್ಯಂತ ನಂಬಿಕಸ್ಥ ದೇಶ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಅದೇ ರೀತಿ, ಇರಾನ್ ಜತೆಗೂ ಭಾರತ ಸುಮಧುರ ಸಂಬಂಧವನ್ನು ಹೊಂದಿದೆ ಎಂಬುದು ಕೂಡ ನಿಜ. ಆದರೆ, ಯಾವ ಲೆಕ್ಕದಲ್ಲೂ ಭಾರತ ತನ್ನ ಅಧೀನ ದೇಶವಲ್ಲ ಎಂಬುದು ಅಮೆರಿಕಕ್ಕೆ ಚೆನ್ನಾಗಿ ಗೊತ್ತಿದೆ. ಭಾರತ ಏನು ಹೇಳುತ್ತದೆ ಎಂಬುದನ್ನು ಜಗತ್ತು ಕಿವಿಗೊಟ್ಟು ಕೇಳಿಸಿಕೊಳ್ಳುತ್ತದೆ. ಭಾರತದ ಮಾತಿಗೆ ಜಾಗತಿಕ ವೇದಿಕೆಯಲ್ಲಿ ಬೆಲೆಯಿದೆ. ಅಮೆರಿಕಕ್ಕೆ ಇಂತಹ ಸಂಧಾನಕಾರ ಬೇಕಿಲ್ಲ. ಅಮೆರಿಕಕ್ಕೆ ಬೇಕಿರುವುದು ತನ್ನ ಮಾತು ಕೇಳುವ ದೇಶ. ಹೀಗಾಗಿ ಪಾಕಿಸ್ತಾನವೇ ಅಮೆರಿಕಕ್ಕೆ ಈ ವಿಷಯದಲ್ಲಿ ಅತ್ಯಂತ ಸೂಕ್ತ ದೇಶವಾಗುತ್ತದೆ. ಪಾಕಿಸ್ತಾನವನ್ನು ನಂಬಲು ಸಾಧ್ಯವಿಲ್ಲ, ಅದು ಹೇಳುವುದು ಒಂದು ಮತ್ತು ಮಾಡುವುದು ಇನ್ನೊಂದು ಎಂಬುದು ಇತಿಹಾಸವನ್ನು ತಿಳಿದ ಅಮೆರಿಕಕ್ಕೆ ಗೊತ್ತಿದೆ. ಆದರೆ, ತಾನು ಹೇಳಿದ್ದನ್ನು ಪಾಕಿಸ್ತಾನ ಈಗ ಶಿರಸಾವಹಿಸಿ ಪಾಲಿಸುತ್ತದೆ ಮತ್ತು ತನ್ನ ಭಾಷೆ ಪಾಕಿಸ್ತಾನಕ್ಕೆ ಅರ್ಥವಾಗುತ್ತದೆ ಎಂಬುದೂ ಅದಕ್ಕೆ ತಿಳಿದಿದೆ. ಪಾಕಿಸ್ತಾನ ಎಲ್ಲಿಯವರೆಗೆ ಟ್ರಂಪ್‌ಗೆ ಬೆಣ್ಣೆ ಸವರುತ್ತಿದೆ ಅಂದರೆ 'ಡೊನಾಲ್ಡ್ ಟ್ರಂಪ್ ಒಬ್ಬ ಶಾಂತಿದೂತ ಎಂದು ಕರೆದಿತ್ತು! ಅಷ್ಟೇಕೆ, ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಬೇಕು' ಎಂದೂ ಶಿಫಾರಸು ಮಾಡಿತ್ತು. ಇಂತಹ ಗುಲಾಮರು ಅಮೆರಿಕಕ್ಕೆ ಇನ್ನೆಲ್ಲಿ ಸಿಗುತ್ತಾರೆ? ಇನ್ನೊಂದು ವಿಷಯವಿದೆ. ಇರಾನ್ ಜತೆಗೆ ಪಾಕಿಸ್ತಾನ 900 ಕಿಲೋಮೀಟರ್ ಗಡಿ ಹೊಂದಿದೆ. ಹೀಗಾಗಿ ತನ್ನ ಸಂದೇಶವನ್ನು ರವಾನಿಸಲು ಇರಾನ್ ಕೂಡ ಪಾಕಿಸ್ತಾನವನ್ನು ಒಪ್ಪಿಕೊಂಡಿತು. ಅತ್ತ ಚೀನಾ ಕೂಡ ಪಾಕಿಸ್ತಾನದಲ್ಲೇ ಮಾತುಕತೆ ನಡೆಯಲಿ ಎಂದು ಹೇಳಿತು. ಎಷ್ಟೆಂದರೂ ಚೀನಾಕ್ಕೆ ಪಾಕ್ ಮೇಲೆ ಬಹಳ ಪ್ರೀತಿ! ಹೀಗಾಗಿ ಶಾಂತಿ ಮಾತುಕತೆಯ ವಿಷಯದಲ್ಲಿ ಪಾಕಿಸ್ತಾನ ಮುನ್ನೆಲೆಗೆ ಬಂದಿತು. ಆದರೆ ಅಮೆರಿಕ ಮತ್ತು ಇರಾನ್ ಮೇಲೆ ಪ್ರಭಾವ ಬೀರುವ ಘನತೆಯಾಗಲೀ ತಾಕತ್ತಾಗಲೀ ಪಾಕಿಸ್ತಾನಕ್ಕೆ ಇದೆಯೇ? ಕದನ ವಿರಾಮದಲ್ಲಿ ಅದು ಮಾಡಿದ್ದು ಕೇವಲ ಪೋಸ್ಟ್‌ಮ್ಯಾನ್ ಕೆಲಸವನ್ನು. ಇಸ್ಲಾಮಾಬಾದ್‌ನಲ್ಲಿ ಸಂಧಾನ ಸಭೆಯನ್ನು ಆಯೋಜಿಸಿದ್ದಕ್ಕೆ ಪಾಕಿಸ್ತಾನಕ್ಕೆ ಸೂಕ್ತ ಬಹುಮಾನ ಕೂಡ ಸಿಗುತ್ತದೆ.

ವಿಷಯ ಏನು ಅಂದರೆ, ಪಾಕಿಸ್ತಾನಕ್ಕೆ ತುರ್ತಾಗಿ ಹಣ ಬೇಕಿದೆ. ಅಲ್ಲಿನ ಆರ್ಥಿಕತೆ ನೆಲಕಚ್ಚಿದೆ. ತಾನು ಕೊಟ್ಟಿದ್ದ 3.5 ಶತಕೋಟಿ ಡಾಲರ್ ಮೊತ್ತದ ಸಾಲ ಮತ್ತು ಠೇವಣಿಯನ್ನು ತಕ್ಷಣ ಹಿಂದಿರುಗಿಸುವಂತೆ ಯುಎಇ ಕೇಳುತ್ತಿದೆ. ಈ ಮೊತ್ತ ಹೆಚ್ಚುಕಮ್ಮಿ ಪಾಕಿಸ್ತಾನದ ವಿದೇಶಿ ಮೀಸಲಿನ ಶೇ.18ರಷ್ಟಾಗುತ್ತದೆ. ಸಾಲ ಮರುಪಾವತಿಯ ಅವಧಿ ವಿಸ್ತರಿಸಿ ಎಂದು ಯುಎಇ ಬಳಿ ಪಾಕ್ ಮನವಿ ಮಾಡಿತ್ತು. ಈಗ ಬಡ್ಡಿ ಪಾವತಿಸುತ್ತೇವೆ, ಆಮೇಲೆ ಅಸಲು ಹಿಂದಿರುಗಿಸುತ್ತೇವೆ ಎಂದು ಹೇಳಿತ್ತು. ಆದರೆ, ಎಷ್ಟೇ ಗೋಗರೆದರೂ ಯುಎಇ ಒಪ್ಪಿಲ್ಲ. ಭಾರತದ ಚಿತಾವಣೆಯಿಂದಲೇ ಯುಎಇ ಹೀಗೆ ಮಾಡುತ್ತಿದೆ ಎಂದೂ ಪಾಕ್‌ನ ಕೆಲವರು ಹೇಳುತ್ತಿದ್ದಾರೆ.

ಪಾಕಿಸ್ತಾನದ ಸಂಸದ ಮುಶಾಹಿದ್ ಹುಸೇನ್ ಇನ್ನೊಂದು ಹೆಜ್ಜೆ ಮುಂದೆ ಹೋಗಿ, 'ಯುಎಇನಲ್ಲಿ 43 ಲಕ್ಷ ಭಾರತೀಯರು ವಾಸಿಸುತ್ತಿದ್ದಾರೆ. ಭಾರತದ ಜತೆಗೆ ಯುಎಇ ಸಖ್ಯ ಹೆಚ್ಚಾಗಿದೆ. ಒಂದು ದಿನ ಯುಎಇ ಕೂಡ ಅಖಂಡ ಭಾರತದ ಭಾಗವಾಗಬಹುದು ಎಂದು ಹೇಳಿದ್ದಾರೆ.' ನನ್ನ ಪ್ರಕಾರ ಇದು ಮೂರ್ಖತನದ ಹೇಳಿಕೆ. ಭಾರತ 'ವಸುದೈವ ಕುಟುಂಬಕಂ' ಎಂಬ ತತ್ವದಲ್ಲಿ ನಂಬಿಕೆ ಇರಿಸಿರುವ ದೇಶ. ಜಗತ್ತೇ ಒಂದು ಕುಟುಂಬ ಎಂದು ನಾವು ನಂಬಿದ್ದೇವೆ. ನಮ್ಮ ವಿದೇಶಾಂಗ ನೀತಿಯಲ್ಲೂ ಇದೇ ತತ್ವ ಅಡಗಿದೆ. ಎಲ್ಲ ದೇಶಗಳೂ ಸಮೃದ್ಧಿಯಿಂದ ಇರಲಿ ಎಂದು ಭಾರತ ಬಯಸುತ್ತದೆ. ಪಾಕಿಸ್ತಾನಕ್ಕೂ ಒಳ್ಳೆಯದಾಗಲಿ ಎಂದೇ ನಾವು ಹಾರೈಸುತ್ತೇವೆ. ಆದರೆ ಅದಕ್ಕೆ ಪ್ರತಿಯಾಗಿ ಪಾಕಿಸ್ತಾನ ಏನು ಮಾಡುತ್ತದೆ? ಒಂದೆಡೆ ಜಗತ್ತಿನೆದುರು ಆರ್ಥಿಕ ನೆರವಿನ ಭಿಕ್ಷೆ ಬೇಡುತ್ತದೆ, ಇನ್ನೊಂದೆಡೆ ಭಯೋತ್ಪಾದಕರನ್ನು ತಯಾರಿಸುವ ಕಾರ್ಖಾನೆಗಳನ್ನು ಬೆಳೆಸುತ್ತದೆ.

ಮುಶಾಹಿದ್ ಹುಸೇನ್‌ಗೆ ನಾನೊಂದು ವಿಷಯವನ್ನು ನೆನಪಿಸಬೇಕು. ಪಾಕಿಸ್ತಾನ ಇತ್ತೀಚೆಗೆ ಸೌದಿ ಅರೇಬಿಯಾದ ಜತೆಗೆ ಒಂದು ಒಪ್ಪಂದ ಮಾಡಿಕೊಂಡಿದೆ. ಅದು ಯುಎಇಗೆ ಸಿಟ್ಟು ತರಿಸಿಲ್ಲವೇ? ಇತ್ತೀಚೆಗೆ ಇರಾನ್ ಮಾಡಿದ ದಾಳಿಗಳೆಲ್ಲ ಹೆಚ್ಚಾಗಿ ಯುಎಇಯನ್ನೇ ಗುರಿಯಾಗಿಸಿಕೊಂಡಿದ್ದವು. ಬರೋಬ್ಬರಿ 2,000 ಕ್ಷಿಪಣಿಗಳನ್ನು ಯುಎಇ ಮೇಲೆ ಇರಾನ್ ಹಾರಿಸಿದೆ. ಆದರೂ ಯುಎಇಯನ್ನು ಕದನ ವಿರಾಮದ ಮಾತುಕತೆಯಲ್ಲಿ ಸೇರಿಸಿಕೊಂಡಿಲ್ಲ, ಆದ್ದರಿಂದಲೇ ಯುಎಇ ಕದನ ವಿರಾಮವನ್ನು ಸ್ವಾಗತಿಸಿದರೂ ಅದರಲ್ಲಿ ಪಾಕಿಸ್ತಾನದ ಪಾತ್ರವಿದೆ ಎಂಬುದನ್ನು ಎಲ್ಲೂ ಉಲ್ಲೇಖಿಸಿಲ್ಲ. ಯುಎಇ ವಿಶಾಲ ಹೃದಯದ ದೇಶ ಎಂಬುದನ್ನು ಮುಶಾಹಿದ್ ಹುಸೇನ್ ಮರೆಯಬಾರದು. ಮುಸ್ಲಿಂ ದೇಶವಾಗಿದ್ದರೂ ಅದು ತನ್ನ ಗಡಿಯೊಳಗೆ ಹಿಂದೂ ದೇವಸ್ಥಾನಗಳನ್ನು ನಿರ್ಮಿಸಲು ಅನುಮತಿ ನೀಡಿದೆ. ಯಾವ ಕಾರಣಕ್ಕೆ ಯುಎಇಗೆ ತನ್ನ ಮೇಲೆ ಬೇಸರವಾಗಿದೆ ಎಂಬುದನ್ನು ಪಾಕಿಸ್ತಾನ ತಿಳಿದುಕೊಳ್ಳಬೇಕೇ ಹೊರತು ಅದಕ್ಕೂ ಭಾರತವನ್ನು ದೂಷಿಸಿದರೆ ಏನು ಪ್ರಯೋಜನ?

ಮಜಾ ನೋಡಿ, ಬಾಂಗ್ಲಾದೇಶ ಕೂಡ ಕದನ ವಿರಾಮವನ್ನು ಸ್ವಾಗತಿಸುವಾಗ ಪಾಕಿಸ್ತಾನದ ಹೆಸರು ಹೇಳಿಲ್ಲ. ಅದಕ್ಕೂ ಭಾರತ ಕಾರಣವೇ? ಖಂಡಿತ ಅಲ್ಲ. ಬಾಂಗ್ಲಾದೇಶದ ಹೊಸ ಸರಕಾರಕ್ಕೆ ಪಾಕಿಸ್ತಾನದ ಯೋಗ್ಯತೆಯೇನು ಎಂಬುದು ಅರ್ಥವಾಗಿದೆ. ನಾವು ಪಾಕಿಸ್ತಾನದ ಕಡೆಗೆ ವಾಲಿದರೆ ಪ್ರಪಾತಕ್ಕೆ ಬೀಳುತ್ತೇವೆ ಎಂಬುದು ಬಾಂಗ್ಲಾದೇಶದ ಅರಿವಿಗೆ ಬಂದಿದೆ. ಶೇಖ್ ಹಸೀನಾ ಪದಚ್ಯುತಿಯ ಬಳಿಕ ಮೊಹಮ್ಮದ್ ಯೂನಸ್‌ರನ್ನು ಬಳಸಿಕೊಂಡು ಬಾಂಗ್ಲಾದೇಶವನ್ನು ಮೂಲಭೂತವಾದದತ್ತ ತಳ್ಳಲು ಪಾಕಿಸ್ತಾನ ಸಾಕಷ್ಟು ಪ್ರಯತ್ನ ಮಾಡಿತು. ಆದರೆ, ಅದು ಬಹಳ ಕಾಲ ನಡೆಯಲಿಲ್ಲ, ಬಾಂಗ್ಲಾದೇಶದ ಜನರಿಗೆ ಪಾಕಿಸ್ತಾನದ ಕಿತಾಪತಿ ಅರ್ಥವಾಯಿತು.

ಹೀಗಾಗಿ ಅವರು ಪ್ರಜಾಪ್ರಭುತ್ವವನ್ನು ಆಯ್ಕೆ ಮಾಡಿಕೊಂಡರು. ಬಾಂಗ್ಲಾದೇಶದ ಹೊಸ ಪ್ರಧಾನ ಮಂತ್ರಿ ತಾರೀಖ್ ರೆಹಮಾನ್ ಒಬ್ಬ ಉದಾರವಾದಿ ಮತ್ತು ಪ್ರಜಾಪ್ರಭುತ್ವವಾದಿ ನಾಯಕ. ಅವರ ವಿದೇಶಾಂಗ ಸಚಿವ ಡಾ. ಖಲೀಲುರ್ ರೆಹಮಾನ್ ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದರು. ಅವರು ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್‌ರನ್ನು ಭೇಟಿಯಾಗಿ, ಒಟ್ಟಿಗೇ ಊಟ ಮಾಡಿದರು. ಮರುದಿನವೇ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಜತೆಗೆ ಅವರ ಸಭೆ ನಡೆಯಿತು. ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಮತ್ತು ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಜತೆಗೂ ಅವರು ಮಾತುಕತೆ ನಡೆಸಿದರು. ಮರುದಿನ ಜೈಶಂಕರ್ ಜತೆಗೆ ಒಂದೇ ವಿಮಾನದಲ್ಲಿ ಅವರು ಮಾರಿಷಸ್‌ಗೆ ತೆರಳಿದರು. ಉಭಯ ದೇಶಗಳ ಸಚಿವರ ಮಧ್ಯೆ ಏನು ಚರ್ಚೆ ನಡೆಯಿತು ಎಂಬುದು ಪಾಕಿಸ್ತಾನವನ್ನು ಕಾಡುತ್ತಿದೆ. ಏಕೆಂದರೆ ಎರಡೂ ದೇಶದ ನಾಯಕರು ಆ ಬಗ್ಗೆ ತುಟಿಯನ್ನೇ ಬಿಚ್ಚಿಲ್ಲ. ಭಾರತ ಮತ್ತು ಬಾಂಗ್ಲಾದೇಶ ಮತ್ತೊಮ್ಮೆ ತಮ್ಮ ಹಳೆಯ ಗೆಳೆತನವನ್ನು ಮರುಸ್ಥಾಪನೆ ಮಾಡಿಕೊಳ್ಳುವತ್ತ ಸಾಗುತ್ತಿವೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಇದನ್ನು ನೋಡಿ ಪಾಕಿಸ್ತಾನಕ್ಕೆ ಹೊಟ್ಟೆ ಉರಿದರೆ ಅದಕ್ಕೆ ಭಾರತವೇನು ಮಾಡಲು ಸಾಧ್ಯ? ಹೊಟ್ಟೆಕಿಚ್ಚು ಪಡುವುದೇ ಪಾಕಿಸ್ತಾನದ ಹಣೆಯಲ್ಲಿ ಬರೆದಿದ್ದರೆ ಹಾಗೇ ಆಗಲಿ ಬಿಡಿ!

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ರಾಜಕೀಯ ಸೌಹಾರ್ದತೆ ಮೆರೆದ ಸಿಎಂ ಸಿದ್ದರಾಮಯ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಾವೇ ಖುದ್ದಾಗಿ ವಿಮಾನ ನಿಲ್ದಾಣಕ್ಕೆ ತೆರಳಿ ಪ್ರಧಾನಿ ಮೋದಿಯವರನ್ನು ಸ್ವಾಗತಿಸಿದ್ದು ರಾಜಕೀಯ

ಸೌಹಾರ್ದತೆಯ ಸಂಕೇತ. ಪ್ರಧಾನಿ ಯವರ ಭೇಟಿ ಸ್ವಪಕ್ಷದವರಿಗೆ ದುಬಾರಿಯಾಗಿರುವಾಗ ವಿರೋಧ ಪಕ್ಷದ ಮುಖ್ಯಮಂತ್ರಿಗಳನ್ನು ಹತ್ತಿರ ಕರೆದು ಕಿವಿಯಲ್ಲಿ ಏನೋ ಬುಸಗುಟ್ಟಿದ್ದನ್ನು ಗಮನಿಸಿದಾಗ ಪ್ರಧಾನಿ ಮೋದಿ ಮುಖ್ಯಮಂತ್ರಿಯವರ ದೂರದೃಷ್ಟಿಯ ಆಡಳಿತವನ್ನು ಮೆಚ್ಚಿಕೊಂಡತ್ತಿದೆ. ಯಾವುದೇ ಪಕ್ಷದ ಪ್ರಧಾನಿಯಾಗಲಿ ಅಥವಾ ಮುಖ್ಯಮಂತ್ರಿಗಳೇ ಆಗಲಿ ಒಕ್ಕೂಟ ವ್ಯವಸ್ಥೆಯಲ್ಲಿ ಸಹಕರಿಸಿ ಅಭಿವೃದ್ಧಿಗೆ ಶ್ರಮಿಸಬೇಕು ಅಂದಾಗ ಮಾತ್ರ ಒಕ್ಕೂಟ ವ್ಯವಸ್ಥೆಗೆ ಒಂದು ಅರ್ಥ.

- ವಿ.ಜಿ. ಇನಾಮದಾರ, ಸಾರವಾಡ.

ದುಷ್ಟ ಜನರಿಗೆ ಶಿಕ್ಷೆ! ಜನಸಾಮಾನ್ಯರಿಗೆ ರಕ್ಷಣೆ?

ಧಾರವಾಡದ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಸಿಬಿಐ ವಿಶೇಷ ತನಿಖೆಯಿಂದಾಗಿ ಮತ್ತು ನ್ಯಾಯಾಲಯದ ಐತಿಹಾಸಿಕ ತೀರ್ಪಿನಿಂದಾಗಿ ಆರೋಪಿಗಳು ಎಷ್ಟೇ ಪ್ರಭಾವಿಗಳಾದರೂ ಕಾನೂನಿನ ಮುಂದೆ ಸಮಾನರು ಎಂಬುದು ಸಾಬೀತಾಗಿದೆ. ಸ್ಥಳೀಯ ಪೊಲೀಸರೇ ಪ್ರಾಸಿಕ್ಯೂಷನ್ ವಿರುದ್ಧವಾಗಿ ಅಂದರೆ ಆರೋಪಿತರ ಪರವಾಗಿ ಸಾಕ್ಷ್ಯ ನೀಡಿದ ಫಲವಾಗಿ ಪೊಲೀಸರ ವಿರುದ್ಧ ಕಾನೂನಾತ್ಮಕ ಕ್ರಮಕ್ಕೆ ನ್ಯಾಯಾಲಯ ಸೂಚನೆ ನೀಡಿದೆ. ಕಳೆದ ವಾರ ತಮಿಳುನಾಡಿನ ಲಾಕಪ್‌ಡೆತ್ ಪ್ರಕರಣದಲ್ಲಿ ಹಲವು ಪೊಲೀಸರಿಗೆ ಮರಣದಂಡನೆ ವಿಧಿಸಲಾಗಿದೆ. ದುಷ್ಟರಿಗೆ ಶಿಕ್ಷೆ ಕೊಡಿಸಿ ಜನಸಾಮಾನ್ಯರಿಗೆ ರಕ್ಷಣೆ ನೀಡಿ ನ್ಯಾಯ ಕೊಡಿಸಬೇಕಾದ ಕಾನೂನುಪಾಲಕ ಪೊಲೀಸರೇ, ಕಾನೂನುಬಾಹಿರ ಅಕ್ರಮ ನಡೆಸಿ ಶಿಕ್ಷೆಗೀಡಾಗುತ್ತಿರುವುದು ಸುಭದ್ರ, ಸುರಕ್ಷಿತ ಸಮಾಜದ ಅಣಕವೇ ಸರಿ. ಪೊಲೀಸರ ಇಂತಹ ದುರ್ವರ್ತನೆ ತಡೆ ಬಗ್ಗೆ ಗೃಹ ಇಲಾಖೆ ಮತ್ತು ಉನ್ನತ ಪೊಲೀಸ್ ಅಧಿಕಾರಿಗಳ ಪ್ರಯತ್ನವಾದರೂ ಏನು? ಇದನ್ನು ತಡೆಗಟ್ಟಲು ಸಾಧ್ಯವೇ ಇಲ್ಲವೇ!?

- ಎಸ್.ಎನ್. ರಮೇಶ್, ಸಾತನೂರು ಮಂಡ್ಯ.

ಸಮಾಜದಲ್ಲಿ ಪ್ರೀತಿ- ಸಾಮರಸ್ಯದ ಭಾವ ಬಿತ್ತಲಿ!

ರಾಜಕೀಯವಾಗಿ ಮತ್ತು ಇತರ ವಿಷಯಗಳಲ್ಲಿ ತಮ್ಮ ನಿಲುವುಗಳನ್ನು ತಿಳಿಸಲು, ವಿರೋಧಿಸಲು ಪ್ರತಿಪಕ್ಷಗಳಿಗೆ ಅವಕಾಶ ಇರುತ್ತದೆ. ಇತ್ತೀಚೆಗೆ ಕೆಲವರು ಆರ್‌ಎಸ್‌ಎಸ್ ಹಾಗೂ ಬಿಜೆಪಿಯವರನ್ನು ಕುರಿತು ಪ್ರಚೋದನಕಾರಿಯಾಗಿ ಮಾತನಾಡಿದ್ದು, ದ್ವೇಷದ ಭಾವನೆಗಳಿಗೆ ಆಸ್ಪದ ಮಾಡಿಕೊಡುತ್ತದೆ. ಪ್ರಭಾವಿ ವ್ಯಕ್ತಿಗಳು ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡಲು ನಿರ್ದಿಷ್ಟವಾದ ವಿಷಯ, ಸಲಹೆ ಸೂಚನೆ, ಆರೋಗ್ಯಕರ ಚರ್ಚೆ ನಡೆಸಬೇಕೇ ವಿನಃ ಹಿಂಸಾತ್ಮಕ ಚಟುವಟಿಕೆಗಳಿಗೆ ಉತ್ತೇಜನ ನೀಡುವಂತಹ ಮಾತುಗಳನ್ನು ಆಡಬಾರದು. ಆಡಳಿತ ಮತ್ತು ಪ್ರತಿಪಕ್ಷ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತೊಡಗಿಕೊಳ್ಳಬೇಕು. ಈ ನಿಟ್ಟಿನಲ್ಲಿ ಆಳುವ ಪಕ್ಷಕ್ಕೂ ಪ್ರತಿಪಕ್ಷಕ್ಕೂ ತನ್ನದೇ ಆದ ರಚನಾತ್ಮಕ ಜವಾಬ್ದಾರಿಗಳಿವೆ ಅದನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಿ. ಸಮಾಜದಲ್ಲಿ ಪ್ರೀತಿ ಸಾಮರಸ್ಯದ ಭಾವ ಬಿತ್ತಲಿ.

- ಉದಯ ಮ. ಯಂಡಿಗೇರಿ, ಧಾರವಾಡ.

ಬದಲಾದ ಪತ್ರಿಕೆ, ಪತ್ರಕರ್ತರ ಒಳನೋಟ ನಿಜಕ್ಕೂ ಅದ್ಭುತ

ಅಂದು, ಅಂದರೆ ಇಂದಿರಾ ಗಾಂಧಿ ಸಮಯದಲ್ಲಿ, ಸರಕಾರದ ಯಾವುದೇ ವಿಷಯಗಳನ್ನು ಜನರಿಗೆ ತಲುಪಿಸಬೇಕೆಂದಿದ್ದರೆ, ಅದಕ್ಕಿರುವ ಒಂದೇ ಮಾರ್ಗ ಪತ್ರಿಕೆ ಮತ್ತು ಅದನ್ನು ಪ್ರತಿನಿಧಿಸುವ ಪತ್ರಕರ್ತರಾಗಿದ್ದರು. ಹೀಗಾಗಿ,'ಪತ್ರಿಕಾಗೋಷ್ಠಿ' ಎಂಬುದೊಂದು ಅತಿ ಮಹತ್ವದ್ದಾಗಿತ್ತು. ಅಲ್ಲೇ ಕೆಲ ಪ್ರತಿಷ್ಠಿತ ಪತ್ರಿಕೆ ಗಳ, ಪ್ರತಿಷ್ಠಿತ ವರದಿಗಾರರು, ತಮ್ಮ ಮಹತ್ವವನ್ನು ಸಾರುವುದೂ ಇರುತ್ತಿತ್ತು! ಇದೊಂದು ಕೇವಲ ಮಾಹಿತಿ ಹಂಚಿಕೆಯ ವೇದಿಕೆಯಷ್ಟೇ ಅಲ್ಲ, ಜವಾಬ್ದಾರಿಯ ಸಂವಾದ. ಹೀಗಾಗಿ ಅದೇನು ಸಡಗರ, ಕೊಬ್ಬು, ಧಿಮಾಕು! ತಮ್ಮನ್ನು ಬಿಟ್ಟು ಪತ್ರಿಕಾಗೋಷ್ಠಿಯೇ ನಡೆಯದು ಎನ್ನುವವರೂ ಇದ್ದರು. ಅದೂ ನಿಜವೇ ಇತ್ತು. ಪ್ರಸಿದ್ಧ ಮತ್ತು ಹೆಚ್ಚು ಪ್ರಸರಣವಿರುವ ಪತ್ರಿಕೆಯಲ್ಲಿ ಯಾವುದೇ ಸುದ್ದಿ ಬಂದಿಲ್ಲ ಅಂದರೆ ಅದು ಸುದ್ದಿಯೇ ಆಗುತ್ತಿರಲಿಲ್ಲ, ಪತ್ರಿಕೆ ಅಂದರೆ ಸುದ್ದಿಯ ಮೂಲ, ಪತ್ರಕರ್ತ ಅಂದರೆ ಸುದ್ದಿಯ ಸೃಷ್ಟಿಕರ್ತ! ಯಾವುದಕ್ಕೆ ಎಷ್ಟು ಮಹತ್ವ ಕೊಡಬೇಕು, ಯಾವ ರೀತಿ ಪ್ರಕಟಿಸಬೇಕು ಎಂಬು ದನ್ನೆಲ್ಲ ನಿರ್ಧರಿಸುವ ಮಹತ್ತರ ಪಾತ್ರ ಅವನದ್ದಾಗಿತ್ತು. ಹೀಗಾಗಿ, ರಾಜಕೀಯ ವಲಯದಲ್ಲಂತೂ ಪತ್ರಿಕೆಯೇ ಸರಕಾರವನ್ನು ನಡೆಸುವಂತಹದಾಗಿತ್ತು ಅಂದರೂ ಅತಿಶಯೋಕ್ತಿ ಅಲ್ಲ. ಇದನ್ನೇ ಬಳಸಿಕೊಂಡು, ಅದೆಷ್ಟೋ ಪತ್ರಕರ್ತರು, ತಮಗೆ ಸರಿಕಂಡಿದ್ದನ್ನೇ ಪ್ರಕಟಿಸಿ, ಅಲ್ಲೋಲ ಕಲ್ಲೋಲ ಸೃಷ್ಟಿಸಿದ್ದು ಇದೆ.

ಆದರೆ ಈಗ? ಪತ್ರಕರ್ತರನ್ನು ಮಾತಾಡಿಸುವವರೇ ಇಲ್ಲ, ಕಾರಣ, ಇಂದು ಪತ್ರಿಕಾಗೋಷ್ಠಿ ಯೂ ಬೇಕಿಲ್ಲ, ಪತ್ರಕರ್ತರೂ ಬೇಕಿಲ್ಲ. ಎಲ್ಲವನ್ನೂ ಫೇಸ್ ಬುಕ್, ಯುಟ್ಯೂಬ್ ಕಬಳಿಸಿಕೊಂಡಿದೆ. ಅಷ್ಟೇ ಅಲ್ಲ, ಸುದ್ದಿ ಗಾಗಿ ಪತ್ರಿಕೆಯ ದಾರಿ ಕಾಯುವ ಅವಶ್ಯಕತೆಯೂ ಇಲ್ಲ. ಹಾಗೆ ನೋಡಿದರೆ, ಆಧುನಿಕ ತಂತ್ರಜ್ಞಾನದ ಅರಿವಿದ್ದವರೆಲ್ಲ ಪತ್ರಕರ್ತರೇ! ತಮ್ಮದೇ ಆದ ಯೂಟ್ಯೂಬ್ ಹುಟ್ಟುಹಾಕಿ, ತಮಗೆ ಸರಿ ಕಂಡಿದ್ದನ್ನು, ಸತ್ಯಾಸತ್ಯತೆಯನ್ನೂ ಅರಿಯದೆ, ಬಿತ್ತರಿಸಿ ಬಿಡುವುದು. ಹೆಚ್ಚಿನ ಸಂದರ್ಭ ಇದು ಅಪಾಯಕಾರಿ. ಆದರೂ ತಡೆಯಲಾಗದಂತಹ ಮಾಧ್ಯಮ!? ಅದನ್ನೇ ಸಾಮಾಜಿಕ ಜಾಲತಾಣ ಎನ್ನುವುದು! ಇಲ್ಲಿ ಸತ್ಯತೆ, ವಾಸ್ತ ವತೆಗೆ ಕಡಿಮೆ ಒತ್ತು, ಮನರಂಜನೆಗೆ ಹೆಚ್ಚು ಒತ್ತು. ಇದನ್ನೇ 'ಮೀಡಿಯಾ ಕ್ರಾಂತಿ' ಅಂತ ಲೇಖಕರು ಹೇಳಿದ್ದಾರೆ. ಇದು ನಿಜಕ್ಕೂ ಕ್ರಾಂತಿಯೋ, ಆತಂಕಕಾರಿಯೋ ಎಂಬುದು ಅವರ ವರ ಭಾವಕ್ಕೆ ಬಿಟ್ಟಿದ್ದು. ಇದೇ ಮೀಡಿಯಾ ಕ್ರಾಂತಿ, ನರೇಂದ್ರ ಮೋದಿಯಂಥವರಿಗೆ ವರದಾನದಂತೆ ಕೆಲಸ ಮಾಡುತ್ತಿದೆ ಎನ್ನುವುದೂ ಸತ್ಯ. ಕಳೆದ 13 ವರ್ಷಗಳಲ್ಲಿ ಅವರು ಒಂದೇ ಒಂದು ಪತ್ರಿಕಾ ಗೋಷ್ಠಿ ಕರೆದಿಲ್ಲ. ಅವರು ದೇಶಕ್ಕಾಗಿ ಮಾಡುತ್ತಿರುವ ಸೇವೆಯ ಪರಿಚಯವೇ ಆಗಿಲ್ಲ ಅನ್ನಬೇಕೆ? ಅವರೂ ಇಂದಿನ ಡಿಜಿಟಲ್ ಯುಗಕ್ಕೆ , ಆಧುನಿಕತೆಗೆ ತಮ್ಮನ್ನು ತಾವು ಒಪ್ಪಿಸಿಕೊಂಡು ಬಿಟ್ಟಿದ್ದಾರೆ. ಅವರು ಎಂದೂ ಪತ್ರಕರ್ತರನ್ನುದ್ದೇಶಿಸಿ ಮಾತಾಡಲೂ ಇಲ್ಲ, ಅವರ ಮಾತುಗಳಲ್ಲೇ 'ಮನ್ ಕಿ ಬಾತ್' ಮತ್ತು ಸಾಮಾಜಿಕ ಜಾಲತಾಣ. ಮೋದಿ ಅವರಿಗೆ ಮಾಧ್ಯಮ ಸಲಹೆಗಾರರೂ ಇಲ್ಲ, ಕಾರ್ಯದರ್ಶಿಯೂ ಇಲ್ಲ. ಅವರೆಂದೂ 'ಸಾಂಪ್ರದಾಯಿಕ' ಪತ್ರಿಕಾಗೋಷ್ಠಿ ಕರೆದೇ ಇಲ್ಲ. ಇಷ್ಟಾದರೂ ದೇಶದ ಜನರೊಡನೆ ನೇರ ಸಂಪರ್ಕ ಹೊಂದಿದ್ದಾರೆ ಅಂದರೆ ಇದೂ ತಾಂತ್ರಿಕತೆಯ ಕಮಾಲ್ ಅಲ್ಲವೇ? ಲೇಖಕರ ನೂರೆಂಟು ವಿಶ್ವದಲ್ಲಿ, ವರದಿ, ಸುದ್ದಿ ಮತ್ತು ಅಭಿಪ್ರಾಯಗಳ ಬಗೆಗೂ ಚರ್ಚಿಸಿದ್ದಾರೆ. ಬೆಳೆಯುತ್ತಿರುವ 'ಯೂಟ್ಯೂಬ್' ಚಾನೆಲ್‌ಗಳ ಬಗ್ಗೆಯು ಅದ್ಭುತವಾಗಿ ತಿಳಿಸಿದ್ದಾರೆ.

- ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ.

ಆಮದಿಂದಲೇ ಅಲ್ಲವೇ ಆಮಯ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ. ಸಾಧನಶ್ರೀ
vveditoped@gmail.com

ನಾವು ಸೇವಿಸುವ ಆಹಾರವೇ ನಮ್ಮ ಆರೋಗ್ಯವನ್ನು ನಿರ್ಮಿಸುತ್ತದೆ ಎಂಬ ನಂಬಿಕೆ ಸಾಮಾನ್ಯವಾಗಿದೆ. ಆದರೆ, ಆಯುರ್ವೇದವು ಅದಕ್ಕಿಂತ ಆಳವಾದ ಸತ್ಯವನ್ನು ಸ್ಪಷ್ಟಪಡಿಸುತ್ತದೆ. ಆಹಾರದ ಗುಣಮಟ್ಟಕ್ಕಿಂತ, ಅದು ದೇಹದಲ್ಲಿ ಹೇಗೆ ಜೀರ್ಣವಾಗುತ್ತದೆ ಎಂಬುದೇ ಆರೋಗ್ಯದ ನಿಜವಾದ ಆಧಾರ. ಇಂದಿನ ವೇಗದ ಜೀವನಶೈಲಿಯಲ್ಲಿ, ನಾವು ಆಹಾರದ ಆಯ್ಕೆಯ ಬಗ್ಗೆ ಎಚ್ಚರಿಕೆಯಿಂದಿದ್ದರೂ, ಜೀರ್ಣಕ್ರಿಯೆಯ ಗುಣಮಟ್ಟವನ್ನು ಬಹಳಷ್ಟು ಕಡೆಗಣಿಸುತ್ತಿದ್ದೇವೆ. ಪರಿಣಾಮವಾಗಿ, ಸಂಪೂರ್ಣವಾಗಿ ಜೀರ್ಣವಾಗದ ಆಹಾರವು ದೇಹದಲ್ಲಿ ಅಪೂರ್ಣ ಸ್ಥಿತಿಯಲ್ಲಿ ಉಳಿದುಕೊಂಡು, ಆಮ ಎಂಬ ವಿಷಸಮಾನ ಪದಾರ್ಥವಾಗಿ ರೂಪುಗೊಳ್ಳುತ್ತದೆ.

ಈ ಆಮವು ದೇಹದಲ್ಲಿ ತಕ್ಷಣವೇ ಯಾವುದೇ ತೀವ್ರ ಲಕ್ಷಣಗಳನ್ನು ಉಂಟುಮಾಡದೇ ಇದ್ದರೂ, ಅದು ಮೌನವಾಗಿ, ನಿಧಾನವಾಗಿ ಸಂಚಯವಾಗುತ್ತದೆ. ಇದೇ ಕಾರಣದಿಂದ ಅದು ಹೆಚ್ಚು ಅಪಾಯಕಾರಿ. ದಿನನಿತ್ಯದ ಅಸಮರ್ಪಕ ಆಹಾರ ಪದ್ಧತಿ, ಅಸಮಯದ ಊಟ, ಮಾನಸಿಕ ಒತ್ತಡ ಮತ್ತು ಅನಿಯಂತ್ರಿತ ಜೀವನಶೈಲಿಗಳ ಸಂಯೋಗದಿಂದ ಆಮವು ದೇಹದಲ್ಲಿ ಕ್ರಮೇಣ ಹೆಚ್ಚುತ್ತದೆ. ಆಮವು ಕೇವಲ ಜೀರ್ಣಾಂಗಗಳಿಗೆ ಮಾತ್ರ ಸೀಮಿತವಾಗುವುದಿಲ್ಲ. ಅದು ದೇಹದ ಸ್ರೋತಸ್ಸುಗಳ ಮೂಲಕ ಸಂಚರಿಸಿ, ವಿವಿಧ ಅಂಗವ್ಯವಸ್ಥೆಗಳಲ್ಲಿ ಅಂಟಿಕೊಂಡು, ಅವುಗಳ ಸಹಜ ಕಾರ್ಯವೈಖರಿಯನ್ನು ವ್ಯತ್ಯಯಗೊಳಿಸುತ್ತದೆ. ಈ ಅಡ್ಡಿಪಡಿಸುವಿಕೆಯೇ ನಿಧಾನವಾಗಿ ಅಸಮತೋಲನಕ್ಕೆ ದಾರಿ ಮಾಡಿ, ನಂತರ ರೋಗಗಳಾಗಿ ವ್ಯಕ್ತವಾಗುತ್ತದೆ.

ಆರಂಭಿಕ ಹಂತದಲ್ಲಿ ಇದು ಅತಿ ಸೂಕ್ಷ್ಮ ಲಕ್ಷಣಗಳ ಮೂಲಕ ತನ್ನ ಹಾಜರಾತಿಯನ್ನು ಸೂಚಿಸುತ್ತದೆ ಅಂದರೆ ದಣಿವು, ದೇಹಗೌರವ, ಆಸಕ್ತಿಯ ಕೊರತೆ, ಜೀರ್ಣಕ್ರಿಯೆಯ ಮಂದಗತಿ. ಆದರೆ ಈ ಸೂಚನೆಗಳನ್ನು ನಾವು ನಿರ್ಲಕ್ಷಿಸಿದಂತೆ, ಆಮವು ದೇಹದ ಆಳಕ್ಕೆ ಪ್ರವೇಶಿಸಿ, ದೀರ್ಘಕಾಲದ ವ್ಯಾಧಿಗಳಿಗೆ ಕಾರಣವಾಗುತ್ತದೆ.

ಆಯುರ್ವೇದದ ದೃಷ್ಟಿಯಲ್ಲಿ, ರೋಗವು ಏಕಾಏಕಿ ಹುಟ್ಟುವ ಘಟನೆಯಲ್ಲ. ಅದು ನಮ್ಮ ದೈನಂದಿನ ಜೀವನದ ಸಣ್ಣ-ಸಣ್ಣ ತಪ್ಪುಗಳ ಸಂಗ್ರಹಿತ ಪರಿಣಾಮ. ಆಮ ಕೂಡ ಅದೇ ರೀತಿಯ ಪ್ರಕ್ರಿಯೆಯ ಫಲವಾಗಿದ್ದು, ಕ್ಷಣಿಕವಲ್ಲ, ಕ್ರಮೇಣ ಬೆಳೆಯುವ ಒಂದು ಸ್ಥಿತಿ.

ಹೀಗಾಗಿ, ಆರೋಗ್ಯವನ್ನು ಕಾಪಾಡುವುದು ಎಂದರೆ ಕೇವಲ ಉತ್ತಮ ಆಹಾರ ಸೇವಿಸುವುದಲ್ಲ; ಅದನ್ನು ಸರಿಯಾಗಿ ಜೀರ್ಣವಾಗುವಂತೆ ನೋಡಿಕೊಳ್ಳುವುದು, ಜೀರ್ಣಾಗ್ನಿಯನ್ನು ಸಂರಕ್ಷಿಸುವುದು ಮತ್ತು ಆಮದ ನಿರ್ಮಾಣವನ್ನು ತಡೆಯುವುದು ಎಂಬ ಸಮಗ್ರ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವುದು. ಇದನ್ನೇ ಆಯುರ್ವೇದವು ನಿಜವಾದ ಆರೋಗ್ಯದ ಮಾರ್ಗವೆಂದು ನಮಗೆ ತಿಳಿಸುತ್ತದೆ.

ಆಮ - ಎಲ್ಲ ರೋಗಗಳ ಮೂಲ ಕಾರಣ

ಆಯುರ್ವೇದವು ರೋಗವನ್ನು ಕೇವಲ ಲಕ್ಷಣಗಳ ಮಟ್ಟದಲ್ಲಿ ನೋಡದೇ, ಅದರ ಮೂಲ ಕಾರಣವನ್ನು ಅನ್ವೇಷಿಸುತ್ತದೆ. ಈ ಅನ್ವೇಷಣೆಯಲ್ಲಿ ಮರುಮರು ಕಾಣಿಸಿಕೊಳ್ಳುವ ಒಂದು ಪ್ರಮುಖ ಕಾರಣ ಆಮ. ಆಮ ಎಂಬುದು ಅಷ್ಟೇ ಸಾಮಾನ್ಯ ಪದವಲ್ಲ, ಅದು ದೇಹದಲ್ಲಿ ಉಂಟಾಗುವ ಅನೇಕ ವ್ಯಾಧಿಗಳ ಮೂಲಭೂತ ಕಾರಣವೆಂದು ಆಯುರ್ವೇದ ಸ್ಪಷ್ಟವಾಗಿ ಹೇಳುತ್ತದೆ. ಇಂದಿನ ಕಾಲದಲ್ಲಿ ನಾವು ಕೇಳುವ ಪದಗಳು-ಟಾಕ್ಸಿನ್ಸ್, ಇನ್ಫ್ಲಮೇಷನ್, ಮೆಟಬಾಲಿಕ್ ವೇಸ್ಟ್, ಗಟ್ ಹೆಲ್ತ್- ಇವೆಲ್ಲಕ್ಕೂ ಆಧಾರಭೂತ ತತ್ವವನ್ನು ಆಯುರ್ವೇದವು ಸಾವಿರಾರು ವರ್ಷಗಳ ಹಿಂದೆಯೇ ಆಮ ಎಂಬ ಪದದ ಮೂಲಕ ವಿವರಿಸಿದೆ

ಆಮ ಎಂದರೆ ಏನು? ಅದರ ಆಳವಾದ ಅರ್ಥ

ಆಮ ಎಂಬ ಪದವು ಅಪಕ್ವ, ಅಪೂರ್ಣ, ಜೀರ್ಣವಾಗದ ಎಂಬ ಅರ್ಥಗಳನ್ನು ಹೊಂದಿದೆ. ಆದರೆ ಇದು ಕೇವಲ ಜೀರ್ಣವಾಗದ ಆಹಾರ ಮಾತ್ರವಲ್ಲ, ಆಯುರ್ವೇದದ ದೃಷ್ಟಿಯಲ್ಲಿ: ಸಂಪೂರ್ಣವಾಗಿ ಪರಿವರ್ತನೆಗೊಳ್ಳದ ಆಹಾರ, ದೇಹಕ್ಕೆ ಉಪಯೋಗವಾಗದ ಪದಾರ್ಥ, ಜೀರ್ಣಕ್ರಿಯೆಯ ಅಪೂರ್ಣ ಉತ್ಪನ್ನ - ಇವೆಲ್ಲವೂ ಸೇರಿ ಆಮ ಎಂದು ಕರೆಯಲ್ಪಡುತ್ತವೆ.

ಆಮದ ಗುಣಗಳು:

ಅವಿಪಕ್ವ - ಸರಿಯಾಗಿ ಜೀರ್ಣವಾಗದದ್ದು
ಅಸಂಯುಕ್ತ - ಒಟ್ಟುಗೂಡದ, ಏಕೀಕೃತವಾಗದ
ದುರ್ಗಂಧ - ದುರ್ವಾಸನೆಯಿರುವುದು
ಬಹು ಪಿಚ್ಛಿಲ - ತುಂಬಾ ಅಂಟಿಕೊಳ್ಳುವ ಸ್ವಭಾವವುಳ್ಳದ್ದು
ಸದನಂ ಸರ್ವಗಾತ್ರಾಣಾಂ - ದೇಹದ ಎಲ್ಲ ಅಂಗಗಳಿಗೆ ಅಥವಾ ಸಂಪೂರ್ಣ ದೇಹಕ್ಕೆ ದುರ್ಬಲತೆ ಉಂಟುಮಾಡುವ ಸಾಮರ್ಥ್ಯವುಳ್ಳದ್ದು.

ಈ ಗುಣಗಳ ಕಾರಣದಿಂದ ಆಮವು ದೇಹದ ಸ್ರೋತಸ್ಸುಗಳಲ್ಲಿ ಅಂಟಿಕೊಂಡು ಅವುಗಳನ್ನು ತಡೆಗಟ್ಟುತ್ತದೆ.

ಅಗ್ನಿ ಮತ್ತು ಆಮ - ಅತ್ಯಂತ ಮುಖ್ಯ ಸಂಬಂಧ

ಆಮವನ್ನು ಅರ್ಥಮಾಡಿಕೊಳ್ಳಲು ಅಗ್ನಿಯನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕ. ಆಯುರ್ವೇದದಲ್ಲಿ ಅಗ್ನಿ ಎಂದರೆ ಕೇವಲ ಜೀರ್ಣಕ್ರಿಯೆಯ ಬೆಂಕಿಯಲ್ಲ ಅದು: ಆಹಾರವನ್ನು ಪೋಷಕಾಂಶಗಳಾಗಿ ಪರಿವರ್ತಿಸುವ ಶಕ್ತಿ, ದೇಹದ ಎಲ್ಲ ಮೆಟಾಬಾಲಿಕ್ ಕ್ರಿಯೆಗಳ ಮೂಲ, ಜೀವಶಕ್ತಿಯ ಕೇಂದ್ರ, ಅಗ್ನಿಪುಷ್ಟಿ ಇದ್ದರೆ ಅದು ಆರೋಗ್ಯ, ಅಗ್ನಿ ದುರ್ಬಲವಾದರೆ ಅದುವೇ ರೋಗ ಅಗ್ನಿ ದುರ್ಬಲವಾದಾಗ: ಆಹಾರವು ಸಂಪೂರ್ಣವಾಗಿ ಜೀರ್ಣವಾಗುವುದಿಲ್ಲ, ಮಧ್ಯದಲ್ಲೇ ಸ್ಥಗಿತವಾಗುತ್ತದೆ, ಆಮ ರೂಪದಲ್ಲಿ ಪರಿವರ್ತನೆಗೊಳ್ಳುತ್ತದೆ. ಆಯುರ್ವೇದದ ಸಿದ್ಧಾಂತವು ಹೀಗೆ ಹೇಳುತ್ತದೆ. 'ರೋಗಾ: ಸರ್ವೇ ಅಪಿ ಮಂದೇ ಅಗ್ನೌ' ಅಂದರೆ ಮಂದವಾದ ಅಗ್ನಿಯೇ ಸರ್ವರೋಗಗಳಿಗೂ ಕಾರಣ.

ಆಮ ಹೇಗೆ ಉತ್ಪತ್ತಿಯಾಗುತ್ತದೆ? - ಜೀವನಶೈಲಿಯ ಪಾತ್ರ

1. ಆಹಾರ ದೋಷಗಳು (ಆಹಾರದ ತಪ್ಪುಗಳು)
- ಅಕಾಲಿಕ ಊಟ
- ಜೀರ್ಣವಾಗುವ ಮುನ್ನ ಮತ್ತೆ ತಿನ್ನುವುದು
- ಹೆಚ್ಚು ತಿನ್ನುವುದು
- ಅತಿ ತಣ್ಣನೆಯ ಅಥವಾ ಫ್ರಿಡ್ಜ್ ಆಹಾರ
- ಪ್ಯಾಕೇಜ್ಡ್, ಪ್ರೊಸೆಸ್ಡ್ ಆಹಾರ
- ಅತಿ ಜಿಡ್ಡಿನ ಅಥವಾ ಅತಿ ಒಣ ಆಹಾರ
- ವಿರುದ್ಧಾಹಾರ (ಉದಾಹರಣೆ: ಹಾಲು + ಹುಳಿಹಣ್ಣು)

2. ವಿಹಾರ ದೋಷಗಳು (ಜೀವನಶೈಲಿಯ ತಪ್ಪುಗಳು)
- ಊಟದ ನಂತರ ತಕ್ಷಣ ಮಲಗುವುದು
- ವ್ಯಾಯಾಮದ ಕೊರತೆ
- ರಾತ್ರಿಯಲ್ಲಿ ತಡವಾಗಿ ನಿದ್ರೆ
- ದಿನದಲ್ಲಿ ಹೆಚ್ಚು ನಿದ್ರೆ

3. ಮನೋಭಾವ (ಮಾನಸಿಕ ಕಾರಣಗಳು)
- ಕೋಪ, ಚಿಂತೆ, ಭಯ, ದುಃಖ
- ಮನಸ್ಸಿನ ಸ್ಥಿತಿ ಕೂಡ ಜೀರ್ಣಕ್ರಿಯೆಯನ್ನು ನೇರವಾಗಿ ಪ್ರಭಾವಿಸುತ್ತದೆ. ಒತ್ತಡದಲ್ಲಿ ತಿನ್ನುವ ಆಹಾರ ಸರಿಯಾಗಿ ಜೀರ್ಣವಾಗುವುದಿಲ್ಲ.

ನಮ್ಮ ದಿನನಿತ್ಯದ ಜೀವನದಲ್ಲೇ ಆಮ - ಕೆಲವು ನೈಜ ಉದಾಹರಣೆಗಳು

ಆಮ ಎಂಬುದು ಕೇವಲ ಶಾಸ್ತ್ರದಲ್ಲಿ ಇರುವ ಪರಿಕಲ್ಪನೆ ಅಲ್ಲ. ಅದು ನಮ್ಮ ಪ್ರತಿದಿನದ ಜೀವನದಲ್ಲೇ ಕಾಣಿಸಿಕೊಳ್ಳುತ್ತದೆ ಅದನ್ನು ನಾವು ಗಮನಿಸಿದರೆ ಮಾತ್ರ.

1. ಸಮಯ ಆಯಿತು ಎಂದು ಊಟ ಮಾಡುವುದು, ಹಸಿವು ಇಲ್ಲದೇ ಇದು ಅನೇಕರಿಗೆ ಪರಿಚಿತ.
- ಬೆಳಗ್ಗೆ 8 ಗಂಟೆ, ಮಧ್ಯಾಹ್ನ 1 ಗಂಟೆ, ರಾತ್ರಿ 8 ಗಂಟೆ ಸಮಯಕ್ಕೆ ಸರಿಯಾಗಿ ಊಟ ಮಾಡುತ್ತಾರೆ.

ಆದರೆ ಪ್ರಶ್ನೆ ಏನು?
- ಅವರಿಗೆ ನಿಜವಾಗಿಯೂ ಹಸಿವು ಇದೆಯೇ?
- ಹಸಿವು ಇಲ್ಲದೇ ಸೇವಿಸಿದ ಆಹಾರ ಸರಿಯಾಗಿ ಜೀರ್ಣವಾಗುವುದಿಲ್ಲ.
- ಅದು ನಿಧಾನವಾಗಿ ಆಮವಾಗಿ ಪರಿವರ್ತನೆಗೊಳ್ಳುತ್ತದೆ.

2. ಒಳ್ಳೆಯ ಆಹಾರ ಆದರೆ ತಪ್ಪಾದ ಸಮಯದಲ್ಲಿ ಹಲವರು ಹೇಳುತ್ತಾರೆ:
- ನಾನು ಜಂಕ್ ತಿನ್ನೋದಿಲ್ಲ, ನಾನು ಆರೋಗ್ಯಕರ ಆಹಾರವೇ ಸೇವಿಸುತ್ತೇನೆ.
- ಆದರೆ, ತಡ ರಾತ್ರಿ ಊಟ, ಜೀರ್ಣವಾಗುವ ಮುನ್ನ ಮತ್ತೆ ಸೇವನೆ.
- ಆಹಾರ ಉತ್ತಮವಾಗಿದ್ದರೂ, ಜೀರ್ಣವಾಗದಿದ್ದರೆ ಅದು ಆಮವೇ ಆಗುತ್ತದೆ.

3. ಒತ್ತಡದಲ್ಲಿ ಊಟ
- ಇಂದಿನ ಜೀವನದಲ್ಲಿ ಬಹಳ ಸಾಮಾನ್ಯ:
- ಮೊಬೈಲ್ ನೋಡುತ್ತಾ ಊಟ
- ಕೆಲಸದ ಒತ್ತಡದಲ್ಲಿ ತುರ್ತಾಗಿ ಸೇವನೆ
- ಕೋಪದಲ್ಲಿಯೇ ಊಟ

ಈ ಸ್ಥಿತಿಯಲ್ಲಿ ದೇಹದ ಅಗ್ನಿ ಸರಿಯಾಗಿ ಕಾರ್ಯನಿರ್ವಹಿಸುವುದಿಲ್ಲ, ಆಹಾರ ಅಪೂರ್ಣವಾಗಿ ಉಳಿದು, ಆಮ ನಿರ್ಮಾಣವಾಗುತ್ತದೆ.

4. ಊಟದ ನಂತರ ತಕ್ಷಣ ಮಲಗುವುದು ಅಥವಾ ಕುಳಿತುಕೊಳ್ಳುವುದು
- ಹೆಚ್ಚು ಜನರು ಊಟವಾದ ತಕ್ಷಣ:
- ಸೋಫಾದ ಮೇಲೆ ಕುಳಿತುಕೊಳ್ಳುತ್ತಾರೆ, ಅಥವಾ ನೇರವಾಗಿ ಮಲಗುತ್ತಾರೆ
- ಇದು ಜೀರ್ಣಕ್ರಿಯೆಯನ್ನು ಮಂದಗೊಳಿಸುತ್ತದೆ.

ಆಹಾರ ಸರಿಯಾಗಿ ಚಲನೆ ಹೊಂದದೆ, ಆಮವಾಗಿ ಉಳಿಯುತ್ತದೆ.

5. ದಿನವೂ ಸ್ವಲ್ಪ ಅಜೀರ್ಣವನ್ನು ನಿರ್ಲಕ್ಷಿಸುವುದು
- ಇಂದು ಸ್ವಲ್ಪ ಬ್ಲೋಟಿಂಗ್ ಇದೆ
- ಸ್ವಲ್ಪ ಹೆವಿ ಫೀಲ್ ಆಗುತ್ತಿದೆ
- ವಾರಕ್ಕೆ ಒಮ್ಮೆ ಮೋಶನ್ ಕ್ಲಿಯರ್ ಆಗಲ್ಲ
- ಇವು ಸಣ್ಣ ವಿಷಯಗಳಂತೆ ಕಾಣುತ್ತವೆ.

ಆದರೆ ಇವು ದೇಹದ ಮೊದಲ ಸೂಚನೆಗಳು :ಆಮ ನಿರ್ಮಾಣವಾಗುತ್ತಿದೆ ಎಂಬುದು. ಇವನ್ನು ನಿರ್ಲಕ್ಷಿಸಿದರೆ, ಇದೇ ಮುಂದೆ ದೊಡ್ಡ ಸಮಸ್ಯೆಯಾಗುತ್ತದೆ.

6. ಮರುಮರು ಸ್ನ್ಯಾಕಿಂಗ್
- ನಮ್ಮ ಕಾಲದ ದೊಡ್ಡ ಸಮಸ್ಯೆ:
- ಮಧ್ಯೆ ಮಧ್ಯೆ ಏನಾದರೂ ತಿಂದುಬಿಡುವುದು
- ಚಹಾ ಜತೆ ತಿಂಡಿ, ನಂತರ ಮತ್ತೆ ತಿಂಡಿ
- ಜೀರ್ಣಕ್ರಿಯೆಗೆ ಸಮಯ ಕೊಡದೇ ಮತ್ತೆ ಮತ್ತೆ ಸೇವನೆ ಮಾಡಿದರೆ, ಹಿಂದಿನ ಆಹಾರ ಜೀರ್ಣವಾಗುವುದೇ ಇಲ್ಲ, ಆಮ ನಿರ್ಮಾಣವಾಗುತ್ತದೆ.

7. ಆರೋಗ್ಯಕರ ಆದರೆ ಅತಿಯಾಗಿ ಸೇವಿಸುವುದು
- ಬಾದಾಮಿ, ಹಣ್ಣು, ಕಾಳುಗಳು - ಇವೆಲ್ಲ ಆರೋಗ್ಯಕರ.
- ಆದರೆ ಅತಿಯಾಗಿ ಸೇವಿಸಿದರೆ? ಅವುಗಳೂ ಜೀರ್ಣವಾಗದೆ ಆಮವಾಗುತ್ತವೆ.

ಸಣ್ಣ ಸಂದೇಶ - ದೊಡ್ಡ ಅರಿವು
- ಈ ಎಲ್ಲ ಉದಾಹರಣೆಗಳು ನಮಗೆ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತವೆ:
- ಸಮಸ್ಯೆ ಯಾವಾಗಲೂ ಆಹಾರದಲ್ಲೇ ಇರುವುದಿಲ್ಲ; ಅದು ನಮ್ಮ ಸೇವನೆ ವಿಧಾನದಲ್ಲಿದೆ.

ಆಮದ ಹಂತಗಳು - ದೇಹದಲ್ಲಿ ಅದರ ಪ್ರಗತಿ
ಆಮವು ದೇಹದಲ್ಲಿ ಹಂತ ಹಂತವಾಗಿ ಬೆಳೆಯುತ್ತದೆ:

1. ಉತ್ಪತ್ತಿ ಹಂತ
- ಜೀರ್ಣವಾಗದ ಆಹಾರದಿಂದ ಆಮ ಉಂಟಾಗುತ್ತದೆ.

2. ಸಂಚಾರ ಹಂತ
- ಆಮವು ರಸ, ರಕ್ತ ಮತ್ತು ಸ್ರೋತಸ್ಸುಗಳ ಮೂಲಕ ದೇಹದ ವಿವಿಧ ಭಾಗಗಳಿಗೆ ಸಾಗುತ್ತದೆ.

3. ಸ್ಥಿತಿ ಹಂತ
- ದೇಹದ ದುರ್ಬಲ ಭಾಗಗಳಲ್ಲಿ ಆಮ ಅಂಟಿಕೊಂಡು ನಿಂತುಕೊಳ್ಳುತ್ತದೆ.

4. ರೋಗ ರೂಪಾಂತರ
- ಅಲ್ಲಿಯೇ ಅದು ರೋಗ ರೂಪಕ್ಕೆ ಬರುತ್ತದೆ.
- ಆಮ ಮತ್ತು ದೋಷಗಳ ಸಂಯೋಗ
- ಆಮವು ತ್ರಿದೋಷಗಳ (ವಾತ, ಪಿತ್ತ, ಕಫ) ಜತೆ ಸೇರಿ ವಿವಿಧ ರೋಗಗಳನ್ನು ಉಂಟುಮಾಡುತ್ತದೆ:
- ಆಮ + ವಾತ = ಆಮವಾತದಂತಹ ಹಲವಾರು ರೋಗಗಳು
- ಆಮ + ಪಿತ್ತ = ಉರಿಯೂತ, ಚರ್ಮದ ವಿಭಿನ್ನ ರೋಗಗಳು
- ಆಮ + ಕಫ = ಅಲಸ್ಯ, ಜಡತೆಯಂತಹ ಲಕ್ಷಣಗಳನ್ನು ಹೊಂದಿರುವ ನೂರಾರು ವ್ಯಾದಿಗಳು.

ಆಧುನಿಕ ರೋಗಗಳೊಂದಿಗೆ ಆಮದ ಸಂಬಂಧ
ಇಂದಿನ ಕಾಲದಲ್ಲಿ ನಾವು ನೋಡುವ ಅನೇಕ ರೋಗಗಳು ಆಮದೊಂದಿಗೆ ನೇರ ಸಂಬಂಧ ಹೊಂದಿವೆ:

1. ಸಂಧಿವಾತ
- ಆಮವು ಸಂಧಿಗಳಲ್ಲಿ ಸೇರಿ ನೋವು, ಊತ ಉಂಟುಮಾಡುತ್ತದೆ.

2. ಮಧುಮೇಹ
- ಅಪೂರ್ಣ ಮೆಟಾಬಾಲಿಸಂ ಆಮ ಇನ್ಸುಲಿನ್ ಪ್ರತಿರೋಧ

3. ಜೀರ್ಣಕ್ರಿಯೆ ಸಮಸ್ಯೆಗಳು
- ಅತಿಸಾರ, ಗ್ರಹಣಿ, ಗ್ಯಾಸ್, ಅಜೀರ್ಣ

4. ಚರ್ಮದ ರೋಗಗಳು

5. ಹಾರ್ಮೋನಲ್ ಸಮಸ್ಯೆಗಳು
ಪಿಸಿಓಡಿ, ಥೈರಾಯಿಡ್ ಸಮಸ್ಯೆಗಳು ಇತ್ಯಾದಿ

6. ದೀರ್ಘಕಾಲದ ದಣಿವು
ದೇಹದಲ್ಲಿ ಆಮ ಹೆಚ್ಚಾದರೆ ಶಕ್ತಿ ಕಡಿಮೆಯಾಗುತ್ತದೆ.

ಆಮದ ಲಕ್ಷಣಗಳು - ದೇಹ ಕೊಡುವ ಸೂಚನೆಗಳು

ದೇಹವು ಆಮ ಹೆಚ್ಚಾದಾಗ ಕೆಲವು ಸ್ಪಷ್ಟ ಸೂಚನೆಗಳನ್ನು ನೀಡುತ್ತದೆ: ನಾಲಿಗೆಯ ಮೇಲೆ ಬಿಳಿ ಪದರ, ದುರ್ಗಂಧ, ಆಲಸ್ಯ, ಭಾರವಾದ ಅನುಭವ, ಜೀರ್ಣಕ್ರಿಯೆ ನಿಧಾನ, ಊಟದ ಆಸಕ್ತಿ ಕಡಿಮೆ, ಅರುಚಿ, ಮಲಬದ್ಧತೆ, ಅತಿಸಾರ, ಸಂಧಿ ನೋವು, ಮನಸ್ಸಿನ ಜಾಡ್ಯ.

ಈ ಲಕ್ಷಣಗಳನ್ನು ಕಡೆಗಣಿಸಬಾರದು - ಇವು ರೋಗದ ಆರಂಭದ ಸೂಚನೆಗಳು.
- ಆಮ ನಿವಾರಣೆ - ಚಿಕಿತ್ಸೆಯ ಮೂಲ ತತ್ವ
- ಆಮ ನಿವಾರಣೆಯಲ್ಲಿ ಮುಖ್ಯವಾದುದು: ಅಗ್ನಿ ದೀಪನ + ಆಮ ಪಾಚನ
- ಅಂದರೆ ಅಗ್ನಿಯನ್ನು ಬಲಪಡಿಸುವುದು ಮತ್ತು ಆಮವನ್ನು ಪಕ್ವವಾಗಿಸಿ ಕರಗಿಸುವುದು.

ಸರಳ ಮತ್ತು ಪರಿಣಾಮಕಾರಿ ಪರಿಹಾರಗಳು

1. ಆಹಾರ
- ಬಿಸಿ, ತಾಜಾ, ಸಾತ್ವಿಕ ಆಹಾರ
- ಶುಂಠಿ, ಜೀರಿಗೆ, ಮೆಣಸುಗಳಂತಹ ದ್ರವ್ಯಗಳ ಬಳಕೆ ಬಳಸುವುದು
- ಲಘು ಆಹಾರ (ಸುಲಭ ಜೀರ್ಣ)
- ಊಟದ ಮಧ್ಯೆ ಸರಿಯಾದ ಅಂತರ
- ಉಷ್ಣಜಲ ಸೇವನೆ
- ಹಸಿವೆಯನ್ನು ಗಮನಿಸಿ ತಿನ್ನುವುದು

2. ವಿಹಾರ
- ಪ್ರತಿದಿನ ವ್ಯಾಯಾಮ
- ಯೋಗ, ಪ್ರಾಣಾಯಾಮ
- ಊಟದ ನಂತರ 100 ಹೆಜ್ಜೆ ನಡೆಯುವುದು
- ಸರಿಯಾದ ನಿದ್ರೆ
- ಹಗಲು ನಿದ್ರೆ ಮಾಡದಿರುವುದು

3. ವಿಚಾರ
- ಧ್ಯಾನ
- ಮನಸ್ಸಿನ ಶಾಂತಿ
- ಸಕಾರಾತ್ಮಕ ಚಿಂತನೆ
- ಆಮ ನಿವಾರಣೆ - ಔಷಧಿಗಿಂತ ಜೀವನಶೈಲಿ ಮುಖ್ಯ
- ಆಮವನ್ನು ಕೇವಲ ಔಷಧಿಯಿಂದ ದೂರ ಮಾಡಲಾಗುವುದಿಲ್ಲ, ಇದು ಜೀವನಶೈಲಿಯ ಪರಿವರ್ತನೆಯಿಂದ ಮಾತ್ರ ಸಾಧ್ಯ.

ಸಣ್ಣ ಬದಲಾವಣೆಗಳು:
- ಸಮಯಕ್ಕೆ ಊಟ
- ಸರಿಯಾಗಿ ನಿದ್ರೆ
- ಮನಸ್ಸಿನ ಸಮತೋಲನ

ಸ್ನೇಹಿತರೆ, ಆರೋಗ್ಯವನ್ನು ನಾವು ಬಹಳ ಬಾರಿ ಸೀಮಿತವಾಗಿ ಅರ್ಥಮಾಡಿಕೊಳ್ಳುತ್ತೇವೆ. ಎಣ್ಣೆ ಪದಾರ್ಥಗಳನ್ನು ತಪ್ಪಿಸುವುದು, ಉತ್ತಮ ಗುಣಮಟ್ಟದ ಆಹಾರವನ್ನು ಆಯ್ಕೆಮಾಡುವುದು. ಇವುಗಳನ್ನೇ ಆರೋಗ್ಯದ ಮಾನದಂಡವಾಗಿ ಪರಿಗಣಿಸುತ್ತೇವೆ. ಆದರೆ, ಆಯುರ್ವೇದವು ನಮಗೆ ಇನ್ನಷ್ಟು ಗಾಢವಾದ ಸತ್ಯವನ್ನು ನೆನಪಿಸುತ್ತದೆ. ಆರೋಗ್ಯವು ಕೇವಲ ನಾವು ಏನು ಸೇವಿಸುತ್ತೇವೆ ಎಂಬುದರ ಮೇಲೆ ಅವಲಂಬಿತವಲ್ಲ; ಅದು ನಾವು ಸೇವಿಸಿದುದನ್ನು ದೇಹ ಹೇಗೆ ಜೀರ್ಣಿಸುತ್ತದೆ ಎಂಬುದರ ಮೇಲೂ ಅವಲಂಬಿತವಾಗಿದೆ. ಇದು ಕೇವಲ ಆಹಾರದ ಗುಣಮಟ್ಟದ ವಿಚಾರವಲ್ಲ, ಇದು ಜೀರ್ಣಶಕ್ತಿಯ ಗುಣಮಟ್ಟದ ವಿಚಾರ. ಇದು ಕೇವಲ ಸಮಯಕ್ಕೆ ಸರಿಯಾಗಿ ಊಟ ಮಾಡುವ ಅಭ್ಯಾಸವಲ್ಲ; ಇದು ನಿಜವಾದ ಹಸಿವು ಇದ್ದಾಗ, ಜಾಗೃತಿಯಿಂದ ಆಹಾರ ಸೇವಿಸುವ ಸಂಸ್ಕೃತಿ. ಇದು ಕೇವಲ ನಿಯಮಿತ ಜೀವನಶೈಲಿಯಲ್ಲ; ದೇಹದ ಅಗ್ನಿಯನ್ನು ಪೋಷಿಸುವ, ಜೀರ್ಣಕ್ರಿಯೆಗೆ ಸಹಾಯ ಮಾಡುವ ಜೀವನಶೈಲಿ.

ನಾವು ಈ ಸತ್ಯವನ್ನು ಅರಿಯದವರೆಗೆ, ನಮ್ಮದೇ ದೇಹದಲ್ಲಿ ನಾವು ತಿಳಿಯದೆ ಆಮ ಎಂಬ ಒಂದು ಪದರವನ್ನು ನಿರ್ಮಿಸುತ್ತಿರುತ್ತೇವೆ - ನಿಧಾನವಾಗಿ, ನಿರಂತರವಾಗಿ. ಆದರೆ ನಾವು ಜಾಗೃತರಾಗಿದ್ದರೆ, ಪ್ರತಿ ಊಟವನ್ನೂ ಒಂದು ಜವಾಬ್ದಾರಿಯಾಗಿ ನೋಡಿದರೆ, ಜೀರ್ಣಕ್ರಿಯೆಯನ್ನು ಗೌರವಿಸಿದರೆ - ನಾವು ನಮ್ಮ ದೇಹವನ್ನು ರೋಗಗಳ ನೆಲೆಯಾಗಲು ಬಿಡುವುದಿಲ್ಲ, ಬದಲಾಗಿ, ಅದನ್ನು ಶುದ್ಧವಾಗಿರಿಸುವ, ಸಮತೋಲನದಲ್ಲಿರಿಸುವ ಒಂದು ಜೀವಂತ ವ್ಯವಸ್ಥೆಯಾಗಿ ರೂಪಿಸಬಹುದು. ಆದ್ದರಿಂದ, ಆರೋಗ್ಯದ ನಿಜವಾದ ಸೂತ್ರ ಸ್ಪಷ್ಟ - ಸೇವನೆಯಿಗಿಂತ ಜೀರ್ಣವೇ ಮುಖ್ಯ, ಅಭ್ಯಾಸಕ್ಕಿಂತ ಜಾಗೃತಿಯೇ ಅಗತ್ಯ ಹಾಗೂ ದೇಹದಲ್ಲಿ ಆಮ ಸಂಚಯವಾಗದಿರುವುದೇ ನಿಜವಾದ ರಕ್ಷಣೆಯ ಮಾರ್ಗ.ಅದೇ ರೋಗರಹಿತ ಜೀವನದ ಮೂಲಾಧಾರ. ಏಕೆಂದರೆ 'ಆಮ'ದಿಂದಲೇ 'ಆಮಯ'ವಲ್ಲವೇ?!

ಭಟ್ಟರ್ ಸ್ಕಾಚ್

- **ಅನಿತಾ, ಬೆಂಗಳೂರು**
ಭಟ್ರೇ, ರಾಜಕಾರಣಿಗಳು ಚುನಾವಣೆ ಮುಗಿದ ಮೇಲೆ ಏಕೆ ಕಾಣಿಸಿಕೊಳ್ಳುವುದಿಲ್ಲ?
- ಯಾಕೆಂದರೆ ಅವರು ಐದು ವರ್ಷಗಳ ಕಾಲ ಜನರ ಕಣ್ಣಿಗೆ ಮಣ್ಣು ಎರಚುವ ಕೆಲಸದಲ್ಲಿ ತುಂಬಾ ಬ್ಯುಸಿಯಾಗಿರುತ್ತಾರಲ್ಲ!

- **ರಘುಪತಿ ವೈದ್ಯ, ಶಿರಸಿ**
ಭಟ್ರೇ, ಪ್ರಜಾಪ್ರಭುತ್ವದ ಅತಿದೊಡ್ಡ ತಮಾಷೆ ಯಾವುದು?
- ಮತ ಹಾಕುವವನಿಗೆ ಏನೂ ಸಿಗುವುದಿಲ್ಲ, ಮತ ಕೇಳುವವನಿಗೆ ಎಲ್ಲವೂ ಸಿಗುತ್ತದೆ!

- **ನಾಗರಾಜ ಎಸ್. ಕುಮಾರ, (ಇಮೇಲ್ ಮೂಲಕ)**
ಭಟ್ರೇ, ಭ್ರಷ್ಟಾಚಾರವನ್ನು ತಡೆಯುವುದು ಹೇಗೆ?
- ಅದು ಸಾಧ್ಯವಿಲ್ಲ, ಆದರೆ ಅದಕ್ಕೆ 'ಸರ್ವೀಸ್ ಚಾರ್ಜ್', 'ದೇಣಿಗೆ' ಎಂದು ಹೆಸರಿಟ್ಟು ನಿರ್ಮೂಲನೆ ಆಯ್ತು ಎನ್ನಬಹುದು!

- **ಚಂದ್ರು, ಗುಬ್ಬಿ**
ಭಟ್ರೇ, ಈಗಿನ ಕಾಲದಲ್ಲಿ 'ನೆಮ್ಮದಿ' ಎಲ್ಲಿ ಸಿಗುತ್ತದೆ?
- ಮೊಬೈಲ್ ಫೋನ್ ಸ್ವಿಚ್ ಆಫ್ ಆದ್ರೆ ಮಾತ್ರ!

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಆನ್‌ಲೈನ್ ಶಾಪಿಂಗ್ ಅಂದರೆ ಏನು?
- ನಮಗೆ ಬೇಡದ ವಸ್ತುವನ್ನು, ನಮ್ಮಲ್ಲಿಲ್ಲದ ಹಣದಿಂದ, ನಮಗೆ ಇಷ್ಟವಿಲ್ಲದವರಿಗೆ ತೋರಿಸಲು ರಿಯಾಯಿತಿ ದರದಲ್ಲಿ ಖರೀದಿಸುವುದು!

- **ಮನು ಹೆಗಡೆ, ಶಿರಸಿ**
ಭಟ್ರೇ, ಪತ್ರಕರ್ತ ಮತ್ತು ಸಾಮಾನ್ಯ ಮನುಷ್ಯನಿಗೆ ಇರುವ ವ್ಯತ್ಯಾಸವೇನು?
- ಸಾಮಾನ್ಯ ಮನುಷ್ಯ ಅಪಘಾತ ನಡೆದಾಗ ಸಹಾಯ ಮಾಡುತ್ತಾನೆ, ಪತ್ರಕರ್ತ ಅದರ ಲೈವ್ ರಿಪೋರ್ಟಿಂಗ್ ಮಾಡುವುದರಲ್ಲಿ ನಿರತನಾಗಿರುತ್ತಾನೆ!

- **ಶ್ರೀದೇವಿ ಕಟ್ಟೆಮನೆ, ಉಡುಪಿ**
ಭಟ್ರೇ, ಲೇಖಕರಿಗೆ ಸ್ಫೂರ್ತಿ ಎಲ್ಲಿಂದ ಸಿಗುತ್ತದೆ?
- ಸ್ಫೂರ್ತಿ ಸಿಗುವುದಿಲ್ಲ, ಅವಳನ್ನು ಒಲಿಸಿಕೊಳ್ಳಬೇಕು!

- **ಎಂ.ಆರ್. ನಂಜಪ್ಪ, ತುಮಕೂರು**
ಭಟ್ರೇ, ವಯಸ್ಸಾಗುತ್ತಿದೆ ಎಂದು ತಿಳಿಯುವುದು ಹೇಗೆ?
- ನಿನಗೇ ಗೊತ್ತಾಗಬೇಕು ಎಂದೇನಿಲ್ಲ, ಬೇರೆಯವರಿಗೂ ಗೊತ್ತಾಗುತ್ತದೆ!

- **ವೀರೇಶ ಬಾಲ್ಕಿ, ಕೋರಮಂಗಲ**
ಭಟ್ರೇ, ಹಳೆಯ ಕಾಲದವರಿಗೂ ಇಂದಿನವರಿಗೂ ಏನು ವ್ಯತ್ಯಾಸ?
- ಹಳೆಯ ಕಾಲದವರು ಪುಸ್ತಕಗಳನ್ನು ಓದಿ ಜ್ಞಾನ ಪಡೆಯುತ್ತಿದ್ದರು, ಇಂದಿನವರು 'ವಾಟ್ಸಾಪ್' ನೋಡಿ!

ಹಿಮೋಫಿಲಿಯಾ: ತಾಯಿಯಿಂದ ಮಗನಿಗೆ ಬರುವ ಆನುವಂಶಿಕ ರೋಗ

ತನ್ನಿಮಿತ್ತ

ಡಾ. ಮುರಳಿಮೋಹನ್ ಚೂಂತಾರು
vveditoped@gmail.com

ವಿಶ್ವ ಹಿಮೋಫಿಲಿಯಾ ಸೊಸೈಟಿ ಕುಸುಮ ರೋಗದಿಂದ ಬಳಲುತ್ತಿರುವ ರೋಗಿಗಳ ಜೀವನ ಮಟ್ಟದ ಸುಧಾರಣೆ ಮಾಡಲು ಮತ್ತು ರೋಗದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ, 1989ರಲ್ಲಿ ಏಪ್ರಿಲ್ 17ರಂದು ವಿಶ್ವ ಹಿಮೋಫಿಲಿಯಾ ದಿನ ಆಚರಣೆ ಜಾರಿಗೆ ಬಂತು. 1963ರಲ್ಲಿ ಫ್ರಾಂಕ್ ಸ್ನ್ಯಾಬೆಲ್ ಎಂಬವರಿಂದ ಆರಂಭಗೊಂಡ ಈ ವಿಶ್ವ ಹಿಮೋಫಿಲಿಯಾ ಸೊಸೈಟಿ, ವಿಶ್ವದಾದ್ಯಂತ ಹಿಮೋಫಿಲಿಯಾ ರೋಗಿಗಳ ಶುಶ್ರೂಷೆ ಮತ್ತು ಚಿಕಿತ್ಸೆಯ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಸದ್ದಿಲ್ಲದೇ ಮಾಡುತ್ತದೆ. ಫ್ರಾಂಕ್ ಸ್ನ್ಯಾಬೆಲ್ ಇವರ ಜನ್ಮದಿನವಾದ ಏಪ್ರಿಲ್ 17ರಂದೇ ವಿಶ್ವ ಹಿಮೋಫಿಲಿಯಾ ದಿನ ಎಂದು ಆಚರಿಸಿ ಆತನ ಕೆಲಸವನ್ನು ಸ್ಮರಿಸುವ ಪುಣ್ಯಕಾರ್ಯ ಮಾಡುತ್ತಿದೆ. ವಿಶ್ವದ 113 ರಾಷ್ಟ್ರಗಳು ಈ ಸಂಸ್ಥೆಯ ಸದಸ್ಯತ್ವ ಹೊಂದಿದೆ ಮತ್ತು ವಿಶ್ವ ಸಂಸ್ಥೆಯ ಮಾನ್ಯತೆಯನ್ನು ಪಡೆದಿದೆ. 2026ರ ವಿಶ್ವ ಹಿಮೋಫಿಲಿಯಾ ದಿನಾಚರಣೆಯ ಧ್ಯೇಯ ವಾಕ್ಯ 'Diagnosis, first step to cure' ಅಂದರೆ ರೋಗ ಗುರುತಿಸುವಿಕೆಯೇ ಚಿಕಿತ್ಸೆಯ ಮೊದಲ ಹೆಜ್ಜೆ ಎಂಬುದಾಗಿದೆ. ಫ್ರಾಂಕ್ ಸ್ನ್ಯಾಬೆಲ್, ಮಾಂಟ್ರಿಯಲ್ ದೇಶದ ವ್ಯಾಪಾರಿಯಾಗಿದ್ದು ಹುಟ್ಟುವಾಗಲೇ ತೀವ್ರತರ ಕುಸುಮ ರೋಗದಿಂದ ಬಳಲುತ್ತಿದ್ದ.

ಹಿಮೋಫಿಲಿಯಾ ಎಂಬ ರೋಗ ರಕ್ತ ಹೆಪ್ಪುಗಟ್ಟುವಿಕೆಯಲ್ಲಿನ ಪ್ರಕ್ರಿಯೆಯಲ್ಲಿ ವ್ಯತ್ಯಯವಿರುವ ರೋಗವಾಗಿದ್ದು, ವಂಶವಾಹಿನಿಗಳಲ್ಲಿ ತಾಯಿಯಿಂದ ಮಗನಿಗೆ ಬಳುವಳಿಯಾಗಿ ಬರುವ ಜನ್ಮಧಾರಭ್ಯ ರೋಗವಾಗಿದೆ. X ಎಂಬ ವರ್ಣತಂತುಗಳಲ್ಲಿ ಈ ರೋಗ ಸಾಗಿಸಲ್ಪಡುವುದರಿಂದ ಪುರುಷರಿಗೆ ಮಾತ್ರ ಈ ರೋಗ ಸೀಮಿತವಾಗಿರುತ್ತದೆ. ಮಹಿಳೆಯರಲ್ಲಿ ಎರಡು X ವರ್ಣತಂತುಗಳಿದ್ದು ಒಂದು ವರ್ಣತಂತುವಿನಲ್ಲಿನ ವೈಫಲ್ಯವನ್ನು ಇನ್ನೊಂದು ಸಹಜ ವರ್ಣತಂತು ಮುಚ್ಚಿಕೊಂಡು, ರೋಗ ಬರುವ ಸಾಧ್ಯತೆ ಬಹಳ ಕಡಮೆ ಇರುತ್ತದೆ. ಪುರುಷರಲ್ಲಿ ಒಂದೇ X ಎಂಬ ವರ್ಣತಂತುವಿರುವುದರಿಂದ ಈ ವರ್ಣತಂತುವಿನಲ್ಲಿ ವೈಫಲ್ಯವನ್ನು ಮುಚ್ಚಲು ಬೇರೊಂದು ವರ್ಣತಂತು ಇರುವುದಿಲ್ಲದ ಕಾರಣ, ಪುರುಷರಲ್ಲಿ ಈ ರೋಗ ಪ್ರಕಟಗೊಳ್ಳುತ್ತದೆ. ಹೀಗಾಗಿ ವಂಶವಾಹಿನಿಯನ್ನಾಧರಿಸಿ ಎಲ್ಲ ಹೆಣ್ಣುಮಕ್ಕಳೂ ಈ ಕುಸುಮ ರೋಗವನ್ನು ಸಾಗಿಸಬಲ್ಲವರಾಗಿರುತ್ತಾರೆ. ಆದರೆ ರೋಗದಿಂದ ಬಳಲುವ ಸಾಧ್ಯತೆ ತೀರಾ ಕಡಿಮೆ ಇರುತ್ತದೆ. ಒಟ್ಟಿನಲ್ಲಿ ಈ ರೋಗ ಕುಟುಂಬದಲ್ಲಿ ಮೊಳೆಯುತ್ತದೆ, ಹೆಣ್ಣುಮಕ್ಕಳು ರೋಗ ವಾಹಿನಿಯಾಗಿರುತ್ತಾರೆ ಮತ್ತು ಗಂಡು ಮಕ್ಕಳಲ್ಲಿ ಪ್ರಕಟಗೊಳ್ಳುತ್ತದೆ.

ಏನಿದು ಹಿಮೋಫಿಲಿಯಾ?

ಹೈಮೊ ಎಂಬ ಗ್ರೀಕ್ ಪದದಿಂದ ಹುಟ್ಟಿಕೊಂಡ ಈ ಶಬ್ದಕ್ಕೆ ರಕ್ತ ಎಂಬ ಅರ್ಥವಿದೆ ಮತ್ತು ಫೀಲಿಯಾ ಎಂದರೆ ಪ್ರೀತಿ ಎಂಬ ಅರ್ಥವಿದೆ. ರಕ್ತವನ್ನು ಪ್ರೀತಿಸುವ ಎಂಬರ್ಥವನ್ನು ನೀಡುವುದರಿಂದ ಹಿಮೋಫಿಲಿಯಾ ಎಂದು ಆಂಗ್ಲಭಾಷೆಯಲ್ಲಿ ಮತ್ತು ಕುಸುಮ ರೋಗ ಎಂದು ಕನ್ನಡದಲ್ಲಿ ಕರೆಯಲಾಗುತ್ತದೆ.

ದೇಹಕ್ಕೆ ಗಾಯವಾದಾಗ ರಕ್ತಹೆಪ್ಪುಗಟ್ಟುವುದು ಅನಿವಾರ್ಯ. ರಕ್ತದ ನಿರಂತರ ಸೋರಿಕೆಯಾಗಿ ಜೀವಕ್ಕೆ ಕುತ್ತು ಬರಬಹುದು. ಈ ರೀತಿ ರಕ್ತ ಹೆಪ್ಪುಗಟ್ಟಲು ರಕ್ತದಲ್ಲಿ ಸುಮಾರು 13 ರಕ್ತಹೆಪ್ಪುಗಟ್ಟುವ ಅಂಶಗಳು ಅಥವಾ ಘಟಕಗಳು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತಿರುತ್ತದೆ. ಈ ಹನ್ನೆರಡು ಅಂಶಗಳಲ್ಲಿ ಯವುದಾದರೊಂದು ಅಂಶ ಸರಿಯಾಗಿ ಕೆಲಸ ನಿರ್ವಹಿಸದಿದ್ದಲ್ಲಿ ಅಥವಾ ಅಂಶಗಳ ಕೊರತೆ ಉಂಟಾದಲ್ಲಿ ರಕ್ತ ಹೆಪ್ಪುಗಟ್ಟುವ ಪ್ರಕ್ರಿಯೆಗೆ ಅಡ್ಡಿಯಾಗುತ್ತದೆ. ರಕ್ತ ಹೆಪ್ಪುಗಟ್ಟುವ 8ನೇ, 9ನೇ ಮತ್ತು 11ನೇ ಘಟಕಗಳ ವೈಫಲ್ಯ ಅಥವಾ ಕೊರತೆಯನ್ನು ಅನುಕ್ರಮವಾಗಿ ಹಿಮೋಫಿಲಿಯಾ ಎ,ಬಿ,ಸಿ ಎಂದು ಕರೆಯತ್ತಾರೆ. ಹಿಮೋಫಿಲಿಯಾ-ಎ ಹೆಚ್ಚು ಕಾಣಸುತ್ತದೆ. ಹಿಮೋಫಿಲಿಯಾ-ಬಿ ಮತ್ತು ಸಿ ಬಹಳ ಅಪರೂಪ. ಹಿಮೋಫಿಲಿಯಾ-ಬಿ ರೋಗವನ್ನು ಕ್ರಿಸ್‌ಮಸ್ ಎಂಬ ವ್ಯಕ್ತಿಯಲ್ಲಿ ಮೊದಲ ಬಾರಿ ಪ್ರಕಟಗೊಂಡ ಕಾರಣದಿಂದ ಕ್ರಿಸ್‌ಮಸ್ ರೋಗ ಎಂದೂ ಕರೆಯಲಾಗುತ್ತದೆ. ಎಂಟನೇ ರಕ್ತಹೆಪ್ಪುಗಟ್ಟುವ ಅಂಶದ ವೈಫಲ್ಯವನ್ನು ಹೆಚ್ಚಾಗಿ ಕುಸುಮ ರೋಗ ಎಂದು ಕರೆಯುತ್ತಾರೆ. ಹಿಮೋಫಿಲಿಯಾ-ಎ ಸುಮಾರು ಐದರಿಂದ ಹತ್ತು ಸಾವಿರದಲ್ಲಿ ಒಬ್ಬರಿಗೆ ಕಾಣಿಸಿಕೊಳ್ಳಬಹುದು. ಹಿಮೋಫಿಲಿಯಾ-ಬಿ ಮೂವತ್ತೈದರಿಂದ ನಲವತ್ತು ಸಾವಿರದಲ್ಲಿ ಒಬ್ಬರಿಗೆ ಕಾಣಿಸುವ ಸಾಧ್ಯತೆ ಇದೆ. ಹಿಮೋಫಿಲಿಯಾ-ಸಿ ಬಹಳ ವಿರಳ ಮತ್ತು ಪುರುಷ ಹಾಗೂ ಮಹಿಳೆಯರಲ್ಲಿ ಸಮಾನವಾಗಿ ಕಾಣಸಿಗುತ್ತದೆ. ಹಿಮೋಫಿಲಿಯ-ಎ ಮತ್ತು ಬಿ ಆಜನ್ಮ ಲಿಂಗ ಸಂಬಂಧಿ ರೋಗವಾಗಿದ್ದು ಪುರುಷರಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ.

ರೋಗದ ಲಕ್ಷಣಗಳು

ಸಾಮಾನ್ಯವಾಗಿ ದೇಹಕ್ಕೆ ಗಾಯವಾದಾಗ 3 ರಿಂದ 8 ನಿಮಿಷಗಳಲ್ಲಿ ರಕ್ತ ಹೆಪ್ಪುಗಟ್ಟಿ ರಕ್ತ ಸೋರುವಿಕೆಯನ್ನು ತಡೆಯುತ್ತದೆ. ಆದರೆ ಕುಸುಮ ರೋಗದಿಂದ ಬಳಲುತ್ತಿರುವವರಲ್ಲಿ ರಕ್ತ ಹೆಪ್ಪುಗಟ್ಟುವುದೇ ಇಲ್ಲ. ಈ ಕಾರಣದಿಂದಲೇ ರಕ್ತ ಸೋರಿಕೆಯಾಗಿ ರೋಗಿಯ ಜೀವಕ್ಕೆ ಕುತ್ತು ಬರಬಹುದು. ಇದೇ ರೀತಿ ಆಂತರಿಕವಾಗಿ ಮಿದುಳಿನೊಳಗೆ, ಗಂಟಿನ ಒಳಗೆ ರಕ್ತಸ್ರಾವವಾಗಿ, ಅಂಗ ವೈಫಲ್ಯ ಮತ್ತು ಜೀವಹಾನಿ ಸಂಭವಿಸಲೂಬಹುದು. ಸ್ನಾಯುಗಳ ಒಳಗೆ ರಕ್ತಸ್ರಾವವಾದಲ್ಲಿ ಚಲನೆಗೆ ತೊಂದರೆಯಾಗಬಹುದು. ರಕ್ತ ಹೆಪ್ಪುಗಟ್ಟಿ ಗಡ್ಡೆಯಂತಾಗಿ, ಶಾಶ್ವತ ಅಂಗ ವೈಫಲ್ಯಕ್ಕೆ ನಾಂದಿ ಹಾಡಬಹುದು. ರಕ್ತ ಹೆಪ್ಪುಗಟ್ಟುವ ಅಂಶಗಳ ಅಲಭ್ಯತೆಯ ಪ್ರಮಾಣವನ್ನು ಅನುಸರಿಸಿ ಕುಸುಮ ರೋಗವನ್ನು ಸೌಮ್ಯ, ಸಾಧಾರಣ ಮತ್ತು ತೀವ್ರತರ ಕುಸುಮ ರೋಗವೆಂದು ವಿಂಗಡಿಸಲಾಗುತ್ತದೆ. ತೀವ್ರತರ ಕುಸುಮ ರೋಗದಲ್ಲಿ ಒಮ್ಮಿಂದೊಮ್ಮೆಲೇ ಕೀಲುಗಳಲ್ಲಿ, ಸ್ನಾಯುಗಳಲ್ಲಿ, ಮಿದುಳಿನೊಳಗೆ ರಕ್ತಸ್ರಾವವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಸಣ್ಣ ಪುಟ್ಟ ಗಾಯಗಳಿಂದಲೂ ತೀವ್ರತರವಾದ ರಕ್ತಸ್ರಾವವಾಗಿ ರಕ್ತದೊತ್ತಡ ಕಡಿಮೆಯಾಗಿ ಪ್ರಾಣಾಪಾಯವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದರೆ ಸೌಮ್ಯ ಥರದ ಕುಸುಮ ರೋಗದಲ್ಲಿ ಹೆಚ್ಚಿನ ಹಾನಿಯಾಗುವ ಸಾಧ್ಯತೆ ಕಡಮೆ ಇರುತ್ತದೆ. ತೀವ್ರತರ ಕುಸುಮ ರೋಗದಲ್ಲಿ ಮಂಡಿ, ಮೊಣಕೈ, ಹಿಮ್ಮಡಿಗಳಲ್ಲಿ ಒಮ್ಮಿಂದೊಮ್ಮೆಲೆ ರಕ್ತಸ್ರಾವವಾಗಬಹುದು. ಕಾಲಿನ ಮೀನ ಖಂಡಗಳಲ್ಲಿ, ತೊಡೆ ಸ್ನಾಯುನಲ್ಲಿ, ಆಂತರಿಕವಾಗಿ ರಕ್ತಸ್ರಾವವಾಗಿ ರಕ್ತ ಗಂಟನ್ನು ಉಂಟು ಮಾಡುವ ಸಾಧ್ಯತೆ ಇರುತ್ತದೆ. ಅದೇ ರೀತಿ ಹಲ್ಲು ಕಿತ್ತ ಬಳಿಕ ರಕ್ತ ಹೆಪ್ಪುಗಟ್ಟದೆ ತೀವ್ರ ರಕ್ತಸ್ರಾವವಾಗುವುದು, ವಸಡುಗಳಲ್ಲಿ ತಂತಾನೇ ರಕ್ತ ಒಸರುವುದು, ಹಲ್ಲು ಶುಚಿಗೊಳಿಸಿದ ಬಳಿಕ ವಸಡಿನಲ್ಲಿ ರಕ್ತ ಜಿನುಗುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ಸೂಕ್ತ ಮುಂಜಾಗರೂಕತೆ ವಹಿಸದಿದ್ದಲ್ಲಿ ಪ್ರಾಣಹಾನಿ ನಿಶ್ಚಿತ.

ರೋಗದ ತೀವ್ರತೆ ಹೇಗಿರುತ್ತದೆ?

ಆರೋಗ್ಯವಂತ ವ್ಯಕ್ತಿಗಳ ದೇಹದ ರಕ್ತದಲ್ಲಿ ಈ ರಕ್ತ ಹೆಪ್ಪುಗಟ್ಟುವ ಅಂಶ ಅಥವಾ ಘಟಕ VIII ಸುಮಾರು ಶೇ.60ರಿಂದ 200ರ ಮಿತಿಯೊಳಗೆ ಇರುತ್ತದೆ. ಆದರೆ ಹಿಮೋಫಿಲಿಯಾ ರೋಗದಿಂದ ಬಳಲುತ್ತಿರುವವರಲ್ಲಿ ಈ ಘಟಕ Vಐಐಐರ ಕೊರತೆ ಇರುತ್ತದೆ. ಈ ಘಟಕಗಳ ಕೊರತೆಯ ಆಧಾರದ ಮೇಲೆ ರೋಗವನ್ನು ಸೌಮ್ಯ, ಸಾಧಾರಣ ಮತ್ತು ತೀವ್ರ ಹಿಮೋಫಿಲಿಯಾ ಎಂದು ವಿಂಗಡಿಸುತ್ತಾರೆ.

- **ಸೌಮ್ಯ ಹಿಮೋಫಿಲಿಯ:** ಈ ವ್ಯಕ್ತಿಗಳಲ್ಲಿ ಘಟಕ VIII ರ ಪ್ರಮಾಣ ಶೇ.6ರಿಂದ 30ರಷ್ಟು ಇರುತ್ತದೆ. ಸಾಮಾನ್ಯವಾಗಿ ಈ ವ್ಯಕ್ತಿಗಳಲ್ಲಿ ರಕ್ತಸ್ರಾವವಾಗುವ ಸಾಧ್ಯತೆ ಕಡಿಮೆಯಿರುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ರೋಗದ ಲಕ್ಷಣಗಳು ಗೋಚರಿಸುವುದೇ ಇಲ್ಲ, ಆದರೆ ಗಾಯಗಳಾದಾಗ, ಅಪಘಾತಗಳಾದಾಗ ರಕ್ತಸ್ರಾವ ನಿಲ್ಲುವುದಿಲ್ಲ. ರಕ್ತ ಹೆಪ್ಪುಗಟ್ಟುವ ಪ್ರಕ್ರಿಯೆ ಬಹಳ ನಿಧಾನವಾಗಿರುತ್ತದೆ. ರಕ್ತ ಪರೀಕ್ಷೆ ಮಾಡಿ, ಘಟಕ VIII ರ ಪ್ರಮಾಣವನ್ನು ಪತ್ತೆ ಮಾಡಿ ರೋಗವನ್ನು ಗುರಿತಿಸಲಾಗುತ್ತದೆ.
- **ಸಾಧಾರಣ ಹಿಮೋಫಿಲಿಯಾ:** ಈ ರೋಗಿಗಳಲ್ಲಿ ಪ್ರೋಟಿನ್ ಘಟಕ VIII ರ ಪ್ರಮಾಣ ಶೇ.2ರಿಂದ 5ರಷ್ಟು ಇರುತ್ತದೆ. ಈ ವ್ಯಕ್ತಿಗಳಿಗೆ ಏಟಾದಾಗ, ಹಲ್ಲು ಕೀಳಿಸಿದಾಗ, ಅಥವಾ ಆಪರೇಷನ್ ಮಾಡಿದಾಗ ರಕ್ತಸ್ರಾವ ನಿಲ್ಲುವುದೇ ಇಲ್ಲ. ಹಲ್ಲು ಶುಚಿಗೊಳಿಸಿದಾಗಲೂ ವಿಪರೀತ ರಕ್ತಸ್ರಾವವಾಗಬಹುದು. ಸಾಮಾನ್ಯ ಗಾಯಗಳಿಂದಲೂ ವಿಪರೀತ ರಕ್ತಸ್ರಾವವಾಗುತ್ತದೆ. ಆಂತರಿಕವಾಗಿಯೂ ರಕ್ತ ಸ್ರಾವವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.
- **ತೀವ್ರ ಹಿಮೋಫಿಲಿಯಾ:** ಈ ರೋಗಿಗಳಲ್ಲಿ ಘಟಕ VIII ರ ಪ್ರಮಾಣ ಶೇ.1ಕ್ಕಿಂತಲೂ ಕಡಮೆ ಇರುತ್ತದೆ. ಕಾರಣವಿಲ್ಲದೆ ತಂತಾನೇ ಆಂತರಿಕ ರಕ್ತಸ್ರಾವವಾಗುವ ಎಲ್ಲ ಸಾಧ್ಯತೆಗಳೂ ಇದೆ. ಇಂತಹ ರೋಗಿಗಳಲ್ಲಿ ಅತ್ಯಂತ ಜಾಗರೂಕರಾಗಿರಬೇಕು ಮತ್ತು ಯಾವುದೇ ಕ್ಷಣದಲ್ಲಿ ಅವಘಡಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಚರ್ಮದೊಳಗೆ ಸಣ್ಣ ಗಾಯಗಳಿಂದಲೂ ರಕ್ತ ಸ್ರಾವವಾಗಿ ಕಂದು ಮಿಶ್ರಿತ ಮಚ್ಚೆಗಳು ಕಾಣಿಸಿಕೊಳ್ಳುತ್ತದೆ. ಸ್ನಾಯುಗಳಲ್ಲಿ ಕೀಲುಗಳಲ್ಲಿ ಆಂತರಿಕ ರಕ್ತಸ್ರಾವವಾಗುವ ಎಲ್ಲ ಸಾಧ್ಯತೆಗಳು ಇರುತ್ತದೆ.

ಚಿಕಿತ್ಸೆ ಹೇಗೆ?

ಅನುವಂಶಿಕ ರೋಗವಾಗಿರುವ ಕುಸುಮ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಲಾಗದು. ಆದರೆ ತಾತ್ಕಾಲಿಕ ಶಮನ ಮಾಡಿ ರಕ್ತಸ್ರಾವವನ್ನು ಕುಂಠಿತಗೊಳಿಸಬಹುದು. ರಕ್ತಸ್ರಾವವಾದಾಗ, ರೋಗಿಯ ರಕ್ತದಲ್ಲಿ ಕೊರತೆಯಾಗಿರುವ ರಕ್ತ ಹೆಪ್ಪುಗಟ್ಟುವ ಪ್ರೋಟಿನ್ ಘಟಕ VIII ನ್ನು ನೀಡಿದಲ್ಲಿ ರಕ್ತ ಹೆಪ್ಪುಗಟ್ಟಿ ರಕ್ತಸ್ರಾವ ನಿಲ್ಲುತ್ತದೆ. ಈ ಪ್ರೋಟಿನ್‌ಗಳನ್ನು ರಕ್ತದಾನಿಗಳ ಪ್ಲಾಸ್ಮಾದಿಂದ ಬೇರ್ಪಡಿಸಿ, ನಿರ್ದಿಷ್ಟ ಹೆಪ್ಪುಗಟ್ಟುವ ಪ್ರೋಟಿನ್ ಘಟಕಗಳ ಚುಚ್ಚುಮದ್ದನ್ನು ಮತ್ತು ಜೈವಿಕ ತಂತ್ರಜ್ಞಾನದಿಂದ ತಯಾರಿಸಲ್ಪಟ್ಟ ರಿಕಾಂಬಿಟೆಂಟ್ ವಿಷರಹಿತ ಚುಚ್ಚುಮದ್ದನ್ನು ನೀಡಿ ರೋಗದ ತೀವ್ರತೆಯನ್ನು ಕಡಮೆ ಮಾಡಲಾಗುತ್ತದೆ. ಈ ಪ್ರೋಟಿನ್ ಘಟಕಗಳು ದುಬಾರಿ ಮತ್ತು ಎಲ್ಲೆಡೆ ಅಲಭ್ಯವಾದ ಕಾರಣ, ಭಾರತದಂತಹಾ ಬಡ ದೇಶಗಳಲ್ಲಿ ಈ ಪ್ರೋಟಿನ್ ಹೊಂದಿರುವ ಪ್ಲಾಸ್ಮಾ ಮತ್ತು ಕ್ರಯೋಪ್ರೆಸಿಪಿಟೇಟ್ ನೀಡಿ ರೋಗವನ್ನು ಹತೋಟಿಗೆ ತರಲಾಗುತ್ತದೆ. ಕುಸುಮ ರೋಗದ ಬಗ್ಗೆ ಮತ್ತಷ್ಟು ಜಾಗೃತಿ, ಅರಿವು ಮೂಡಿಸಿ ಮುಂಜಾಗರೂಕತೆ ಕ್ರಮಗಳನ್ನು ತಿಳಿಹೇಳಿ ರೋಗಿಗಳಿಗೆ ಮಾನಸಿಕ ಸ್ಥೈರ್ಯ ನೀಡಿ ಪುನಶ್ಚೇತನ ನೀಡುವುದು ಅತಿ ಅಗತ್ಯ.

ಈ ರೋಗಗಳಿಂದ ಬಳಲುತ್ತಿರುವ ರೋಗಿಗಳು ತಮ್ಮ ಜೀವನ ಶೈಲಿಯನ್ನು ಪರಿವರ್ತಿಸಿಕೊಂಡು, ಗಾಯಗಳಾಗದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಸಾಮ್ಯ ಮತ್ತು ಸಾಧಾರಣ ಕುಸುಮ ರೋಗದವರು ಸೂಕ್ತ ಮುನ್ನೆಚ್ಚರಿಕೆ ವಹಿಸಿ ಆಂತರಿಕ ರಕ್ತಸ್ರಾವವಾಗದಂತೆ ಜೀವನಶೈಲಿಯನ್ನು ಬದಲಾಯಿಸಿಕೊಳ್ಳಬೇಕು. ತೀವ್ರತರವಾದ ಕುಸುಮ ರೋಗಿಗಳಿಗೆ ರಕ್ತಹೆಪ್ಪುಗಟ್ಟುವ ಘಟಕ VIII ನ್ನು ನಿಯಮಿತವಾಗಿ ನೀಡಿ ರಕ್ತಸ್ರಾವವಾಗದಂತೆ ತಡೆಯಲಾಗುತ್ತದೆ. ಘಟಕ VIII ದೊರಕದಿದ್ದಲ್ಲಿ, ಕ್ರಯೋಪ್ರೆಸಿಪಿಟೇಟ್ ಎಂಬ ಅಂಶವನ್ನು ನೀಡಲಾಗುತ್ತದೆ. ಇದು ದೊರಕದಿದ್ದಲ್ಲಿ ರಕ್ತಪೂರಣ ವ್ಯವಸ್ಥೆಯನ್ನು ನೀಡಿ, ರಕ್ತದಲ್ಲಿ ಘಟಕ VIII ನಿರ್ಧರಿತ ಮಟ್ಟದಲ್ಲಿ ಇರುವಂತೆ ನೋಡಿಕೊಳ್ಳಲಾಗುತ್ತದೆ. ತುರ್ತು ಶಸ್ತ್ರಚಿಕಿತ್ಸೆಯ ಅಗತ್ಯವಿದ್ದಲ್ಲಿ ಸೂಕ್ತ ಪ್ರಮಾಣದಲ್ಲಿ ಘಟಕ VIII ನ್ನು ನೀಡಿ ರಕ್ತಸ್ರಾವವಾಗದಂತೆ ಎಚ್ಚರ ವಹಿಸಲಾಗುತ್ತದೆ. ಕುಸುಮ ರೋಗಿಗಳಿಗೆ ಗುರುತಿನ ಚೀಟಿ ನೀಡಿ, ಪ್ರತಿ ಬಾರಿ ವೈದ್ಯರ ಬಳಿ ಬಂದಾಗ ರೋಗದ ಬಗ್ಗೆ ಹೇಳಿಕೆ ನೀಡುವಂತೆ ಎಚ್ಚರ ವಹಿಸುತ್ತಾರೆ. ಸೂಕ್ತ ಮುಂಜಾಗರೂಕತೆ ಮತ್ತು ಎಚ್ಚರಿಕೆ ವಹಿಸಿದ್ದಲ್ಲಿ ಮುಂದೊದಗುವ ರಕ್ತಸ್ರಾವವನ್ನು ತಪ್ಪಿಸಿ ಎಲ್ಲರಂತೆ ಈ ರೋಗಿಗಳು ಸಮಾಜದಲ್ಲಿ ಬದುಕುವ ಅವಕಾಶ ಇದೆ ಮತ್ತು ಅಂತಹ ವಾತಾವರಣ ನಿರ್ಮಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಮುಂಜಾಗ್ರತೆಯ ಕ್ರಮಗಳು ಏನು?

1. ಗಂಟು, ಕೀಲು ಸ್ನಾಯುಗಳು ಮತ್ತು ಮಾಂಸಖಂಡಗಳಲ್ಲಿ ರಕ್ತಸ್ರಾವವಾಗುವ ಮುನ್ಸೂಚನೆ ದೊರೆತ ಕೂಡಲೇ, ಘಟಕ VIII ರ ಪ್ರೋಟಿನ್ ಚುಚ್ಚುಮದ್ದನ್ನು ಪಡೆಯತಕ್ಕದ್ದು.

2. ಮಾರಣಾಂತಿಕ ರಕ್ತಸ್ರಾವಗಳಾದ ಮಿದುಳು ಮತ್ತು ಹೊಟ್ಟೆಯೊಳಗಿನ ಆಂತರಿಕ ರಕ್ತ ಸ್ರಾವಗಳಿಗೆ ತಕ್ಷಣವೇ ಚುಚ್ಚುಮದ್ದು ನೀಡಬೇಕು, ಚಿಕಿತ್ಸೆ ತಡವಾದಲ್ಲಿ ಪ್ರಾಣಕ್ಕೆ ಕುತ್ತು ಬರಬಹುದು.

3. ದಂತ ಆರೋಗ್ಯಕ್ಕೆ ಹೆಚ್ಚಿನ ಕಾಳಜಿ ಮತ್ತು ಮುತುವರ್ಜಿ ವಹಿಸಬೇಕು ದಿನಕ್ಕೆರಡು ಬಾರಿ ಹಲ್ಲು ಉಜ್ಜಬೇಕು. ಹಲ್ಲು, ವಸಡು ಮತ್ತು ಬಾಯಿಯ ಆರೋಗ್ಯ ಕಾಪಾಡಿಕೊಳ್ಳಬೇಕು. ಇಲ್ಲವಾದಲ್ಲಿ ವಸಡುಗಳಲ್ಲಿ ರಕ್ತ ಜಿನುಗಬಹುದು ಮತ್ತು ಹಲ್ಲು ಹುಳುಕಾಗಬಹುದು. ಹಲ್ಲು ಕಿತ್ತ ಬಳಿಕವೂ ವಿಪರೀತ ರಕ್ತಸ್ರಾವವಾಗಿ ಪ್ರಾಣಕ್ಕೆ ಸಂಚಕಾರ ಬರಬಹುದು. ಆರು ತಿಂಗಳಿಗೊಮ್ಮೆ ದಂತ ವೈದ್ಯರ ಭೇಟಿ ಅತಿ ಅಗತ್ಯ.

4. ಎಲ್ಲ ಕುಸುಮ ರೋಗಿಗಳು ಗುರುತಿನ ಚೀಟಿ ಕಡ್ಡಾಯವಾಗಿ ಹೊಂದಿರತಕ್ಕದ್ದು. ಯಾವುದೇ ವೈದ್ಯರ ಬಳಿ ಹೋದಾಗ ಮೊದಲಾಗಿ ಈ ವಿಚಾರವನ್ನು ತಿಳಿಸತಕ್ಕದ್ದು.

5. ನಿತ್ಯವೂ ಲಘು ವ್ಯಾಯಾಮ ಮತ್ತು ಹಿತಮಿತವಾದ ದೈಹಿಕ ಕಸರತ್ತು ಮಾಡಿ ದೇಹದ ಸ್ನಾಯುಗಳು ಮಾಂಸಖಂಡಗಳು ಮತ್ತು ಎಲುಬು, ಗಂಟು, ಕೀಲುಗಳ ಆರೋಗ್ಯವನ್ನು ಸದೃಢವಾಗಿ ಇಟ್ಟುಕೊಳ್ಳತಕ್ಕದ್ದು.

6. ನಿಮ್ಮ ಸಮೀಪದ ಹಿಮೋಫಿಲಿಯಾ ಸೊಸೈಟಿಯಲ್ಲಿ ನಿಮ್ಮ ಹೆಸರನ್ನು ನೋಂದಾಯಿಸಿ ಸಂಪೂರ್ಣ ವಿವರ ನೀಡತಕ್ಕದ್ದು. ಪ್ರತಿ ಆರು ತಿಂಗಳಿಗೊಮ್ಮೆ ಹಿಮೋಫಿಲಿಯಾ ಕೇಂದ್ರಕ್ಕೆ ಚೀಟಿ ನೀಡಬೇಕು.

ರಾಜವಂಶಸ್ಥರ ರೋಗ

ಕುಸುಮ ರೋಗವನ್ನು ಶಾಸ್ತ್ರೀಯವಾಗಿ ರಾಜವಂಶಸ್ಥರ ರೋಗ ಅಥವಾ ರಾಯಲ್ ಡಿಸೀಸ್ ಎಂದೂ ಕರೆಯುತ್ತಾರೆ. ಯುರೋಪಿನ ರಾಜವಂಶಸ್ಥರಲ್ಲಿ ಹೆಚ್ಚಿನವರು ಈ ರೋಗದಿಂದ ಬಳಲಿದ ಕಾರಣದಿಂದ ಈ ಹೆಸರು ಈ ರೋಗದ ಜತೆಗೆ ತಳುಕು ಹಾಕಿದೆ. ವಿಕ್ಟೋರಿಯಾ ರಾಣಿ (1837-1901) ಸ್ವತಃ ಈ ಕುಸುಮ ರೋಗದ ಅಸಹಜ ವರ್ಣತಂತು ಹೊಂದಿದ್ದು ರೋಗವಾಹಿನಿಯಾಗಿ ತನ್ನ ಹೆಣ್ಣುಮಕ್ಕಳಾದ ಅಲೀಸ ಮತ್ತು ಬ್ಯಾಟ್ರಿಸ್ ಎಂಬವರ ಮುಖಾಂತರ ಹಲವು ರಾಜವಂಶಗಳಿಗೆ ರೋಗವನ್ನು ಉಚಿತವಾಗಿ ಬಳುವಳಿಯಾಗಿ ನೀಡಿದ ಕುಖ್ಯಾತಿಗಳಿಸಿರುತ್ತಾರೆ. ಹಿಮೋಫಿಲಿಯಾ ಅತ್ಯಂತ ವಿರಳ ವರ್ಗಕ್ಕೆ ಸೇರಿದ ರಕ್ತದೊಲವಿನ ರೋಗವಾಗಿದ್ದು, ವಿಶ್ವದಾದ್ಯಂತ ಸುಮಾರು 4ರಿಂದ 5 ಲಕ್ಷ ಮಂದಿ ಈ ರೋಗದಿಂದ ಬಳಲುತ್ತಿದ್ದಾರೆ. ವಿಶ್ವಸಂಸ್ಥೆಯ ವರದಿಗಳ ಪ್ರಕಾರ ಪ್ರತಿ ಸಾವಿರ ಜನರಲ್ಲಿ ಒಬ್ಬರು ಬಳಲುತ್ತಿದ್ದಾರೆ. ಭಾರತ ದೇಶವೊಂದರಲ್ಲಿಯೇ ಸುಮಾರು 1 ಲಕ್ಷ ಮಂದಿ ಈ ರೋಗದಿಂದ ಬಳಲುತ್ತಿದ್ದಾರೆ ವಿಪರ್ಯಾಸವೆಂದರೆ ಈ ರೋಗಿಗಳನ್ನು ಗುರುತಿಸಿ, ನೋಂದಾಯಿಸದ ಕಾರಣ, ನಿರ್ದಿಷ್ಟ ಚಿಕಿತ್ಸೆ ನೀಡುವುದು ಸಾಧ್ಯವಾಗಿಲ್ಲ. ಭಾರತದಲ್ಲಿ ಕೇವಲ 17,500 ಮಂದಿ ಮಾತ್ರ ನೋಂದಾಯಿಸಿಕೊಂಡಿರುತ್ತಾರೆ. ಕರ್ನಾಟಕ ರಾಜ್ಯದಲ್ಲಿ 6,500 ಮಂದಿ ರೋಗಿಗಳು ಇದ್ದಾರೆ ಎಂದು ಅಂದಾಜಿಸಲಾಗಿದ್ದು, ಕೇವಲ 1600 ರೋಗಿಗಳನ್ನು ಮಾತ್ರ ಗುರುತಿಸಲಾಗಿದೆ. ಭಾರತದಲ್ಲಿ ಈ ರೋಗದಿಂದ ಬಳಲುತ್ತಿರುವ ಶೇ.75ರಷ್ಟು ರೋಗಿಗಳನ್ನು ಗುರುತಿಸಲಾಗಿಲ್ಲ ಎನ್ನುವುದೇ ಹಿಮೋಫಿಲಿಯಾ ರೋಗದ ಬಗ್ಗೆ ಜನರಲ್ಲಿ ಇರುವ ನಿರ್ಲಕ್ಷತನ ಮತ್ತು ಬೇಜವಾಬ್ದಾರಿಗೆ ಹಿಡಿದ ಕೈಗನ್ನಡಿ ಎಂದರೂ ತಪ್ಪಲ್ಲ. ಒಟ್ಟಿನಲ್ಲಿ ಅನುವಂಶೀಯವಾಗಿ ಹರಡುವ, ಸಾಂಕ್ರಾಮಿಕವಲ್ಲದ ರಾಜ ಮನೆತನದ ರೋಗ ಎಂಬ ಅನರ್ಥ ನಾಮ ಪಡೆದ ಈ ಕುಸುಮ ರೋಗ ಎಂಬ ಕಠೋರ ರೋಗದ ಬಗ್ಗೆ ಜನರಲ್ಲಿ ಮತ್ತು ರೋಗದಿಂದ ಬಳಲುತ್ತಿರುವ ವ್ಯಕ್ತಿಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಕೆಲಸ ಆಗಬೇಕಾದ ತುರ್ತು ಅನಿವಾರ್ಯತೆ ಇದೆ.

ಲೇಖಕರು: ಬಾಯಿ, ಮುಖ ಮತ್ತು ದವಡೆ ಶಸ್ತ್ರ ಚಿಕಿತ್ಸಕರು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 92

ಸಮಾಚಾರ ಸಣ್ಣದಲ್ಲ

ಸತತ 3ನೇ ಬಾರಿ ರಾಜ್ಯ ಸಭಾ ಉಪಾಧ್ಯಕ್ಷರಾಗಿ ಹರಿವಂಶ್ ಪುನರಾಯ್ಕೆ

ದೆಹಲಿ: ರಾಜ್ಯಸಭಾ ಸದಸ್ಯ ಹರಿವಂಶ್ ನಾರಾಯಣ್ ಸಿಂಗ್ ಅವರು ರಾಜ್ಯಸಭಾ ಉಪಾಧ್ಯಕ್ಷರಾಗಿ ಮೂರನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿ

ದ್ದಾರೆ. ವಿರೋಧ ಪಕ್ಷಗಳು ಯಾವುದೇ ಅಭ್ಯರ್ಥಿಯನ್ನು ಕಣಕ್ಕಿಳಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯಾಯಿತು. ಏಪ್ರಿಲ್ 9ರಂದು ಹರಿವಂಶ್ ಅವರ ಅವಧಿ ಮುಗಿದ ನಂತರ ಈ ಹುದ್ದೆ ಖಾಲಿ ಯಾಗಿತ್ತು. ರಾಜ್ಯಸಭೆ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್, ರಾಜ್ಯ ಪರಿಷತ್ತಿನ ಕಾರ್ಯವಿಧಾನ ಮತ್ತು ವ್ಯವಹಾರ ನಡವಳಿಕೆಯ ನಿಯಮ 7ರ ಅಡಿಯಲ್ಲಿ ಚುನಾವಣೆಯ ದಿನಾಂಕವಾಗಿ ನಿಗದಿಪಡಿಸಿದರು. ಪ್ರಸ್ತಾವನೆಗಳ ನೋಟಿಸ್‌ಗಳನ್ನು ಸಲ್ಲಿಸಲು ಗುರುವಾರ ಮಧ್ಯಾಹ್ನ 12 ಗಂಟೆಯ ಗಡುವು ಇತ್ತು. ಮೂರನೇ ಬಾರಿಗೆ ಉಪಸಭಾಪತಿಯಾಗಿ ಆಯ್ಕೆಯಾದ ಹರಿವಂಶ್ ನಾರಾಯಣ್ ಸಿಂಗ್‌ರನ್ನು ಸದನದ ಪರವಾಗಿ ನಾನು ಅಭಿನಂದಿಸುತ್ತೇನೆ. ಇದು ಸದನವು ನಿಮ್ಮ ಮೇಲೆ ಇಟ್ಟಿರುವ ಆಳವಾದ ನಂಬಿಕೆಯನ್ನು ತೋರಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು. ಹರಿವಂಶ್ ಈಗಾಗಲೇ 2 ಬಾರಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇದು ಅವರ 3 ನೇ ಅವಧಿಯಾಗಲಿದೆ.

ಪತ್ನಿಯನ್ನು ಕೊಂದು, ವರ್ಜೀನಿಯಾದ ರಾಜ್ಯಪಾಲ ಆತ್ಮಹತ್ಯೆ

ವಾಷಿಂಗ್ಟನ್: ವಿಚ್ಛೇದನ ಪ್ರಕರಣದ ವಿಚಾರವಾಗಿ ಅಮೆರಿಕದ ವರ್ಜೀನಿಯಾದ ಮಾಜಿ ರಾಜ್ಯಪಾಲ ಫೇರ್‌ಫ್ಯಾಕ್ಸ್ ಪತ್ನಿಯನ್ನು ಗುಂಡಿಕ್ಕಿ ಕೊಂದು, ನಂತರ ತಾನೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಫೇರ್‌ಫ್ಯಾಕ್ಸ್ (47), ಡೆಮಾಕ್ರಟಿಕ್ ಪಕ್ಷದಲ್ಲಿ ಉದಯೋನ್ಮುಖ ತಾರೆಯಾಗಿದ್ದರು. ಆದರೆ ಲೈಂಗಿಕ ದೌರ್ಜನ್ಯದ ಆರೋಪಗಳು ಅವರ ರಾಜಕೀಯ ಭವಿಷ್ಯವನ್ನು ಹಾಳುಮಾಡಿತು. ಗಂಭೀರ ಆರೋಪಗಳನ್ನು ಹೊತ್ತ ಫೇರ್‌ಫ್ಯಾಕ್ಸ್ ಅನ್ನು ಮನೆಯಿಂದ ಹೊರಹಾಕಲಾಯಿತು. ಈ ಘಟನೆಗಳ ಬಳಿಕ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಫೇರ್‌ಫ್ಯಾಕ್ಸ್ ಮತ್ತು ಅವರ ಪತ್ನಿ ಡಾ. ಸೆರಿನಾ ಫೇರ್‌ಫ್ಯಾಕ್ಸ್ (49) ಅವರ ಶವಗಳು ಮನೆಯಲ್ಲಿ ಪತ್ತೆಯಾಗಿವೆ ಎಂದು ಕೌಂಟಿ ಪೊಲೀಸ್ ಮುಖ್ಯಸ್ಥ ಕೆವಿನ್ ಡೇವಿಸ್ ತಿಳಿಸಿದ್ದಾರೆ. ಫೇರ್‌ಫ್ಯಾಕ್ಸ್ ಯಶಸ್ವಿ ದಂತವೈದ್ಯೆಯಾಗಿದ್ದ ತನ್ನ ಪತ್ನಿಯನ್ನು ನೆಲಮಾಳಿಗೆಯಲ್ಲಿ ಗುಂಡು ಹಾರಿಸಿ ಕೊಂದಿದ್ದಾರೆ. ನಂತರ ಮೇಲಿನ ಮಹಡಿಯ ಮಲಗುವ ಕೋಣೆಗೆ ಹೋಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

4ರ ಬಾಲಕಿ ಮೇಲೆ ಅತ್ಯಾಚಾರ: ಎಸ್‌ಐಗೆ 20 ವರ್ಷ ಜೈಲು ಶಿಕ್ಷೆ

ಜೈಪುರ: 4 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ವಜಾಗೊಂಡಿರುವ ರಾಜಸ್ಥಾನದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್

ಭೂಪೇಂದ್ರ ಸಿಂಗ್ ಯಾದವ್‌ಗೆ ದೌಸಾ ಜಿಲ್ಲೆಯ ಪೋಕ್ಸೋ ನ್ಯಾಯಾಲಯವು 20 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ. ನ್ಯಾಯಾಲಯವು 2 ಲಕ್ಷ ರು. ದಂಡ ವಿಧಿಸಿದ್ದು, ಅದನ್ನು ಸಂತ್ರಸ್ತೆಗೆ ನೀಡಲಾಗುತ್ತದೆ. ಸಂತ್ರಸ್ತೆಗೆ 3 ಲಕ್ಷ ರು. ಪರಿಹಾರವನ್ನು ಸಹ ಶಿಫಾರಸು ಮಾಡಿದೆ. ವರದಿಗಳ ಪ್ರಕಾರ, 2023 ರಲ್ಲಿ ನಡೆದ ಈ ಘಟನೆ ರಾಹುವಾಸ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆ ದಿದೆ. ಆ ಸಮಯದಲ್ಲಿ, ಭೂಪೇಂದ್ರ ಸಿಂಗ್ ಯಾದವ್ ಚುನಾವಣಾ ಕರ್ತವ್ಯದಲ್ಲಿದ್ದ. ಅವರು ನಾಲ್ಕು ವರ್ಷದ ಬಾಲಕಿಯನ್ನು ಕ್ಯಾಂಡಿ ಕೊಡುವುದಾಗಿ ಭರವಸೆ ನೀಡಿ ತಮ್ಮ ಕೋಣೆಗೆ ಕರೆದೊಯ್ದು ನಂತರ ಅತ್ಯಾಚಾರ ಮಾಡಿದ್ದಾನೆ. ಈ ಘಟನೆ ರಾಜಸ್ಥಾನದಾದ್ಯಂತ ಆಕ್ರೋಶಕ್ಕೆ ಕಾರಣವಾಯಿತು. ಸಂತ್ರಸ್ತೆ ಮತ್ತು ಆಕೆಯ ಕುಟುಂಬದವರ ದೂರಿನ ಆಧಾರದ ಮೇಲೆ, ಪೊಲೀಸರು ತಕ್ಷಣ ಪ್ರಕರಣ ದಾಖಲಿಸಿಕೊಂಡು ಆರೋಪಿ ಭೂಪೇಂದ್ರ ಸಿಂಗ್ ಯಾದವ್‌ನನ್ನು ಬಂಧಿಸಿದರು.

ಇಂಡೋನೇಷ್ಯಾದಲ್ಲಿ ಹೆಲಿಕಾಪ್ಟರ್ ಪತನ, 8 ಮಂದಿ ಸಾವು

ಜಕಾರ್ತ: ಇಂಡೋನೇಷ್ಯಾದ ಪಶ್ಚಿಮ ಕಾಲಿಮಂಟನ್ ಪ್ರಾಂತ್ಯದಲ್ಲಿ ಹೆಲಿಕಾಪ್ಟರ್ ಪತನಗೊಂಡಿದ್ದು, ಅದರಲ್ಲಿದ್ದ 8 ಜನ ಮೃತಪಟ್ಟಿದ್ದಾರೆ. ಏ.16ರಂದು ಇಂಡೋನೇಷ್ಯಾದ ಮಲಾವಿಯ ತೋಟ ಪ್ರದೇಶದಿಂದ ಹಾರಾಟ ನಡೆಸಿದ ಏರ್‌ಬಸ್ ಎಚ್-130 ಹೆಲಿಕಾಪ್ಟರ್ ಕೇವಲ 5 ನಿಮಿಷಗಳ ಬಳಿಕ ತನ್ನ ಸಂಪರ್ಕ ಕಳೆದುಕೊಂಡಿದ್ದು, ಗುಡ್ಡಗಾಡು ಪ್ರದೇಶದಲ್ಲಿ ನಾಪತ್ತೆಯಾಗಿದೆ. ಪತನಗೊಂಡು ಅಪಘಾತ ಸಂಭವಿಸಿದೆ ಎಂದು ಅಲ್ಲಿನ ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ಅಪಘಾತ ನಡೆದ ಸ್ಥಳವು ಕಡಿದಾದ ಗುಡ್ಡಗಾಡು ಪ್ರದೇಶ ಹೊಂದಿರುವ ದಟ್ಟವಾದ ಅರಣ್ಯ ಪ್ರದೇಶದಲ್ಲಿದೆ. ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿದ್ದು, ಹೆಲಿಕಾಪ್ಟರ್ ಸಂಪರ್ಕ ಕಳೆದುಕೊಂಡ ಸುಮಾರು 3 ಕಿಮೀ (2 ಮೈಲುಗಳು) ಪಶ್ಚಿಮಕ್ಕೆ ಹೆಲಿಕಾಪ್ಟರ್‌ನ ಬಾಲದ ಭಾಗವಾಗಿರಬಹುದು ಎಂದು ಶಂಕಿಸಲಾದ ಅವಶೇಷಗಳನ್ನು ಪತ್ತೆಹಚ್ಚಿದ್ದಾರೆ ಎಂದು ತಿಳಿಸಿದ್ದಾರೆ. ಕಾಪ್ಟರ್‌ನಲ್ಲಿದ್ದ 6 ಮಂದಿ ಪ್ರಯಾಣಿಕರು ಸೇರಿದಂತೆ 2 ಸಿಬ್ಬಂದಿ ಸಾವನ್ನಪ್ಪಿರುವುದಾಗಿ ಖಚಿತಪಡಿಸಿದ್ದಾರೆ. ಆದಾಗ್ಯೂ ಅಪಘಾತದ ಕಾರಣ ಈವರೆಗೂ ನಿಗೂಢವಾಗಿದೆ.

ಹೊರ್ಮುಜ್ ಪೂರ್ಣ ತೆರವು: ಇರಾನ್ ಘೋಷಣೆ

ಕದನವಿರಾಮದವರೆಗೆ ಎಲ್ಲ ದೇಶಗಳ ಹಡಗುಗಳಿಗೂ ಮುಕ್ತ ಸಂಚಾರಕ್ಕೆ ಅವಕಾಶ: ಸಿಹಿ ಸುದ್ದಿ ನೀಡಿದ ಇರಾನ್ ಸಚಿವ

ಅಮೆರಿಕ ಸೇರಿ ಹಲವು ದೇಶಗಳಿಂದ ಸ್ವಾಗತ | ಪೂರ್ಣ ಒಪ್ಪಂದದ ಬಳಿಕ ಹೊರ್ಮುಜ್‌ನಲ್ಲಿ ನಮ್ಮ ನಿರ್ಬಂಧ ತೆರವು: ಟ್ರಂಪ್

ದೆಹಲಿ: ಅಮೆರಿಕ-ಇರಾನ್-ಇಸ್ರೇಲ್ ನಡುವೆ ಕದನವಿರಾಮವಾಗಿದ್ದರೂ, ಇಸ್ರೇಲ್ ಲೆಬನಾನ್ ಮೇಲಿನ ದಾಳಿಯನ್ನು ಮುಂದುವರಿಸಿತ್ತು. ಇದರ ಬೆನ್ನಲ್ಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಸ್ಥಿಕೆಯಲ್ಲಿ ಇಸ್ರೇಲ್-ಲೆಬನಾನ್ ನಡುವೆ 10 ದಿನಗಳ ಕದನವಿರಾಮವಾಗಿದೆ. ಇದರ ನಡುವೆ ಹೊರ್ಮುಜ್ ಎಲ್ಲ ದೇಶಗಳ ಸಂಚಾರಕ್ಕೂ ಮುಕ್ತವಾಗಿದೆ ಎಂದು ಇರಾನ್ ಘೋಷಿಸಿದೆ. ಕದನ ವಿರಾಮದ ನಡುವೆಯೇ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮಾಡಿರುವ ಈ ಘೋಷಣೆ ಮಹತ್ವದ್ದಾಗಿದೆ. ಲೆಬನಾನ್‌ನಲ್ಲಿ ಕದನ ವಿರಾಮ ಘೋಷಣೆಯಾಗಿರುವುದರಿಂದ ನಿಗದಿತ ಮಾರ್ಗದಲ್ಲಿ ಹೋಗಲು ಅನುಮತಿ ನೀಡಲಾಗಿದೆ ಎಂದು ಅರಾಘ್ಚಿ ಎಕ್ಸ್‌ನಲ್ಲಿ ಹೇಳಿದ್ದಾರೆ.

ಇನ್ನೊಂದು ಕಡೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಪ್ರಕಟಣೆಗೆ ತಮ್ಮ ಧನ್ಯವಾದ ಸಲ್ಲಿಸಿದ್ದಾರೆ. ಮತ್ತೊಂದು ಕಡೆ ತಮ್ಮ ಮೊಂಡಾಟವನ್ನೂ ಮುಂದುವರಿಸಿದ್ದಾರೆ. ಇರಾನ್‌ನೊಂದಿಗೆ ಪೂರ್ಣ ಒಪ್ಪಂದವಾಗುವರೆಗೆ ಅಮೆರಿಕ ಹೊರ್ಮುಜ್ ಜಲಸಂಧಿಗೆ ವಿಧಿಸಿರುವ ನಿರ್ಬಂಧ ಮುಂದುವರಿಯುತ್ತದೆ ಎಂದು ಹೇಳಿದ್ದಾರೆ. ಅರ್ಥಾತ್ ಇರಾನ್‌ನಿಂದ ಸಂಚಾರಕ್ಕೆ ಅನುಮತಿ ಸಿಕ್ಕಿದ್ದರೂ, ಅಮೆರಿಕ ತಾನು ಹಡಗು ಸಂಚಾರಕ್ಕೆ ಅವಕಾಶ ಕೊಡಲ್ಲ ಎನ್ನುವ ಮೂಲಕ ಇತರೆ ದೇಶಗಳಿಗೆ ತಲೆನೋವಾಗಿ ಪರಿಣಮಿಸಿದೆ.

ಲೆಬನಾನ್ ವಿರಾಮಕ್ಕೆ ರಷ್ಯಾ ಮೆಚ್ಚುಗೆ: ಇಸ್ರೇಲ್ ಮತ್ತು ಲೆಬನಾನ್ ನಡುವಿನ ಕದನ ವಿರಾಮ ಒಪ್ಪಂದವನ್ನು ರಷ್ಯಾ ಸ್ವಾಗತಿಸಿದೆ. ಹೋರಾಟದಲ್ಲಿನ ವಿರಾಮವು ದೀರ್ಘಾವಧಿಯ ಒಪ್ಪಂದಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಆಶಿಸುವುದಾಗಿ ಮಾಸ್ಕೋ ತನ್ನ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ. ಕದನ ವಿರಾಮದ ನಿರ್ಧಾರವನ್ನು ನಾವು ಖಂಡಿತವಾಗಿಯೂ ಸ್ವಾಗತಿಸುತ್ತೇವೆ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

2,361 ಭಾರತೀಯರು ಸುರಕ್ಷಿತವಾಗಿ ವಾಪಸ್

ಮಧ್ಯಪ್ರಾಚ್ಯ ಸಂಘರ್ಷ ಆರಂಭವಾದಾಗಿನಿಂದ ಇದುವರೆಗೂ 2,361 ಭಾರತೀಯ ಪ್ರಜೆಗಳು ಸುರಕ್ಷಿತವಾಗಿ ತಾಯ್ನಾಡಿಗೆ ಮರಳಿದ್ದಾರೆ ಎಂದು ಕೇಂದ್ರ ಸರಕಾರ ಮಾಹಿತಿ ನೀಡಿದೆ. ಈ ಕುರಿತು ತಮ್ಮ ವಾರದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಇಲಾಖೆ ವಕ್ತಾರ ರಣಧೀರ್ ಜೈಸ್ವಾಲ್, ನಾವು 2,361 ಭಾರತೀಯ ನಾಗರಿಕರನ್ನು ಇರಾನ್‌ನಿಂದ ಸುರಕ್ಷಿತವಾಗಿ ಭಾರತಕ್ಕೆ ಕರೆತರಲು ಸಹಾಯ ಮಾಡಿದ್ದೇವೆ. ಇವರಲ್ಲಿ 2,060 ಜನರು ಅರ್ಮೇನಿಯಾ ಮೂಲಕ ಮತ್ತು 301 ಜನರು ಅಜರ್ಬೈಜಾನ್ ಮೂಲಕ ಸ್ವದೇಶಕ್ಕೆ ಮರಳಿದ್ದಾರೆ. ಈ 2,361 ಜನರಲ್ಲಿ 1,041 ಭಾರತೀಯ ವಿದ್ಯಾರ್ಥಿಗಳು ಮತ್ತು 3 ವಿದೇಶಿ ಪ್ರಜೆಗಳು ಸೇರಿದ್ದಾರೆ ಎಂದು ತಿಳಿಸಿದರು.

ರಷ್ಯಾ ತೈಲ ಖರೀದಿಗೆ ಭಾರತಕ್ಕೆ ಇನ್ನು ವಿನಾಯ್ತಿ ನೀಡುವುದಿಲ್ಲ: ಅಮೆರಿಕ

ಯುದ್ಧಕಾಲದಲ್ಲಿ ಇರಾನ್ ಮತ್ತು ರಷ್ಯಾದ ತೈಲಗಳನ್ನು ಖರೀದಿಸಲು ಅಮೆರಿಕ ನೀಡಿದ್ದ ವಿನಾಯ್ತಿಯನ್ನು ಮುಂದುವರಿಸುವುದಿಲ್ಲ ಎಂದು ಅಮೆರಿಕ ಹೇಳಿದೆ. ಭಾರತವು ನಿರ್ಬಂಧಗಳ ವಿನಾಯಿತಿಯ ಪ್ರಮುಖ ಫಲಾನುಭವಿಯಾಗಿದೆ. ಹೊರ್ಮುಜ್ ಜಲಸಂಧಿಯ ಬಂದ್ ಕಾರಣದಿಂದ ಭಾರತಕ್ಕೆ ಬರಬೇಕಿದ್ದ ಹಲವಾರು ತೈಲ ಹಡಗುಗಳು ಸಿಲುಕಿಕೊಂಡಿವೆ. ಹೀಗಾಗಿ, ರಷ್ಯಾದ ತೈಲ ಖರೀದಿಯನ್ನು ಮುಂದುವರಿಸಲು ಭಾರತಕ್ಕೆ ಅಮೆರಿಕ ವಿನಾಯಿತಿ ಕೊಟ್ಟಿದೆ. ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಉಲ್ಬಣಗೊಂಡ ನಂತರ ಜಾಗತಿಕವಾಗಿ ತೈಲ ಬೆಲೆಯೇರಿಕೆಯಾಗಿತ್ತು. ಆದ್ದರಿಂದ ಅಮೆರಿಕ ನಿರ್ಬಂಧಗಳಿಗೆ ವಿನಾಯಿತಿ ನೀಡಿತ್ತು. ಏರುತ್ತಿರುವ ಇಂಧನ ಬೆಲೆಗಳನ್ನು ಸ್ಥಿರಗೊಳಿಸಲು ಅಲ್ಪಾವಧಿಯ ಕ್ರಮವಾಗಿ ತಾತ್ಕಾಲಿಕ ವಿನಾಯಿತಿಗಳನ್ನು ನೀಡಲಾಗಿದೆ. ಏಪ್ರಿಲ್ 19ರಿಂದ ಈ ವಿನಾಯ್ತಿ ಮುಕ್ತಾಯಗೊಳ್ಳಲಿದೆ.

ಹೊರ್ಮುಜ್ ದೀರ್ಘಾವಧಿ ತೆರವಿಗೆ 50 ದೇಶಗಳ ಸಭೆ

ಇರಾನ್ ವಶದಲ್ಲಿರುವ ಹೊರ್ಮುಜ್ ಜಲಸಂಧಿಯನ್ನು ದೀರ್ಘಾವಧಿಯವರೆಗೆ ತೆರವಿಗೆ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್, ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರಾನ್ ನೇತೃತ್ವದಲ್ಲಿ 50 ದೇಶಗಳು ಶುಕ್ರವಾರ ಸಭೆ ನಡೆಸಿದವು. ಕದನ ವಿರಾಮದ ಅವಧಿಯಲ್ಲಿ ಎಲ್ಲ ದೇಶಗಳ ಹಡಗುಗಳ ಸಂಚಾರಕ್ಕೆ ಇರಾನ್ ಸಮ್ಮತಿಸಿದೆ. ಇದನ್ನು ಬ್ರಿಟನ್, ಫ್ರಾನ್ಸ್ ಸ್ವಾಗತಿಸಿವೆ. ಆದರೆ ದೀರ್ಘಾವಧಿಗೆ ಮುಕ್ತ ಸಂಚಾರಕ್ಕೆ ಅವಕಾಶ ನೀಡಬೇಕೆಂದು 50 ದೇಶಗಳ ಸಭೆಯಲ್ಲಿ ಆಗ್ರಹಿಸಲಾಗಿದೆ.

ಜಲಸಂಧಿಯಲ್ಲಿರುವ ಸ್ಫೋಟಕ ತೆರವು ಸಾಮರ್ಥ್ಯ ತಮಗಿದೆ: ಫ್ರಾನ್ಸ್ ಭರವಸೆ

ಭಾರತದ ಪ್ರಧಾನಿ ಮೋದಿಯೊಂದಿಗೆ ಮ್ಯಾಕ್ರಾನ್ ದೂರವಾಣಿಯಲ್ಲಿ ಚರ್ಚೆ ನಡೆಸಿದ್ದಾರೆ. ಮಧ್ಯಪ್ರಾಚ್ಯ ಬಿಕ್ಕಟ್ಟಿನ ಕೇಂದ್ರಬಿಂದುವಾಗಿ ಹೊರಹೊಮ್ಮುತ್ತಿರುವ ಹೊರ್ಮುಜ್ ಜಲಸಂಧಿಯಲ್ಲಿ ಇರಾನ್‌ನ ಐಆರ್‌ಜಿಸಿ ನೌಕಾಪಡೆಗಳು ಹೂತಿಟ್ಟಿರುವ ಜಲಸ್ಫೋಟಕಗಳನ್ನು ತೆರವುಗೊಳಿಸುವ ಸಾಮರ್ಥ್ಯ ತಮಗಿದೆ ಎಂದು ಫ್ರಾನ್ಸ್ ಹೇಳಿಕೊಂಡಿದೆ. ಬೆಲ್ಜಿಯಂ, ನೆದರ್ಲೆಂಡ್ಸ್ ಮತ್ತು ಫ್ರಾನ್ಸ್‌ನಂತಹ ಯುರೋಪಿಯನ್ ರಾಷ್ಟ್ರಗಳು ಗಣಿ ತೆರವು ಸಾಮರ್ಥ್ಯಗಳನ್ನು ಹೊಂದಿದ್ದು, ಇದು ಹೊರ್ಮುಜ್ ಜಲಸಂಧಿಯ ಮೂಲಕ ಹಡಗು ಮಾರ್ಗಗಳನ್ನು ಸುರಕ್ಷಿತಗೊಳಿಸಲು ಸಹಾಯ ಮಾಡಬಹುದು ಎಂದು ಫ್ರಾನ್ಸ್‌ನ ರಕ್ಷಣಾ ಸಚಿವರಾದ ಕ್ಯಾಥರೀನ್ ವೌಟ್ರಿನ್ ಹೇಳಿದ್ದಾರೆ.

ಇರಾನ್-ಅಮೆರಿಕದ ಶಾಂತಿ ಒಪ್ಪಂದ ಸನಿಹದಲ್ಲಿದೆ: ಟ್ರಂಪ್

ಇರಾನ್ ಯುರೇನಿಯಂ ನೀಡಲು ಒಪ್ಪಿದೆ: ಅಮೆರಿಕ ಅಧ್ಯಕ್ಷ

ಹೊರ್ಮುಜ್ ತೆರವಿನ ಬಳಿಕ ಮತ್ತೊಂದು ಮಹತ್ವದ ಸುದ್ದಿ

ವಾಷಿಂಗ್ಟನ್: ಇರಾನ್ ತನ್ನ ಸಮೃದ್ಧ ಯುರೇನಿಯಂ ಸಂಗ್ರಹವನ್ನು ಹಸ್ತಾಂತರಿಸಲು ಒಪ್ಪಿಕೊಂಡಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದಾರೆ. ಆರು ವಾರಗಳ ಸಂಘರ್ಷದ ನಂತರ 2 ದೇಶಗಳು ಒಪ್ಪಂದದ ಸಮೀಪಕ್ಕೆ ಬಂದಿವೆ ಎಂದು ತಿಳಿಸಿದ್ದಾರೆ.

ಅಮೆರಿಕದ ಶ್ವೇತಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಟೆಹ್ರಾನ್ ಜೊತೆ ನಡೆಯುತ್ತಿರುವ ಮಾತುಕತೆಗಳು ಉತ್ತಮವಾಗಿ ಮುಂದುವರಿಯುತ್ತಿವೆ. ತುಂಬಾ ಯಶಸ್ವಿಯಾಗಿವೆ ಎಂದರು. ಅವರು ನ್ಯೂಕ್ಲಿಯರ್ ಡಸ್ಟ್ ಅನ್ನು ನಮಗೆ ಹಿಂತಿರುಗಿಸಲು ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು. ಇದು ಸಮೃದ್ಧ ಯುರೇನಿಯಂ ಸಂಗ್ರಹವನ್ನು ಸೂಚಿಸಲು ಅವರು ಬಳಸಿದ ಪದವಾಗಿದೆ. ವಾಷಿಂಗ್ಟನ್ ಪ್ರಕಾರ, ಇದನ್ನು ಅಣ್ವಸ್ತ್ರ ತಯಾರಿಗೆ ಬಳಸಬಹುದು. ನಾವು ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆ ಬಹಳ ಹೆಚ್ಚಾಗಿದೆ ಎಂದರು.

ಈ ಘೋಷಣೆ, ಇಸ್ರೇಲ್ ಮತ್ತು ಲೆಬನಾನ್ 10 ದಿನಗಳ ಯುದ್ಧ ವಿರಾಮಕ್ಕೆ ಒಪ್ಪಿಕೊಂಡಿವೆ ಎಂಬ ಟ್ರಂಪ್ ಹೇಳಿಕೆಯ ನಂತರ ಬಂದಿದೆ. ಇದು ಇರಾನ್, ಅಮೆರಿಕ ಮತ್ತು ಇಸ್ರೇಲ್ ನಡುವೆ ನಡೆಯುತ್ತಿರುವ ಯುದ್ಧ ವಿರಾಮವನ್ನು ವಿಸ್ತರಿಸಲು ಸಹಕಾರಿಯಾಗಬಹುದು. ಮುಂದಿನ ಅಮೆರಿಕ-ಇರಾನ್ ಮಾತುಕತೆಗಳು ಈ ವಾರಾಂತ್ಯದಲ್ಲೇ ನಡೆಯಬಹುದು ಎಂದು ಟ್ರಂಪ್ ಹೇಳಿದರು. ಜೊತೆಗೆ, ಮಾತುಕತೆಯಲ್ಲಿ ಇರಾನ್ ಹೆಚ್ಚು ಆಸಕ್ತಿಯನ್ನು ತೋರಿಸಿದೆ ಎಂದು ಸೂಚಿಸಿ, ಪ್ರಸ್ತುತ ಯುದ್ಧ ವಿರಾಮವನ್ನು ವಿಸ್ತರಿಸುವ ಅಗತ್ಯವಿದೆಯೇ ಎಂಬುದರ ಬಗ್ಗೆ ತಾನು ಖಚಿತವಾಗಿಲ್ಲ ಎಂದು ಹೇಳಿದರು.

ಈಗ ಇರಾನ್ ಜೊತೆ ನಮಗೆ ತುಂಬಾ ಉತ್ತಮ ಸಂಬಂಧವಿದೆ, ಇದು ಸುಮಾರು ನಾಲ್ಕು ವಾರಗಳ ಬಾಂಬ್ ದಾಳಿ ಮತ್ತು ಬಲವಾದ ನಿರ್ಬಂಧಗಳ ಸಂಯೋಜನೆಯ ಫಲಿತಾಂಶ ಎಂದು ನಾನು ಭಾವಿಸುತ್ತೇನೆ ಎಂದರು.

ಒಪ್ಪಂದದಲ್ಲಿ ಏನಿದೆ?: ಪ್ರಸ್ತಾವಿತ ಒಪ್ಪಂದದಲ್ಲಿ ಇರಾನ್ ತನ್ನ ಅಣ್ವಸ್ತ್ರ ಮಹತ್ವಾಕಾಂಕ್ಷೆಗಳನ್ನು ತ್ಯಜಿಸುವುದು, ಅಣು ಸಾಮಗ್ರಿಯನ್ನು ಹಸ್ತಾಂತರಿಸುವುದು, ಮುಕ್ತ ತೈಲವನ್ನು ಖಚಿತಪಡಿಸುವುದು ಮತ್ತು ಹೊರ್ಮುಜ್ ಕಣಿವೆಯನ್ನು ಪುನಃ ತೆರೆಯುವುದು ಸೇರಿದೆ. ಇರಾನ್‌ನ ಅಣು ಕಾರ್ಯಕ್ರಮವು ಮಾತುಕತೆಗೆ ಪ್ರಮುಖ ಅಡ್ಡಿಯಾಗಿದೆ. ಅಮೆರಿಕ, ಇರಾನ್‌ನ ಅಣು ಚಟುವಟಿಕೆಯನ್ನು 20 ವರ್ಷಗಳ ಕಾಲ ಸ್ಥಗಿತಗೊಳಿಸುವಂತೆ ಪ್ರಸ್ತಾಪಿ ಸಿದೆ. ಆದರೆ ಟೆಹ್ರಾನ್ 3ರಿಂದ 5 ವರ್ಷಗಳ ಕಡಿಮೆ ಅವಧಿಯ ವಿರಾಮವನ್ನು ಬಯಸು ತ್ತಿದೆ ಎನ್ನಲಾಗಿದೆ. ಅಮೆರಿಕ, ಹೆಚ್ಚಿನ ಮಟ್ಟದ ಸಮೃದ್ಧ ಯುರೇನಿಯಂ ಅನ್ನು ಇರಾನ್‌ನಿಂದ ಹೊರತೆಗೆದುಕೊಳ್ಳುವಂತೆ ಒತ್ತಾಯಿಸಿದೆ. ಅದೇ ವೇಳೆ, ಇರಾನ್ ಅಂತಾರಾಷ್ಟ್ರೀಯ ನಿರ್ಬಂಧಗಳನ್ನು ತೆಗೆದುಹಾಕುವಂತೆ ಬೇಡಿಕೆ ಇಟ್ಟಿದೆ. ಎರಡು ಇರಾನ್ ಮೂಲಗಳು, ತಮ್ಮ ಯುರೇನಿಯಂ ಸಂಗ್ರಹದ ಕೆಲವು ಭಾಗವನ್ನು ದೇಶದ ಹೊರಗೆ ಕಳುಹಿಸುವ ಬಗ್ಗೆ ಯೋಚಿಸುತ್ತಿರುವುದಾಗಿ ಸೂಚಿಸಿವೆ.

ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ವಿರುದ್ಧ ರಾಹುಲ್ ವಾಗ್ದಾಳಿ

2023ರಲ್ಲೇ ಪಾಸ್ ಆಗಿರುವ ಮೀಸಲಾತಿ ಜಾರಿ ಮಾಡಿ, ಒಪ್ಪುತ್ತೇವೆ: ಸವಾಲು

ಇದು ಮಹಿಳಾ ಸಬಲೀಕರಣ ಮಸೂದೆ ಅಲ್ಲ

ದೆಹಲಿ: ಕೇಂದ್ರ ಸರಕಾರ ಶುಕ್ರವಾರ ಲೋಕಸಭೆಯಲ್ಲಿ ಮಂಡಿಸಿದ್ದ ಮಹಿಳಾ ಮೀಸಲಾತಿ ಮಸೂದೆಗೆ ಸೋಲಾಗಿದೆ. ಇದು ವಿಪಕ್ಷಗಳ ಮಹಿಳಾ ವಿರೋಧಿ ಮನೋಭಾವಕ್ಕೆ ಸಾಕ್ಷಿ ಎಂದು ಅಭಿಯಾನ ನಡೆಸಲು ಬಿಜೆಪಿ ಸಿದ್ಧವಾಗಿದೆ. ಇದಕ್ಕೂ ಮುನ್ನ ಲೋಕಸಭೆಯಲ್ಲಿ ಮಾತನಾಡಿದ ವಿಪಕ್ಷ ನಾಯಕ ರಾಹುಲ್ ಗಾಂಧಿ, ಕೇಂದ್ರ ಸರಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಮೊದಲ ಸತ್ಯವೆಂದರೆ ಇದು ಮಹಿಳಾ ಮೀಸಲಾತಿ ಮಸೂದೆಯಲ್ಲ. ಇದಕ್ಕೂ ಮಹಿಳಾ ಸಬಲೀಕರಣಕ್ಕೂ ಯಾವುದೇ ಸಂಬಂಧವಿಲ್ಲ. ಇದು ಭಾರತದ ಚುನಾವಣಾ ನಕ್ಷೆಯನ್ನು ಬದಲಾಯಿಸುವ ಪ್ರಯತ್ನ ಎಂದು ರಾಹುಲ್ ಗುಡುಗಿದರು. ಸತ್ಯ ಎನ್ನುವುದು ಕತ್ತಲಲ್ಲಿ ಇರುತ್ತದೆ. ಕತ್ತಲಲ್ಲಿ ಹೋಗುವ ಧೈರ್ಯ ತೋರದಿದ್ದರೆ ಸತ್ಯ ಅರ್ಥವಾಗುವುದಿಲ್ಲ. ಸತ್ಯದ ಪರವಾಗಿ ಹೋರಾಟ ಮಾಡಲು ಸಾಧ್ಯವಿಲ್ಲ, ನಾವು ಆ ಕತ್ತಲಲ್ಲಿ ಹೋಗುವ ಧೈರ್ಯ ಮಾಡಬೇಕು, ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು. ಸತ್ಯ ಕೆಲವೊಮ್ಮೆ ನೋವಿನಿಂದ ಕೂಡಿರುತ್ತದೆ ಅದಕ್ಕೆ ಹೆದರಿಕೊಳ್ಳಬಾರದು. ಲೋಕಸಭೆಯಲ್ಲಿ ಮಂಡಿಸುರುವ ಬಿಲ್ ಕೂಡ ಹಾಗೇ. ಇದು ಮಹಿಳೆಯರ ಪರವಾದ ಬಿಲ್ ಅಲ್ಲ. 2023ರಲ್ಲೇ ಮಹಿಳಾ ಮೀಸಲಾತಿ ಬಿಲ್ ಪಾಸಾಗಿದೆ. ನೀವು ಉಳಿದ ಬಿಲ್ ವಾಪಸ್ ಪಡೆದು ಮಹಿಳಾ ಮೀಸಲಾತಿ ಮಸೂದೆಯನ್ನು ಮಾತ್ರವೇ ಮಂಡಿಸಿದರೆ ವಿಪಕ್ಷಗಳಾಗಿ ನಾವು ಒಂದು ಕ್ಷಣವೂ ಯೋಚಿಸದೇ ಬೆಂಬಲ ನೀಡುತ್ತೇವೆ ಎಂದರು.

ಭಾರತದ ನಕ್ಷೆ ಬದಲಿಸಲು ನಾವು ಬಿಡುವುದಿಲ್ಲ. ಒಬಿಸಿ ದಲಿತರ ಹಕ್ಕು ಕಿತ್ತುಕೊಳ್ಳಲು ಬಿಡುವುದಿಲ್ಲ. ಭಾರತೀಯ ಆರ್ಥಿಕತೆಯಲ್ಲಿ ದಲಿತರು, ಒಬಿಸಿ, ಆದಿವಾಸಿಗಳು ಎಲ್ಲಿದ್ದಾರೆ? ಎಂದು ರಾಹುಲ್ ಪ್ರಶ್ನಿಸಿದರು.

ನನಗೂ, ಮೋದಿಗೂ ಹೆಂಡತಿ ಚಿಂತೆ ಇಲ್ಲ: ರಾಹುಲ್ ಹಾಸ್ಯ

ಲೋಕಸಭೆಯಲ್ಲಿ ಮಾತನಾಡುವ ವೇಳೆ ರಾಹುಲ್ ಹಾಸ್ಯ ಮಾಡಿದರು. ನನಗೂ ಮತ್ತು ಪ್ರಧಾನಿ ನರೇಂದ್ರ ಮೋದಿಗೂ ಮನೆಯಲ್ಲಿ ಹೆಂಡತಿ ಚಿಂತೆ ಇಲ್ಲ. ಹಾಗಾಗಿ ಮಹಿಳಾ ಮೀಸಲಾತಿ ಮಸೂದೆ ಬಗ್ಗೆ ನಾವಿಬ್ಬರೂ ನಿರಾತಂಕವಾಗಿ ಮಾತನಾಡಬಹುದು ಎಂದರು. ಅವರ ಮಾತಿನಿಂದ ಸಂಸತ್‌ನಲ್ಲಿ ನಗೆಯಲೆ ಉಂಟಾಯಿತು. ಈ ಸದನದಲ್ಲಿರುವ ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಮಹಿಳೆಯರಿಂದ ಪ್ರಭಾವಿತರಾಗಿದ್ದಾರೆ. ತಾಯಿ, ಸಹೋದರಿ ಅಥವಾ ಹೆಂಡತಿ ಅಂತಹ ಸಂಬಂಧಗಳ ರೂಪದಲ್ಲಿ ಪ್ರಭಾವ ಹೊಂದಿದ್ದಾರೆ. ಆದರೆ ನನಗೆ ಮತ್ತು ಮೋದಿ ಅವರಿಗೆ ಪತ್ನಿ ಸಮಸ್ಯೆ ಇಲ್ಲ. ನಮಗೆ ತಾಯಂದಿರು, ಸೋದರಿಯರು ಇದ್ದಾರೆ ಎಂದು ಹೇಳಿದರು. ಇದು ವಿಪಕ್ಷ ನಾಯಕರನ್ನು ನಗೆಗಡಲಲ್ಲಿ ತೇಲುವಂತೆ ಮಾಡಿತು. ನನಗೆ ಕಳೆದ 20 ವರ್ಷದ ರಾಜಕೀಯ ಜೀವನದಲ್ಲಿ ಮಾಡಲಾಗದ್ದನ್ನು ನನ್ನ ಸಹೋದರಿ 5 ನಿಮಿಷದಲ್ಲಿ ಸಾಧಿಸಿದ್ದನ್ನು ನಾನು ನೋಡಿದೆ. ಪ್ರಿಯಾಂಕಾ ಮಾತನ್ನು ಕೇಳಿ ಅಮಿತ್ ಶಾ ನಕ್ಕಿದ್ದನ್ನು ನೋಡಿದೆ ಎಂದು ಹೇಳಿದರು.

'ಆದರೆ'ಗೆ ಇಲ್ಲಿ ಅವಕಾಶವಿಲ್ಲ: ಅಮಿತ್ ಶಾ

ಶುಕ್ರವಾರ ಮಹಿಳಾ ಮೀಸಲಾತಿ ಮಸೂದೆ ಮತ್ತು ಕ್ಷೇತ್ರ ಪುನರ್ವಿಂಗಡಣೆ ಮಸೂದೆ ಪರವಾಗಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಈ ಮಸೂದೆಗಳನ್ನು ವಿರೋಧಿಸುತ್ತಿರುವ ವಿಪಕ್ಷಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ವಿಂಗಡಣೆ ಕುರಿತು ವಿಪಕ್ಷಗಳು ಅನಗತ್ಯ ಭಯ ಸೃಷ್ಟಿಸುತ್ತಿದ್ದು, ಇದರಿಂದ ಯಾವುದೇ ರಾಜ್ಯದ ಲೋಕಸಭಾ ಸೀಟುಗಳ ಸಂಖ್ಯೆ ಬದಲಾಗದು ಎಂದು ಅಮಿತ್ ಶಾ ಮತ್ತೊಮ್ಮೆ ಸ್ಪಷ್ಟಪಡಿಸಿದರು. ಮಹಿಳಾ ಮೀಸಲಾತಿಗೆ ಯಾರೂ ಆಕ್ಷೇಪ ವ್ಯಕ್ತಪಡಿಸಿಲ್ಲ. ಆದರೆ ನಾವು ಹತ್ತಿರದಿಂದ ನೋಡಿದರೆ, ಇಂಡಿ ಮೈತ್ರಿಕೂಟದ ಎಲ್ಲಾ ಸದಸ್ಯರು 'ಆದರೆ' ಪದಗಳನ್ನು ಬಳಸುವ ಮೂಲಕ ಅದನ್ನು ವಿರೋಧಿಸಿದ್ದಾರೆ. ಮಹಿಳಾ ಸಬಲೀಕರಣ ವಿಚಾರದಲ್ಲಿ ಇದಕ್ಕೆಲ್ಲ ಅವಕಾಶವಿಲ್ಲ ಎಂದು ಅಮಿತ್ ಶಾ ಹೇಳಿದರು. ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ವಿಂಗಡಣೆ ಸಂವಿಧಾನ ತಿದ್ದುಪಡಿ ಮಸೂದೆ ಕುರಿತ ಈ ಮಹತ್ವದ ಚರ್ಚೆಯಲ್ಲಿ, ಸುಮಾರು 133 ಸದಸ್ಯರು ಸದನದಲ್ಲಿ ಮಾತನಾಡಿದ್ದಾರೆ. ಅದರಲ್ಲಿ 56 ಸದಸ್ಯರು ಮಹಿಳೆಯರಾಗಿದ್ದು, ಇದು ಒಂದು ವಿಶಿಷ್ಟ ದಾಖಲೆಯಾಗಿದೆ ಎಂದು ಕೇಂದ್ರ ಗೃಹ ಸಚಿವರು ಹೇಳಿದರು.

ರಾಹುಲ್ ಭಾರತ, ಬ್ರಿಟನ್ ಪೌರತ್ವ ಹೊಂದಿದ್ದಾರೆ: ಅಲಹಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ

ಕರ್ನಾಟಕದ ವಿಘ್ನೇಶ್ ಶಿಶಿರ್ ಅರ್ಜಿಗೆ ಪುರಸ್ಕಾರ | ಆರೋಪ ಸಾಬೀತಾದರೆ ರಾಹುಲ್‌ಗೆ ಸಂಕಷ್ಟ

ರಾಹುಲ್ ದ್ವಿಪೌರತ್ವ ವಿವಾದ ತನಿಖೆಗೆ ಆದೇಶ

ಅಲಹಾಬಾದ್: ದ್ವಿಪೌರತ್ವದ ಆರೋಪದ ಮೇಲೆ ಕಾಂಗ್ರೆಸ್ ನಾಯಕ ಹಾಗೂ ಸಂಸದ ರಾಹುಲ್ ಗಾಂಧಿ ವಿರುದ್ಧ ಪ್ರಕರಣ ದಾಖಲಿಸಲು ಅಲಹಾಬಾದ್ ಹೈಕೋರ್ಟ್ ಆದೇಶ ನೀಡಿದೆ. ರಾಹುಲ್ ಭಾರತ ಮತ್ತು

ಬ್ರಿಟನ್ ಎರಡೂ ದೇಶಗಳ ಪೌರತ್ವ ಹೊಂದಿದ್ದಾರೆ, ಆದರೆ ಈ ವಿಚಾರವನ್ನು ಮುಚ್ಚಿಡಲಾಗಿದೆ ಎಂದು ಕರ್ನಾಟಕದ ಎಸ್.ವಿಘ್ನೇಶ್ ಶಿಶಿರ್ ಸಂಸದ, ಶಾಸಕರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಆ ನ್ಯಾಯಾಲಯ ಇದರ ವಿಚಾರಣೆ ತನ್ನ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ತಿಳಿಸಿತ್ತು. ಆದ್ದರಿಂದ ಅಲಹಾಬಾದ್ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಒಂದು ವೇಳೆ ರಾಹುಲ್ ದ್ವಿಪೌರತ್ವ ಸಾಬೀತಾದರೆ ಅವರು ಭಾರತೀಯ ಪೌರತ್ವ ಕಳೆದುಕೊಳ್ಳುತ್ತಾರೆ. ಅದೇ ವೇಳೆ ಲೋಕಸಭಾ ಸ್ಥಾನವೂ ರದ್ದಾಗುತ್ತದೆ. ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಲೂ ಅವರಿಗೆ ಸಾಧ್ಯವಾಗುವುದಿಲ್ಲ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದ್ವಿಪೌರತ್ವ ಹೊಂದಿದ್ದಾರೆ ಎಂಬ ಆರೋಪಗಳನ್ನು ಪರಿಶೀಲಿಸುವ ಅಗತ್ಯವಿದೆ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ. ಹಾಗೆಯೇ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ವಿರುದ್ಧ ಎಫ್‌ಐಆರ್ ದಾಖಲಿಸಲು ಉತ್ತರಪ್ರದೇಶ ಪೊಲೀಸರಿಗೆ ಕೋರ್ಟ್ ಆದೇಶಿಸಿದೆ.

ಉತ್ತರಪ್ರದೇಶ ಸರಕಾರವು ಈ ಪ್ರಕರಣದ ಬಗ್ಗೆ ಸ್ವತಃ ತನಿಖೆ ನಡೆಸಬೇಕು ಅಥವಾ ಈ ವಿಷಯವನ್ನು ಕೇಂದ್ರೀಯ ಸಂಸ್ಥೆಗೆ ತನಿಖೆಗೆ ವಹಿಸಬೇಕು ಎಂದು ಹೈಕೋರ್ಟ್‌ನ ಲಖನೌ ಪೀಠ ನಿರ್ದೇಶಿಸಿದೆ. ಜನವರಿ 28ರಂದು ಲಖನೌನ ಸಂಸದ ಮತ್ತು ಶಾಸಕರ ವಿಶೇಷ ನ್ಯಾಯಾಲಯವು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಬಿಜೆಪಿ ಕಾರ್ಯಕರ್ತ ಎಸ್.ವಿಘ್ನೇಶ್ ಶಿಶಿರ್ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯನ್ನು ವಿಚಾರಣೆ ನಡೆಸಿದ ವೇಳೆ ರಾಹುಲ್ ಗಾಂಧಿಯ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಕೆಳ ನ್ಯಾಯಾಲಯ ನಿರಾಕರಿಸಿತ್ತು. ಪೌರತ್ವಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಿರ್ಧರಿಸುವ ಅಧಿಕಾರ ತನಗೆ ಇಲ್ಲ ಎಂದಿದ್ದ ವಿಶೇಷ ನ್ಯಾಯಾಲಯವು ಅರ್ಜಿಯನ್ನು ತಿರಸ್ಕರಿಸಿತ್ತು.

ಈ ಬಗ್ಗೆ ವಿಚಾರಣೆ ನಡೆಸಿರುವ ಅಲಹಾಬಾದ್ ಹೈಕೋರ್ಟ್, ಈ ವಿಷಯದಲ್ಲಿ ಸರಿಯಾದ ಪರಿಶೀಲನೆಯ ಅಗತ್ಯವಿದೆ ಎಂದು ಹೇಳಿದೆ. ಕಾನೂನಿನ ಪ್ರಕಾರ ಈ ವಿಷಯವನ್ನು ಪರಿಶೀಲಿಸುವಂತೆ ರಾಜ್ಯದ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಏನಿದು ಪ್ರಕರಣ?

ರಾಹುಲ್ ಗಾಂಧಿ ಬ್ರಿಟಿಷ್ ಪೌರತ್ವ ಹೊಂದಿದ್ದಾರೆಂದು ಆರೋಪಿಸಲಾಗಿದೆ. ಭಾರತೀಯ ಕಾನೂನಿನಡಿಯಲ್ಲಿ ದ್ವಿಪೌರತ್ವಕ್ಕೆ ಅವಕಾಶವಿಲ್ಲ. ಇಂಗ್ಲೆಂಡ್ ಮೂಲದ ಕಂಪನಿಯೊಂದರಲ್ಲಿ ರಾಹುಲ್ ನಿರ್ದೇಶಕರಾಗಿದ್ದಾರೆ. ಈ ಸಂಬಂಧ ಸಲ್ಲಿಸಲ್ಪಟ್ಟಿರುವ ಇಂಗ್ಲೆಂಡ್ ಸರಕಾರದ ದಾಖಲೆಗಳಲ್ಲಿ ರಾಹುಲ್ ಬ್ರಿಟನ್ ಪೌರ ಎಂದು ಹೇಳಲಾಗಿದೆ. ಅವರ ಅಧಿಕೃತ ದಾಖಲಾತಿಗಳಲ್ಲಿ ಲಂಡನ್ ವಿಳಾಸವನ್ನು ಕೂಡ ಪಟ್ಟಿ ಮಾಡಲಾಗಿದೆ. ಪೌರತ್ವ, ಪಾಸ್‌ಪೋರ್ಟ್‌ಗಳು ಮತ್ತು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಕಾನೂನುಗಳು ಸೇರಿದಂತೆ ವಿವಿಧ ಕಾನೂನು ನಿಬಂಧನೆಗಳ ಅಡಿಯಲ್ಲಿ ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸಲು ಮತ್ತು ವಿವರವಾದ ತನಿಖೆಗಾಗಿ ಅರ್ಜಿ ಸಲ್ಲಿಸಲಾಗಿತ್ತು. ಕರ್ನಾಟಕದ ನಿವಾಸಿಯಾಗಿರುವ ಅರ್ಜಿದಾರರು ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್), ಅಧಿಕೃತ ರಹಸ್ಯ ಕಾಯ್ದೆ, ವಿದೇಶೀಯರ ಕಾಯ್ದೆ ಮತ್ತು ಪಾಸ್‌ಪೋರ್ಟ್ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಆರೋಪಗಳನ್ನು ಹೊರಿಸಿ ಎಫ್‌ಐಆರ್ ದಾಖಲಿಸಿ ವಿವರವಾದ ತನಿಖೆ ನಡೆಸುವಂತೆ ಕೋರಿದ್ದಾರೆ.

200 ಕೋಟಿ ರು. ವಂಚನೆ: ಮಾಫಿ ಸಾಕ್ಷಿಯಾಗಲು ಜಾಕೆಲಿನ್ ನಿರ್ಧಾರ

ದೆಹಲಿ: 200 ಕೋಟಿ ರು. ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಸಿಲುಕಿರುವ ಬಾಲಿವುಡ್ ನಟಿ ಜಾಕೆಲಿನ್ ಫರ್ನಾಂಡಿಸ್, ಈಗ ಈ ಪ್ರಕರಣದಲ್ಲಿ ಮಾಫಿ ಸಾಕ್ಷಿ ಆಗಲು ಇಚ್ಛಿಸಿದ್ದಾರೆ.

ದೆಹಲಿ ನ್ಯಾಯಾಲಯದ ಮುಂದೆ ಅವರು ಈ ವಿಷಯ ತಿಳಿಸಿದ್ದಾರೆ. ಇದರಿಂದ ಪ್ರಕರಣದ ಗತಿಯೇ ಬದಲಾಗುವ ಸಾಧ್ಯತೆ ಇದೆ. ಜಾಕೆಲಿನ್ ಅವರ ಮನವಿಯನ್ನು ಆಲಿಸಿದ ನ್ಯಾಯಾಲಯ, ಮೊದಲು ಜಾರಿ ನಿರ್ದೇಶನಾಲಯಕ್ಕೆ (ಇಡಿ) ಈ ಬಗ್ಗೆ ಅಧಿಕೃತವಾಗಿ ವಿನಂತಿ ಸಲ್ಲಿಸುವಂತೆ ಸೂಚಿಸಿದೆ. ಈ ಪ್ರಕರಣದ ಪ್ರಮುಖ ಆರೋಪಿ ಸುಕೇಶ್ ಚಂದ್ರಶೇಖರ್ ಈಗ ಜೈಲಿನಲ್ಲಿದ್ದಾನೆ. ನಿಯಮದ ಪ್ರಕಾರ, ತನಿಖಾ ಸಂಸ್ಥೆಯು ಮೊದಲು ಜಾಕೆಲಿನ್ ಫರ್ನಾಂಡಿಸ್ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಬೇಕು. ನಂತರ ಅವರನ್ನು ಮಾಫಿ ಸಾಕ್ಷಿ ಆಗಿ ಪರಿಗಣಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಿದೆ. ಸುಕೇಶ್ ಚಂದ್ರಶೇಖರ್ ಕಡೆಯಿಂದ ಜಾಕೆಲಿನ್ ಸುಮಾರು 7 ಕೋಟಿ ರುಪಾಯಿ ಮೌಲ್ಯದ ದುಬಾರಿ ಆಭರಣಗಳು, ಬಟ್ಟೆ ಮತ್ತು ವಾಹನಗಳನ್ನು ಉಡುಗೊರೆಯಾಗಿ ಪಡೆದಿದ್ದಾರೆ ಎಂಬ ಆರೋಪ ಇದೆ.

ಟಿಸಿಎಸ್‌ನ ನಾಸಿಕ್ ಘಟಕದಲ್ಲಿ ಮತಾಂತರ ಪ್ರಕರಣ

ಈಗಾಗಲೇ 7 ಆರೋಪಿಗಳ ಬಂಧನ: ಫಡ್ನವೀಸ್

'ಟಿಸಿಎಸ್' ಲವ್ ಜಿಹಾದ್ ಭೇದಿಸುತ್ತೇವೆ: ಮಹಾ ಸಿಎಂ

ಮುಂಬೈ: ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ದೇಶದ ಪ್ರಮುಖ ಟೆಕ್ ಕಂಪನಿ ಟಿಸಿಎಸ್‌ನಲ್ಲಿ ನಡೆದಿದೆ ಎನ್ನಲಾದ ಕಾರ್ಪೊರೇಟ್ ಲವ್ ಜಿಹಾದ್ ಮತ್ತು

ಲೈಂಗಿಕ ಕಿರುಕುಳ ಪ್ರಕರಣವನ್ನು ಪೂರ್ಣವಾಗಿ ತನಿಖೆ ಮಾಡುತ್ತೇವೆ ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಶುಕ್ರವಾರ ಹೇಳಿದ್ದಾರೆ.

ಈ ಸಂಬಂಧ ಶುಕ್ರವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಫಡ್ನವೀಸ್, ಬಹುರಾಷ್ಟ್ರೀಯ ಕಂಪನಿ ಟಿಸಿಎಸ್ ಈ ವಿಷಯವನ್ನು ಗಂಭೀರವಾಗಿ ಗಮನಿಸಿದೆ ಮತ್ತು ಪ್ರಸ್ತುತ ನಡೆಯುತ್ತಿರುವ ತನಿಖೆಗೆ ಸಹಾಯ ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ತಿಳಿಸಿದರು.

ಇದು ಒಂದು ಗುಪ್ತ ಘಟಕದಿಂದ ಹುಟ್ಟಿಕೊಟ್ಟ ಗಂಭೀರ ಸಮಸ್ಯೆಯಾಗಿದೆ. ನಾವು ಆ ಘಟಕವನ್ನೇ ಭೇದಿಸುತ್ತೇವೆ. ನಾವು ಕೇಂದ್ರೀಯ ತನಿಖಾ ಸಂಸ್ಥೆಗಳಿಂದಲೂ ಸಹಾಯ ಪಡೆಯುತ್ತಿದ್ದೇವೆ ಎಂದು ಮಹಾರಾಷ್ಟ್ರ ಸಿಎಂ ಹೇಳಿದ್ದಾರೆ. ಐಟಿ ಸಂಸ್ಥೆ ತೆಗೆದುಕೊಂಡ ಕ್ರಮಗಳನ್ನು ಶ್ಲಾಘಿಸಿದ ಅವರು, ಇದರಲ್ಲಿ ಭಾಗಿಯಾಗಿರುವ ಯಾರನ್ನೂ ರಕ್ಷಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಮಹಾರಾಷ್ಟ್ರದ ಹಿರಿಯ ಪೊಲೀಸ್ ಅಧಿಕಾರಿಯನ್ನು ಉಲ್ಲೇಖಿಸಿ ಮುಂಬೈನಿಂದ ಬಂದ ಹಿಂದಿನ ವರದಿಯ ಪ್ರಕಾರ, ಪ್ರಕರಣದ ತನಿಖೆಯು, ಮಹಿಳಾ ಉದ್ಯೋಗಿಗಳನ್ನು ಗುರಿಯಾಗಿಸಲು ಏಳು ಪುರುಷ ಆರೋಪಿಗಳು ಸಂಘಟಿತ ಗ್ಯಾಂಗ್‌ನಂತೆ ಕಾರ್ಯನಿರ್ವಹಿಸಿದ್ದಾರೆ ಎಂದು ತಿಳಿಸಿದೆ. ಈ ಆರೋಪಗಳಿಗೆ ಸಂಬಂಧಿಸಿದಂತೆ ಪೊಲೀಸರು ಒಂಬತ್ತು ಪ್ರಕರಣಗಳ ನ್ನು ದಾಖಲಿಸಿದ್ದಾರೆ ಎಂದು ವರದಿ ಹೇಳಿದೆ.

ನಾನು ತುಂಬು ಗರ್ಭಿಣಿ, ಜಾಮೀನು ಕೊಡಿ: ಆರೋಪಿ ನಿದಾ ಅರ್ಜಿ

'ಟಿಸಿಎಸ್ ಮತಾಂತರ' ಆರೋಪಿ ನಿದಾ ಖಾನ್ ಜಾಮೀನು ಕೋರಿ ಕೋರ್ಟ್ ಮೊರೆ ಹೋಗಿದ್ದಾಳೆ. ನಾನು ತುಂಬು ಗರ್ಭಿಣಿ.



ನನಗೆ ಜಾಮೀನು ಕೊಡಿ' ಎಂದು ಕೋರ್ಟ್‌ಗೆ ಮನವಿ ಮಾಡಿಕೊಂಡಿದ್ದಾಳೆ. ಐಟಿ ದೈತ್ಯ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್‌ನ ನಾಸಿಕ್ ಘಟಕದಲ್ಲಿ ಬಲವಂತದ ಧಾರ್ಮಿಕ ಮತಾಂತರದ ಆರೋಪ ಹೊತ್ತಿರುವ ನಿದಾ ಖಾನ್ ಈಗ ಮುಂಬೈನಲ್ಲಿದ್ದಾಳೆ. ಪ್ರಸ್ತುತ ಪರಾರಿಯಾಗಿರುವ ಖಾನ್, ನಾಸಿಕ್‌ನ ಸ್ಥಳೀಯ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾಳೆ. ವಿಶೇಷ ತನಿಖಾ ತಂಡ (ಎಸ್‌ಐಟಿ) ಆಕೆಯನ್ನು ಕಸ್ಟಡಿಗೆ ತರಲು ಪ್ರಯತ್ನ ಮುಂದುವರಿಸಿದೆ. 25 ವರ್ಷದ ನಿದಾ ಖಾನ್ 2021 ರಲ್ಲಿ ನಾಸಿಕ್‌ನಲ್ಲಿರುವ ಟಿಸಿಎಸ್‌ನ ಬಿಪಿಒ ಘಟಕಕ್ಕೆ ಸೇರಿದ್ದಳು. ಅಲ್ಲಿ ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಧಾರ್ಮಿಕ ಮತಾಂತರಕ್ಕೆ ಸಂಬಂಧಿಸಿದ ಒಂಬತ್ತು ದೂರುಗಳ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಕಂಪನಿಯ ಆರು ಪುರುಷರು ಮತ್ತು ಓರ್ವ ಎಚ್ ಆರ್ ಮುಖ್ಯಸ್ಥರು ಸೇರಿದಂತೆ 7 ಉದ್ಯೋಗಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಎಂಟು ಮಹಿಳಾ ಉದ್ಯೋಗಿಗಳು ಸಲ್ಲಿಸಿದ ದೂರುಗಳ ತನಿಖೆಗಾಗಿ ಕಳೆದ ವಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಕರಕುಶಲ ವಸ್ತುಗಳ ಪ್ರದರ್ಶನ ಆರಂಭ

ಬೆಂಗಳೂರು: ಭಾರತೀಯ ಸಂಪ್ರದಾಯಿಕ ಮತ್ತು ಆಧುನಿಕ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಚಿತ್ರಕಲಾ ಪರಿಷತ್‌ನಲ್ಲಿ ಶುಕ್ರವಾರದಿಂದ ಆರಂಭವಾಗಿದೆ. ಗ್ರಾಂಡ್ ಫಿಲಾ ಮಾರ್ಕೆಟ್ ಮತ್ತು ಇಂಡಿಯನ್ ಆರ್ಟಿಸನ್ಸ್ ಬಜಾರ್ ಸಹಯೋಗದಲ್ಲಿ ಆಯೋಜಿಸಿರುವ ಈ ವಸ್ತು ಪ್ರದರ್ಶನದಲ್ಲಿ ಒಂದೇ ಸೂರಿನಡಿ ಗೃಹ ಅಲಂಕಾರ ವಸ್ತುಗಳು, ವಿವಿಧ ರಾಜ್ಯಗಳ ಸಾಂಪ್ರದಾಯಿಕ ಶೈಲಿಯ ಉಡುಗೆ-ತೊಡುಗೆಗಳು ದೊರೆಯಲಿವೆ. ಈ ಪ್ರದರ್ಶನಕ್ಕೆ ಖ್ಯಾತ ನಟಿ ಮತ್ತು ರೂಪದರ್ಶಿ ವೈಭವಿ ದ್ವಿವೇದಿ ಚಾಲನೆ ನೀಡಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವೈಭವಿ ದ್ವಿವೇದಿ, ರಾಜ್ಯದಲ್ಲಿ ಹೆಚ್ಚು ಜನಪ್ರಿಯವಾಗಿರುವ ವಸ್ತುಗಳನ್ನು ಖರೀದಿಸಿ ತಮ್ಮ ಮನೆಯನ್ನು ಮತ್ತಷ್ಟು ಅಲಂಕಾರಿಕವಾಗಿಸುವ ಕನಸು ಎಲ್ಲರಲ್ಲೂ ಇರುತ್ತದೆ. ಇದಕ್ಕಾಗಿ ನೀವು ರಾಜ್ಯದ ವಿವಿಧ ಮೂಲಗಳಿಗೆ ಹೋಗುವ ಅವಶ್ಯಕತೆ ಇಲ್ಲ. ಏಕೆಂದರೆ, ಎಲ್ಲವೂ ಇಲ್ಲೇ ಸಿಗಲಿದೆ. ಇದಕ್ಕಾಗಿಯೇ ಬೆಂಗಳೂರು ಉತ್ಸವ ಆಯೋಜಿಸಲಾಗಿದೆ. ಕುಶಲಕರ್ಮಿಗಳಿಂದ ನೇರವಾಗಿ ಗ್ರಾಹಕರನ್ನು ತಲುಪುವುದರಿಂದ ವಸ್ತುಗಳ ಬೆಲೆಯೂ ಕಡಿಮೆ ಇದೆ. ಬಳೆಗಳು, ಫ್ಯಾನ್ಸಿ ಆಭರಣಗಳು, ಪಾದರಕ್ಷೆ, ದಿನ ಬಳಕೆ ವಸ್ತುಗಳು, ಸಿಹಿತಿನಿಸುಗಳು, ಮಕ್ಕಳ ಆಟಿಕೆಗಳು, ಸುಗಂಧ ದ್ರವ್ಯಗಳು ಸೇರಿದಂತೆ ನೂರಾರು ಉತ್ಪನ್ನಗಳು ಈ ಪ್ರದರ್ಶನದಲ್ಲಿ ದೊರೆಯುತ್ತಿವೆ ಎಂದರು.

ಹಂಪಿ ಉದ್ಯಾನವನಕ್ಕೆ ಕೆಂಗಲ್ ನಾಮಕರಣ: ಆಕ್ಷೇಪಣೆಗೆ ಆಹ್ವಾನ

ಬೆಂಗಳೂರು: ಬಿ.ಎಚ್.ಇ.ಎಲ್ ಜಂಕ್ಷನ್ ಪ್ರದೇಶದಲ್ಲಿ ಅಭಿವೃದ್ಧಿಪಡಿಸಿರುವ ಉದ್ಯಾನವನಕ್ಕೆ 'ಶ್ರೀ ಕೆಂಗಲ್ ಹನುಮಂತಯ್ಯ ಸ್ಮೃತಿವನ' ಎಂದು ನಾಮಕರಣ ಮಾಡಲು ಉದ್ದೇಶಿಸಲಾಗಿದೆ. ಈ ನಾಮಕರಣ ಕುರಿತು ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಅಥವಾ ಅಭಿಪ್ರಾಯಗಳು ಇದ್ದಲ್ಲಿ, ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಲಿಖಿತವಾಗಿ ಅಪರ ಆಯುಕ್ತರು (ಕಂದಾಯ), ಬೆಂಗಳೂರು ಪಶ್ಚಿಮ ನಗರ ಪಾಲಿಕೆ, ಮಲ್ಲೇಶ್ವರ, ಐಪಿಪಿ ಕಟ್ಟಡ, ಬೆಂಗಳೂರು ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

ಮಾಜಿ ಸಚಿವ ಸುರೇಶ್ ಕುಮಾರ್ ವಿಷಾದ

ಬೆಂಗಳೂರು: ಎಐ ಫೋಟೊಗೆ ಕಾಮೆಂಟ್ ಮಾಡಿದ್ದಕ್ಕೆ ಮಾಜಿ ಸಚಿವ ಸುರೇಶ್ ಕುಮಾರ್ ವಿಷಾದ ವ್ಯಕ್ತಪಡಿಸಿದ್ದಾರೆ. 'ಎರಡು ದಿನಗಳ ಹಿಂದೆ

ನನ್ನಿಂದ ಒಂದು ಪ್ರಮಾದ ನಡೆಯಿತು. ಒಂದು ರೀತಿಯಿಂದ ಅದು ಎಚ್ಚರ ತಪ್ಪಿ ನಡೆದ ಘಟನೆ. ಅದಕ್ಕಾಗಿ ನನ್ನ ಈ ಪ್ರಾಮಾಣಿಕ ವಿಷಾದ ಎಂದು ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮದೇ ಪುತ್ಥಳಿಗೆ ತಾವೇ ಹಾರ ಹಾಕುವ ಫೋಟೋ ನೋಡಿದೆ. ಆ ಫೋಟೋ ರಾಜ್ಯದ ಒಂದು ಪ್ರಮುಖ ದಿನಪತ್ರಿಕೆಯಲ್ಲಿ ಪ್ರಕಟವಾಗಿತ್ತು. ನಾನು ಆ ಫೋಟೋವನ್ನು ನನ್ನ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು ಟೀಕೆ ಮಾಡಿದ್ದೆ. ಕೆಲವು ಗಂಟೆಗಳ ನಂತರ ಹಿರಿಯ ಪತ್ರಕರ್ತರಾದ ಶ್ರೀ ವಿಶ್ವೇಶ್ವರ ಭಟ್ ಅವರು ನನಗೆ ವಾಟ್ಸಾಪ್ ಮೂಲಕ ಸಂದೇಶ ಕಳಿಸಿ ಈ ಫೋಟೋ AI Generated ಫೋಟೋ ಎಂದು ತಿಳಿಸಿದರು. ತಾವೂ ಸಹ ಉಪಸ್ಥಿತರಿದ್ದ ಆ ಕಾರ್ಯಕ್ರಮದಲ್ಲಿ ಈ ರೀತಿ ನಡೆಯಲಿಲ್ಲ. ಸಿದ್ದರಾಮಯ್ಯನವರು ಆ ಪ್ರತಿಮೆಯಿಂದ ಎರಡು ಹೆಜ್ಜೆ ಹಿಂದೆ ನಿಂತಿದ್ದರೆಂದು ಹಾಗೂ ಸಿದ್ದರಾಮಯ್ಯನವರ ಆ ಪ್ರತಿಮೆಗೆ ಕೆ.ಜೆ. ಜಾರ್ಜ್ ಹಾರ ಹಾಕಿದ್ದು ಎಂದು ತಿಳಿಸಿದರು. ನಾನು ತಕ್ಷಣ ನನ್ನಿಂದ ಆದ ಆ ಲೋಪದಿಂದ ಬೇಸರಗೊಂಡು ನನ್ನ ಸಾಮಾಜಿಕ ಜಾಲತಾಣದಿಂದ ಆ ಪೋಸ್ಟ್ ಅನ್ನು ಡಿಲೀಟ್ ಮಾಡಿ ವಿಶ್ವೇಶ್ವರ ಭಟ್ಟರಿಗೆ ''Feeling sorry for my indiscretion" ಎಂದು ಮಾರುತ್ತರ ಕೊಟ್ಟೆ. ನಂತರ ವಿಶ್ವೇಶ್ವರ ಭಟ್ಟರು ಆ ದಿನಪತ್ರಿಕೆಯಲ್ಲಿ ಈ ಫೋಟೋ ಪ್ರಕಟವಾಗಿರುವ ಕುರಿತು ವಿಷಾದ ವ್ಯಕ್ತಪಡಿಸಿರುವುದನ್ನು ನನಗೆ ಕಳಿಸಿದರು. ಎರಡು ದಿನಗಳಿಂದ ನಾನು ಮಾಡಿದ ಆ ಲೋಪ ಮನಸ್ಸು ಕೊರೆಯುತ್ತಿತ್ತು. ನಾನು ಮಾಡಿದ್ದು ನಿಜಕ್ಕೂ ಸರಿಯಲ್ಲ, ಸ್ವಲ್ಪ ಎಚ್ಚರಿಕೆಯಿಂದ ವರ್ತಿಸಬೇಕಿತ್ತು ಎಂದು ನನಗೆ ಮನಸ್ಸಿಗೆ ತೀವ್ರವಾಗಿ ಕಾಡಿದೆ. ನನ್ನಿಂದ ಈ ರೀತಿ ಆಗಬಾರದಿತ್ತು. ಆದ್ದರಿಂದ ನಾನು ಮಾಡಿದ ಆ ಒಂದು ಲೋಪಕ್ಕೆ ಬೇಷರತ್ ವಿಷಾದ ವ್ಯಕ್ತಪಡಿಸುತ್ತಿದ್ದೇನೆ' ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕರಿಗೆ ಮೋದಿ ಮತ್ತೊಮ್ಮೆ ಪ್ರಧಾನಿಯಾಗುತ್ತಾರೆಂಬ ಭಯ: ಆರ್.ಅಶೋಕ

ಮೊಸರಲ್ಲೂ ಕಲ್ಲು ಹುಡುಕುವ ಕಾಂಗ್ರೆಸ್

ಬೆಂಗಳೂರು: ನಾರಿ ಶಕ್ತಿ ವಂದನಾ ಅಧಿನಿಯಮ ಹಾಗೂ ಕ್ಷೇತ್ರ ಮರುವಿಂಗಡಣೆ ವಿಚಾರದಲ್ಲಿ ಕಾಂಗ್ರೆಸ್ ನಾಯಕರು ಮೊಸರಲ್ಲಿ ಕಲ್ಲು ಹುಡುಕುತ್ತಿದ್ದಾರೆ. ಈ ಹಿಂದೆ ಮಸೂದೆ ಸ್ವಾಗತ ಮಾಡುತ್ತೇವೆಂದು ಹೇಳಿ ಈಗ ಕಿತಾಪತಿ ಮಾಡುತ್ತಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ನಾಯಕರೀಗ ಧರ್ಮಾಧಾರಿತ ಮೀಸಲು ನೀಡಬೇಕೆಂದು ಆಗ್ರಹಿಸುತ್ತಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನದಲ್ಲಿ ಧರ್ಮಾಧಾರಿತ ಮೀಸಲಿಗೆ ಅವಕಾಶವಿಲ್ಲ. ದೇಶದ ಎಲ್ಲ ಮಹಿಳೆಯರು ಈ ಮಸೂದೆಗೆ ಬೆಂಬಲ ನೀಡುತ್ತಿದ್ದಾರೆ ಎಂದರು.

ತಮಿಳುನಾಡು ಸಿಎಂ ಸ್ಟಾಲಿನ್‌ಗೆ ಬುದ್ಧಿ ಕಡಿಮೆ ಇದೆ. ಇದೇ ರೀತಿ ಕಾಂಗ್ರೆಸ್ ನಾಯಕರು ಕೂಡ ಅನ್ಯಾಯ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಹಿಂದೆ ಲೋಕಸಭೆ ಕ್ಷೇತ್ರ ಎಷ್ಟಿರಬೇಕೆಂದು ಕಾಂಗ್ರೆಸ್ ನಾಯಕರೇ ತೀರ್ಮಾನ ಮಾಡಿದ್ದರು. ಜನಸಂಖ್ಯೆ ಆಧಾರಿತವಾಗಿಯೇ ಕ್ಷೇತ್ರ ಮರುವಿಂಗಡಣೆ ಮಾಡಲಾಗುತ್ತಿತ್ತು. ರಾಜ್ಯದಲ್ಲಿ 28 ಲೋಕಸಭೆ ಕ್ಷೇತ್ರಗಳು 42 ಆಗುತ್ತಿವೆ. ಇಲ್ಲಿ ಕ್ಷೇತ್ರಗಳು ಕಡಿಮೆಯಾಗುವುದಿಲ್ಲ. ಕೇರಳದಲ್ಲಿ 20 ಕ್ಷೇತ್ರಗಳಿಂದ 30 ಕ್ಕೆ, ತಮಿಳುನಾಡಿನಲ್ಲಿ 39 ರಿಂದ 59 ಕ್ಕೆ ಏರಿಕೆಯಾಗಲಿದೆ. ಆದರೂ ವಿರೋಧ ಮಾಡುತ್ತಿದ್ದಾರೆ. ಇದನ್ನು ಜಾರಿ ಮಾಡಿದರೆ ಮತ್ತೆ ನರೇಂದ್ರ ಮೋದಿ ಪ್ರಧಾನಿಯಾಗಿ ಎಲ್ಲರೂ ಟೆಂಟ್ ಕಟ್ಟಿಕೊಂಡು ಹೋಗಬೇಕಾಗುತ್ತದೆ ಎಂಬ ಭಯ ವಿರೋಧ ಪಕ್ಷಗಳ ನಾಯಕರಲ್ಲಿದೆ. ದಕ್ಷಿಣ ಭಾರತದ ರಾಜ್ಯಗಳಿಗೆ ಯಾವುದೇ ಅನ್ಯಾಯ ಆಗುತ್ತಿಲ್ಲ. ಯಾವುದೇ ರಾಜ್ಯಗಳಲ್ಲಿ ಸ್ಥಾನಗಳು ಕಡಿಮೆಯಾಗುತ್ತಿಲ್ಲ. ವಿರೋಧ ಪಕ್ಷಗಳ ನಾಯಕರಿಗೆ ಅಭಿವೃದ್ಧಿ ಬೇಕಿಲ್ಲ. ಕಾಂಗ್ರೆಸ್‌ನ ವಂಶಾಡಳಿತಕ್ಕೆ ಪೂರಕವಾಗಿ ಎಲ್ಲರೂ ಮಾತಾಡುತ್ತಿದ್ದಾರೆ ಎಂದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ ಮಹಿಳಾ ಮೀಸಲಾತಿ ತರುವ ಮೂಲಕ ಮಹಿಳಾ ಸಮಾನತೆ ತರುತ್ತಿದೆ. ಕಾಂಗ್ರೆಸ್ ನಾಯಕರು ಈ ಹಿಂದೆ ಇಂತಹ ಪ್ರಯತ್ನ ಮಾಡಿದರೂ ಸಫಲವಾಗಿರಲಿಲ್ಲ. ನಾರಿ ಶಕ್ತಿ ವಂದನಾ ಅಧಿನಿಯಮ ಹೊಸ ಇತಿಹಾಸ ಸೃಷ್ಟಿಸಿದ್ದು, ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಸಿಗಲಿದೆ. ಇದರ ಜತೆಗೆ ಜನಸಂಖ್ಯೆಗೆ ಪೂರಕವಾಗಿ ಕ್ಷೇತ್ರ ಮರು ವಿಂಗಡಣೆ ಆಗಲಿದೆ. ಇದರಿಂದ ಎಲ್ಲರಿಗೂ ಪ್ರಾತಿನಿಧ್ಯ ಸಿಗಲಿದೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರಿಗೆ ಅಭಿನಂದನೆ ತಿಳಿಸುತ್ತೇನೆ ಎಂದರು.

ಸ್ವಾಗತಾರ್ಹ ತೀರ್ಪು

ಮಾಜಿ ಸಚಿವ ವಿನಯ್ ಕುಲಕರ್ಣಿ ಮಾಡಿಸಿದ ಕೊಲೆ ಪ್ರಕರಣದಲ್ಲಿ ಇಬ್ಬರು ಸಾಕ್ಷಿ ಹೇಳಿದ್ದಾರೆ. ರಾಜಕಾರಣಿಗಳ ಮಾತು ಕೇಳಿಕೊಂಡು ಕೊಲೆ ಮಾಡಿದರೆ ಏನಾಗುತ್ತದೆ ಎಂಬುದಕ್ಕೆ ಇದು ಉತ್ತಮ ಉದಾಹರಣೆ. ಸಿಬಿಐ ತನಿಖೆ ನಡೆಯದೇ ಇದ್ದಿದ್ದರೆ ಪೊಲೀಸ್ ಇಲಾಖೆ ಕೇಸನ್ನು ಮುಚ್ಚಿ ಹಾಕುತ್ತಿತ್ತು. ಈಗ ಎಲ್ಲವೂ ಸಾಬೀತಾಗಿದ್ದು, ತಪ್ಪಿತಸ್ಥರು ಯಾರೆಂದು ಗೊತ್ತಾಗಿದೆ. ವಿನಯ್ ಕುಲಕರ್ಣಿಯೇ ಕೊಲೆ ಮಾಡಿಸಿದ್ದು ಎಂದು ಕೋರ್ಟ್ ತೀರ್ಪು ನೀಡಿದೆ. ರಾಜಕೀಯ ಕ್ಷೇತ್ರದಲ್ಲಾಗುವ ಕೊಲೆಗಳಿಗೆ ಇದು ತಿಲಾಂಜಲಿ ನೀಡಲಿದೆ. ಇದು ಸ್ವಾಗತಾರ್ಹ ತೀರ್ಪು ಎಂದರು.

ಸಿಎಂ ಸ್ಥಾನ ಕುರಿತು ಇನ್ನೂ ಸಮಸ್ಯೆ ಬಗೆಹರಿದಿಲ್ಲ. ಎಲ್ಲರೂ ದೆಹಲಿಗೆ ಹೋಗುತ್ತಿರುವುದರಿಂದ ಸರಕಾರ ಸತ್ತುಹೋಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮಗ ಹಾಗೂ ಎಲ್ಲ ಸಚಿವರ ಮಕ್ಕಳು ನಮ್ಮಪ್ಪನೇ ಸಿಎಂ ಎಂದು ಹೇಳಿಕೆ ನೀಡುತ್ತಿದ್ದಾರೆ. ಪ್ರತಿ ಮನೆಯಲ್ಲೂ ಇಂದು ಕ್ಯಾಬಿನೆಟ್ ರಚನೆಯಾಗಿದೆ. ಕಾಂಗ್ರೆಸ್ ಈಗ ಒಡೆದ ಮನೆಯಾಗಿ ಜನರ ಪಾಲಿಗೆ ಸತ್ತಿದೆ.

- ಆರ್.ಅಶೋಕ, ಪ್ರತಿಪಕ್ಷ ನಾಯಕ

ಅನಧಿಕೃತ ಫ್ಲೆಕ್ಸ್, ಬ್ಯಾನರ್ ಸಾರ್ವಜನಿಕರ ಆಕ್ರೋಶ

ಬೆಂಗಳೂರು: ನಗರದಲ್ಲಿ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳು ರಾರಾಜಿಸುತ್ತಿದ್ದು, ಹೈಕೋರ್ಟ್‌ನ ಸೂಚನೆ ಹಾಗೂ ಜಿಬಿಎಯ ಆದೇಶವಿದ್ದರೂ ಕಡಿಮೆಯಾಗದ ಜಾಹೀರಾತುಗಳ ಹಾವಳಿಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಿಬಿಎ ವ್ಯಾಪ್ತಿಯಲ್ಲಿ ಇತ್ತೀಚೆಗೆ ಕಾಯಿದೆ ತಿದ್ದುಪಡಿ ಮಾಡಿ ಫ್ಲೆಕ್ಸ್ ಮತ್ತು ಬ್ಯಾನರ್ ಅಳವಡಿಕೆಗೆ ನಿಯಮಾವಳಿಯನ್ನು ಜಾರಿಗೆ ತರಲಾಗಿದ್ದು, ಡಿಸಿಎಂ ಡಿ.ಕೆ.ಶಿವಕುಮಾರ್ ಅನಧಿಕೃತವಾಗಿ ಬ್ಯಾನರ್ ಅಳವಡಿಸಿದರೆ 50,000 ರು. ದಂಡ, ಎಫ್‌ಐಆರ್ ದಾಖಲಿಸುವಂತೆ ನಗರ ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಆದರೂ ನಗರದಲ್ಲಿ ಸಾವಿರಾರು ಅನಧಿಕೃತ ಬ್ಯಾನರ್‌ಗಳು ಕಂಡು ಬರುತ್ತಿದ್ದು, ನಿಯಮಾನುಸಾರ 50,000 ದಂಡ ವಿಧಿಸುವ ಬದಲು ಕೇವಲ 500 ರಿಂದ 1,000 ದಂಡ ವಿಧಿಸಿ ಪ್ರಕರಣಗಳನ್ನು ಮುಚ್ಚಿ ಹಾಕುತ್ತಿರುವ ಆರೋಪಗಳಿವೆ.

ವಿಶೇಷವಾಗಿ ಪಶ್ಚಿಮ ನಗರಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಫ್ಲೆಕ್ಸ್‌ಗಳ ಪ್ರಮಾಣ ಹೆಚ್ಚಾಗಿದ್ದು, ಅಧಿಕಾರಿಗಳು ಕಂಡು ಕಾಣದಂತೆ ವರ್ತಿಸುತ್ತಿದ್ದಾರೆ ಎಂಬ ಟೀಕೆ ಕೇಳಿಬರುತ್ತಿದೆ. ಪಶ್ಚಿಮ ನಗರಪಾಲಿಕೆ ಆಯುಕ್ತರ ಗಮನಕ್ಕೆ ಬಂದರೂ ಬ್ಯಾನರ್ ತೆರವಿನ ಬಗ್ಗೆ ಚಕಾರ ಎತ್ತುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದೆ.

ಇದನ್ನು ಗಮನಿಸಿದರೆ ಅಧಿಕಾರಿಗಳಿಗೆ ರಾಜಕೀಯ ಒತ್ತಡ ಇರಬಹುದು ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಿದ್ದು, ಅನಧಿಕೃತ ಬ್ಯಾನರ್ ಅಳವಡಿಕೆ ಹಿಂದೆ ಸಂಘಟಿತ ಮಾಫಿಯಾ ಕೈವಾಡವಿರುವ ಶಂಕೆ ವ್ಯಕ್ತವಾಗುತ್ತಿದೆ. ರಾಜಕೀಯ ಕಾರ್ಯಕ್ರಮಗಳು, ಜನ್ಮದಿನಗಳು, ಸಂಘಟನೆಗಳ ಕಾರ್ಯಕ್ರಮಗಳ ಹೆಸರಿನಲ್ಲಿ ರಾತ್ರಿ ಹೊತ್ತಿನಲ್ಲಿ ಬ್ಯಾನರ್‌ಗಳನ್ನು ಅಳವಡಿಸಲಾಗುತ್ತಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

ಸಿದ್ದರಾಮಯ್ಯ ಗಟ್ಟಿಯಾಗಿ ನಿಲ್ಲಬೇಕು: ಕೆ.ಎನ್.ರಾಜಣ್ಣ

ಬೆಂಗಳೂರು: ಉಪಸಮರದ ಬಳಿಕ ರಾಜ್ಯ ಕಾಂಗ್ರೆಸ್ ಮುಸ್ಲಿಂ ನಾಯಕರಲ್ಲಿ ಉದ್ಭವಿಸಿರುವ ವಿವಾದ ಮುಗಿಯುವ ಮೊದಲೇ ಕಾಂಗ್ರೆಸ್‌ನಲ್ಲಿ ಭಿನ್ನ ಹೇಳಿಕೆಗಳು ಶುರುವಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಚಿವ ಕೆ.ಎನ್. ರಾಜಣ್ಣ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೆ. ಅವರು ಗಟ್ಟಿಯಾಗಿ ನಿಲ್ಲಬೇಕಿತ್ತು, ನಿಲುತ್ತಿಲ್ಲ. ಸಿಎಂರಿಂದ ಇಂಥ ಅಸಹಾಯಕತೆ ನಿರೀಕ್ಷಿಸಿರಲಿಲ್ಲ. ಸಿಎಂಗೆ ಏನು ಅಡೆತಡೆ ಇದೆಯೋ ಗೊತ್ತಿಲ್ಲ. ಯಾಕೆ ತಟಸ್ಥ ಧೋರಣೆ ತಾಳುತ್ತಿದ್ದಾರೋ ಗೊತ್ತಿಲ್ಲ. ಅವರು ನಮಗೆ ಹೇಳಲ್ಲ. ಸಿಎಂ ಪರ ಇರುವವರನ್ನು ಟಾರ್ಗೆಟ್ ಮಾಡುತ್ತಿದ್ದಾರೆ. ಇದನ್ನು ಜನರೇ ಹೇಳುತ್ತಿದ್ದಾರಲ್ಲ ಎಂದು ಅಸಮಾಧಾನ ಹೊರಹಾಕಿದರು.

ಪಕ್ಷಕ್ಕೆ ನಿಷ್ಠೆಯಿಂದ ಇರುವವರ ಮೇಲೆ ಮತ್ತು ಪಕ್ಷಕ್ಕಾಗಿ ಕೆಲಸ ಮಾಡುವವರ ಮೇಲೆ ಪಟ್ಟಭದ್ರ ಹಿತಾಸಕ್ತಿಗಳು ಹುನ್ನಾರ ಮಾಡಿದ್ದರಿಂದ ಈ ರೀತಿ ಆಗುತ್ತದೆ. ಆದರೆ ಸಿಎಂ ಇಂತಹ ಸಂಗತಿಗಳು ಬಂದಾಗ ಗಟ್ಟಿಯಾಗಿ ನಿಲ್ಲಬೇಕಿತ್ತು. 'ರಾಹುಲ್ ಗಾಂಧಿ ಯಾರು' ಅಂದಿದ್ದವರ ಜತೆ ವೇದಿಕೆ ಹಂಚಿಕೊಂಡರು. ಅಧ್ಯಕ್ಷರು ಪ್ರಯಾಗ್ ರಾಜ್‌ಗೆ ಹೋಗಲ್ಲ ಅಂದ್ರು, ಅಂತಹ ಜಾಗಕ್ಕೆ ಹೋದವರು ಯಾರು?. ಅವರ ಮೇಲೆ ಯಾವ ಕ್ರಮವೂ ಇಲ್ಲ. ಇಲ್ಲಿ ಮಾತ್ರ ಕ್ರಮ ಅಂದ್ರೆ ಹೇಗೆ? ಎಂದು ಡಿಕೆಶಿ ಹೆಸರು ಹೇಳದೆ ಪರೋಕ್ಷವಾಗಿ ಟೀಕಿಸಿದರು. ಶಿವಮೊಗ್ಗದಲ್ಲಿ ಶಾಮನೂರು ಏನು ಹೇಳಿದ್ದರು? ಬಿ.ವೈ.ರಾಘವೇಂದ್ರನನ್ನು ಗೆಲ್ಲಿಸಿ ಅಂದಿದ್ದರು. ಇದು ಪಕ್ಷವಿರೋಧಿ ಧೋರಣೆ ತಾನೇ?. ಯಾಕೆ ಅವರ ಮೇಲೆ ಆಗ ಕ್ರಮ ಆಗಲಿಲ್ಲ?. ಇಲ್ಯಾಕೆ ಕ್ರಮ ಹೇಳಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಪುಟ ಪುನಾರಚನೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಸಂಪುಟ ಪುನಾರಚನೆ ಮಾಡಲಿ. ದೆಹಲಿಗೆ ಹೋದವರಿಗೆ ಅವಕಾಶ ಕೊಡಲಿ. ನಾನು ಸಚಿವ ಸ್ಥಾನ ಕೇಳೋನೂ ಅಲ್ಲ. ಅದು ನನಗೆ ಬೇಡವೇ ಬೇಡ ಎಂದು ಸ್ಪಷ್ಟಪಡಿಸಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದ ಗೊಂದಲ ವಿಚಾರಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟದಲ್ಲಿ ಚರ್ಚೆ ಏನಾಗಿದೆ ಗೊತ್ತಿಲ್ಲ. ಸಂಪುಟ ಸಭೆಯಿಂದ ಬೇಗ ಹೋದ ಕಾರಣ ಗೊತ್ತಾಗಿಲ್ಲ. ಪಕ್ಷದ ಆಂತರಿಕ ವಿಚಾರ ಇದು, ಪಕ್ಷ ಕ್ರಮ ತಗೆದುಕೊಂಡಿದೆ. ಏನೇ ಇದ್ದರೂ ನಮ್ಮ ವರಿಷ್ಠರು ತೀರ್ಮಾನ ತೆಗೆದು ಕೊಳ್ತಾರೆ. ನಮ್ಮ ವರಿಷ್ಠರು ಎಲ್ಲವನ್ನೂ ಸರಿಪಡಿಸುತ್ತಾರೆ. ಯಾವ ಸಚಿವರು ಏನು ಅಭಿಪ್ರಾಯ ತಿಳಿಸಿದ್ದಾರೆ ಅಂತ ನನಗೆ ಮಾಹಿತಿ ಇಲ್ಲ.

- ಈಶ್ವರ್ ಖಂಡ್ರೆ, ಸಚಿವ

ಓವರ್ ಲೋಡ್ ತಡೆಗಾಗಿ ವೆಯ್ ಇನ್ ಮೋಶನ್ ತಂತ್ರಜ್ಞಾನ ಅಳವಡಿಕೆ

ಟ್ರಕ್, ಲಾರಿ, ಬಸ್, ಟೆಂಪೊ ಸೇರಿದಂತೆ ವಾಣಿಜ್ಯ ವಾಹನಗಳಿಗೆ ಅನ್ವಯ

ಹೆದ್ದಾರಿ ಟೋಲ್‌ಗಳಲ್ಲಿ ಇನ್ನು ತೂಕಕ್ಕೂ ಶುಲ್ಕ

ದೆಹಲಿ: ನಿಗದಿತ ತೂಕಕ್ಕಿಂತ ಜಾಸ್ತಿ ಲೋಡ್ ಹೇರಿಕೊಂಡು ಹೋಗುವ ಲಾರಿಗಳು, ಟ್ರಕ್‌ಗಳು ಇತ್ಯಾದಿ ವಾಹನಗಳಿಗೆ ಇನ್ನು ನಿಗದಿತ ಶುಲ್ಕಕ್ಕಿಂತ ನಾಲ್ಕು ಪಟ್ಟು ದಂಡ ವಿಧಿಸುವುದಾಗಿ ಕೇಂದ್ರ ಸರ್ಕಾರ ಹೇಳಿದ್ದು, ವಾಹನಗಳ ಹೆಚ್ಚುವರಿ ಲೋಡ್ ಪತ್ತೆ ಹಚ್ಚಲು ಟೋಲ್ ಪ್ಲಾಜಾಗಳಲ್ಲಿ 'ವೇಯ್-ಇನ್-ಮೋಶನ್' ಎಂಬ ತಂತ್ರಜ್ಞಾನವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ವತಿಯಿಂದ ಅಳವಡಿಸಲಾಗುತ್ತದೆ ಎಂದು ತಿಳಿಸಿದೆ.

ತಂತ್ರಜ್ಞಾನದ ವಿಶೇಷ?: ಟೋಲ್‌ಗಳಲ್ಲಿ ಅಳವಡಿಸಲಾಗುವ 'ವೇಯ್-ಇನ್-ಮೋಷನ್' ತಂತ್ರಜ್ಞಾನದಿಂದಾಗಿ ಓವರ್ ಲೋಡ್ ಅನ್ನು ನಿಖರವಾಗಿ ಅಳೆಯಲು ಸಾಧ್ಯವಿದೆ. ಇದಕ್ಕಾಗಿ ಟ್ರಕ್‌ಗಳು ಟೋಲ್‌ಗಳಲ್ಲಿ ನಿಲ್ಲಬೇಕಿಲ್ಲ. ಅವು ಸಾಗುತ್ತಿರುವಾಗಲೇ ಆ ಟ್ರಕ್, ಲಾರಿ, ಬಸ್ಸು ಇತ್ಯಾದಿ ವಾಣಿಜ್ಯ ವಾಹನಗಳ ನಿಗದಿತ ಮಿತಿ ಹಾಗೂ ಅದಕ್ಕಿಂತ ಹೆಚ್ಚಾಗಿರುವ ಭಾರ ಎಷ್ಟು ಎಂಬುದನ್ನು ವೇಯ್-ಇನ್-ತಂತ್ರಜ್ಞಾನ ಪತ್ತೆ ಹಚ್ಚುತ್ತದೆ.

ರಾಷ್ಟ್ರೀಯ ಹೆದ್ದಾರಿಗಳ ಸಂರಕ್ಷಣೆ, ಮೂಲ ಸೌಕರ್ಯಗಳ ಗುಣಮಟ್ಟ ಹೆಚ್ಚಿಸುವುದು ಮತ್ತು ರಸ್ತೆ ಸುರಕ್ಷತೆಯನ್ನು ಬಲಪಡಿಸುವ ಉದ್ದೇಶದಿಂದ ಓವರ್ ಲೋಡ್ ಟ್ರಕ್, ಲಾರಿಗಳಿಗೆ ಲಗಾಮು ಹಾಕಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ರಾಷ್ಟ್ರೀಯ ಹೆದ್ದಾರಿಗಳ ಶುಲ್ಕ (ನಾಲ್ಕನೇ ತಿದ್ದುಪಡಿ) ನಿಯಮಗಳು (2026) ಎಂಬ ನಿಯಮಾವಳಿಗಳನ್ನು ಜಾರಿಗೆ ತಂದಿದ್ದು, ಅದರಡಿಯಲ್ಲೇ 'ವೇಯ್-ಇನ್-ತಂತ್ರಜ್ಞಾನ' ಹಾಗೂ ಓವರ್‌ಲೋಡ್ ತಂಡ ನಿಯಮ ಜಾರಿಯಾಗಲಿವೆ.

ಓವರ್ ಲೋಡ್ ಎಷ್ಟಿದ್ದರೆ ಎಷ್ಟು ದಂಡ?

ಮಿತಿಗಿಂತ ಶೇ.10ರವರೆಗೆ ಹೆಚ್ಚುವರಿ ಭಾರ ಇದ್ದರೆ ಯಾವುದೇ ದಂಡ ಇರುವುದಿಲ್ಲ. ಇಂಥ ಸಣ್ಣಪುಟ್ಟ ತಪ್ಪುಗಳಿಗೆ ಕ್ಷಮೆ ಇರುತ್ತದೆ. ಆದರೆ, ಒಟ್ಟಾರೆ ಲೋಡ್ ಮೇಲೆ ಆ ಲಾರಿಯ ನಿಗದಿತ ಲೋಡ್ ಕೆಪಾಸಿಟಿಯ ಶೇ.10ಕ್ಕೂ ಮೇಲ್ಪಟ್ಟು ಹಾಗೂ ಶೇ.40ರೊಳಗಿನ ಓವರ್ ಲೋಡ್ ಇದ್ದರೆ ಸಾಮಾನ್ಯ ಟೋಲ್ ಶುಲ್ಕದ ಎರಡು ಪಟ್ಟು ದಂಡ ವಿಧಿಸಲಾಗುತ್ತದೆ. ಶೇ.40ಕ್ಕಿಂತ ಹೆಚ್ಚು ಓವರ್‌ಲೋಡ್ ಇದ್ದರೆ ಆಗ ನಾಲ್ಕು ಪಟ್ಟು ಹೆಚ್ಚುವರಿ ದಂಡ ಕಟ್ಟಬೇಕಾಗುತ್ತದೆ.

- ನಿಗದಿತ ಲೋಡ್‌ಗಿಂತ ಶೇ. 10ರಷ್ಟು ಹೆಚ್ಚಿದ್ದರೆ ಶೂನ್ಯ ದಂಡ.
- ಶೇ. 10-40ರೊಳಗಿದ್ದರೆ ದುಪ್ಪಟ್ಟು, ಶೇ. 40ರ ಮೇಲಿದ್ದರೆ ನಾಲ್ಕು ಪಟ್ಟು ದಂಡ.
- ಟೋಲ್ ಪ್ಲಾಜಾಗಳಲ್ಲಿಯೇ ದಂಡ ವಸೂಲಿಗೆ ಕೇಂದ್ರದ ಸಿದ್ಧತೆ



ಕೆಎಲ್‌ಇ ಕಾನೂನು ಕಾಲೇಜು ವತಿಯಿಂದ ಆಯೋಜಿಸಲಾಗಿದ್ದ ಎರಡು ದಿನಗಳ ಅಂತಾರಾಷ್ಟ್ರೀಯ ಸಾಂವಿಧಾನಿಕ ಕಾನೂನು ಸಮ್ಮೇಳನವನ್ನು ಶ್ರೀಲಂಕಾದ ಮಾಜಿ ಮುಖ್ಯ ನ್ಯಾಯಮೂರ್ತಿ ಜಸ್ಟಿಸ್ ಎಸ್.ತುರೈರಾಜ ಉದ್ಘಾಟಿಸಿದರು. ಎಂ.ಎಸ್.ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್ ವಿಭಾಗದ ಸಲಹೆಗಾರ ಡಾ.ವಿ.ವಿಜಯ ಕುಮಾರ್ ಇದ್ದರು.

ಕಸ್ತೂರಿ ಬಡಾವಣೆ ಪೈಪ್‌ಲೈನ್ ರಸ್ತೆಯಲ್ಲಿ ಪಾಲಿಕೆ ಕಸ ಸಂಗ್ರಹ ಆಟೋ ಬೆಂಕಿಬಿದ್ದು ಸುಟ್ಟುಹೋಗಿದ್ದು, ಕಾಂಗ್ರೆಸ್ ಮುಖಂಡ ಎಂ.ಶಿವರಾಜ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬೆಂಗಳೂರು ವಿವಿಯಲ್ಲಿ ರಾಷ್ಟ್ರೀಯ ಕಾರ್ಯಾಗಾರ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗವು ನೀತಿ ಆಯೋಗದ ಸಹಯೋಗದಲ್ಲಿ 'ಸಾಮಾಜಿಕ ವಿಜ್ಞಾನ ಮೌಲ್ಯಮಾಪನದಲ್ಲಿ ಕ್ಷೇತ್ರಾಧಾರಿತ ಸಂಶೋಧನಾ ವಿಧಾನಗಳು' ಎಂಬ ವಿಷಯದ ಕುರಿತು ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಿತ್ತು. ಅರ್ಥಶಾಸ್ತ್ರ, ವಿದ್ಯುನ್ಮಾನ ಮಾಧ್ಯಮ, ಸಂಖ್ಯಾಶಾಸ್ತ್ರ ಮತ್ತು ಸಮಾಜ ಕಾರ್ಯ ವಿಭಾಗಗಳ ಸಹಭಾಗಿತ್ವದಲ್ಲಿ ಈ ಕಾರ್ಯಾಗಾರ ನಡೆಯಿತು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಲಾ ವಿಭಾಗದ ಡೀನ್ ಪ್ರೊ.ಸೋಮಶೇಖರ್ ಮಾತನಾಡಿ, ಈ ಕಾರ್ಯಾಗಾರವು ಅಂತರ್ ವಿಭಾಗೀಯ ಅಧ್ಯಯನಗಳಿಗೆ ಮಹತ್ವದ ದಿಕ್ಕು ತೋರಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಐಸೆಕ್ ಕಾರ್ಯನಿರ್ವಾಹಕ ನಿರ್ದೇಶಕ ಪ್ರೊ. ಪ್ರಮೋದ್ ಕುಮಾರ್ ಮಾತನಾಡಿ, ಸಾಮಾಜಿಕ ವಿಜ್ಞಾನಗಳಲ್ಲಿ ನಿಖರವಾದ ದತ್ತಾಂಶ ಸಂಗ್ರಹ ಮತ್ತು ವಿಶ್ಲೇಷಣೆಯ ಅಗತ್ಯತೆಯನ್ನು ವಿವರಿಸಿದರು. ನೀತಿ ಆಯೋಗದ ಮಾನಿಟರಿಂಗ್ ಮತ್ತು ಮೌಲ್ಯಮಾಪನ ತಜ್ಞೆ ಇಶಿಕಾ ಕುಮಾರ್ ಅವರು ವರ್ಚುವಲ್ ಮೂಲಕ ರಾಷ್ಟ್ರೀಯ ಮೌಲ್ಯಮಾಪನ ಮಾನದಂಡಗಳು ಹಾಗೂ ಯೋಜನಾ ರೂಪುರೇಷೆಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಾಗಾರದಲ್ಲಿ ಪಿ.ಎಂ. ಪ್ರೊಫೆಸರ್ ಪ್ರೊ.ಮೇವಾ ಸಿಂಗ್, ಪ್ರೊ.ವಿ.ಸುಧೇಶ್, ಪ್ರೊ.ರಾಜೇಶ್ ಆರ್, ಪ್ರೊ.ಬಸವರಾಜ್ ಬೆನ್ನಿ, ಪ್ರೊ.ವಾಹಿನಿ, ಪ್ರೊ.ಪುಟ್ಟಸ್ವಾಮಯ್ಯ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ತಾಂತ್ರಿಕ ಅಧಿವೇಶನಗಳಲ್ಲಿ KoBo Toolbox ಬಳಸಿ ಡಿಜಿಟಲ್ ಕ್ಷೇತ್ರ ಸಂಶೋಧನೆ ಹಾಗೂ ಖಕಖಖ ಉಪಯೋಗಿಸಿ ಡೇಟಾ ವಿಶ್ಲೇಷಣೆ ಕುರಿತು ತರಬೇತಿ ನೀಡಲಾಯಿತು.

ಬೆಂಗಳೂರು ವಿಶ್ವ ವಿದ್ಯಾಲಯದ ಸಮಾಜಶಾಸ್ತ್ರ ವಿಭಾಗವು ನೀತಿ ಆಯೋಗದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ಉದ್ಘಾಟಿಸಲಾಯಿತು.

ಜಿಬಿಎ ಚುನಾವಣೆ ಅನಿಶ್ಚಿತತೆಯಲ್ಲಿ?

ಬೆಂಗಳೂರು: ಗ್ರೇಟರ್ ಬೆಂಗಳೂರು ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಸದ್ಯಕ್ಕೆ ನಡೆಯುವ ಸಾಧ್ಯತೆಗಳು ಕ್ಷೀಣಿಸಿದ್ದು, ರಾಜ್ಯ ಸರಕಾರ ಈ ಸಂಬಂಧ ಚುನಾವಣಾ ಆಯೋಗಕ್ಕೆ ತಿಳಿಸಿದೆ.

ಗ್ರೇಟರ್ ಬೆಂಗಳೂರು ಪ್ರದೇಶದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಕಾಲಾವಧಿಯನ್ನು ಸೆ.30 ರವರೆಗೆ ವಿಸ್ತರಿಸಬೇಕೆಂದು ಕೋರಿ ಸಿಬ್ಬಂದಿ ಮತ್ತಿ ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಅವರು, ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಜನಗಣತಿ ಕಾಯಿದೆಯಡಿ ನಡೆಯುತ್ತಿರುವ ಜನಗಣತಿ ಕಾರ್ಯಾಚರಣೆಯಲ್ಲಿ ಇಡೀ ಆಡಳಿತ ಮತ್ತು ಕ್ಷೇತ್ರ ಮಟ್ಟದ ಯಂತ್ರವು ಪ್ರಸ್ತುತ ತೊಡಗಿಕೊಂಡಿದೆ. ಈ ಚಟುವಟಿಕೆಗಳು ಶಾಸನಬದ್ಧ ಮತ್ತು ಸಮಯಕ್ಕೆ ಸೀಮಿತವಾಗಿರುವುದರಿಂದ ಎಣಿಕೆ, ಮೇಲ್ವಿಚಾರಣೆ, ತರಬೇತಿ ಮತ್ತು ಲಾಜಿಸ್ಟಿಕ್‌ಗಾಗಿ ವ್ಯಾಪಕ ಸಿಬ್ಬಂದಿಯನ್ನು ನಿಯೋಜಿಸುವ ಅಗತ್ಯವಿರುತ್ತದೆ. ಇದರಿಂದಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದ ಪೂರ್ವಸಿದ್ಧತಾ ಕಾರ್ಯಗಳಿಗೆ ಸೀಮಿತ ಅವಕಾಶವಿದ್ದು, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಅನ್ನು ಕೂಡ ಏಕಕಾಲದಲ್ಲಿ ಕೈಗೊಳ್ಳುವ ನಿರೀಕ್ಷೆ ಇದೆ. ಇದು ಅದೇ ಕ್ಷೇತ್ರ ಮಟ್ಟದ ಕಾರ್ಯನಿರ್ವಾಹಕರನ್ನು ಒಳಗೊಂಡಿರುತ್ತದೆ. ಇದರ ಜೊತೆಗೆ ಮೇ ಮತ್ತು ಜೂನ್ ತಿಂಗಳಲ್ಲಿ ಶೈಕ್ಷಣಿಕ ಪರೀಕ್ಷಾ ಕರ್ತವ್ಯಗಳಿಗೆ ಸಿಬ್ಬಂದಿಯನ್ನು ನಿಯೋಜಿಸುವುದರಿಂದ ಲಭ್ಯವಿರುವ ಮಾನವಶಕ್ತಿ ಮತ್ತಷ್ಟು ಕಡಿಮೆ ಮಾಡುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಇಡೀ ಆಡಳಿತ ಮತ್ತು ಕ್ಷೇತ್ರ ಮಟ್ಟದ ಯಂತ್ರವು ನಿಗದಿತ ಕೆಲಸದಲ್ಲಿ ನಿರತರಾಗುವುದರಿಂದ ಚುನಾವಣಾ ಸಿದ್ದತೆಯನ್ನು ಸಮರ್ಪಕವಾಗಿ ನಿರ್ವಹಿಸಲು ಚುನಾವಣಾ ಕಾಲಮಿತಿಯನ್ನು ಸೆ.30ರವರೆಗೆ ವಿಸ್ತರಿಸಲುವಂತೆ ಕೋರಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಿಗದಿತ ಸಮಯದಲ್ಲಿ ನಡೆಸುವಂತೆ ಸುಪ್ರೀಂಕೋರ್ಟ್ ಈಗಾಗಲೇ ಆದೇಶಿಸಿದ್ದರೂ, ಈ ರೀತಿಯ ಬೆಳವಣಿಗೆಯಿಂದಾಗಿ ಇಡೀ ಪ್ರಕ್ರಿಯೆಯೇ ಅನಿಶ್ಚಿತತೆಯಲ್ಲಿದೆ.

ಆರೋಗ್ಯ ಇಲಾಖೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ: ದಿನೇಶ್ ಗುಂಡೂರಾವ್

ಹಕ್ಕಿ ಜ್ವರ: ಆತಂಕಪಡುವ ಅಗತ್ಯವಿಲ್ಲ

ಬೆಂಗಳೂರು: ನಗರದ ಹೆಸರಘಟ್ಟದ ಮತ್ತೂರು ಗ್ರಾಮದಲ್ಲಿ ಕೋಳಿಗಳಲ್ಲಿ ಹಕ್ಕಿಜ್ವರ (ಎಚ್5ಎನ್1) ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ, ಸಾರ್ವ ಜನಿಕರ ಸುರಕ್ಷತೆಗಾಗಿ ನಮ್ಮ ಸರಕಾರವು ಸಮ ರೋಪಾದಿಯಲ್ಲಿ ಮುನ್ನೆಚ್ಚರಿಕೆ ಕ್ರಮ ಗಳನ್ನು ಕೈಗೊಂಡಿದೆ. ಜನರು ಆತಂಕಪಡುವ ಅಗತ್ಯವಿಲ್ಲ. ಪರಿಸ್ಥಿತಿ ಸಂಪೂರ್ಣ ನಿಯಂತ್ರಣ ದಲ್ಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿರುವ ಅವರು, ಭೋಪಾಲ್ ಎನ್‌ಐಎಚ್‌ಎಸ್‌ಎಡಿ ಪ್ರಯೋಗಾಲಯದ ವರದಿಯ ಪ್ರಕಾರ, ಕಳೆದ ಏ.14ರಂದು ಮತ್ತೂರಿನ ಕೇಂದ್ರದಲ್ಲಿ ಹಕ್ಕಿಜ್ವರ ದೃಢಪಟ್ಟಿದೆ. ವಿಷಯ ತಿಳಿಯುತ್ತಿದ್ದಂತೆ ಏ.16ರಂದು ರಾಜ್ಯ ಮತ್ತು ಜಿಲ್ಲಾ ಮಟ್ಟದ ಆರೋಗ್ಯ ಇಲಾಖೆಯ ತ್ವರಿತ ಪ್ರತಿಕ್ರಿಯೆ ತಂಡಗಳು (ಆರ್‌ಆರ್‌ಟಿ) ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿವೆ. ಈಗಾಗಲೇ ಮುತ್ತೂರು ಗ್ರಾಮವನ್ನು ಸೋಂಕಿತ ವಲಯ (3 ಕಿ.ಮೀ ವ್ಯಾಪ್ತಿ) ಮತ್ತು ಸುತ್ತಲಿನ 10 ಕಿ.ಮೀ ಪ್ರದೇಶವನ್ನು ಕಣ್ಗಾವಲು ವಲಯ ಎಂದು ಘೋಷಿಸಲಾಗಿದೆ. ಈ ಪ್ರದೇಶವನ್ನು ಒಂದು ವರ್ಷದವರೆಗೆ ನಿಷೇಧಿತ ಪ್ರದೇಶವೆಂದು ಗುರುತಿಸಲಾಗಿದೆ ಎಂದು ತಿಳಿಸಿದ್ದಾರೆ.

ವೈದ್ಯಕೀಯ ನಿಗಾದಲ್ಲಿ 10 ಸಿಬ್ಬಂದಿ

ಏ.15 ರಂದು 7,444 ಕೋಳಿಗಳು, 14 ಸಾವಿರಕ್ಕೂ ಅಧಿಕ ಮೊಟ್ಟೆಗಳು, 2,250 ಕೆ.ಜಿ.

ಕೋಳಿ ಆಹಾರಗಳನ್ನು ಪಶುಪಾಲನೆ ಇಲಾಖೆ ನೇತೃತ್ವದಲ್ಲಿ ವೈಜ್ಞಾನಿಕವಾಗಿ ಕಲ್ಲಿಂಗ್ ಮಾಡಿ ವಿಲೇವಾರಿ ಮಾಡಲಾಗಿದ್ದು, ಇದರಲ್ಲಿ ಭಾಗಿಯಾಗಿದ 10 ಸಿಬ್ಬಂದಿಯನ್ನು ಕ್ವಾರಂಟೈನ್ ಮಾಡಿ, ಒಸೆಲ್ಟಾಮಿವಿರ್ ಔಷಧಿಯೊಂದಿಗೆ ವೈದ್ಯಕೀಯ ನಿಗಾದಲ್ಲಿ ಇರಿಸಲಾಗಿದೆ. ಈ ಸ್ಥಳವನ್ನು ಒಂದು ವರ್ಷದವರೆಗೆ ನಿಷೇಧಿತ ಪ್ರದೇಶ ಎಂದು ಘೋಷಣೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆರೋಗ್ಯ ಇಲಾಖೆ ಕಣ್ಗಾವಲು ಪ್ರಗತಿಯ ಲ್ಲಿದ್ದು, 3 ಕಿ.ಮೀ. ವ್ಯಾಪ್ತಿ ವಲಯದಲ್ಲಿ ಒಟ್ಟು 3,422 ಜನ ಸಂಖ್ಯೆಯ 2 ಗ್ರಾಮಗಳಿದ್ದು, 3 ರಿಂದ 10 ಕಿ.ಮೀ ವ್ಯಾಪ್ತಿಯಲ್ಲಿ ಒಟ್ಟು 22,395 ಜನ ಸಂಖ್ಯೆ ಇರುವ 17 ಗ್ರಾಮ ಗಳಿವೆ. ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತರು ದಿನನಿತ್ಯ ಮನೆ-ಮನೆ ಭೇಟಿ ನೀಡಿ ಮುಂದಿನ ಹತ್ತು ದಿನಗಳ ಕಾಲ ಜ್ವರ ಕಣ್ಗಾವಲು ನಡೆಸಲಾಗು ವುದು. ಶಂಕಿತ ಪ್ರಕರಣಗಳನ್ನು ತಕ್ಷಣ ವರದಿ ಮಾಡಲು ಆಸ್ಪತ್ರೆಗಳಿಗೆ ಸೂಚಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ತಿದ್ದುಪಡಿ ಮಸೂದೆಗಳ ವಿರುದ್ಧ ಡಿಎಂಕೆ ವಾದ ಭಯ ಹುಟ್ಟಿಸುವಂತಿದೆ: ಕೇಂದ್ರ ಸಚಿವ ಕುಮಾರಸ್ವಾಮಿ

ಕಾಂಗ್ರೆಸ್, ಡಿಎಂಕೆ ವಿರುದ್ಧ ಎಚ್‌ಡಿಕೆ ವಾಗ್ದಾಳಿ

ಬೆಂಗಳೂರು/ದೆಹಲಿ: ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ನಿಟ್ಟಿನಲ್ಲಿ



ಕೇಂದ್ರ ಸರಕಾರ ಇರಿಸಿರುವ ಹೆಜ್ಜೆ ಐತಿಹಾಸಿಕ ಎಂದು ಬಣ್ಣಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್, ಡಿಎಂಕೆ ಪಕ್ಷಗಳ ವಾದಗಳು ಭಯ ಹುಟ್ಟಿಸುವ ರೀತಿಯಲ್ಲಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಲೋಕಸಭೆಯಲ್ಲಿ ಶುಕ್ರವಾರ ಮಹಿಳಾ ಮೀಸಲು ಮಸೂದೆಯನ್ನು ಬೆಂಬಲಿಸಿ ಮಾತನಾಡಿ, ಮಹಿಳೆಯರಿಗೆ ಮೀಸಲಾತಿ ನೀಡುವ ನಿಟ್ಟಿನಲ್ಲಿ ಈ ಮಸೂದೆಯು ಭಾರತದ ಪ್ರಜಾಪ್ರಭುತ್ವದ ಪಯಣದಲ್ಲಿ ಕ್ರಾಂತ ಕ್ರಾಂತಿಕಾರಕ ಹೆಜ್ಜೆಯಾಗಿದೆ. ಕಾಂಗ್ರೆಸ್ ಪಕ್ಷವು ನಿರಂತರವಾಗಿ ಸುಧಾರಣೆಗಳಿಗೆ ವ್ಯವಸ್ಥಿತವಾಗಿ ತಡೆಯೊಡ್ಡುತ್ತಿದೆ. ಈ ಮಸೂದೆ ಬೆಂಬಲಿಸುವುದನ್ನು ಬಿಟ್ಟು ಜನರನ್ನು ದಾರಿ ತಪ್ಪಿಸುವ ಸಂಕಥನಗಳನ್ನು ಸೃಷ್ಟಿಸುತ್ತಿದೆ. ಕಾಂಗ್ರೆಸ್ ಸೃಷ್ಟಿಸುತ್ತಿರುವ ಗೊಂದಲಗಳಿಗೆ ಅರ್ಥವಿಲ್ಲ, ಅವುಗಳನ್ನು ಜನರು ನಂಬುವುದಿಲ್ಲ ಹಾಗೂ ಸಂಕುಚಿತ ಸಂಕಥನಗಳ ಕಾಂಗ್ರೆಸ್ ವಾದವು ರಾಷ್ಟ್ರದ ವಿಶಾಲ ತಳಹದಿಯ ಭಾವನೆಯನ್ನು ಪ್ರತಿಬಿಂಬಿಸುವುದಿಲ್ಲ ಎಂದರು.

ಸ್ಟಾಲಿನ್ ನಿಲುವು ದಕ್ಷಿಣ ಭಾರತದ ಅಭಿಪ್ರಾಯವಲ್ಲ: ಮಸೂದೆಯ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ತೆಗೆದುಕೊಂಡ ನಿಲುವು ಎಲ್ಲಾ ದಕ್ಷಿಣದ ರಾಜ್ಯಗಳ ಅಭಿಪ್ರಾಯವಲ್ಲ. ಇಂದು ನಾವು ಯಾವ ಮಸೂದೆಯ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆಯೋ ಅದನ್ನು ಮುಕ್ತವಾಗಿ ಬೆಂಬಲಿಸಿರುವ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರನ್ನು ಶ್ಲಾಘಿಸಿ, ನಾಯ್ಡು ಅವರಿಗೇನು ರಾಷ್ಟ್ರಪ್ರೇಮ ಇಲ್ಲವೇ ಎಂದು ಪ್ರಶ್ನಿಸಿದರು. ಅಲ್ಲದೆ, ತಮಿಳುನಾಡಿನಲ್ಲಿ ಅಧಿಕಾರದಲ್ಲಿರುವ ಡಿಎಂಕೆ ಈ ಮಹತ್ವದ ಮಸೂದೆಗಳನ್ನು ತೀವ್ರವಾಗಿ ವಿರೋಧಿಸುತ್ತಿರುವುದು ಮತ್ತು ಅವುಗಳು ದಕ್ಷಿಣದ ರಾಜ್ಯಗಳ ಮೇಲೆ ಭಾರಿ ಪ್ರತಿಕೂಲ ಪರಿಣಾಮ ಬೀರುತ್ತವೆ ಎಂಬ ಕಳವಳ ವ್ಯಕ್ತಪಡಿಸಿದೆ. ಇದು ಸರಿಯಲ್ಲ, ಅನಗತ್ಯವಾಗಿದೆ ಎಂದರು.

ಕ್ಷೇತ್ರ ಮರು ವಿಂಗಡಣೆಯ ಬಗ್ಗೆ ಪ್ರತಿಪಕ್ಷಗಳ ಕಳವಳಕ್ಕೆ ಅರ್ಥವಿಲ್ಲ. ಸರಕಾರವು ಎಲ್ಲ ರಾಜ್ಯಗಳಲ್ಲಿ ಸ್ಥಾನಗಳಲ್ಲಿ ಸರಾಸರಿ ಶೇ.50ರಷ್ಟು ಕ್ಷೇತ್ರಗಳನ್ನು ಹೆಚ್ಚಿಸುವ ಏಕರೂಪ ಬದ್ಧತೆ ಖಚಿತಪಡಿಸಿದೆ. ಯಾವುದೇ ರಾಜ್ಯವು ತನ್ನ ಪ್ರಸ್ತುತ ಪ್ರಾತಿನಿಧ್ಯ ಕಳೆದುಕೊಳ್ಳುವುದಿಲ್ಲ ಹಾಗೂ ಭಾರತವು ತನ್ನ ಅಪಾರ ಜನಸಂಖ್ಯೆಯ ಹೊರತಾಗಿಯೂ ಬ್ರಿಟನ್ ನಂತಹ ದೇಶಕ್ಕಿಂತ ಕಡಿಮೆ ಚುನಾಯಿತ ಪ್ರತಿನಿಧಿಗಳನ್ನು ಹೊಂದಿದೆ. ಹೀಗಾಗಿ ಸಂಸದರ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ ಎಂದರು.

ಮಹಿಳಾ ಮೀಸಲು ಕನಸು ಕಂಡಿದ್ದ ಎಚ್‌ಡಿಡಿ

1995ರಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಸಿಎಂ ಆಗಿದ್ದಾಗ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಆಶಯವನ್ನು ಪ್ರಪ್ರಥಮ ಬಾರಿಗೆ ಪ್ರಸ್ತಾಪಿಸಿದ್ದರು. ನಂತರ 1996ರಲ್ಲಿ ಪ್ರಧಾನಿ ಯಾಗಿ ಸಂಸತ್ತಿನಲ್ಲಿ ಈ ಮಹಿಳಾ ಮೀಸಲು ಮಸೂದೆ ಮಂಡಿಸಿದರು, ಆದರೆ ರಾಜಕೀಯ ಬೆಂಬಲದ ಕೊರತೆಯಿಂದಾಗಿ ಆ ಸಮಯದಲ್ಲಿ ಅದನ್ನು ಈ ಸದನದಲ್ಲಿ ಅಂಗೀಕರಿಸಲು ಸಾಧ್ಯವಾಗಲಿಲ್ಲ. ರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳೆಯರಿಗೆ ಈ ಮೀಸಲಾತಿ ಬಹುದೊಡ್ಡ ಶಕ್ತಿ ತುಂಬುತ್ತದೆ. ಆತ್ಮನಿರ್ಭರ ಭಾರತದ ಮೂಲಕ ವಿಕಸಿತ ಭಾರತ ಸಾಕಾರಕ್ಕೆ ಪ್ರಧಾನಿಗಳು ಹೇಗೆ ಶ್ರಮಿಸುತ್ತಿದ್ದಾರೆಯೋ ಹಾಗೆಯೇ ಮಹಿಳೆಯರಿಗೆ ಮೀಸಲು ನೀಡಿ ರಾಜಕೀಯವಾಗಿ ಶಕ್ತಿ ನೀಡುವ ಮೂಲಕ ನಾರೀಭಾರತ ಸಾಕಾರಕ್ಕೆ ಮುಂದಾಗಿದ್ದಾರೆ ಎಂದರು.

ಪಂಚರಾಜ್ಯ ಪವರ್ ವಾರ್

ಮೆಲುಕು

ಗದ್ದುಗೆಯ ಸುತ್ತಮುತ್ತ

ಭ್ರಷ್ಟಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಈಡಾದ ಕಾರಣಕ್ಕೆ ತಮ್ಮ ಹುದ್ದೆಯನ್ನು ಕಳೆದುಕೊಳ್ಳಬೇಕಾಗಿ ಬಂದ ಭಾರತದ ಮೊದಲ 'ಅಧಿಕಾರಾರೂಢ' ಮುಖ್ಯಮಂತ್ರಿ ಎನಿಸಿಕೊಂಡವರು ತಮಿಳುನಾಡಿನ 'ಪುರುಚ್ಚಿ ತಲೈವಿ'

ಹಾಗೂ ಎಐಎಡಿಎಂಕೆ ಪಕ್ಷದ ಅಧಿನಾಯಕಿಯಾಗಿದ್ದ ಜೆ.ಜಯಲಲಿತಾ. 2014ರ ಸೆಪ್ಟೆಂಬರ್ 27ರಂದು, ಬೆಂಗಳೂರಿನ ನ್ಯಾಯಾಲಯವೊಂದು ಅಕ್ರಮ ಆಸ್ತಿ ಸಂಗ್ರಹಣೆ ಪ್ರಕರಣದಲ್ಲಿ ಜಯಾರನ್ನು 'ದೋಷಿ' ಎಂದು ಘೋಷಿಸಿದ ನಂತರ ಅವರು ತಮ್ಮ ಸಿಎಂ ಗದ್ದುಗೆಯನ್ನು ಕಳೆದುಕೊಂಡರು. ತಕ್ಷಣವೇ ಅವರು ಜೈಲುಪಾಲಾಗಬೇಕಾಯಿತು ಮತ್ತು ಅಕ್ಟೋಬರ್ ತಿಂಗಳಲ್ಲಿ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ, 2015ರ ಮೇ ತಿಂಗಳಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯವು ಸ್ಥಳೀಯ ನ್ಯಾಯಾ ಲಯದ ಆದೇಶವನ್ನು ರದ್ದುಗೊಳಿಸಿತು; ಮೈಕೊಡವಿಕೊಂಡು ಎದ್ದ ಜಯಲಲಿತಾ ಮತ್ತೆ ಮುಖ್ಯಮಂತ್ರಿಯಾದರು ಹಾಗೂ 2016ರ ವಿಧಾನಸಭಾ ಚುನಾವಣೆಯನ್ನೂ ಗೆದ್ದರು. 2016ರ ಡಿಸೆಂಬರ್‌ನಲ್ಲಿ ಅವರು ನಿಧನರಾದರೂ, ವಿಚಾರಣಾ ನ್ಯಾಯಾಲಯದ ಹಿಂದಿನ ಆದೇಶವನ್ನು ಸರ್ವೋಚ್ಚ ನ್ಯಾಯಾಲಯ ಎತ್ತಿಹಿಡಿಯಿತು. ಆದರೆ ತೀರ್ಪು ಪ್ರಕಟವಾದಾಗ ಜಯಲಲಿತಾ ಜೀವಂತವಾಗಿ ಇರದ ಕಾರಣಕ್ಕೆ ಅವರ ವಿರುದ್ಧದ ಕಾನೂನು ಕ್ರಮಗಳನ್ನು ರದ್ದುಗೊಳಿಸಲಾಯಿತು.

ಚುನಾವಣಾ ಚುರುಮುರಿ

ಘೋಷಣೆಗಳ ಘರ್ಷಣೆ

ಇದು ಕೋಲ್ಕತ್ತಾದಿಂದ ಹಾರಿಬಂದ ಸುದ್ದಿ. ಅಲ್ಲಿನ ಹೌರಾದ ಬಾಲಿ ಎಂಬಲ್ಲಿ, ವಿಧಾನಸಭಾ ಚುನಾವಣೆಯ ಪ್ರಚಾರಕಾರ್ಯಕ್ಕೆಂದು 'ರೋಡ್ ಶೋ'ವನ್ನು ಸಜ್ಜುಗೊಳಿಸಲಾಗಿತ್ತು. ಅದರ ಕೇಂದ್ರಬಿಂದುವಾಗಿದ್ದವರು ಪಶ್ಚಿಮ ಬಂಗಾಳದ ಮುಂದಿನ 'ಡಿ ಫ್ಯಾಕ್ಟೊ' ಮುಖ್ಯಮಂತ್ರಿ ಎಂದೇ ಬಿಂಬಿಸಲ್ಪಟ್ಟಿರುವ ಸುವೇಂದು

ಅಧಿಕಾರಿ. ಈ ರೋಡ್ ಶೋನಲ್ಲಿ ತೂರಿಕೊಂಡಿದ್ದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಕಾರ್ಯಕರ್ತರು 'ಜೊಯ್ ಬಾಂಗ್ಲಾ' (ಅಂದರೆ, 'ಬಾಂಗ್ಲಾಕ್ಕೆ ಜಯವಾಗಲಿ') ಎಂದು ಕೂಗಿಬಿಟ್ಟರಂತೆ! ಇದು ಟಿಎಂಸಿ ಪಕ್ಷದ ಅಧಿಕೃತ ಘೋಷವಾಕ್ಯವೂ ಹೌದೆನ್ನಿ. ಇದು ಕಿವಿಗೆ ಬೀಳುತ್ತಿದ್ದಂತೆ ತೆರೆದ ವಾಹನದಲ್ಲಿ ನಿಂತಿದ್ದ ಸುವೇಂದು ಅಧಿಕಾರಿ ಕೆರಳಿ ಕೆಂಡವಾಗಿಬಿಟ್ಟರಂತೆ ಮತ್ತು ವಾಹನದಿಂದ ಹೊರಜಿಗಿದು ಟಿಎಂಸಿ ಕಾರ್ಯಕರ್ತರನ್ನು ಅಟಕಾಯಿಸಿಕೊಳ್ಳುವ ಹಂತಕ್ಕೂ ತಲುಪಿದ್ದರಂತೆ. ಆದರೆ ಭದ್ರತಾ ಸಿಬ್ಬಂದಿ ಅವರನ್ನು ತಡೆದು ಪರಿಸ್ಥಿತಿಯನ್ನು ತಿಳಿಗೊಳಿಸಿದರಂತೆ. 'ಟಿಎಂಸಿ' ಗರ ಘೋಷಣೆಗೆ ತಾವೇಕೆ ಸುಮ್ಮನಿರಬೇಕೆಂದು ಭಾವಿಸಿದ ಬಿಜೆಪಿಯ ಕಾರ್ಯಕರ್ತರು 'ಜೊಯ್ ಶ್ರೀರಾಮ್' ಎಂದು ಕೂಗುವ ಮೂಲಕ ಪ್ರತಿಕ್ರಿಯಿಸಿದ ರಂತೆ! ಹಾಗೆ ನೋಡಿದರೆ, 'ಜೊಯ್ ಬಾಂಗ್ಲಾ' ಎಂಬುದು 1971ರಲ್ಲಿ ಬಾಂಗ್ಲಾದೇಶವನ್ನು ವಿಮೋಚನೆ ಗೊಳಿಸಲೆಂದು ಪಾಕಿಸ್ತಾನ ಸೇನೆ ಮತ್ತು ಇಸ್ಲಾಮಿಸ್ಟ್ ಪಡೆಗಳ ವಿರುದ್ಧ ಹೋರಾಡಿದ 'ಮುಕ್ತಿಯೋಧರ' ಯುದ್ಧಘೋಷಣೆಯಾಗಿತ್ತು. ಆದರೆ ಪಶ್ಚಿಮ ಬಂಗಾಳ ದಲ್ಲಿ ಬಿಜೆಪಿಯ ವಿರುದ್ಧದ ಬಂಗಾಳಿಗಳ 'ರಣಘೋಷ'ವಾಗಿ ಟಿಎಂಸಿ ಇದನ್ನು ಮರುರೂಪಿಸಿಕೊಂಡಿದೆ ಎಂಬುದು ಗಮನಾರ್ಹ. ಹೀಗಾಗಿ ರೋಡ್ ಶೋ ವೇಳೆ ಈ ಘೋಷವನ್ನು ಕೇಳುತ್ತಿದ್ದಂತೆ ಬಿಜೆಪಿಯ ಸುವೇಂದು ಅಧಿಕಾರಿ ಅವರು ಕೆರಳಿದ್ದು ಸಹಜವಾಗೇ ಇದೆ, ಅಲ್ಲವೇ?!

ಬ್ರಿಟ್ಟಾಸ್ ಬಿಟ್ರು ಬಾಣ!

ಇದು ಕೇರಳದಿಂದ ಬಂದಿರೋ ಸುದ್ದಿ. ಸಿಪಿಎಂನ ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್ ಅವರು ಕಾಂಗ್ರೆಸ್ ಪಕ್ಷವನ್ನೂ ಮತ್ತು ಅದರ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರನ್ನೂ ಇತ್ತೀಚೆಗೆ ಟೀಕಿಸಿದ್ದಾರೆ. ''ಕಾಂಗ್ರೆಸ್‌ನಂಥ ಐತಿಹಾಸಿಕ



ಪಕ್ಷದ ಬೇರುಗಳನ್ನು ಮತ್ತಷ್ಟು ಗಟ್ಟಿಗೊಳಿಸಿ, ಸರ್ವಾಂಗೀಣ ಬಲವರ್ಧನೆಯಲ್ಲಿ ತೊಡಗಲೆಂದು ವೇಣುಗೋಪಾಲ್ ಅವರು ದೆಹಲಿಯಲ್ಲಿನ ತಮ್ಮ ಕಾರ್ಯಚಟುವಟಿಕೆಯನ್ನೇ ಮುಂದುವರಿಸುತ್ತಾರೆ ಎಂಬುದು ಕೇರಳದ ಜನರು ಹಾಗೂ 'ಎಲ್‌ಡಿಎಫ್' ಪಾಳಯದವರ ಆಶಯವಾಗಿದೆ'' ಎಂದು ಬ್ರಿಟ್ಟಾಸ್ ಅವರು ಕೂರಂಬು ಬಿಟ್ಟದ್ದು ಇದಕ್ಕೆ ಸಾಕ್ಷಿ. ಕೇರಳ ವಿಧಾನಸಭಾ ಚುನಾವಣೆಯ ಮತಗಳ ಎಣಿಕೆಯು ಮೇ 4ರಂದು ಸಂಪನ್ನಗೊಂಡು, ರಾಜ್ಯದಲ್ಲಿ ಒಂದೊಮ್ಮೆ ಕಾಂಗ್ರೆಸ್‌ಗೆ ಬಹುಮತ ದಕ್ಕಿಬಿಟ್ಟರೆ ಮುಖ್ಯ ಮಂತ್ರಿ ಗದ್ದುಗೆ ಅಲಂಕರಿಸಲು ವೇಣುಗೋಪಾಲ್ ಅವರ ಹೆಸರನ್ನು ಪಕ್ಷದ ಅನೇಕ ನಾಯಕರು ಶಿಫಾರಸು ಮಾಡುತ್ತಿದ್ದಾರೆ ಎಂಬ ಮಾತುಗಳು ಕೇಳಿಬಂದ ಹಿನ್ನೆಲೆಯಲ್ಲಿ ಜಾನ್ ಬ್ರಿಟ್ಟಾಸ್ ಹೀಗೆ ಬಾಣ ಬಿಟ್ಟಿದ್ದಂತೆ! ''ವೇಣುಗೋಪಾಲ್ ಅವರು ಕಾಂಗ್ರೆಸ್‌ನ ಬಲವಾದ ಆಧಾರಸ್ತಂಭವಿದ್ದಂತೆ; ಕೇರಳದ ರಾಜಕೀಯಕ್ಕಾಗಿ ಅವರು ರಾಷ್ಟ್ರೀಯ ಮಟ್ಟದ ಕಾರ್ಯಚಟುವಟಿಕೆಗಳಲ್ಲಿ ನಷ್ಟವನ್ನು ಅನುಭವಿಸಬಾರದಲ್ವಾ?'' ಎಂದು ಕೂಡ ಜಾನ್ ಬ್ರಿಟ್ಟಾಸ್ ವ್ಯಂಗ್ಯವಾಡಿದ್ದಾರಂತೆ! ಒಟ್ನಲ್ಲಿ, ರಾಜಕೀಯದಲ್ಲಿ ಕಾಲೆಳೆಯುವವರಲ್ಲೂ ವೈವಿಧ್ಯವಿದೆ ಅಂತಾಯ್ತು!

ಕೋಟ್ ಆಫ್ ದ ಡೇ



ಕ್ಷೇತ್ರ ಮರುವಿಂಗಡಣೆ ಮೂಲಕ ಲೋಕಸಭಾ ಸ್ಥಾನಗಳನ್ನು 850ರವರೆಗೆ ವಿಸ್ತರಿಸಲು ಮುಂದಾಗಿರುವ ಬಿಜೆಪಿಯ ಕ್ರಮವು ದೇಶವನ್ನು ಛಿದ್ರ ಮಾಡುತ್ತದೆ.

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಪ್ರತ್ಯೇಕ ಗೋರ್ಖಾಲ್ಯಾಂಡ್ ಮುಗಿದ ಅಧ್ಯಾಯ. ಮುಂದೇನು?

ಗ್ರೌಂಡ್ ರಿಪೋರ್ಟ್

ರಾಘವಶರ್ಮ ನಿಡ್ಲೆ

ಕರ್ಸಿಯಾಂಗ್ (ಡಾರ್ಜಿಲಿಂಗ್): ಬ್ರಿಟಿಷ್, ನೇಪಾಳ, ಭೂತಾನ್, ಸಿಕ್ಕಿಂ ಮತ್ತು ಪಶ್ಚಿಮ ಬಂಗಾಳದ ಇತಿಹಾಸದೊಂದಿಗೆ ಹೆಣೆದುಕೊಂಡಿರುವ ಉತ್ತರ ಬಂಗಾಳದ ಡಾರ್ಜಿಲಿಂಗ್ ಪಟ್ಟಣ ಪ್ರವಾಸಿ ಗರ ನೆಚ್ಚಿನ ತಾಣ. ಭಾರತದ 'ಚಿಕನ್ ನೆಕ್' ಎಂದೇ ಪ್ರಸಿದ್ಧಿಯಾಗಿರುವ ಸಿಲಿಗುರಿ ಕಾರಿಡಾರ್ ವ್ಯಾಪ್ತಿಯ ಡಾರ್ಜಿಲಿಂಗ್ ಹಾಗೂ ಸುತ್ತಮುತ್ತಲಿನ ಗುಡ್ಡಗಾಡು ಪ್ರದೇಶಗಳನ್ನು ಪಶ್ಚಿಮ ಬಂಗಾಳದಿಂದ ಬೇರ್ಪಡಿಸಿ ಪ್ರತ್ಯೇಕ ಗೋರ್ಖಾಲ್ಯಾಂಡ್ ಎಂಬುದಾಗಿ ಘೋಷಿಸ ಬೇಕು ಎನ್ನುವುದು ಇಲ್ಲಿನ ಜನರ ಹಲವು ದಶಕಗಳ ಹಳೆಯ ಬೇಡಿಕೆ. ಗೋರ್ಖಾಲ್ಯಾಂಡ್ ಬಗ್ಗೆ 1907 ರಿಂದಲೇ

ವಿಶ್ವವಾಣಿ ಬಂಗಾಳ ಚುನಾವಣಾ ಯಾತ್ರೆ

ಇಂಥದ್ದೊಂದು ಒತ್ತಾಯ ಈ ಭಾಗದಲ್ಲಿ ಕೇಳಿಬಂದಿತ್ತು. ಕಳೆದ ನಾಲ್ಕೈದು ದಶಕಗಳಿಂದ ಪ್ರತ್ಯೇಕ ಗೋರ್ಖಾಲ್ಯಾಂಡ್‌ಗಾಗಿ ಪ್ರತಿಭಟನೆ, ಹಿಂಸಾಚಾರ, ರಕ್ತಪಾತಗಳು ನಡೆದು, ಸಾವಿರಾರು ಮಂದಿ ಮೃತಪಟ್ಟಿದ್ದಾರೆ ಮತ್ತು ಸ್ಥಳೀಯರ ಕಣ್ಣಲ್ಲಿ ಹುತಾತ್ಮರಾಗಿದ್ದಾರೆ. 1986, 2007 ಮತ್ತು 2017ರಲ್ಲಿ ಒಟ್ಟು ಮೂರು ದೊಡ್ಡ ಪ್ರಮಾಣದ ಹೋರಾಟಗಳಿಗೆ ಸಾಕ್ಷಿಯಾಗಿದ್ದ ಡಾರ್ಜಿಲಿಂಗ್, ಪ್ರತ್ಯೇಕ ಗುರುತು ಹಾಗೂ ಸ್ವಾಯತ್ತತೆಯ ಬೇಡಿಕೆಯನ್ನು ಸರಕಾರಗಳ ಮುಂದೆ ಇಡುತ್ತಲೇ ಇದೆ.

ಕಳೆದ ಮೂರ್ನಾಲ್ಕು ದಶಕಗಳಿಂದ ಗೋರ್ಖಾಲ್ಯಾಂಡ್ ಹೋರಾಟವನ್ನು ಕಣ್ಣಾರೆ ಕಂಡಿದ್ದ ಈ ಪ್ರವಾಸಿ ಪಟ್ಟಣದಲ್ಲಿ ಹೋಟೆಲ್ ಏಜೆಂಟ್ ಆಗಿ ಕೆಲಸ ಮಾಡುತ್ತಿರುವ ಆನಂದ್ ಗುರುಂಗ್, ಡಾರ್ಜಿಲಿಂಗ್ ರೈಲ್ವೆ ನಿಲ್ದಾಣದಲ್ಲಿ ಮಾತಿಗೆ ಸಿಕ್ಕರು. ಸಿಲಿಗುರಿ–ಡಾರ್ಜಿಲಿಂಗ್ ಮಧ್ಯೆ ಪ್ರವಾಸಿ ಗರಿಗೆಂದೇ ಟಾಯ್

ಆನಂದ್ ಗುರುಂಗ್

ಟ್ರೇನ್‌ಗಳಿದ್ದು, 18ನೇ ಶತಮಾನದ ಬ್ರಿಟಿಷರ ಕಾಲದಲ್ಲೇ ಇದು ನಿರ್ಮಾಣಗೊಂಡಿತ್ತು.

ಬ್ರಿಟಿಷ್ ಕಾಲದ ಸಣ್ಣ ಟ್ರ್ಯಾಕ್‌ಗಳನ್ನೊಳಗೊಂಡ ರೈಲ್ವೆ ನಿಲ್ದಾಣವೂ ಕಣ್ಸೆಳೆಯುತ್ತದೆ. ''ನಾನು ಯಾವುದೇ ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಂಡಿಲ್ಲ. ಆದರೆ, ಪಶ್ಚಿಮ ಬಂಗಾಳವನ್ನು ನಮ್ಮೊಂದಿಗೆ ಜೋಡಿಸಿದರೆ ಹೇಗೆ? ನಾವು ಅವರಿಂದ ಪ್ರತ್ಯೇಕವಾದ ಗುರುತನ್ನು ಹೊಂದಿದ್ದೇವೆ. ಡಾರ್ಜಿಲಿಂಗ್ ಅಭಿವೃದ್ಧಿಗೆ ಸರಕಾರ ಪ್ರಾಶಸ್ತ್ಯ ನೀಡಿದ್ದರೆ, ಪ್ರವಾಸಿ ತಾಣವೊಂದು ಹೀಗೆ ಇರುತ್ತಿತ್ತಾ? ಇಲ್ಲಿ ಯಾವಾಗಲೂ ನೀರಿನ ಸಮಸ್ಯೆ. ಕಡಿದಾದ ರಸ್ತೆಗಳಿಂದ ಸಂಚಾರ ದಟ್ಟಣೆ ಹೆಚ್ಚಾಗಿ, ಗಂಟೆಗಟ್ಟಲೆ ಪ್ರವಾಸಿಗರು ರಸ್ತೆಯಲ್ಲೇ ಸಮಯ ಕಳೆಯಬೇಕಾಗುತ್ತದೆ. ಪಾರ್ಕಿಂಗ್‌ಗೂ ಸೂಕ್ತ ವ್ಯವಸ್ಥೆಗಳಿಲ್ಲ. ಹೀಗಾಗಿ, ನಮಗೆ ಪ್ರತ್ಯೇಕ ಆಡಳಿತ ವ್ಯವಸ್ಥೆ ಇರಬೇಕು. ಪ್ರತ್ಯೇಕ ಗೋರ್ಖಾಲ್ಯಾಂಡ್ ಬೇಕು. ನಮ್ಮ ಸಮಸ್ಯೆಗಳಿಗೆ ನಾವು ಪರಿಹಾರ ಕಂಡುಕೊಳ್ಳುತ್ತೇವೆ. ಇಲ್ಲದಿದ್ದರೆ, ಅದಕ್ಕೆ ಸಮಾನವಾದ ಸಾಂವಿಧಾನಿಕ ವ್ಯವಸ್ಥೆಯನ್ನಾದರೂ ನೀಡಬೇಕಲ್ಲವೇ?'' ಎಂದರು ಗುರುಂಗ್.

ಚುನಾವಣೆಗಳು ಬಂದಾಗಲೆಲ್ಲಾ ಪ್ರತ್ಯೇಕ ಗೋರ್ಖಾಲ್ಯಾಂಡ್ ಕುರಿತ ಚರ್ಚೆಗಳು ಇಲ್ಲಿ ಗರಿಗೆದರುತ್ತವೆ. ಆದರೆ, ನೇಪಾಳ, ಭೂತಾನ್‌ನೊಂದಿಗೆ ಗಡಿ ಹಂಚಿಕೊಂಡಿರುವ ಇಲ್ಲಿನ ಗುಡ್ಡಗಾಡು ಪ್ರದೇಶಗಳನ್ನು ಭದ್ರತೆ ಕಾರಣಗಳಾಗಿ ಪಶ್ಚಿಮ ಬಂಗಾಳದಿಂದ ಪ್ರತ್ಯೇಕಗೊಳಿಸಲು ಸ್ಥಳೀಯ ಸರಕಾರವಾಗಲೀ, ಕೇಂದ್ರ ಸರಕಾರವಾಗಲೀ ಮನಸ್ಸು ಮಾಡಿಲ್ಲ. ಪ್ರತ್ಯೇಕ

2009ರಿಂದ ಬಿಜೆಪಿ

2009ರ ಲೋಕಸಭೆ ಚುನಾವಣೆಯಲ್ಲಿ ಡಾರ್ಜಿಲಿಂಗ್ ಕ್ಷೇತ್ರದಿಂದ ಮಾಜಿ ರಕ್ಷಣಾ ಸಚಿವ ಜಸ್ವಂತ್ ಸಿಂಗ್ ಅವರು ಸ್ಪರ್ಧೆ ಮಾಡಿ ಗೆದ್ದಿದ್ದರು. ನಂತರ, ಎಸ್.ಎಸ್. ಅಹ್ಲುವಾಲಿಯಾ ಅವರು ಇಲ್ಲಿಂದ ಸಂಸದರಾಗಿದ್ದರು. 2019 ಮತ್ತು 2024ರಲ್ಲಿ ರಾಜು ಬಿಸ್ಟಾ ಅವರು ಸಂಸದರಾಗಿ ಆಯ್ಕೆಯಾಗಿದ್ದಾರೆ. 2021ರ ವಿಧಾನಸಭಾ ಚುನಾವಣೆಯಲ್ಲಿ, ಡಾರ್ಜಿಲಿಂಗ್ ಜಿಲ್ಲೆಯ ಏಳು ಸ್ಥಾನಗಳಲ್ಲಿ ಬಿಜೆಪಿ 4ನ್ನು ಗೆದ್ದರೆ, ಟಿಎಂಸಿ ಮತ್ತು ಮಿತ್ರಪಕ್ಷ ಬಿಜಿಪಿಎಂ 3ನ್ನು ಗೆದುಕೊಂಡಿತ್ತು. ಆದರೆ, 2024ರ ಲೋಕಸಭಾ ಚುನಾವಣೆಯಲ್ಲಿ, ಈ ಏಳು ಕ್ಷೇತ್ರಗಳಲ್ಲಿ 6ರಲ್ಲಿ ಬಿಜೆಪಿ ಮುನ್ನಡೆ ಸಾಧಿಸಿತ್ತು.

ಗೋರ್ಖಾಲ್ಯಾಂಡ್ ಸಾಧ್ಯವಿಲ್ಲ ಎಂದು 2017ರಲ್ಲೇ ಕೇಂದ್ರ ಸರಕಾರ ಸ್ಪಷ್ಟಪಡಿಸಿತ್ತು. ಈಗ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ, ''ಗೋರ್ಖಾ ಜನಾಂಗದ ಬೇಡಿಕೆಗೆ ಸಂಬಂಧಿಸಿ ಶಾಶ್ವತ ಸಾಂವಿಧಾನಿಕ ಪರಿಹಾರ ಕಂಡುಕೊಳ್ಳಲು ನಮ್ಮ ಸರಕಾರ ಕಟಿಬದ್ಧವಾಗಿದೆ'' ಎಂದು ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ.

1835ರಲ್ಲಿ ಸಿಕ್ಕಿಂ ಸಾಮ್ರಾಜ್ಯದಿಂದ ಡಾರ್ಜಿಲಿಂಗ್ ಪ್ರದೇಶವನ್ನು ಬ್ರಿಟಿಷರು ವಶಪಡಿಸಿಕೊಂಡ ನಂತರ 19ನೇ ಶತಮಾನದ ಮಧ್ಯಭಾಗದಲ್ಲಿ ಡಾರ್ಜಿಲಿಂಗ್ ಪ್ರಮುಖ ಗಿರಿಧಾಮವಾಗಿ ಗುರುತಿಸಿಕೊಂಡಿತು. ತಂಪಾದ ಹವಾಮಾನ, ಪೂರಕ ಹಸಿರು ಪರಿಸರ ಇದ್ದುದರಿಂದ ಬ್ರಿಟಿಷರು ಇಲ್ಲಿ ಚಹಾ ತೋಟಗಳನ್ನು ನಿರ್ಮಾಣ ಮಾಡಿದರು. ನಂತರದಲ್ಲಿ ಡಾರ್ಜಿಲಿಂಗ್ ಆಡಳಿತಾತ್ಮಕ ಮತ್ತು ವ್ಯಾಪಾರ ಕೇಂದ್ರವಾಗಿ ಬದಲಾಯಿತು. ಕಲ್ಕತ್ತಾದ ಬೇಸಗೆಯಿಂದ ಪಾರಾಗಲು ಬ್ರಿಟಿಷ್ ಅರಸು ಮನೆತನದವರು ಇಲ್ಲಿಗೇ ಬರುತ್ತಿದ್ದರು. 18ರ ಶತಮಾನದಲ್ಲಿ ಇಲ್ಲಿ ರೈಲ್ವೇ ಸಂಪರ್ಕವನ್ನೂ ಸ್ಥಾಪಿಸಲಾಯಿತು. ಕಾಲಾಂತರದಲ್ಲಿ ನೇಪಾಳದಿಂದಲೂ ಜನ ವಲಸೆ ಬರಲು ಶುರುಮಾಡಿದ್ದರು. 1947ರ ಸ್ವಾತಂತ್ರ್ಯದ ನಂತರ ಡಾರ್ಜಿಲಿಂಗ್‌ನ ನೇಪಾಳಿ ಭಾಷಿಕರಿಗೆ (ಮೂಲ ನೇಪಾಳ ದೇಶದವರಲ್ಲ) ತಮ್ಮ ಗುರುತಿನ ಬಿಕ್ಕಟ್ಟು ಹೆಚ್ಚಾಗತೊಡಗಿತು. ಇದೇ ಕಾರಣಕ್ಕೆ ಡಾರ್ಜಿಲಿಂಗ್ ಹಾಗೂ ಸುತ್ತಮುತ್ತಲಿನ ಮೂಲ ನಿವಾಸಿಗಳನ್ನು 'ಗೋರ್ಖಾ' ಎಂದು ಕರೆಸಿಕೊಳ್ಳಲೇ ಅವರು ಬಯಸಿದರು. ಪರಿಣಾಮವಾಗಿ ಪ್ರತ್ಯೇಕ ಗೋರ್ಖಾಲ್ಯಾಂಡ್ ಪ್ರದೇಶದ ಬೇಡಿಕೆ ಹುಟ್ಟಿಕೊಂಡಿತ್ತು. ಗೋರ್ಖಾ ನೇಪಾಳಿ ಮೂಲದ ಹೆಸರಾಗಿದ್ದರೂ, ಅದು ಬ್ರಿಟಿಷ್–ಭಾರತ ಸೇನೆಯಲ್ಲಿ ಸೇವೆ ಸಲ್ಲಿಸಿದ್ದ ದಿಟ್ಟ ಸಮರ ಸಂಪ್ರದಾಯದ ಗೋರ್ಖಾ ಸೈನಿಕರನ್ನು ಬಿಂಬಿಸುತ್ತದೆ.

1980ರ ದಶಕದಲ್ಲಿ ಗೋರ್ಖಾ ನ್ಯಾಷನಲ್ ಲಿಬರೇಷನ್ ಫ್ರಂಟ್ ನಾಯಕರು, ಅಂದಿನ ಪ್ರಧಾನಿ ಇಂದಿರಾ ಗಾಂಧಿ ಹಾಗೂ ನಂತರದಲ್ಲಿ ರಾಜೀವ್ ಗಾಂಧಿಗೆ ಪತ್ರ ಬರೆದು ಪ್ರತ್ಯೇಕ ರಾಜ್ಯದ ಬೇಡಿಕೆ ಇಟ್ಟಿದ್ದರು. ಕೇಂದ್ರದಿಂದ ಸೂಕ್ತ ಪ್ರತಿಸ್ಪಂದನೆ ಸಿಗದ ಕಾರಣ, ಘಿಸಿಂಗ್ ನೇತೃತ್ವದಲ್ಲಿ 1986–87ರಲ್ಲಿ ಸುಮಾರು 200 ದಿನಗಳ ಕಾಲ ಆಂದೋಲನ ನಡೆದು, ನಂತರ ಸರಕಾರಗಳು ಘಿಸಿಂಗ್ ಜತೆ ಸಂಧಾನ ನಡೆಸಿದವು. ಡಾರ್ಜಿಲಿಂಗ್ ಗೋರ್ಖಾ ಹಿಲ್ ಕೌನ್ಸಿಲ್ ಸ್ಥಾಪನೆಗೆ ಸರಕಾರ ಒಪ್ಪಿಗೆ ನೀಡಿತು. ಘಿಸಿಂಗ್ ಪ್ರತ್ಯೇಕ ರಾಜ್ಯದ ಬೇಡಿಕೆ ಕೈಬಿಟ್ಟರು. ಹಲವು ವರ್ಷಗಳ ಕಾಲ ಈ ಕೌನ್ಸಿಲ್‌ಗೆ ಘಿಸಿಂಗ್ ಅಧ್ಯಕ್ಷರಾಗಿದ್ದರು. ಆದರೆ, ಘಿಸಿಂಗ್ ಸರ್ವಾಧಿಕಾರದಿಂದ ಆಕ್ರೋಶಗೊಂಡಿದ್ದ ಅವರ ಆಪ್ತ ಬಿಮಲ್ ಗುರುಂಗ್, ಪ್ರತ್ಯೇಕ 'ಗೋರ್ಖಾ ಜನಮುಕ್ತಿ ಮೋರ್ಚಾ' ಸ್ಥಾಪಿಸಿ, ಪ್ರತ್ಯೇಕ ಗುರುತು, ಸ್ವಾಯತ್ತತೆಯ ಹೋರಾಟ ಮುಂದುವರಿಸಿದ್ದಾರೆ. ವಿಧಾನಸಭೆ ಚುನಾವಣೆಗೆ ಇದೇ ಗೋರ್ಖಾ ಜನಮುಕ್ತಿ ಮೋರ್ಚಾದೊಂದಿಗೆ (ಜಿಜೆಎಂ) ಬಿಜೆಪಿ ಮೈತ್ರಿ ಮಾಡಿಕೊಂಡಿದ್ದು, ಡಾರ್ಜಿಲಿಂಗ್ ವಿಧಾನಸಭೆಯಿಂದ ಜಿಜೆಎಂನ ನಮನ್ ರಾಯ್ ಅವರು ಬಿಜೆಪಿ ಚಿಹ್ನೆಯಿಂದ ಸ್ಪರ್ಧಿಸುತ್ತಿದ್ದಾರೆ. ವಿಶೇಷ ಎಂದರೆ, ಡಾರ್ಜಿಲಿಂಗ್ ಸುತ್ತಮುತ್ತಲಿನ ಮೂರು ಸೀಟುಗಳಲ್ಲಿ

ಡಾರ್ಜಿಲಿಂಗ್ ಮಹಾಕಾಳಿ ದೇಗುಲದಲ್ಲಿ ಒಟ್ಟಾಗಿ ಹಿಂದೂ–ಬೌದ್ಧ ಧರ್ಮೀಯರಿಂದ ಪೂಜೆ.

ಈ ತಲೆಮಾರಿನ ಹೊಸ ಚಿಂತನೆ

ಡಾರ್ಜಿಲಿಂಗ್ ಸುತ್ತಮುತ್ತ ಜನರನ್ನು ಮಾತನಾಡಿಸಿದಾಗ ಪ್ರತ್ಯೇಕ ಗೋರ್ಖಾಲ್ಯಾಂಡ್ ಎನ್ನುವುದು ಹಳೆ ತಲೆಮಾರಿಗೆ ಸೀಮಿತಗೊಂಡಿದೆಯೇ ಎಂಬ ಪ್ರಶ್ನೆಯೂ ಮೂಡುತ್ತದೆ. ಹಿರಿ ತಲೆಗಳು ಗೋರ್ಖಾ ಗುರುತು, ಸ್ವಾಯತ್ತತೆ ಬಗ್ಗೆ ಮಾತನಾಡಿ ದರೆ, ಯುವ ತಲೆಮಾರಿನವರು ಉದ್ಯೋಗ, ಅಭಿವೃದ್ಧಿ, ಪ್ರವಾಸೋದ್ಯಮ ಸುಧಾರಣೆ, ರಸ್ತೆ, ಸಮರ್ಪಕ ನೀರಿನ ವ್ಯವಸ್ಥೆಗೆ ಹೆಚ್ಚು ಒತ್ತು ನೀಡುವ ಬಗ್ಗೆ ಮಾತನಾಡುತ್ತಾರೆ. ''ಪ್ರವಾಸಿಗರಿಂದಲೇ ನಮ್ಮ ಜೀವನ ಸಾಗುತ್ತದೆ. ಪ್ರವಾಸೋದ್ಯಮ ಸುಧಾರಣೆಗೆ ಜನಪ್ರತಿನಿಧಿಗಳು ಯೋಚನೆ ಮಾಡಲಿ. ಡಾರ್ಜಿಲಿಂಗ್ ಹಾಗೂ ಸುತ್ತಮುತ್ತಲ ಪ್ರದೇಶಗಳು ಮೂರು ದೇಶಗಳ ಗಡಿ ಭಾಗದಲ್ಲಿರು ವುದರಿಂದ ಭೌಗೋಳಿಕ ಸಮಗ್ರತೆಯ ರಕ್ಷಣೆ ಕಾರಣಕ್ಕಾಗಿ ಸರಕಾರ ಪ್ರತ್ಯೇಕ ಗೋರ್ಖಾಲ್ಯಾಂಡ್‌ಗೆ ಒಪ್ಪುತ್ತಿಲ್ಲ. ಇದು ವಾಸ್ತವವೂ ಹೌದು. 2017ರ ಹೋರಾಟದ ಹಿಂದೆ ಚೀನಿಯರ ಪ್ರಭಾವ ಇತ್ತೆಂದು ಹೇಳುತ್ತಾರೆ. ಹೀಗಾಗಿ, ಸ್ಥಳೀಯ ಸಂಸ್ಕೃತಿ ಉಳಿಸಿಕೊಂಡು, ಜನಜೀವನ ಸುಧಾರಣೆಗೆ ಪ್ರಾಶಸ್ತ್ಯ ನೀಡಬೇಕು'' ಎಂದು ಡಾರ್ಜಿಲಿಂಗ್‌ನ ಮಹಾಕಾಳಿ ದೇವಸ್ಥಾನದಲ್ಲಿ ಸಿಕ್ಕ ಕಾಂಚನ್ ಲಾಮ ಮತ್ತು ಸೌಂದರ್ಯ ಲಾಮ ಅಭಿಪ್ರಾಯ ಪಡುತ್ತಾರೆ. ಡಾರ್ಜಿಲಿಂಗ್‌ನ ಸುಪ್ರಸಿದ್ಧ ಮಹಾಕಾಳಿ ದೇವಸ್ಥಾನ ಹಿಂದೂ–ಬೌದ್ಧ ಧರ್ಮೀಯರ ಸಾಮರಸ್ಯಕ್ಕೆ ಸಾಕ್ಷಿಯಾಗಿ ನಿಂತಿದೆ. ದೇಗುಲದ ಗರ್ಭಗುಡಿಯಲ್ಲಿ ಬುದ್ಧನ ಮೂರ್ತಿಯೂ ಇದ್ದು, ಹಿಂದೂ ಪುರೋಹಿತರ ಪಕ್ಕದಲ್ಲೇ ಬುದ್ಧ ಸನ್ಯಾಸಿಯೂ ಕುಳಿತು ಬುದ್ಧನಿಗೆ ಪ್ರಾರ್ಥನೆ ಮಾಡುವುದನ್ನೂ ಇಲ್ಲಿ ಕಾಣಬಹುದು

ಜಿಟಿಎ ಅಧ್ಯಕ್ಷ ಅನಿತ್ ಥಾಪಾ

ಭಾರತೀಯ ಗೋರ್ಖಾ ಪ್ರಜಾತಾಂತ್ರಿಕ್ ಮೋರ್ಚಾದ ನಾಯಕ ಅನಿತ್ ಥಾಪಾ, ಗೋರ್ಖಾಲ್ಯಾಂಡ್ ಟೆರಿಟೋರಿಯಲ್ ಅಡ್ಮಿನಿಸ್ಟ್ರೇಷನ್ (ಜಿಟಿಎ) ಸಂಸ್ಥೆಯ ಅಧ್ಯಕ್ಷರೂ ಹೌದು. ಜಿಟಿಎ ಅರೆ-ಸ್ವಾಯತ್ತ ಮಂಡಳಿಯಾಗಿದ್ದು, 2012ರಲ್ಲಿ ಪಶ್ಚಿಮ ಬಂಗಾಳ ಕಾಯ್ದೆಯ ಮೂಲಕ ಇದನ್ನು ಸ್ಥಾಪನೆ ಮಾಡಲಾಯಿತು. ಡಾರ್ಜಿಲಿಂಗ್ ಮತ್ತು ಕಲಿಂಪಾಂಗ್ ಜಿಲ್ಲೆಗಳ ಆಡಳಿತ ಮತ್ತು ಹಣಕಾಸು ವ್ಯವಹಾರಗಳನ್ನು ಇದು ನಿರ್ವಹಿಸುತ್ತಿದೆ. ಸುಭಾಷ್ ಘಿಸಿಂಗ್ ಹೋರಾಟದಿಂದ ಸ್ಥಾಪನೆಯಾಗಿದ್ದ ಡಾರ್ಜಿಲಿಂಗ್ ಗೋರ್ಖಾ ಹಿಲ್ ಕೌನ್ಸಿಲ್ ಅನ್ನು ರದ್ದುಗೊಳಿಸಿ, ಗೋರ್ಖಾ ಜನಾಂಗದ ಸಾಮಾಜಿಕ-ಆರ್ಥಿಕ ಅಭಿವೃದ್ಧಿ, ಭಾಷೆ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ಉತ್ತೇಜಿಸುವ ಸಲುವಾಗಿ, ಜಿಟಿಎ ಅನ್ನು ಸ್ಥಾಪಿಸಲಾಗಿದೆ. ಡಾರ್ಜಿಲಿಂಗ್ ಬೆಟ್ಟ ಪ್ರದೇಶಗಳ ರಾಜಕೀಯ ಜವಾಬ್ದಾರಿಯನ್ನು ಟಿಎಂಸಿ ಅನಿತ್ ಥಾಪಾಗೆ ನೀಡಿದೆ.



ಗೋರ್ಖಾಲ್ಯಾಂಡ್ ಭೌಗೋಳಿಕ ಆಡಳಿತ ನಿರ್ವಹಣೆ ಕೇಂದ್ರದ ಕಟ್ಟಡ.

ಟಿಎಂಸಿ ಒಂದರಲ್ಲೂ ಸ್ಪರ್ಧಿಸುತ್ತಿಲ್ಲ. ಅನಿತ್ ಥಾಪಾ ನೇತೃತ್ವದ ಮಿತ್ರಪಕ್ಷ 'ಭಾರತೀಯ ಗೋರ್ಖಾ ಪ್ರಜಾತಾಂತ್ರಿಕ್ ಮೋರ್ಚಾ'ಗೆ (ಬಿಜಿಪಿಎಂ) ಡಾರ್ಜಿಲಿಂಗ್, ಕರ್ಸಿಯಾಂಗ್ ಮತ್ತು ಕಲಿಂಪಾಂಗ್ ಸೀಟುಗಳನ್ನು ಬಿಟ್ಟುಕೊಟ್ಟಿದೆ.

ಬಿಜೆಪಿ ಜತೆಗಿನ ಮೈತ್ರಿಕೂಟದ ಭಾಗವಾಗಿರುವ ಬಿಮಲ್ ಗುರುಂಗ್ ಮತ್ತವರ ಜಿಜೆಎಂ 2017ರಲ್ಲಿ ಬಹುದೊಡ್ಡ ಪ್ರತ್ಯೇಕ ಗೋರ್ಖಾಲ್ಯಾಂಡ್ ಆಂದೋಲನ ನಡೆಸಿದ್ದರು. ಅದು ಕೂಡ ಹಿಂಸಾ ಸ್ವರೂಪ ಪಡೆದುಕೊಂಡಿತ್ತು. ರಾಜ್ಯದ ಎಲ್ಲಾ ಜಿಲ್ಲೆಗಳ ಶಾಲೆಗಳಲ್ಲಿ ಬಂಗಾಳಿ ಭಾಷೆ ಕಡ್ಡಾಯಗೊಳಿಸುವ ಪಶ್ಚಿಮ ಬಂಗಾಳ ಸರಕಾರದ ತೀರ್ಮಾನವನ್ನು ಖಂಡಿಸಿ, ಬೆಟ್ಟದಲ್ಲಿ ಶುರುವಾದ ಆಂದೋಲನದಿಂದ ಅಶಾಂತಿ ನಿರ್ಮಾಣವಾಗಿ ಇಡೀ ಪ್ರದೇಶ ಸಂಪೂರ್ಣ ನಲುಗಿಹೋಗಿತ್ತು. 1986ರಲ್ಲಿ ಸುಭಾಷ್ ಘಿಸಿಂಗ್ ನೇತೃತ್ವದಲ್ಲಿ ಆಂದೋಲನ ನಡೆದಿದ್ದಾಗ ಸುಮಾರು 1,200 ಜನರು ಸಾವನ್ನಪ್ಪಿದ್ದರು. ಆ ಪ್ರಮಾಣದಲ್ಲಿ ಸಾವುಗಳು ಉಂಟಾಗದಿದ್ದರೂ, ಘಿಸಿಂಗ್ ಹೋರಾಟವನ್ನು 2017ರ ಹೋರಾಟ ನೆನಪಿಸಿತ್ತು.

ಡಾರ್ಜಿಲಿಂಗ್ ಮಾಲ್ ರೋಡ್ ಪಕ್ಕದಲ್ಲಿ ಬೆಳಗಿನ ಚುಮುಚುಮು ಚಳಿಯ ನಡುವೆಯೂ ಚಹಾ ಮಾರುತ್ತಿದ್ದ, 50 ವರ್ಷಗಳ ಹಿಂದೆ ಬಿಹಾರದ ಪಟನಾದಿಂದ ಡಾರ್ಜಿಲಿಂಗ್‌ಗೆ ವಲಸೆ ಬಂದು ಸ್ಥಳೀಯ ನಿವಾಸಿಯಾಗಿ ಬದಲಾಗಿರುವ ಸುರೇಂದ್ರ ಕುಮಾರ್, ''2017ರ ಹೋರಾಟದಲ್ಲಿ ಸಾವು–ನೋವುಗಳು ಉಂಟಾದಾಗ ಮಮತಾ ದೀದಿ ಇಲ್ಲಿಗೆ ಬಂದು ಜನರಿಗೆ ಸಾಂತ್ವನ ಹೇಳಿದ್ದರು. ಆದರೆ, ಕೇಂದ್ರದ ಬಿಜೆಪಿ ಸರಕಾರ ಏನು ಮಾಡಿತು? ನಮ್ಮವರ ಸಂಕಟ ಕೇಳಿತೇ? ಈಗ ಜಿಜೆಎಂ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿರಬಹುದು. ಆದರೆ, ಬಿಜೆಪಿಯಿಂದ ನಮಗೆ ಯಾವುದೇ ಭರವಸೆ ಇಲ್ಲ'' ಎಂದು ಅನಿತ್ ಥಾಪಾ ನೇತೃತ್ವದ ಪಕ್ಷಕ್ಕೆ ಬೆಂಬಲ ನೀಡುವುದಾಗಿ ತಿಳಿಸಿದರು.

ಐಟಿ ದಾಳಿ: ಕಿರುಕುಳದ ಯತ್ನ ಎಂದ ಟಿಎಂಸಿ

ಕೋಲ್ಕತ್ತ: ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆ 'ರಣಾಂಗಣ'ವಾಗಿ ಮಾರ್ಪಟ್ಟಿದೆ. ರಾಶ್ ಬೆಹಾರಿ ಕ್ಷೇತ್ರದ ಟಿಎಂಸಿ ಅಭ್ಯರ್ಥಿ ದೇಬಶೀಶ್ ಕುಮಾರ್ ಅವರ ಚುನಾವಣಾ ಕಚೇರಿ, ನಿವಾಸ ಮತ್ತು ಇತರ ಸ್ಥಳಗಳ ಮೇಲೆ ದಾಳಿ ನಡೆಸಿ ಅಲ್ಲಿ ಮುಂಜಾನೆ ಯಿಂದಲೇ

ಬೀಡುಬಿಟ್ಟಿರುವ ಐಟಿ ಅಧಿಕಾರಿಗಳ ತಂಡವು ತೀವ್ರ ಶೋಧದಲ್ಲಿ ನಿರತವಾಗಿದೆ. ಪಕ್ಷದ ಮತ್ತೋರ್ವ ನಾಯಕ ಮಿರಾಜ್ ಶಾ ಅವರ ನಿವಾಸ ಮತ್ತು ಇತರ ನೆಲೆ ಗಳಲ್ಲೂ ಶೋಧ ನಡೆಯುತ್ತಿದೆ. ದೇಬಶೀಶ್‌ರ ಆಪ್ತ ಸಹಾಯಕ ಮತ್ತು ಟಿಎಂಸಿಯ ಮತ್ತೊಬ್ಬ ನಾಯಕ ಕುಮಾರ್ ಸಹಾ ಅವರ ಕಾಲಿಘಾಟ್ ನಿವಾಸದ ಮೇಲೂ ಇಲಾಖೆಯ ಅಧಿಕಾರಿಗಳು ದಾಳಿ ಮಾಡಿದ್ದಾರೆ ಎನ್ನಲಾಗಿದೆ. ''ವಿಧಾನ ಸಭಾ ಚುನಾವಣೆಗೆ ಪೂರ್ವಭಾವಿಯಾಗಿ ಕೋಲ್ಕತ್ತಾದ ಉದ್ದಗಲಕ್ಕೂ ಅನೇಕ ಸ್ಥಳಗಳಲ್ಲಿ ಲೆಕ್ಕಕ್ಕೆ ಸಿಗದ ಹಣದ ಹರಿವನ್ನು ಪತ್ತೆಹಚ್ಚಲು ವ್ಯಾಪಕ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದ್ದು, ಅದರ ಭಾಗವಾಗಿ ಈ ದಾಳಿಗಳು ನಡೆದಿವೆ'' ಎಂದು ಐಟಿ ಇಲಾಖಾಧಿಕಾರಿಗಳು ಸಮರ್ಥನೆ ನೀಡಿದ್ದರೆ, ''ಐಟಿ ದಾಳಿಗಳನ್ನು ನಡೆಸುವ ಮೂಲಕ ಪಕ್ಷವನ್ನು ಬೆದರಿಸುವ, ಅಭ್ಯರ್ಥಿಗಳಿಗೆ ಕಿರುಕುಳ ನೀಡುವ ಯತ್ನ ಇದಾಗಿದೆ'' ಎಂದು ಟಿಎಂಸಿ ಆರೋಪಿಸಿದೆ. ಭೂವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಕುಮಾರ್ ಅವರಿಗೆ ಅನೇಕ ಬಾರಿ ಸಮನ್ಸ್ ಜಾರಿಮಾಡಿತ್ತು ಹಾಗೂ ಅವರು ವಿಚಾರಣೆಗೆ ಹಾಜರಾಗಿದ್ದರು ಎಂದು ತಿಳಿದುಬಂದಿದೆ. ಟಿಎಂಸಿಯ ನಾಯಕ ಜೈಪ್ರಕಾಶ್ ಮಜುಂದಾರ್ ಈ ಬೆಳವಣಿಗೆಯನ್ನು ಖಂಡಿಸುತ್ತಾ, ''ಈ ದಾಳಿಗಳಿಂದಾಗಿ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಅವರ ಸೇಡಿನ ಸ್ವಭಾವ ಬಯಲಾದಂತಾಗಿದೆ. ಚುನಾವಣೆಗೂ ಮುನ್ನ ಬಂಗಾಳದಲ್ಲಿ ಸಕ್ರಿಯವಾಗಿರುವ ಕೇಂದ್ರೀಯ ಸಂಸ್ಥೆಗಳು ಟಿಎಂಸಿ ಅಭ್ಯರ್ಥಿಗಳಿಗೆ ಕಿರುಕುಳ ನೀಡುವ, ಬೆದರಿಕೆ ಹಾಕುವ ಕಾರ್ಯಸೂಚಿಯಡಿ ಕೆಲಸ ಮಾಡುತ್ತಿವೆ. ಆದರೆ ಬಂಗಾಳದ ಜನರು ಬಿಜೆಪಿಯನ್ನು ಮತ್ತೆ ತಿರಸ್ಕರಿಸುತ್ತಾರೆ'' ಎಂದರು.

ತ.ನಾಡಿನ ಈ ಕ್ಷೇತ್ರಗಳಲ್ಲಿ ಕನ್ನಡಿಗರೇ ನಿರ್ಣಾಯಕರು

ಕೃಷ್ಣಗಿರಿ: ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣಾ ಅಖಾಡ ಕಳೆಗಟ್ಟುತ್ತಿದ್ದು, ಡಿಎಂಕೆ, ಎಐಡಿಎಂಕೆ ಮತ್ತು ಟಿವಿಕೆ ಪಕ್ಷಗಳು ತಮ್ಮದೇ ಆದ ಲೆಕ್ಕಾಚಾರದೊಂದಿಗೆ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿವೆ.

ಈ ಪೈಕಿ ಕೃಷ್ಣಗಿರಿ ಜಿಲ್ಲೆಯಲ್ಲಿ ಕೊಂಚ ಭಿನ್ನವಾದ ಚಿತ್ರಣ ಕಾಣುತ್ತಿರುವುದು ವಿಶೇಷ. ಕಾರಣ, ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಹೊಸೂರು ಮತ್ತು ಥಳಿ ಕ್ಷೇತ್ರಗಳು ಕರ್ನಾಟಕದ ಆನೇಕಲ್ ತಾಲೂಕಿನೊಂದಿಗೆ ತಮ್ಮ ಗಡಿಯನ್ನು ಹಂಚಿಕೊಂಡಿರುವುದರಿಂದ ಸಹಜವಾಗಿಯೇ ಇಲ್ಲಿ ವಿಶಿಷ್ಟ ತೆರನಾದ 'ಒಲ್ಮೆಕೆ' ಕಾಣಬರುತ್ತದೆ. ಅಂದರೆ, ಈ ಎರಡೂ ಕ್ಷೇತ್ರಗಳಲ್ಲಿ ಕನ್ನಡಿಗ ಮತದಾರರೇ 'ನಿರ್ಣಾಯಕ ಶಕ್ತಿ'ಯಾಗಿದ್ದು, ಅಭ್ಯರ್ಥಿಗಳ ಗೆಲುವಿನ ವಿಷಯದಲ್ಲಿ ಇವರು ಪ್ರಮುಖ ಪಾತ್ರ ವಹಿಸುತ್ತಾರೆ. ಹೀಗಾಗಿ, ಈ ಭಾಗದಲ್ಲಿ

ಸ್ಪರ್ಧಿಸುವ ಅಭ್ಯರ್ಥಿಗಳೂ ಬಹುತೇಕವಾಗಿ ಕನ್ನಡವನ್ನು ಬಲ್ಲವರೇ ಆಗಿರುತ್ತಾರೆ. ಜಾತಿವಾರು ನೆಲೆಗಟ್ಟಿನಲ್ಲಿ ಹೇಳುವುದಾದರೆ, ಥಳಿ ಕ್ಷೇತ್ರದಲ್ಲಿ ಲಿಂಗಾಯತರು, ಒಕ್ಕಲಿಗರು, ಕುರುಬರು ಹಾಗೂ ಪರಿಶಿಷ್ಟರು ಬಹುಸಂಖ್ಯಾತರಾಗಿದ್ದಾರೆ ಮತ್ತು ಇವರೆಲ್ಲರೂ ತಮ್ಮನ್ನು 'ಕನ್ನಡಿಗರು' ಎಂದೇ ಗುರುತಿಸಿಕೊಂಡು ಸಂಭ್ರಮಿಸುತ್ತಾರೆ. ಈ ಕ್ಷೇತ್ರದಲ್ಲಿ ಶೇ.60ರಷ್ಟು ಕನ್ನಡಿಗರು ನೆಲೆಯೂರಿರುವುದು ವಿಶೇಷ. ಹಾಲಿ ಶಾಸಕ ಟಿ. ರಾಮಚಂದ್ರನ್ ಅವರು ಸಿಪಿಎಂ ಪಕ್ಷದ ವತಿಯಿಂದ ಥಳಿ ಕ್ಷೇತ್ರದಿಂದ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಇವರಿಗೆ ಎದುರಾಗಿ ತೊಡೆ ತಟ್ಟಿರುವವರು ಬಿಜೆಪಿಯ ಡಾ. ಸಿ.ನಾಗೇಶ್. ಕಳೆದ ಚುನಾ ವಣೆಯಲ್ಲೂ ಈ ಇಬ್ಬರು ಸೆಣಸಿದ್ದರು. ಇಬ್ಬರಿಗೂ ಕನ್ನಡ ಚೆನ್ನಾಗಿ ಗೊತ್ತು, ಆದರೆ ಗೆಲುವಿನ ತಕ್ಕಡಿ ಯಾರ ಕಡೆಗೆ ವಾಲುತ್ತದೆ ಎಂಬುದು ಕುತೂಹಲದ ಸಂಗತಿ. ಏಕೆಂದರೆ ಸಿಪಿಎಂ ಮತ್ತು ಡಿಎಂಕೆ ಪಕ್ಷಗಳ ಸ್ಥಳೀಯ ನಾಯಕರು ಮತ್ತು ಕಾರ್ಯಕರ್ತರ ನಡುವೆ ಪರಸ್ಪರ ಹೊಂದಾಣಿಕೆಯ ಕೊರತೆ ಎದ್ದು ಕಾಣುತ್ತಿದೆ ಮತ್ತು ಈ ಪರಿಸ್ಥಿತಿಯನ್ನು ಸಂಭಾಳಿಸುವುದು ಸಿಪಿಎಂ ಅಭ್ಯರ್ಥಿ ಟಿ. ರಾಮ ಚಂದ್ರನ್ ಅವರಿಗೆ ಸವಾಲಾಗಿ ಪರಿಣಮಿಸಿದೆ. ಈ ಪರಿಸ್ಥಿತಿಯನ್ನು ಬಿಜೆಪಿಯ ಡಾ. ನಾಗೇಶ್ 'ಎನ್‌ಕ್ಯಾಶ್' ಮಾಡಿಕೊಂಡರೆ ಅವರಿಗೆ 'ಬಂಪರ್ ಬಹುಮಾನ' ಗ್ಯಾರಂಟಿ ಎನ್ನುತ್ತಾರೆ ಬಲ್ಲವರು.

ವಿಜಯಪಥದ ಹಿಂದಿವೆ ಹೆಜ್ಜೆಗುರುತುಗಳು ದಳಪತಿಗೆ ಒದಗಿದ ಸವಾಲು ಒಂದೆರಡಲ್ಲ...

ತಮಿಳು ಚಿತ್ರನಟ ವಿಜಯ್ ಅವರು 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಎಂಬ ಪಕ್ಷವನ್ನು ಹುಟ್ಟುಹಾಕಿ, ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ತಮ್ಮದೇ ಆದ ಛಾಪನ್ನೊತ್ತಲು ತವಕಿಸುತ್ತಿರುವುದು ಗೊತ್ತಿರುವ ಸಂಗತಿಯೇ. ಆದರೆ ಇದು ಏಕಾಏಕಿ ಆದ ಬೆಳವಣಿಗೆಯಲ್ಲ, ಇದರ ಹಿಂದೆ ಒಂದಷ್ಟು ಹೆಜ್ಜೆಗುರುತುಗಳಿವೆ.

ದೇಶದಲ್ಲಿ ಅತಿಹೆಚ್ಚು ಸಂಭಾವನೆ ಪಡೆಯುವ ಚಲನಚಿತ್ರ ತಾರೆಯರಲ್ಲಿ ಒಬ್ಬರೆನಿಸಿಕೊಂಡಿರುವ ವಿಜಯ್, ರಾಜಕಾರಣಕ್ಕೆ ಅಧಿಕೃತವಾಗಿ ಪದಾರ್ಪಣ ಮಾಡುವುದಕ್ಕೂ ಮುನ್ನ ಸುಮಾರು ಒಂದು ದಶಕದವರೆಗೆ 'ವಿಜಯ್ ಮಕ್ಕಳ್ ಇಯಕ್ಕಂ' (ವಿಎಂಐ) ಎಂಬ ಸಂಘಟನೆಯ ಮೂಲಕ ಸದ್ದಿಲ್ಲದೆ ಕೆಲಸ ಮಾಡಿದ್ದುಂಟು. ಇದೊಂದು ಸಮಾಜಸೇವಾ ಸಂಘಟನೆಯೂ ಹೌದು, 'ಫ್ಯಾನ್ ಕ್ಲಬ್' ಕೂಡ ಹೌದು. ಸ್ವತಂತ್ರ ಅಭ್ಯರ್ಥಿಗಳಾಗಿ ಗೆದ್ದಿರುವ 'ವಿಎಂಐ'ನ ನೂರಕ್ಕೂ ಹೆಚ್ಚು ಸದಸ್ಯರು ಈಗ ತಮಿಳುನಾಡಿನ ಉದ್ದ ಗಲಕ್ಕೂ ಕೌನ್ಸಿಲರ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂಬುದು ಗಮನಾರ್ಹ.

ಇಷ್ಟೂ ಅವಧಿಯಲ್ಲಿ, ಒಬ್ಬ 'ಜನರಂಜಕ'ನಾಗಿ ಮತ್ತು ನಿರ್ಮಾಪಕರ ಪಾಲಿನ 'ಎಟಿಎಂ' ಆಗಿ ವಿಜಯ್ ಬೆಳೆದಿದ್ದಾರೆ. ಜತೆಜತೆಗೆ ತಮಿಳಿನ ಸಾಮಾಜಿಕ ಮಾಧ್ಯಮ ವಲಯದಲ್ಲಿ ದೀರ್ಘ ಕಾಲದವರೆಗೆ ಪ್ರಾಬಲ್ಯ ಹೊಂದಿದ್ದ ಅಪಾರ ಅಭಿಮಾನಿಗಳ ನೆಲೆಯನ್ನೂ ನಿರ್ಮಿಸಿದ್ದಾರೆ.

ವಿಜಯ್‌ರ ಚುನಾವಣಾ ಚೊಚ್ಚಲ ಪ್ರವೇಶಕ್ಕೆ 'ಬೆಂಬಲದ ಸಂಪನ್ಮೂಲ' ಆಗಿರುವವರು ಈ ಕಟ್ಟಾಭಿಮಾನಿಗಳೇ. ಅವರಲ್ಲಿ ಕಿರಿ ವಯಸ್ಕ ಮತದಾರರು ಮತ್ತು ಮಹಿಳೆಯರ ಸಿಂಹಪಾಲಿದೆ.

2024ರ ಫೆಬ್ರವರಿಯಲ್ಲಿ ವಿಜಯ್ 'ಟಿವಿಕೆ' ಪಕ್ಷವನ್ನು ಪ್ರಾರಂಭಿಸಿದ್ದು ಹೌದಾದರೂ, ವಿಧಾನ ಸಭಾ ಚುನಾವಣೆಯ ಮೇಲಷ್ಟೇ ಗಮನವನ್ನು ಕೇಂದ್ರೀಕರಿಸಬೇಕೆಂಬ ಕಾರಣಕ್ಕೆ ಆ ವರ್ಷದ ಲೋಕಸಭಾ ಚುನಾವಣೆಗಳಿಂದ ಹೊರಗುಳಿದರು.

ತಮಿಳುನಾಡಿನಲ್ಲಿ ಮೂಲಭೂತ ರಾಜಕೀಯ ಬದಲಾವಣೆ ತರುವ ಭರವಸೆಯೊಂದಿಗೆ ಅವರ ರಾಜಕೀಯ ಪಯಣ ಶುರುವಾಯಿತು; ಆದರೆ ಪ್ರಮುಖ ಚರ್ಚಾವಿಷಯಗಳು ಮುನ್ನೆಲೆಗೆ ಬಂದಾಗ ಸಾರ್ವಜನಿಕವಾಗಿ ತೊಡಗಿಸಿಕೊಳ್ಳುವಲ್ಲಿ ಅವರು ಹಿಂದೇಟು ಹಾಕಿದ್ದು ಅಥವಾ ಮೌನವನ್ನು ಕಾಯ್ದುಕೊಂಡಿದ್ದು ಒಂದಿಷ್ಟು ಟೀಕೆಗೆ ಗುರಿಯಾಯಿತು. 2015ರ ಸೆಪ್ಟೆಂಬರ್ 27ರಂದು ಕರೂರಿನಲ್ಲಿ ಹಮ್ಮಿಕೊಳ್ಳಲಾದ ರ್‍ಯಾಲಿಯಲ್ಲಿ ಕಾಲ್ತುಳಿತಕ್ಕೆ ಸಿಲುಕಿ 41 ಮಂದಿ ಸಾವನ್ನು ಅಪ್ಪಿದ್ದು ವಿಜಯ್ ಅವರ ರಾಜಕೀಯ ಜೀವನಕ್ಕೆ ಒದಗಿದ ಒಂದು 'ಪರೋಕ್ಷ ಕಳಂಕ' ಎನಿಸಿಬಿಟ್ಟಿತು. ಏಕೆಂದರೆ, ಜನರೊಂದಿಗೆ ನಿಂತು ಆ ಸಂದರ್ಭಕ್ಕೆ ತಕ್ಕಂತೆ ಎದ್ದು ನಿಲ್ಲುವ ಬದಲು ವಿಜಯ್ ಬರೋಬ್ಬರಿ ಒಂದು ತಿಂಗಳವರೆಗೆ ಮೌನಕ್ಕೆ ಜಾರಿಬಿಟ್ಟರು. ಅವರ ಸಿನಿಮಾ ಜೀವನದ ಹಂಸಗೀತೆ ಎನ್ನಲಾಗುವ 'ಜನನಾಯಗನ್' ಚಲನಚಿತ್ರದ ಮೇಲೂ ಒಂದಿಷ್ಟು ಕರಾಳದೃಷ್ಟಿ ಬಿದ್ದಿದೆ. 'ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ'ಯಿಂದ (ಸಿಬಿಎಫ್‌ಸಿ) ಅನುಮತಿ ಪಡೆಯಲು ಅದಿನ್ನೂ ಶಬರಿಯಂತೆ ಕಾಯುತ್ತಿದೆ. ಕರೂರ್ ರ್‍ಯಾಲಿಯಲ್ಲಿ ಘಟಿಸಿದ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ಸಿಬಿಐ ವಿಚಾರಣೆಯನ್ನೂ ವಿಜಯ್ ಎದುರಿಸಬೇಕಾಗಿ ಬಂದಿದೆ.

ಇಷ್ಟಾಗಿಯೂ ಮೈ ಕೊಡವಿಕೊಂಡು ಎದ್ದಿರುವ ವಿಜಯ್, ಚೆನ್ನೈನ ಪೆರಂಬೂರು ಮತ್ತು ತಿರುಚಿರಾಪಳ್ಳಿ (ಪೂರ್ವ) ಎಂಬ ಎರಡು ಕ್ಷೇತ್ರಗಳಿಂದ ಸ್ಪರ್ಧಿಸುತ್ತಿದ್ದು, ತಮ್ಮ ಪ್ರಮುಖ 'ರಾಜಕೀಯ ಎದುರಾಳಿ' ಎಂದೇ ಪರಿಗಣಿಸಿರುವ ಡಿಎಂಕೆ ಪಕ್ಷದ ಭದ್ರಕೋಟೆಗಳಿಗೆ ತನ್ಮೂಲಕ ನೇರವಾಗಿ ಗುರಿಯಿಟ್ಟಿದ್ದಾರೆ. ರಾಜಕೀಯ ಸಾಗರದಲ್ಲಿ ಈಗಾಗಲೇ ಸಾಕಷ್ಟು ಈಜಿ ಅನುಭವವನ್ನು ದಕ್ಕಿಸಿಕೊಂಡಿರುವ 'ಹಳೆಯಹುಲಿ' ಡಿಎಂಕೆ ಪಕ್ಷವು ಈ ತಂತ್ರಕ್ಕೆ ಯಾವ ಪ್ರತಿತಂತ್ರವನ್ನು ಹೆಣೆಯಲಿದೆ ಎಂಬುದನ್ನು ಕುತೂಹಲದಿಂದ ಕಾದುನೋಡುವಂತಾಗಿದೆ.

₹416 ಕೋಟಿ ಮೌಲ್ಯದ ವಸ್ತು ವಶ

ಪಶ್ಚಿಮ ಬಂಗಾಳದಲ್ಲಿ ಎಣ್ಣೆ ಬೇಟೆ ಜೋರು!

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ ಚುನಾವಣಾ ಸಂಬಂಧಿತ ಚಟುವಟಿಕೆಗಳು ಚುರುಕುಗೊಂಡಿವೆ. ಅಗತ್ಯ ಸಿದ್ಧತೆಯ ಪರಿಶೀಲನೆಯನ್ನು ತೀವ್ರಗೊಳಿಸಿರುವ ಚುನಾವಣಾ ಆಯೋಗದ ಹಿರಿಯ ಅಧಿಕಾರಿ ಗಳು ರಾಜ್ಯದ ವಿವಿಧ ಜಿಲ್ಲೆಗಳಿಗೆ ತೆರಳಿ ಉನ್ನತಾಧಿಕಾರಿಗಳ ಸಭೆ ನಡೆಸಿದ್ದಾರೆ.

ಇನ್ನು, ಮಾರ್ಚ್ 15ರಂದು 'ಮಾದರಿ ನೀತಿ ಸಂಹಿತೆ' (ಎಂಸಿಸಿ) ಅನುಷ್ಠಾನಕ್ಕೆ ಬಂದ ನಂತರ ಅಕ್ರಮ ನಗದು ಮತ್ತು ಇತರ ನಿಷೇಧಿತ ವಸ್ತುಗಳನ್ನು ಗಣನೀಯ ಪ್ರಮಾಣದಲ್ಲಿ ವಶಪಡಿಸಿಕೊಳ್ಳಲಾಗಿದ್ದು, ಇವುಗಳ ಮೌಲ್ಯ ಸುಮಾರು 416 ಕೋಟಿ ರು.ನಷ್ಟಿದೆ ಎಂದು ತಿಳಿದುಬಂದಿದೆ. ಆಯೋಗದ ಅಧಿಕಾರಿಗಳು ಹೀಗೆ ವಶಪಡಿಸಿಕೊಂಡ ವಸ್ತುಗಳಲ್ಲಿ 19.73 ಕೋಟಿ ರು. ನಗದು, 78.40 ಕೋಟಿ ರು. ಮೌಲ್ಯದ ಮದ್ಯ, 95.75 ಕೋಟಿ ರು. ಮೌಲ್ಯದ ಮಾದಕ ವಸ್ತುಗಳು, 52.16 ಕೋಟಿ ರು. ಮೌಲ್ಯದ ಅಮೂಲ್ಯ ಲೋಹ ಗಳು ಹಾಗೂ 170 ಕೋಟಿ ರು.ಗೂ ಹೆಚ್ಚು ಮೌಲ್ಯದ ಉಚಿತ ಕೊಡುಗೆಗಳು ಸೇರಿವೆ ಎನ್ನಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ 18-04-2026 ಶನಿವಾರ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತವಿಹಾರ

ಅನುಭವದಲ್ಲಿ ಅಮೃತವಿದೆ...

● ರಂಗನಾಥ್ ಗುಡಿಮನಿ

ಮನುಷ್ಯನು ಅನುಭವಗಳ ಗಣಿ. ಅವನೊಳಗೆ ಜೀವನದ ಕುರಿತು ಅಪಾರ ಅನುಭವವಿದೆ. ಇದು ಕೇವಕ ನಾಲ್ಕಕ್ಷರಗಳ ಒಂದು ಪದವಲ್ಲ, ಬದಲಿಗೆ ಪ್ರತಿಯೊಬ್ಬರ ಜೀವನದ ದಿಕ್ಸೂಚಿಯೂ ಹೌದು. ಅನುಭವಿಗೆ ಜೀವನಾನುಭವ ಹಾಗೂ ಪ್ರತಿಯೊಂದು ಕ್ಷೇತ್ರಗಳ ಆಳ, ಅಗಲ ಎಲ್ಲವೂ ತಿಳಿದಿರುತ್ತದೆ. ಅದೇ ಅನನುಭವಿ ಮಾತ್ರ ಇವೆಲ್ಲದಕ್ಕೂ ತದ್ವಿರುದ್ಧ. ಅನುಭವ ಎನ್ನುವುದು ಒಂದು ಕಾಲಾತೀತ, ವರ್ಣನಾತೀತ ಸಂಗತಿ. ಅನುಭವ ಎಂದರೇನು? ಜೀವನದ ಘಟನೆಗಳು ಅಥವಾ ಪ್ರಕ್ರಿಯೆಗಳಲ್ಲಿ ನೇರವಾಗಿ ಪಾಲ್ಗೊಳ್ಳುವ ಮೂಲಕ ಗಳಿಸುವ ಪ್ರಾಯೋಗಿಕ ಜ್ಞಾನವೇ ಅನುಭವ. ಇದರಲ್ಲಿ ಜೀವನದ ಸಾರವಿದೆ, ಅಮೃತವಿದೆ. ಜೀವನವೇ ಒಂದು ಪಾಠಶಾಲೆ. ಇಂಥ ಶಾಲೆಯಲ್ಲಿ 'ಅನುಭವ' ಎನ್ನುವ ಅನರ್ಘ್ಯರತ್ನವು ನೀಡುವ ಪಾಠವು ಉಸಿರು ಇರುವವರೆಗೂ ಅವಿಸ್ಮರಣೀಯವಾಗಿರುತ್ತದೆ.

ಅನುಭವ ವಜ್ರದಂತೆ. ಇದು ಮನುಷ್ಯನ ಅತ್ಯಂತ ಅಪರೂಪದ ಹಾಗೂ ಬೆಲೆಬಾಳುವ ಅಗೋಚರ ಶಕ್ತಿ. ಜೀವನದ ಸುದೀರ್ಘ ಪಯಣದಲ್ಲಿ ಈ ಅನುಭವ ಹೇಳಿಕೊಡುವ ಪ್ರತಿಯೊಂದು ಬೋಧನೆಯೂ ನಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸಿ, ಪರಿಪೂರ್ಣತೆಯತ್ತ ಕೊಂಡೊಯ್ಯುತ್ತದೆ. ಅನುಭವ ಎನ್ನುವುದು ಒಂದು ನಿತ್ಯ ನಿರಂತರವಾದ ಪ್ರಕ್ರಿಯೆ. ಇದರ ಜ್ಞಾನದ ಮುಂದೆ ಉಳಿದೆಲ್ಲವೂ ನಗಣ್ಯ. ಅನುಭವದಿಂದ ಬಂದ ಜ್ಞಾನವು ನಮ್ಮ ಸ್ಮೃತಿಪಟಲದಲ್ಲಿ ಚಿರಸ್ಥಾಯಿಯಾಗಿದ್ದು, ನಮ್ಮನ್ನು ಒಳ್ಳೆಯ ಮಾರ್ಗಕ್ಕೆ ಕರೆದೊಯ್ಯುತ್ತದೆ. ಹಣ್ಣುಗಳು ಮಾಗಿದಂತೆ ರುಚಿ ಹೆಚ್ಚುತ್ತದೆ, ಅದೇ ಮನುಷ್ಯ ಮಾಗಿದಂತೆಲ್ಲ ಅನುಭವ ಇಮ್ಮಡಿಯಾಗುತ್ತದೆ. ಪುಸ್ತಕದ ಕಲಿಕೆಯು ಅಲ್ಪಕಾಲಿಕವಾದರೆ, ಅನುಭವದ ಕಲಿಕೆಯು ದೀರ್ಘಕಾಲಿಕ. ಇದು ಪುಸ್ತಕದ ಜ್ಞಾನಕ್ಕಿಂತ ಭಿನ್ನವಾದ ಪ್ರಾಯೋಗಿಕ ಕಲಿಕೆಯನ್ನು ಸೂಚಿಸುವುದು.

ಜಗತ್ತಿನ ಶ್ರೇಷ್ಠ ಅಧ್ಯಾಪಕ ಎಂದರೆ ಅನುಭವ. ಅದು ಇರುವಲ್ಲಿ ನಯ, ವಿನಯ ತುಂಬಿ ತುಳುಕುವುದು. ಜೀವನವೆಂದರೆ ಒಂದು ತರಗತಿಯ ದೊಡ್ಡ ಕೊಠಡಿ ಇದ್ದಂತೆ. ಅಲ್ಲಿ ಗಂಟೆ-ಗಂಟೆಗೊಂದು ಹೊಸ ಪಾಠ. ದಿನ-ದಿನಕ್ಕೊಂದು ಹೊಸ ಅನುಭವಗಳು ಸದ್ದಿಲ್ಲದೆ ಬಂದು ಹಾಜರಾಗುತ್ತವೆ. ಇಲ್ಲಿ ಬಂದೊದಗುವ ಕಷ್ಟ, ದುಃಖ, ನೋವು, ಸಂದಿಗ್ಧ ಪರಿಸ್ಥಿತಿಗಳನ್ನು ಅನುಭಗಳಿಂದ ಸಲೀಸಾಗಿ ಗೆದ್ದು ಬೀಗಬಹುದು. ಅನುಭವಿ ಸೋಲುವುದಿಲ್ಲ, ಮುಗ್ಗರಿಸುವುದಿಲ್ಲ. ಅನುಭವದ ತಾಕತ್ತು ತುಂಬಾ ಹಿರಿದು. ಅದಕ್ಕೇ ಹೇಳೋದು- 'ಅನುಭವಕ್ಕಿಂತ ದೊಡ್ಡ ಪಾಠ ಮತ್ತೊಂದಿಲ್ಲ' ಅಂತ. ಅನುಭವವೇ ಎಲ್ಲಕ್ಕಿಂತ ಶ್ರೇಷ್ಠವಾದುದು. ಜೀವನದ ಆಧಾರ, ನಿಜವಾದ ಶಿಕ್ಷಣವೇ ಅನುಭವವಾಗಿದೆ.

ಹನಿಗವನ

● ಎಚ್. ಪ್ರಹ್ಲಾದ ರಾವ್, ಬೆಂಗಳೂರು

ಲಿಯೋ ಪೋಪ, ಟ್ರಂಪ್ ಕೋಪ!

ಟ್ರಂಪಿಗ್ಯಾಕೆ ಇಷ್ಟು ಕೋಪ?
ಕ್ರೈಸ್ತ ಗುರು ಲಿಯೋ ಪೋಪ
ನ್ಯಾಯವಾಗಿ ಆಡಿದ ಮಾತಿಗೆ!
ಧರ್ಮವನ್ನೇನೂ ಪಡೆದಿಲ್ಲ
ಟ್ರಂಪು ಗುತ್ತಿಗೆಗೆ...
ಅರಿವಿಲ್ಲ ಟ್ರಂಪಿಗೆ ತನ್ನ ಲೋಪ
ಆತನ ಕಿವಿಗೆ ಕೇಳಿಸದೆ

ಆಧ್ಯಾತ್ಮಿಕತೆಯು ಪಲಾಯನ ಮಾರ್ಗವೇ? ಪ್ರತಿರೋಧವೇ?

ಆಧ್ಯಾತ್ಮಿಕತೆಯ ಎರಡು ಧಾರೆಗಳು

ಇತಿಹಾಸದಲ್ಲಿ ಆಧ್ಯಾತ್ಮಿಕತೆಯ ಎರಡು ಧಾರೆಗಳು ಕಾಣುತ್ತವೆ. ಒಂದು, ಜಗತ್ತನ್ನು ಮಾಯೆ ಎಂದು ತಳ್ಳಿ ದೂರ ಹೋಗುವ ಧಾರೆ. ಇನ್ನೊಂದು, ಜಗತ್ತಿನೊಳಗೆ ಉಳಿದು, ಜಾಗೃತಿಯಿಂದ ಬದುಕುವ ಧಾರೆ. ಮೊದಲನೆಯದು ಪಲಾಯನಕ್ಕೆ ದಾರಿ ಮಾಡುತ್ತದೆ. ಎರಡನೆಯದು ಪ್ರತಿರೋಧಕ್ಕೆ. ಜೀವನದ ಕಠಿಣ ಸತ್ಯಗಳಿಂದ ಭಯಗೊಂಡ ಮನಸ್ಸು ಆಧ್ಯಾತ್ಮಿಕತೆಯನ್ನು ಆಶ್ರಯಿ ಸುತ್ತದೆ. ಇದು ಪಲಾಯನ. ಸತ್ಯವನ್ನು ನೇರವಾಗಿ ನೋಡುವ ಧೈರ್ಯದಿಂದ ಆಧ್ಯಾತ್ಮಿಕತೆಯನ್ನು ಬಳಸುವ ನಿರ್ಭೀತ ಮನಸ್ಸು, ಪ್ರತಿರೋಧದ ಪ್ರತೀಕ. ಎರಡರ ನಡುವಿನ ವ್ಯತ್ಯಾಸ ಸೂಕ್ಷ್ಮ, ಆದರೆ ಪರಿಣಾಮದಲ್ಲಿನ ಅಂತರ ಗಣನೀಯವಾಗಿರುತ್ತದೆ. ಪಲಾಯನದ ಆಧ್ಯಾತ್ಮಿಕತೆ 'ಶಾಂತಿ'ಯನ್ನು ಹುಡುಕುತ್ತದೆ. ಪ್ರತಿರೋಧದ ಆಧ್ಯಾತ್ಮಿಕತೆ 'ಸತ್ಯ'ವನ್ನು ಹುಡುಕುತ್ತದೆ. ಶಾಂತಿ ಬೇಕೆನ್ನುವುದು ತಪ್ಪಲ್ಲ. ಆದರೆ ಸತ್ಯವಿಲ್ಲದ ಶಾಂತಿ, ನಿದ್ರೆಯಷ್ಟೇ. ಸತ್ಯದಿಂದ ಹುಟ್ಟುವ ಶಾಂತಿ, ಜಾಗೃತಿಯ ಫಲ.

● ಮಾಯಾ ಬಾಲಚಂದ್ರ, ಶ್ರೀನಿವಾಸಪುರ

ಯೋಗ, ಧ್ಯಾನ, ಶಾಸ್ತ್ರಾಧ್ಯಯನ, ಅಧ್ಯಾಪನ ಎಲ್ಲವೂ ವೈಯಕ್ತಿಕ ಶಾಂತಿಯ ಮಾರ್ಗವೋ? ಸಾಮಾಜಿಕ ಜಾಗೃತಿಯ ಶಕ್ತಿಯೋ? ಅಥವಾ ಎರಡನ್ನೂ ಬಿಟ್ಟು ಕಾಲಹರಣದ ಹಾಗೂ ಜವಾಬ್ದಾರಿಯಿಂದ ನುಣುಚಿಕೊಳ್ಳುವ ದಾರಿಯೋ? ಎನ್ನುವ ಪ್ರಶ್ನೆ ಯಾವತ್ತೂ ಸಮಾಜದ ಮುಂದಿದೆ. ಅಂದಂದಿನ ಸನ್ನಿವೇಶಗಳಿಗೆ ತಕ್ಕಂತೆ ಉತ್ತರ ಪಡೆಯುವ ಪ್ರಯತ್ನವೂ ನಡೆದೇ ಇದೆ.

ಇಂದಿನ ಜಗತ್ತು ವಿಚಿತ್ರ ವಿರೋಧಾಭಾಸದ ಮೇಲೆ ನಿಂತಿದೆ. ಹೊರಗೆ ಅತಿವೇಗ, ಒಳಗೆ ಅತಿ ಖಾಲಿತನ. ಮಾಹಿತಿ ಅತಿರೇಕ, ಆದರೆ ಅರ್ಥದ ಕೊರತೆ. ಸಂಪರ್ಕಗಳ ಹೆಚ್ಚಳ, ಆದರೆ ಸಂಬಂಧಗಳ ಕ್ಷೀಣತೆ. ಈ ಸಂದರ್ಭದಲ್ಲಿ 'ಆಧ್ಯಾತ್ಮಿಕತೆ' ಎಂಬ ಪದ ಎರಡು ವಿರುದ್ಧ ಅರ್ಥಗಳಲ್ಲಿ ಕೇಳಿಸುತ್ತದೆ, ಒಂದು- ಜೀವನದಿಂದ ಪಲಾಯನ, ಮತ್ತೊಂದು- ಜೀವನದ ಕಠಿಣ ಸತ್ಯವನ್ನು ಎದುರಿಸುವ ಶಕ್ತಿ. ಹೀಗಾದರೆ, ಆಧ್ಯಾತ್ಮಿಕತೆ ಪಲಾಯನವೋ? ಪ್ರತಿರೋಧವೋ? ಅದು ವೈಯಕ್ತಿಕ ಶಾಂತಿಗೋ? ಅಥವಾ ಸಾಮಾಜಿಕ ಜಾಗೃತಿಗೋ? ಈ ಪ್ರಶ್ನೆಗೆ ಉತ್ತರ ಹುಡುಕಲು ತತ್ವಶಾಸ್ತ್ರ, ಮನೋವಿಜ್ಞಾನ ಮತ್ತು ಆಧುನಿಕ ವಿಜ್ಞಾನ ಈ ಮೂರರ ನಡುವೆ ಸಂವಾದ ಅಗತ್ಯ.

ಒಳಗಿನ ಶಾಂತಿಯೇ, ಜಾಗೃತಿಯೇ?

ಯೋಗ ಮತ್ತು ಧ್ಯಾನವನ್ನು ಇಂದು 'ಸ್ಟ್ರೆಸ್ ರಿಲೀಫ್' ತಂತ್ರವಾಗಿ ಮಾತ್ರ ನೋಡಲಾಗುತ್ತಿದೆ. ಇವನ್ನು, ಕೆಲಸದ ಒತ್ತಡ/ಆತಂಕವನ್ನು ಕಡಿಮೆ ಮಾಡಲು, ನಿದ್ರೆ ಸುಧಾರಿಸಲು ಇರುವ ಸಿದ್ಧ ಸೂತ್ರ ಎನ್ನುವ ನಿಟ್ಟಿನಲ್ಲಿ ಬಿಂಬಿಸಲಾಗುತ್ತಿದೆ. ಇದು ಯೋಗದ ಒಂದು ಭಾಗ ಮಾತ್ರ. ಯೋಗದ ಮೂಲ ಉದ್ದೇಶ, ಮನಸ್ಸಿನ ಯಾಂತ್ರಿಕತೆಯನ್ನು ಗುರುತಿಸುವುದು. ಮನೋವಿಜ್ಞಾನ ಹೇಳುವ ಪ್ರಕಾರ, ಮಾನವನ ಮನಸ್ಸು ಬಹುತೇಕ ಸ್ವಯಂಚಾಲಿತ ಪ್ರತಿಕ್ರಿಯೆಗಳ ಮೂಲಕ ಕಾರ್ಯ ನಿರ್ವಹಿಸುತ್ತದೆ. ಕೋಪ, ಭಯ, ಅಸೂಯೆ, ಆಸೆ ಇವು ಯೋಚನೆಯಿಲ್ಲದೆಯೂ ಉಂಟಾಗುತ್ತವೆ. ಧ್ಯಾನವು ಈ ಸ್ವಯಂಚಾಲಿತತೆಯನ್ನು ತಡೆಯುತ್ತದೆ. ಇದು, ಪ್ರತಿಕ್ರಿಯೆ ಮತ್ತು ಜಾಗೃತಿಯ ನಡುವೆ ಒಂದು ವಿರಾಮವನ್ನು ಸೃಷ್ಟಿಸುತ್ತದೆ. ಈ ವಿರಾಮವೇ ಪ್ರತಿರೋಧದ ಆರಂಭ.

ಕೋಪ ಬಂದಾಕ್ಷಣ ಪ್ರತಿಕ್ರಿಯಿಸುವುದು ಅಜಾಗೃತಿಯ ಲಕ್ಷಣ. ಕೋಪವನ್ನು ಗಮನಿಸುವುದು ಜಾಗೃತಿಯ ಲಕ್ಷಣ. ಈ ಜಾಗೃತಿ ವೈಯಕ್ತಿಕ ಶಾಂತಿಗೆ ಮಾತ್ರವಲ್ಲ, ಸಾಮಾಜಿಕ ಸಂಬಂಧಗಳ ಮೇಲೂ ಪರಿಣಾಮ ಬೀರುತ್ತದೆ. ಅಜಾಗೃತ ವ್ಯಕ್ತಿಯಿಂದ ಸಂಘರ್ಷ ಹೆಚ್ಚುತ್ತದೆ. ಜಾಗೃತ ವ್ಯಕ್ತಿಯಿಂದ ಸಂಘರ್ಷ ಕೊನೆಗೊಳ್ಳುತ್ತದೆ. ಹೀಗಾಗಿ, ಯೋಗ-ಧ್ಯಾನ ವ್ಯಕ್ತಿಯನ್ನು ಮಾತ್ರವಲ್ಲದೆ ಸಮಾಜದ ಗುಣಮಟ್ಟವನ್ನೂ ಬದಲಿಸುತ್ತವೆ. ಎಷ್ಟೋ ಬಾರಿ ಘಟನೆಗಳು/ವಿಚಾರಗಳು ಸಮಸ್ಯೆ ಎನಿಸುವುದು ನಮ್ಮ ಚಿಂತನಶೈಲಿಯ ಮೂಲಕವೇ. ಯಾವುದೇ ಸಂದರ್ಭ ಸನ್ನಿವೇಶಗಳನ್ನು ಅದಿದ್ದಂತೆಯೇ ಅರ್ಥೈಸಿ ಪರಿಹಾರ ಕಂಡುಕೊಳ್ಳುವ ಪ್ರಜ್ಞೆಯನ್ನು ಇಂದಿನ ಸಮಾಜ ಕಳೆದುಕೊಳ್ಳುತ್ತಿದೆ. ಸಣ್ಣ ವಿಷಯವನ್ನು ದೊಡ್ಡ ದೊಡ್ಡ ಸಮಸ್ಯೆಗಳೆಂದು ಪರಿಗಣಿಸಿ, ಅವುಗಳನ್ನೇ ಬೃಹತ್ತಾಗಿ ಬೆಳೆಸಿ, ಮಾಧ್ಯಮಗಳಲ್ಲಿ ಹಂಚಿಕೊಳ್ಳುವುದು, ಬರಹಗಳ ಮೂಲಕ ವ್ಯಕ್ತಪಡಿಸುವುದು ನಡೆದೇ ಇದೆ. ಟಿಆರ್‌ಪಿ ಸಹ ಅಂಥದ್ದಕ್ಕೇ. ಸಮಾಜಕ್ಕೆ ಅಗತ್ಯವಿರುವುದು, ಸಮಸ್ಯೆಯನ್ನು ತಿಳಿಯಾಗಿಸಿ ಹಗುರಗೊಳ್ಳುವಿಕೆಯೇ ಹೊರತು, ಅದನ್ನು ಗಾಢವಾಗಿಸಿ, ಹೊರೆಯಾಗಿಸಿಕೊಳ್ಳುವುದಲ್ಲ. ಇಲ್ಲಿಯೂ ವಿರೋಧಾಭಾಸವೇ ಕಾಣುತ್ತದೆ. ಸಮಾಜದ ಅವಶ್ಯಕತೆಗೆ ವಿರುದ್ಧವಾಗಿ, ಸಮೂಹಗಳು ಟಿಆರ್‌ಪಿಗೆ ಕಾರಣವಾಗುತ್ತವೆ. ಸಮೂಹ ಮಾನಸಿಕತೆಯಲ್ಲಿ ಆಧ್ಯಾತ್ಮಿಕ ಪ್ರಜ್ಞೆ ಜಾಗೃತವಾದಾಗ, ಸಮಾಜವೂ ನೆಮ್ಮದಿಯ ನಡೆ ಕಾಣಬಹುದು.

ಧ್ಯಾನ ಮತ್ತು ಮಿದುಳಿನ ಪರಿವರ್ತನೆ

ಆಧ್ಯಾತ್ಮಿಕತೆ ಕೇವಲ ನಂಬಿಕೆ ಅಲ್ಲ, ಇತ್ತೀಚಿನ ವಿಜ್ಞಾನ ಅದನ್ನು ಅಧ್ಯಯನ ಮಾಡುತ್ತಿದೆ. ನರವಿಜ್ಞಾನ (Neuroscience) ಹೇಳುವ ಪ್ರಕಾರ, ಧ್ಯಾನ ಮಿದುಳಿನ ರಚನೆಯನ್ನು ಬದಲಿಸುತ್ತದೆ. ನಿಯತ ಧ್ಯಾನದಿಂದ ಭಯ ಮತ್ತು ಆತಂಕಕ್ಕೆ ಸಂಬಂಧಿಸಿದ 'ಅಮಿಗ್ಡಾಲಾ ಚಟುವಟಿಕೆ' ಕಡಿಮೆಯಾಗುತ್ತದೆ. ಗಮನ ಮತ್ತು ನಿರ್ಣಯಕ್ಕೆ ಸಂಬಂಧಿಸಿದ 'ಪ್ರಿ-ಫ್ರಂಟಲ್ ಕಾರ್ಟೆಕ್ಸ್' ಸಕ್ರಿಯವಾಗುತ್ತದೆ. ಇದರಿಂದ ವ್ಯಕ್ತಿ ಹೆಚ್ಚು ಜಾಗೃತನಾಗಿ, ಸಮತೋಲನದ ನಿರ್ಣಯಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಇನ್ನೊಂದು ಮಹತ್ವದ ವಿಚಾರ ಎಂದರೆ, ಧ್ಯಾನವು ಸಹಾನುಭೂತಿಯನ್ನು ಹೆಚ್ಚಿಸು ತ್ತದೆ. ಕೆಲವು ಅಧ್ಯಯನಗಳು "ಧ್ಯಾನ ಮಾಡುವವರಲ್ಲಿ 'ಮಿರರ್ ನ್ಯೂರಾನ್' ಚಟುವಟಿಕೆ ಹೆಚ್ಚಾಗುತ್ತದೆ" ಎಂದು ಸಾಬೀತುಪಡಿಸಿವೆ. ಅಂದರೆ, ಇಂಥವರಲ್ಲಿ, ಇತರರ ನೋವನ್ನು ಹೆಚ್ಚು ಸ್ಪಷ್ಟವಾಗಿ ಅನುಭವಿಸುವ ಸಾಮರ್ಥ್ಯ ಬೆಳೆಯುತ್ತದೆ. ಇದು ಸಾಮಾಜಿಕ ಜಾಗೃತಿಯ ಮೂಲ. ಹೀಗಾಗಿ, ಧ್ಯಾನವು ವ್ಯಕ್ತಿಯನ್ನು 'ಸ್ವಾರ್ಥಯುತ ಶಾಂತಿ'ಯತ್ತ ಅಲ್ಲ, 'ಸಹಾನುಭೂತಿಯ ಜಾಗೃತಿ'ಯತ್ತ ಕರೆದೊಯ್ಯುತ್ತದೆ.

ಆಧ್ಯಾತ್ಮಿಕತೆಯಿಂದ ಸಾಮಾಜಿಕ ಜವಾಬ್ದಾರಿಯೆಡೆಗೆ

ಆಧ್ಯಾತ್ಮಿಕತೆಯನ್ನು ವೈಯಕ್ತಿಕ ಮೋಕ್ಷದ ಸಾಧನವಾಗಿ ಮಾತ್ರ ನೋಡಿದರೆ ಅದು ಪಲಾಯನವಾಗಬಹುದು. ಆದರೆ ಜಾಗೃತಿಯನ್ನು ಬದುಕಿನ ಕೇಂದ್ರವಾಗಿ ನೋಡಿದರೆ, ಅದು ಸಾಮಾಜಿಕ ಜವಾಬ್ದಾರಿಯತ್ತ ಕರೆದೊಯ್ಯುತ್ತದೆ. ಜಾಗೃತ ವ್ಯಕ್ತಿ ಅನ್ಯಾಯವನ್ನು ಗುರುತಿಸುತ್ತಾನೆ. ಅಜಾಗೃತ ವ್ಯಕ್ತಿ ಅದಕ್ಕೆ ಹೊಂದಿಕೊಳ್ಳುತ್ತಾನೆ. ಧ್ಯಾನ ಮಾಡಿದ ಮನಸ್ಸು ನೋವನ್ನು ತಪ್ಪಿಸಲು ಪ್ರಯತ್ನಿಸುವುದಿಲ್ಲ, ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಅರ್ಥಮಾಡಿಕೊಳ್ಳುವ ಮನಸ್ಸು ಪ್ರತಿರೋಧಿಸುತ್ತದೆ. ಆ ಪ್ರತಿರೋಧವು ಆಕ್ರೋಶದಿಂದ ಹುಟ್ಟಿ, ಆಕ್ರಮಣಕಾರಿಯಾಗಿ ವರ್ತಿಸಿ, ತಾತ್ಕಾಲಿಕವಾಗಿ ಪ್ರತಿಕ್ರಿಯಿಸಿ, ಪರಿಹಾರ ಕಾಣುವ ಮೊದಲೇ ನಿಷ್ಕ್ರಿಯವಾಗಿಬಿಡುವುದಲ್ಲ, ಬದಲಿಗೆ, ಜಾಗೃತಿಯಿಂದ ಮೂಡಿ, ಪ್ರಜ್ಞಾಪೂರ್ವಕವಾಗಿ ಸ್ಪಂದಿಸಿ, ಪರಿಹಾರ ಪಡೆದುಕೊಳ್ಳುವವರೆಗೂ ಸಕ್ರಿಯ ವರ್ತನೆ ಇರುತ್ತದೆ. ಇದು ಅಹಿಂಸಾತ್ಮಕ ಪ್ರತಿರೋಧದ ಮೂಲ.

ಇತಿಹಾಸದಲ್ಲಿ ಹಲವಾರು ಸಾಮಾಜಿಕ ಪರಿವರ್ತನೆಗಳು ಒಳಗಿನ ಜಾಗೃತಿಯಿಂದ ಹುಟ್ಟಿವೆ. ಒಳಗಿನ ಶಾಂತಿ ಹೊರಗಿನ ಕ್ರಿಯೆಯನ್ನು ತಡೆಯುವುದಿಲ್ಲ. ಬದಲಿಗೆ, ಅದನ್ನು ಸ್ಪಷ್ಟಗೊಳಿಸುತ್ತದೆ. ಅಶಾಂತ ಮನಸ್ಸಿನ ಮೊದಲ ಕ್ರಿಯೆ ಎಂದರೆ, ಅದು ಪ್ರತಿಕ್ರಿಯೆ. ಜಾಗೃತ ಮನಸ್ಸಿನ ಕ್ರಿಯೆ ಎಂದರೆ, ಅದು ಪ್ರತಿಸ್ಪಂದನೆ. ಪ್ರತಿಕ್ರಿಯೆ ತ್ವರಿತವಾಗಿ, ವಿವೇಚನೆಯಿಂದ ದೂರವಾಗಿ ವ್ಯಕ್ತವಾಗಿಬಿಡುತ್ತದೆ. ಪ್ರತಿಸ್ಪಂದನೆ ಜಾಗೃತ ಮನಸ್ಸಿನಲ್ಲಿ ಮೂಡಿ, ವಿವೇಚನೆಯಿಂದ ಶೋಧಿಸಲ್ಪಟ್ಟು, ಸಾವಧಾನವಾಗಿ ಹೊರಹೊಮ್ಮುತ್ತದೆ. ಮೊದಲನೆಯದು ಸಂಘರ್ಷವನ್ನು ಹೆಚ್ಚಿಸಿದರೆ, ಎರಡನೆಯದು ಪರಿವರ್ತನೆಯನ್ನು ತರಿಸುತ್ತದೆ.

ಯೋಗ-ಧ್ಯಾನ, ಶಾಸ್ತ್ರಾಧ್ಯಯನ, ಮನನ, ನಿಧಿಧ್ಯಾಸನಗಳು ಈ ಪ್ರತಿಸ್ಪಂದನೆಯ ಸಾಮರ್ಥ್ಯವನ್ನು ಬೆಳೆಸುತ್ತವೆ. ಆಧ್ಯಾತ್ಮಿಕತೆಯು ಒಳಗಿನ ಕ್ರಾಂತಿ. ಸಾಮಾಜಿಕ ಬದಲಾವಣೆ ಹೊರಗಿನಿಂದ ಮಾತ್ರ ಸಾಧ್ಯವಿಲ್ಲ. ಒಳಗಿನ ಅಜಾಗೃತಿಯ ಮೇಲೆ ಆಧರಿಸಿದ ಹೊರಗಿನ ಕ್ರಾಂತಿ, ನಾಶಕ್ಕೆ ಕಾರಣವಾಗುತ್ತದೆ. ಒಳಗಿನ ಜಾಗೃತಿಯ ಮೇಲೆ ನಿಂತ ಕ್ರಾಂತಿ ಮಾತ್ರ ದೀರ್ಘಕಾಲಿಕ ಪರಿವರ್ತನೆ ತರುತ್ತದೆ. ಆಧ್ಯಾತ್ಮಿಕತೆ ಈ ಒಳಗಿನ ಕ್ರಾಂತಿಯ ಬೀಜ. ಅದು ವ್ಯಕ್ತಿಯನ್ನು ಭಯದಿಂದ ಮುಕ್ತಗೊಳಿಸುತ್ತದೆ. ಭಯವಿಲ್ಲದ ಮನಸ್ಸು ಮಾತ್ರ ಸತ್ಯವನ್ನು ಹೇಳುತ್ತದೆ. ಸತ್ಯ ಹೇಳುವ ಮನಸ್ಸು ಮಾತ್ರ ಅನ್ಯಾಯವನ್ನು ಎದುರಿಸುತ್ತದೆ. ಹೀಗಾಗಿ, ಆಧ್ಯಾತ್ಮಿಕತೆ ಪಲಾಯನವಲ್ಲ, ಅದು ಪ್ರತಿರೋಧದ ಆಂತರಿಕ ಶಕ್ತಿ.

ಆಧ್ಯಾತ್ಮಿಕತೆ ಜೀವನದಿಂದ ದೂರ ಓಡುವ ಮಾರ್ಗವಲ್ಲ, ಅದು ಜೀವನವನ್ನು ಸ್ಪಷ್ಟವಾಗಿ ನೋಡುವ ದೃಷ್ಟಿ. ಅದು, ವೈಯಕ್ತಿಕ ಶಾಂತಿಗೆ ಮಾತ್ರ ಸೀಮಿತವಲ್ಲ, ಜತೆಗೆ ಸಾಮಾಜಿಕ ಜಾಗೃತಿಯ ಬೀಜವೂ ಹೌದು. ಒಳಗಿನ ಮೌನ ಹೊರಗಿನ ನಿರ್ಲಿಪ್ತತೆಯಲ್ಲ, ಅದು ಜಾಗೃತ ಕ್ರಿಯೆಯ ಮೂಲ. ಪಲಾಯನದ ಆಧ್ಯಾತ್ಮಿಕತೆ ವ್ಯಕ್ತಿಯನ್ನು ಸಮಾಜದಿಂದ ದೂರ ಮಾಡುತ್ತದೆ. ಪ್ರತಿರೋಧದ ಆಧ್ಯಾತ್ಮಿಕತೆ ವ್ಯಕ್ತಿಯನ್ನು ಸಮಾಜದ ಮಧ್ಯದಲ್ಲೇ ಜಾಗೃತಗೊಳಿಸುತ್ತದೆ. ಅಜಾಗೃತ ಮನಸ್ಸಿನಲ್ಲಿ ಆಧ್ಯಾತ್ಮಿಕತೆಯು 'ಪಲಾಯನ'ವಾದರೆ, ಜಾಗೃತ ಮನಸ್ಸಿನಲ್ಲಿ ಆಧ್ಯಾತ್ಮಿಕತೆಯು 'ಪ್ರತಿರೋಧ'ವಾಗುತ್ತದೆ. ಆಧ್ಯಾತ್ಮಿಕತೆ ನಿದ್ರೆಗಾಗಿ ಅಲ್ಲ, ಎಚ್ಚರದ ಸ್ಥಿತಿಗೆ. ಶಾಂತಿಗೆ ಮಾತ್ರವಲ್ಲ ಸತ್ಯಕ್ಕೂ ಹೌದು. ವೈಯಕ್ತಿಕ ನೆಮ್ಮದಿಗಷ್ಟೇ ಅಲ್ಲ ಸಾಮಾಜಿಕ ಜಾಗೃತಿಗೂ ಹೌದು. ಆಧ್ಯಾತ್ಮಿಕತೆಯು ಜೀವನದಿಂದ ದೂರ ಹೋಗುವುದಲ್ಲ, ಜೀವನವನ್ನು ಸಂಪೂರ್ಣವಾಗಿ ಅದಿದ್ದಂತೆಯೇ ಎದುರಿಸುವ ಧೈರ್ಯ ಹೊಂದುವುದು.

ಮನೋವೈಜ್ಞಾನಿಕ ಆಯಾಮ

ಆಧ್ಯಾತ್ಮಿಕತೆಯನ್ನು ಕೇವಲ ಧಾರ್ಮಿಕ ಆಚರಣೆ ಅಥವಾ ನಂಬಿಕೆಯ ಕ್ಷೇತ್ರಕ್ಕೆ ಸೀಮಿತಗೊಳಿಸುವುದು ಇಂದು ಸಾಕಾಗುವುದಿಲ್ಲ, ಆಧುನಿಕ ಮನೋವಿಜ್ಞಾನವು ಅದನ್ನು ಮಾನವನ ಮನಸ್ಸಿನ ಆಳದ ರಚನೆ, ಅನುಭವ ಮತ್ತು ಪರಿವರ್ತನೆಯ ಪ್ರಕ್ರಿಯೆಯಾಗಿ ನೋಡಲು ಪ್ರಾರಂಭಿಸಿದೆ. 'ಆಧ್ಯಾತ್ಮಿಕತೆ' ಎನ್ನುವುದು ಈಗ, ವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಿಸಬಹುದಾದ ಒಂದು ಮಾನಸಿಕ ಸ್ಥಿತಿ. ಅದನ್ನು, ಚೇತನದ ಜಾಗೃತಿಯ ದಾರಿ ಎಂದು ಪರಿಗಣಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಆಧ್ಯಾತ್ಮಿಕತೆಯನ್ನು ಆಧುನಿಕ ಮನೋವಿಜ್ಞಾನದ ನಾಲ್ಕು ಪ್ರಮುಖ ಅಕ್ಷಗಳಲ್ಲಿ ಗುರುತಿಸಬಹುದು: ಅಹಂ (Ego) ಮತ್ತು ಆತ್ಮಗುರುತು, ಜಾಗೃತಿ (Awareness) ಮತ್ತು ಮನಸ್ಸಿನ ಕಾರ್ಯವಿಧಾನ, ನೋವು (Suffering) ಮತ್ತು ಅದರ ರೂಪಾಂತರ, ಅರ್ಥ (Meaning) ಮತ್ತು ಬದುಕಿನ ಗುರಿ. ನಾವು 'ನಾನು' ಎಂದು ಭಾವಿಸುವುದು ನಿರಂತರ ಬದಲಾಗುವ ಕಥನ (narrative self) ಎನ್ನುತ್ತವೆ ಸಂಶೋಧನೆಗಳು. ಧ್ಯಾನ ಈ ಕಥನವನ್ನು ಮುರಿಯುತ್ತದೆ. ಈ ಅರಿವು, ಅಹಂಕಾರವನ್ನು ಕಡಿಮೆ ಮಾಡುತ್ತದೆ. ಇದನ್ನು Ego transcendence ಎಂದು ಕರೆಯಲಾಗುತ್ತದೆ. ಧ್ಯಾನ ಮನಸ್ಸನ್ನು 'ಈ ಕ್ಷಣಕ್ಕೆ' ತರುತ್ತದೆ. ಇದು Mindfulness ಎಂಬ ಮನೋವೈಜ್ಞಾನಿಕ ತತ್ವದ ಮೂಲ. Mindfulness ಎಂದರೆ, "ನಿಷ್ಪಕ್ಷಪಾತವಾಗಿ, ಈ ಕ್ಷಣದ ಅನುಭವವನ್ನು ಗಮನಿಸುವ ಸಾಮರ್ಥ್ಯ". Mindfulness ಅಭ್ಯಾಸದಿಂದ Default Mode Network (DMN) ಚಟುವಟಿಕೆ ಕಡಿಮೆಯಾಗುತ್ತದೆ. ಇದು self-referential thinking ('ತನ್ನ' ಬಗ್ಗೆ ನಿರಂತರ ಯೋಚನೆ) ಅನ್ನು ತಗ್ಗಿಸುತ್ತದೆ. ಇದರಿಂದ ಭಾವನಾತ್ಮಕ ನಿಯಂತ್ರಣ ಸುಧಾರಿಸುತ್ತದೆ. ಇದು ಶಾಂತಿಯೊಂದಿಗೆ, 'ಜಾಗೃತ ಮನಸ್ಸನ್ನು' ನಿರ್ಮಿಸುತ್ತದೆ. ಅಹಂ ಅನ್ನು ಪ್ರಶ್ನಿಸಿ, ಜಾಗೃತಿಯನ್ನು ಹೆಚ್ಚಿಸಿ, ನೋವನ್ನು ರೂಪಾಂತರಗೊಳಿಸುತ್ತದೆ. ಬದುಕಿಗೆ ಅರ್ಥ ನೀಡುತ್ತದೆ. ಮುಖ್ಯವಾಗಿ, ಇದು ವ್ಯಕ್ತಿಯನ್ನು reactive mindನಿಂದ responsive mindಗೆ ಪರಿವರ್ತಿಸುತ್ತದೆ. ಹಾಗಾಗಿ, ಆಧ್ಯಾತ್ಮಿಕತೆ ಮನಸ್ಸಿನ ದುರ್ಬಲತೆಯ ಫಲವಲ್ಲ, ಅದು ಮನಸ್ಸಿನ ಪರಿಪಕ್ವತೆಯ ಲಕ್ಷಣ. ಮನೋವಿಜ್ಞಾನದ ಪ್ರಕಾರ, ಅಜಾಗೃತ ಮನಸ್ಸು ಪಲಾಯನ ಮಾಡಿದರೆ, ಜಾಗೃತ ಮನಸ್ಸು ಎದುರಿಸುತ್ತದೆ. ಆಧ್ಯಾತ್ಮಿಕತೆ ಈ ಜಾಗೃತಿಯ ಮಾರ್ಗ. ಅದು ಸಮಸ್ಯೆಗಳಿಂದ ದೂರ ಹೋಗುವುದಲ್ಲ, ಸಮಸ್ಯೆಗಳೊಂದಿಗೆ ಹೊಸ ಸಂಬಂಧ ನಿರ್ಮಿಸುವ ಕಲೆ. ಆಧ್ಯಾತ್ಮಿಕತೆಯು, 'ನಾನು ಯಾರು?' ಎಂಬ ಪ್ರಶ್ನೆಯಿಂದ ಆರಂಭಗೊಂಡು, 'ನಾನು ಮಾತ್ರವಲ್ಲ' ಎಂಬ ಅರಿವಿನಲ್ಲಿ ಮುಗಿಯುತ್ತದೆ....

ಕೃತಜ್ಞತೆಯ ಭಾವ ಇರಲಿ...

● ಮಹಾದೇವ ಬಸರಕೋಡ

ಕೃತಜ್ಞತೆಯು ಮನುಷ್ಯನ ಬದುಕಿನಲ್ಲಿ ಮಹತ್ತರ ಪಾತ್ರವಹಿಸುವ ಒಂದು ಸದ್ಗುಣವಾಗಿದೆ. ಅದು ನಮ್ಮೊಳಗೆ ಅಂತರ್ಗತವಾಗಿರುವ ಒಳ್ಳೆಯತನದ ಪ್ರತೀಕವಾಗಿದೆ. ಕೃತಜ್ಞತೆಯು ನಿತ್ಯಜೀವನದಲ್ಲಿ ಸಮಾಧಾನವನ್ನು ನೀಡುವ, ಸಂತೋಷವನ್ನು ನೂರ್ಮಡಿಗೊಳಿಸುವ, ಒತ್ತಡವನ್ನು ದೂರಕ್ಕೆ ಸರಿಸುವ ಒಂದು ಸಶಕ್ತ ಸಾಧನವಾಗಿದೆ. ಕೃತಜ್ಞತೆ ಇಲ್ಲದ ಬದುಕು ನಿಜಕ್ಕೂ ರಸಹೀನವಾದದ್ದು, ಅರ್ಥರಹಿತವಾದದ್ದು. ಅದು ಬದುಕಿನ ಸಂಬಂಧಗಳನ್ನು ಬಲಹೀನಗೊಳಿಸುತ್ತದೆ. ಆಧುನಿಕ ಕಾಲಘಟ್ಟದ ಬದುಕಿನಲ್ಲಿ ಅವಸರದ ಬದುಕು, ನಮ್ಮನು ಸುತ್ತುವರಿದಿರುವ ಸಲ್ಲದ ಸ್ವಾರ್ಥಭಾವಗಳು ಕೃತಜ್ಞತೆಯ ಭಾವವನ್ನು ದೂರಕ್ಕೆ ಸರಿಸುವ ಮೂಲಕ ಬದುಕನ್ನು ಇನ್ನಷ್ಟು ಬರಡಾಗಿಸುತ್ತಿವೆ

ಒಬ್ಬ ರಾಜನು ತನ್ನ ರಾಜ್ಯದಲ್ಲಿ ತಪ್ಪು ಮಾಡಿದ ವ್ಯಕ್ತಿಗಳನ್ನು ಶಿಕ್ಷಿಸಲು ಅತ್ಯಂತ ಕ್ರೂರವಾದ ಕೆಲವು ನಾಯಿಗಳನ್ನು ಸಾಕಿದ್ದ. ಯಾರಾದರೂ ಒಂದು ತಪ್ಪು ಮಾಡಿದರೂ ಸಾಕು ಅವರನ್ನು ನಾಯಿಗಳಿರುವ ಕೋಣೆಗೆ ನಿರ್ದಾಕ್ಷಿಣ್ಯವಾಗಿ ಹಾಕಿಬಿಡುತ್ತಿದ್ದ. ಅವು ಅಂಥ ವ್ಯಕ್ತಿಗಳ ಮೇಲೆ ಆಕ್ರಮಣ ಮಾಡಿ ಕಚ್ಚಿ ಸಾಯಿಸಿಬಿಡುತ್ತಿದ್ದವು. ಒಂದು ಬಾರಿ ಮಂತ್ರಿ ಮಾಡಿದ ಒಂದು ಸಣ್ಣ ತಪ್ಪಿಗೆ ಅವನನ್ನು ಶಿಕ್ಷಿಸಲೆಂದು ರಾಜನು ಸೈನಿಕರನ್ನು ಕರೆದು ಮಂತ್ರಿಯನ್ನು ನಾಯಿಗಳಿರುವ ಕೋಣೆಗೆ ಹಾಕಲು ಆಜ್ಞಾಪಿಸುತ್ತಾನೆ. ಮಂತ್ರಿ ಪರಿಪರಿಯಾಗಿ ಬೇಡಿಕೊಂಡರೂ ಅವನ ಯಾವುದೇ ಮಾತನ್ನು ರಾಜ ಕೇಳುವುದಿಲ್ಲ. ಪರಿಸ್ಥಿತಿಯನ್ನು ಅರ್ಥೈಸಿಕೊಂಡ ಮಂತ್ರಿ, "ರಾಜರೇ, ತಾವು ನೀಡಿದ ಶಿಕ್ಷೆಯನ್ನು ಅನುಭವಿಸಲು ಸಿದ್ಧನಿದ್ದೇನೆ. ನನ್ನ ಒಂದು ಕೊನೆಯ ಆಸೆ ಇದೆ. ನನ್ನನ್ನು ಕಚ್ಚಿ ಸಾಯಿಸುವ ಆ ನಾಯಿಗಳ ಜತೆಗೆ ನನಗೆ ಒಂದು ತಿಂಗಳವರೆಗೆ ಇರಲು ಅವಕಾಶ ಮಾಡಿಕೊಡಿ" ಎಂದು ಕೇಳುತ್ತಾನೆ. ರಾಜ ಒಪ್ಪಿಗೆ ನೀಡುತ್ತಾನೆ.



ಮಂತ್ರಿ ಅಂದಿನಿಂದಲೇ ನಾಯಿಗಳನ್ನು ಕೋಣೆಯಿಂದ ಹೊರತಂದು ಬೇರೊಂದು ಸ್ಥಳದಲ್ಲಿ ಅವುಗಳ ಜತೆ ವಾಸಿಸಲು ಪ್ರಾರಂಭಿಸುತ್ತಾನೆ. ಅವುಗಳಿಗೆ ಬೇಕಾದ ಎಲ್ಲ ಆಹಾರವನ್ನು ಖುದ್ದಾಗಿ ಪೂರೈಸುತ್ತಾನೆ. ಪ್ರತಿದಿನವೂ ಅವುಗಳ ತಲೆ ಸವರುತ್ತಾನೆ. ಮೈದಡುವುತ್ತಾನೆ. ನಾಯಿಗಳಿಗೆ ಅಗತ್ಯವಿರುವ ಎಲ್ಲವನ್ನೂ ಪೂರೈಸುತ್ತಾನೆ. ಅತ್ಯಂತ ಪ್ರೀತಿಯಿಂದ ಸಾಕಿ ಸಲಹುತ್ತಾನೆ. ಒಂದು ತಿಂಗಳು ಕಳೆದುಹೋಗುತ್ತದೆ. ರಾಜ ತನ್ನ ಸೈನಿಕರನ್ನು ಕರೆದು ಮೊದಲು ನಾಯಿಗಳನ್ನು ತಂದು ಕೋಣೆಗೆ ಹಾಕಿ, ನಂತರ ಮಂತ್ರಿಯನ್ನು ಒಳಗೆ ಹಾಕಿ ಶಿಕ್ಷಿಸಿ ಎಂದು ಹೇಳುತ್ತಾನೆ. ರಾಜ ಹೇಳಿದಂತೆ ಮಾಡಿದಾಗ ನಾಯಿಗಳು ಮಂತ್ರಿಯ ಮೇಲೆ ಆಕ್ರಮಣ ಮಾಡುವುದನ್ನು ಬಿಟ್ಟು ಅವನ ಪಾದಗಳ ಹತ್ತಿರ ಬರುತ್ತವೆ. ತಲೆ ಎತ್ತಿ ದೈನ್ಯತೆಯಿಂದ ಬಾಲ ಅಲ್ಲಾಡಿಸುತ್ತವೆ. ಇದನ್ನು ಕಂಡು ರಾಜನಿಗೆ ಆಶ್ಚರ್ಯವಾಗುತ್ತದೆ. ಮಂತ್ರಿ "ನಾಯಿಗಳಲ್ಲಿದ್ದ ಕೃತಜ್ಞತೆಯ ಭಾವದ ಪರಿಣಾಮವಾಗಿ ಅವು ನನ್ನನ್ನು ಸಾಯಿಸಲಿಲ್ಲ ಪ್ರಭು. ಕೃತಜ್ಞತೆಯಿಲ್ಲದ ನಿಮ್ಮ ಜತೆಗಿನ ಸಹವಾಸ ಸಾಕು ನನಗೆ" ಎಂದು ಹೇಳಿ ಅಲ್ಲಿಂದ ಹೊರಟು ಹೋಗುತ್ತಾನೆ.

ಕೃತಜ್ಞತೆಯು ಎಲ್ಲ ಎಲ್ಲೆಗಳನ್ನು ಮೀರಿದ ಒಂದು ಸದ್ಭಾವವಾಗಿದೆ. ಅದು ಎಲ್ಲ ಶ್ರೇಷ್ಠ ಧಾರ್ಮಿಕ ಸಂಪ್ರದಾಯಗಳ ಘನೀಕೃತ ಸಾರವಾಗಿದೆ. ಕೃತಜ್ಞತೆಯು ಇತರರೊಂದಿಗೆ ಅರ್ಥಪೂರ್ಣ ಸಂಬಂಧಗಳನ್ನು ಸ್ಥಾಪಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ಧನಾತ್ಮಕ ಮತ್ತು ಸಮತೋಲಿತ ದೃಷ್ಟಿಕೋನ ಹೊಂದುವಲ್ಲಿ, ಮಾನಸಿಕ ಆರೋಗ್ಯವನ್ನು ಹೆಚ್ಚಿಸುವಲ್ಲಿ, ಸಂತೃಪ್ತ ಜೀವನಕ್ಕೆ ರಹದಾರಿ ಒದಗಿಸುವಲ್ಲಿ ಅದು ಮುಖ್ಯವಾಗುತ್ತದೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಪರಾರಿಯಾಗುವುದನ್ನು ಹೀಗೆ ಹೇಳಿ (3)
4. ಉತ್ತಮವಾಗಿ ಮಾತನಾಡುವವನು (2)
5. ಅಗಲವಾದ ಬಾಯಿಯಿರುವ ಒಂದು ಪಾತ್ರೆ (3)
6. ಇತರರೊಂದಿಗೆ ಪಾಲ್ಗೊಳ್ಳು (5)
8. ಕಾಡಿನಲ್ಲರಳಿದ ಹೂವು (4)
9. ಬಹುವಾಗಿ ಹೊಗಳಿ ನೀಡಿದ ಪಾರಿತೋಷಕ (4)
12. ಬುದ್ಧಿಯನ್ನು ಬಳಸು ಎಂದರ್ಥ (5)
15. ನಿಯಮಿತ ಉದ್ದೇಶಕ್ಕೆ ನೇಮಿಸಿರುವ ಅಧಿಕಾರಿಗಳ ತಂಡ (3)
16. ಪುತ್ರನಿಗೆ ಅನುಸ್ವಾರ ಸೇರಿ ಸಿಕ್ಕಿದ ಕಪಿ (2)
17. ನಮ್ಮ ಸುತ್ತಮುತ್ತ ಎನ್ನುವುದನ್ನು ಸಾಮಾನ್ಯವಾಗಿ ಹೀಗೆ ಹೇಳಬಹುದು (4)

ಮೇಲಿಂದ ಕೆಳಕ್ಕೆ

1. ಸಾಮಾನ್ಯವಾಗಿ ಎಲ್ಲರಿಗೂ ಇಷ್ಟವಾಗುವ ಚುರುಮುರಿ (3)
2. ಬಂದ ಕಷ್ಟವನ್ನು ವಿವಿಧ ರೀತಿಯಲ್ಲಿ ಬಗೆಹರಿಸು (5)
3. ಅತಿಯಾದ ತೂಕವನ್ನು ಹೀಗೆ ಹೇಳಬಹುದು (4)
4. ಉಡುಪಿಯ ಬಳಿಯಿರುವ ಜಲವಿದ್ಯುತ್ ಯೋಜನೆ (3)
7. ಒಳ್ಳೆಯ ಮನಸ್ಸುಳ್ಳವಳು (3)
8. ಋತುಗಳ ರಾಜನಿವನು (3)
10. ಬರಿಯ ತೋರಿಕೆಯ ಸಿಟ್ಟು (5)
11. ಎಳೆಯ ಮಗುವಿಗೆ ಹೀಗೆ ಹೇಳಬಹುದು (4)
13. ಲೆಕ್ಕ ಬರೆಯುವವನು (3)
14. ಎಲ್ಲ ರೀತಿಯಲ್ಲೂ ಮಗನಿಗೆ ಸರಿಸಮನಾದ ಪುತ್ರಿ (3)

ಸರಿಯುತ್ತರಗಳು

ರಾಮಚರಿತ ಮಾನಸ: ರಾವಣನ ಸಭೆಯಲ್ಲಿ ರಾಮ ಭಕ್ತ ಹನುಮಂತ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಅಶೋಕವನದಲ್ಲಿ ಜಗನ್ಮಾತೆ ಸೀತೆಯ ದರ್ಶನ ಪಡೆದ ಹನುಮಂತನಿಗೆ ಒಂದು ಕ್ಷಣ ನೆಮ್ಮದಿಯ ನಿಟ್ಟುಸಿರು ಬಿಟ್ಟಂತಾಯಿತು. ತಾಯಿಯ ಆಶೀರ್ವಾದ ಪಡೆದ ಹನುಮಂತನಿಗೆ ಅತೀವ ಹಸಿವು ಕಾಣಿಸಿಕೊಂಡಿತು. ಆದರೆ ಆ ಹಸಿವು ಕೇವಲ ಹೊಟ್ಟೆಗೆ ಸಂಬಂಧಿಸಿದ್ದಲ್ಲ, ಅಧರ್ಮದ ನೆಲೆವೀಡಾದ ಲಂಕೆಯ ಅಹಂಕಾರವನ್ನು ಮರ್ದಿಸುವ ಹಸಿವಾಗಿತ್ತು ಅದು. ಸೀತೆಯ ಅಪ್ಪಣೆ ಪಡೆದು ಹಣ್ಣುಗಳನ್ನು ತಿನ್ನಲು ಆರಂಭಿಸಿದ ಹನುಮಂತನು, ನೋಡನೋಡುತ್ತಿದ್ದಂತೆಯೇ ಅಶೋಕವನವನ್ನೇ ರಣರಂಗವನ್ನಾಗಿ ಬದಲಿಸಿದನು. ದೊಡ್ಡ ದೊಡ್ಡ ಮರಗಳನ್ನು ಕಿತ್ತೆಸೆದು, ರಾವಣನ ಹೆಮ್ಮೆಯ ವನವನ್ನು ಧ್ವಂಸಗೊಳಿಸಿದನು. ಇದನ್ನು ತಡೆಯಲು ಬಂದ ಸಾವಿರಾರು ಕಿಂಕರರು ಮತ್ತು ಪ್ರಹಸ್ತನ ಪುತ್ರ ಜಾಂಬುಮಾಲಿಯನ್ನು ಹನುಮಂತನು ಕ್ಷಣಾರ್ಧದಲ್ಲಿ ಮಣ್ಣುಮುಕ್ಕಿಸಿದನು.

ಸುದ್ದಿ ಕೇಳಿದ ರಾವಣನು ಕ್ರೋಧದಿಂದ ಕೆಂಡವಾದನು. ವಾನರನನ್ನು ಬಂಧಿಸಲೆಂದು ತನ್ನ ಸಾಹಸಿಪುತ್ರ ಅಕ್ಷಯ ಕುಮಾರನನ್ನು ಕಳುಹಿಸಿದನು. ಅಕ್ಷಯ ಕುಮಾರನು ದಿವ್ಯರಥದ ಮೇಲೆ ಕುಳಿತು, ಅಹಂಕಾರದಿಂದ ಬಿಲ್ಲು ಹೂಡಿ ಬಾಣಗಳ ಮಳೆಯನ್ನೇ ಹರಿಸಿದನು. ಆದರೆ ಹನುಮಂತನಿಗೆ ಆ ಬಾಣಗಳು ಕೇವಲ ಹೂವಿನಂತೆ ಕಂಡವು. ಹನುಮಂತನು ಒಂದು ಭೀಕರ ಅಟ್ಟಹಾಸ ಮಾಡುತ್ತಾ ಆಕಾಶಕ್ಕೆ ಜಿಗಿದನು. ಗರ್ಜಿಸುತ್ತಾ ಅಕ್ಷಯ ಕುಮಾರನ ರಥದ ಮೇಲೆ ಬಿದ್ದು ಅದನ್ನು ಚೂರುಚೂರು ಮಾಡಿದನು. ಆ ಪ್ರಸಂಗವನ್ನು ತುಳಸೀದಾಸರು ಹೀಗೆ ವರ್ಣಿಸುತ್ತಾರೆ:

ಕಪಿ ಅಚ್ಛಯಕುಮಾರಹಿ ಮಾರಾ।
ಲಹಪಟ ಚಪಟ ಘಾಲಿ ಮಹಿ ಪಾರಾ॥

ಹನುಮಂತನು ಅಕ್ಷಯ ಕುಮಾರನನ್ನು ಹಿಡಿದು ಬಲವಾಗಿ ನೆಲಕ್ಕೆ ಅಪ್ಪಳಿಸಿ ಸಂಹರಿಸಿದನು. ತನ್ನ ಮಗನ ಸಾವಿನಿಂದ ರಾವಣನು ಶೋಕ ಮತ್ತು ಕೋಪದ ಸುಳಿಯಲ್ಲಿ ಸಿಲುಕಿದನು. ಕೊನೆಗೆ ಮೇಘನಾದನು (ಇಂದ್ರಜಿತು) ರಂಗಪ್ರವೇಶ ಮಾಡಿದನು. ಭೀಕರ ಯುದ್ಧದ ನಂತರ ಇಂದ್ರಜಿತುವು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಹನುಮಂತನಿಗೆ ಬ್ರಹ್ಮಾಸ್ತ್ರವನ್ನು ವಿಫಲಗೊಳಿಸುವ ಶಕ್ತಿಯಿದ್ದರೂ, ಬ್ರಹ್ಮದೇವನ ಮೇಲಿನ ಗೌರವಕ್ಕಾಗಿ ಮತ್ತು ರಾವಣನನ್ನು ನೇರವಾಗಿ ಎದುರಿಸುವ ಉದ್ದೇಶದಿಂದ ಆ ಅಸ್ತ್ರಕ್ಕೆ ಶರಣಾದನು. ರಾಕ್ಷಸರು ಹನುಮಂತನನ್ನು ನಾಗಪಾಶದಿಂದ ಕಟ್ಟಿ, ಬೀದಿಗಳಲ್ಲಿ ಎಳೆದಾಡುತ್ತಾ ರಾವಣನ ಸಭೆಗೆ ಕರೆತಂದರು.

ರಾವಣನ ಸಭೆಯು ಇಡೀ ವಿಶ್ವದ ಸಂಪತ್ತಿನಿಂದ ಜಗಮಗಿಸುತ್ತಿತ್ತು. ದೇವತೆಗಳೂ ರಾವಣನಿಗೆ ಹೆದರಿ ಕೈಮುಗಿದು ನಿಂತಿದ್ದರು. ಅಂಥ ಭಯಾನಕ ಸಭೆಯೊಳಗೆ ಹನುಮಂತನು ಬಂದಿಯಾಗಿದ್ದರೂ ಅವನ ಮುಖದಲ್ಲಿ ಕಿಂಚಿತ್ತೂ ಭಯವಿರಲಿಲ್ಲ. ಬದಲಾಗಿ, ಸಿಂಹದ ಎದುರು ನಿಂತ ಮತ್ತೊಂದು ಸಿಂಹದಂತೆ ಗಾಂಭೀರ್ಯವಿತ್ತು. ರಾವಣನು ಅಟ್ಟಹಾಸದಿಂದ "ಎಲೈ ವಾನರನೇ, ಯಾರು ನೀನು? ಯಾರ ಬಲದಿಂದ ನೀನು ನನ್ನ ಪುತ್ರನನ್ನು ಕೊಂದೆ ಮತ್ತು ನನ್ನ ವನವನ್ನು ಹಾಳು ಮಾಡಿದೆ?" ಎಂದನು.

ಆಗ ಹನುಮಂತನು ನಿರ್ಭಯದಿಂದ ರಾವಣನ ಕಣ್ಣಲ್ಲಿ ಕಣ್ಣಿಟ್ಟು, "ರಾವಣನೇ ಕೇಳು, ಯಾರ ಬಲದಿಂದ ಈ ಇಡೀ ಬ್ರಹ್ಮಾಂಡವು ಸೃಷ್ಟಿಯಾಗಿದೆಯೋ, ಯಾರ ಆಜ್ಞೆಯಿಂದ ನೀನು ಈ ಜಗತ್ತನ್ನು ಆಳುತ್ತಿದ್ದೀಯೋ, ಆ ಪರಬ್ರಹ್ಮ ಶ್ರೀರಾಮಚಂದ್ರನ ದೂತ ನಾನು. ನಿನಗೆ ಸಾವನ್ನು ಹತ್ತಿರಕ್ಕೆ ಕರೆತರುತ್ತಿರುವ ಕಾಲದೂತ ನಾನು" ಎಂದನು. ಹನುಮಂತನ ಮಾತುಗಳಲ್ಲಿ ಕಿಂಚಿತ್ತೂ ಅಹಂಕಾರವಿರಲಿಲ್ಲ, ಬದಲಾಗಿ ಸತ್ಯದ ತೇಜಸ್ಸಿತ್ತು. "ನೀನು ಎಷ್ಟೇ ಬಲಿಷ್ಠನಾದರೂ ಸೀತಾದೇವಿಯನ್ನು ಅಪಹರಿಸುವ ಮೂಲಕ ನಿನ್ನ ಸರ್ವನಾಶಕ್ಕೆ ನೀನೇ ಅಡಿಪಾಯ ಹಾಕಿಕೊಂಡಿದ್ದೀಯಾ. ಇನ್ನೂ ಕಾಲ ಮಿಂಚಿಲ್ಲ, ಅಹಂಕಾರ ಬಿಟ್ಟು ರಾಮನ ಪಾದಗಳಿಗೆ ಶರಣಾಗು" ಎಂದು ಹನುಮಂತ ಹಿತವಚನ ನೀಡಿದನು. ಸಂಕಷ್ಟದ ಸಮಯದಲ್ಲಿ, ಶತ್ರುವಿನ ಸಭೆಯಲ್ಲಿ ಒಬ್ಬ ವ್ಯಕ್ತಿ ಹೇಗೆ ಧೈರ್ಯದಿಂದಿರಬೇಕು ಮತ್ತು ಸ್ಥಿತಪ್ರಜ್ಞನಾಗಿರಬೇಕು ಎಂಬುದಕ್ಕೆ ಹನುಮಂತನ ಈ ಪ್ರಸಂಗವೇ ಸಾಕ್ಷಿ. ಸಜ್ಜನರು ಸಾವಿಗೂ ಹೆದರದೆ ಸತ್ಯವನ್ನು ಹೇಳುತ್ತಾರೆ ಎಂಬುದು ಇಲ್ಲಿ ಸಾಬೀತಾಯಿತು. ರಾವಣನ ದರ್ಪದ ಮುಂದೆ ಹನುಮಂತನ ಭಕ್ತಿ ಶಕ್ತಿಯಾಗಿ ಎದ್ದು ನಿಂತಿತ್ತು.

ನಾವು ಸರಿಯಾದ ದಾರಿಯಲ್ಲಿ ನಡೆಯುವಾಗ, ನಮ್ಮಲ್ಲಿ ಯಾವುದೇ ಅಳುಕು ಇರುವುದಿಲ್ಲ. ಯಾವ ಸ್ಥಳದಲ್ಲಿ ಯಾರ ಮುಂದೆ ಬೇಕಾದರೂ ನಿಂತು, ಅಧಿಕಾರಕ್ಕೆ ಅಂಜದೆ, ಅವರ ಸಂಪತ್ತನ್ನು ಕಂಡು ಬೆರಗಾಗದೆ ನಮ್ಮತನವನ್ನು ಉಳಿಸಿಕೊಳ್ಳುವ ಸ್ಥಿತಪ್ರಜ್ಞತೆ ನಮ್ಮಲ್ಲಿ ಇರುತ್ತದೆ. ನಾವು ಮತ್ತೊಬ್ಬರ ಹಣ, ಅಧಿಕಾರ, ಉಪಕಾರದ ಹಂಗಿಗೆ ಬೀಳದಿದ್ದಾಗ ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ತಲೆಯೆತ್ತಿ ಬದುಕಬಹುದು.

ನೀವೂ ಬರೆಯಬಹುದು
ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಮುಂಬೈ ಕ್ರಿಕೆಟ್ ಸಂಸ್ಥೆ: ಗುತ್ತಿಗೆ ಪದ್ಧತಿ ಆರಂಭ

ಮುಂಬೈ: ಮುಂಬೈ ಕ್ರಿಕೆಟ್ ಸಂಸ್ಥೆಯು (ಎಂಸಿಎ) ತನ್ನ ಆಟಗಾರರ ಗುತ್ತಿಗೆ ಪದ್ಧತಿಯನ್ನು ಆರಂಭಿಸಿದೆ. ಈ ಪದ್ಧತಿಯನ್ನು ಮೊತ್ತ ಮೊದಲ ಬಾರಿಗೆ ಆರಂಭಿಸಿದ ರಾಜ್ಯ ಕ್ರಿಕೆಟ್ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಎ ಶ್ರೇಣಿಯ ಆಟಗಾರರು ವಾರ್ಷಿಕ ರು.12 ಲಕ್ಷದಿಂದ 20 ಲಕ್ಷದ ವರೆಗೆ. ಬಿ ಶ್ರೇಣಿಯ ಆಟಗಾರರು 8ರಿಂದ 12 ಲಕ್ಷ ಮತ್ತು ಸಿ ಶ್ರೇಣಿಯ ಆಟಗಾರರು 9 ಲಕ್ಷ ರು. ವರೆಗೆ ಪಡೆಯಲಿದ್ದಾರೆ. ಆಟಗಾರರನ್ನು ಅವರು ಆಡುವ ಮಾದರಿಗಳು, ಅನುಭವ ಮತ್ತು ಸಾಧನೆಯ ಆಧಾರದಲ್ಲಿ ಈ ಗುತ್ತಿಗೆಗೆ ಆಯ್ಕೆ ಮಾಡಲಾಗುತ್ತದೆ. 'ಈ ಉಪಕ್ರಮದಿಂದ ದೇಶಿ ಆಟಗಾರರಿಗೆ ಆರ್ಥಿಕ ಭದ್ರತೆ ಮತ್ತು ವೃತ್ತಿಪರ ಚೌಕಟ್ಟು ದೊರೆಯಲಿದೆ. ಉದಯೋನ್ಮುಖ ಕ್ರಿಕೆಟಿಗರಿಗೆ ದೀರ್ಘಕಾಲದ ಅವಕಾಶವೂ ಸಿಗಲಿದೆ' ಎಂದು ಮುಂಬೈ ಕ್ರಿಕೆಟ್ ಅಸೋಸಿಯೇಶನ್ ತಿಳಿಸಿದೆ.

ಫೋನ್ ಬಳಕೆ: ಆರ್‌ಆರ್ ಮ್ಯಾನೇಜರ್‌ಗೆ ದಂಡ

ದೆಹಲಿ: ಗುವಾಹಟಿಯ ಬರ್ಸಪರ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದಿದ್ದ ಆರ್‌ಸಿಬಿ ಹಾಗೂ ರಾಜಸ್ಥಾನ ತಂಡಗಳ ನಡುವಿನ ಪಂದ್ಯದಲ್ಲಿ ಮೊಬೈಲ್ ಫೋನ್ ಬಳಸಿ ಐಪಿಎಲ್ ನಿಯಮವನ್ನು ಉಲ್ಲಂಘಿಸಿದ ಕಾರಣ ಆರ್‌ಆರ್ ತಂಡದ ಮ್ಯಾನೇಜರ್ ರೋಮಿ ಭಿಂದರ್ ಅವರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ 1 ಲಕ್ಷ ರು. ದಂಡ ಹಾಗೂ ಕಟ್ಟುನಿಟ್ಟಿನ ಎಚ್ಚರಿಕೆಯನ್ನು ನೀಡಿದೆ. ಡಗೌಟ್‌ನಲ್ಲಿ ಕುಳಿತಿದ್ದ ರೋಮಿ ಭಿಂದರ್ ಅವರು ಮೊಬೈಲ್ ಫೋನ್ ಬಳಸುತ್ತಿದ್ದಿದ್ದು ಖಚಿತವಾಗಿದ್ದಲ್ಲದೆ, ಆ ವಿಡಿಯೊ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು.

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಪಾಯಿಂಟ್
ಪಂಜಾಬ್	5	4	0	9
ಆರ್‌ಸಿಬಿ	5	4	1	8
ರಾಜಸ್ಥಾನ್	5	4	1	8
ಗುಜರಾತ್	5	3	2	6
ಹೈದರಾಬಾದ್	5	2	3	4
ಡೆಲ್ಲಿ	4	2	2	4
ಲಖನೌ	5	2	3	4
ಚೆನ್ನೈ	5	2	3	4
ಮುಂಬೈ	5	1	4	2
ಕೋಲ್ಕತ್ತಾ	6	0	5	1

ತವರು ಸ್ಟೇಡಿಯಂನಲ್ಲಿ 4ನೇ ಗೆಲುವಿನತ್ತ ಪಾಟೀದಾರ್ ಬಳಗ ಕಣ್ಣು

ಆರ್‌ಸಿಬಿಗೆ ಇಂದು ಡೆಲ್ಲಿ ಎದುರಾಳಿ

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ.

ಈಗಾಗಲೇ ಒಟ್ಟು 5 ಪಂದ್ಯಗಳನ್ನು ಆಡಿರುವ ರಜತ್ ಪಾಟೀದಾರ್ ನಾಯಕತ್ವದ ಆರ್‌ಸಿಬಿ 4 ಪಂದ್ಯಗಳನ್ನು ಗೆದ್ದು, 8 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದೆ. 5 ಪಂದ್ಯಗಳನ್ನು ಆಡಿ, 2 ಪಂದ್ಯಗಳನ್ನು ಗೆದ್ದು 2 ಪಂದ್ಯಗಳಲ್ಲಿ ಸೋತಿರುವ ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ತಂಡವು 4 ಅಂಕಗಳನ್ನು ಗಳಿಸಿ 5ನೇ ಸ್ಥಾನದಲ್ಲಿದೆ.

ಡೆಲ್ಲಿ ತಂಡದಲ್ಲಿರುವ ಕನ್ನಡಿಗ ಕೆಎಲ್ ರಾಹುಲ್‌ಗೆ ಇದು ತವರಿನ ಪಂದ್ಯ. ಇದೇ ಕ್ರೀಡಾಂಗಣದಲ್ಲಿ ಅವರು ಆಡಿ ಬೆಳೆದ ಕಾರಣ ಅವರು ಪಂದ್ಯದ ಪ್ರಮುಖ ಹೈಲೆಟ್ಸ್ ಆಗಿದ್ದಾರೆ. ಅಲ್ಲದೆ ಶನಿವಾರ ಅವರ ಹುಟ್ಟುಹಬ್ಬವೂ ಆಗಿರುವ ಕಾರಣ ಆರ್‌ಸಿಬಿ ಅಭಿಮಾನಿಗಳ ಬೆಂಬಲವೂ ರಾಹುಲ್‌ಗೆ ಸಿಗಲಿದೆ.

ಮುಖಾಮುಖಿ: ಉಭಯ ತಂಡಗಳು ಈವರೆಗೆ ಐಪಿಎಲ್‌ನಲ್ಲಿ 33 ಬಾರಿ ಮುಖಾಮುಖಿಯಾಗಿವೆ. ಈ ಪೈಕಿ ಆರ್‌ಸಿಬಿ ಗರಿಷ್ಠ 20 ಪಂದ್ಯಗಳನ್ನು ಗೆದ್ದರೆ, ಡೆಲ್ಲಿ 12 ಪಂದ್ಯ ಜಯಿಸಿದೆ. ಒಂದು ಪಂದ್ಯ ಫಲಿತಾಂಶ ಕಂಡಿಲ್ಲ.

ಬ್ಯಾಟಿಂಗ್ ಸ್ನೇಹಿ ಪಿಚ್: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಯಾವಾಗಲೂ ಬ್ಯಾಟಿಂಗ್‌ಸ್ನೇಹಿ ಪಿಚ್ ಆಗಿದೆ. ಔಟ್‌ಫೀಲ್ಡ್ ಕೂಡ ತುಂಬಾ ಹತ್ತಿರ ಇರುವ ಕಾರಣ ಬ್ಯಾಟರ್‌ಗಳಿಗೆ ಇದು ಸ್ವರ್ಗ ಸದೃಶ ಮೈದಾನವಾಗಿದೆ. ಹೀಗಾಗಿ ಬೌಲರ್‌ಗಳು ಇಲ್ಲಿ ಶಕ್ತಿಗಿಂತ ಯುಕ್ತಿಯನ್ನು ಪ್ರದರ್ಶಿಸಬೇಕಿದೆ. ಸ್ಲೋ ಬೌಲಿಂಗ್ ಮೂಲಕ ಬ್ಯಾಟರ್‌ಗಳನ್ನು ಕಟ್ಟಿಹಾಕಬೇಕಿದೆ. ಸ್ಪಿನ್ನರ್‌ಗಳಿಗೆ ಈ ಪಿಚ್ ಹೆಚ್ಚು ನೆರವು ನೀಡುತ್ತದೆ. ಆದ್ದರಿಂದ ಎರಡೂ ತಂಡಗಳು ಸ್ಪಿನ್ ಬೌಲರ್‌ಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬಹುದು. ಚೇಸಿಂಗ್ ನಡೆಸುವ ತಂಡಗಳೇ ಇಲ್ಲಿ ಹೆಚ್ಚಾಗಿ ಗೆದ್ದಿರುವ ಕಾರಣ ಟಾಸ್ ಗೆದ್ದ ನಾಯಕ ಫೀಲ್ಡಿಂಗ್ ಆಯ್ಕೆ ಮಾಡಿಕೊಳ್ಳಬಹುದು.

ಫೋಟೋ: ಸುಧಾಕರ್ ದೇವರಾಜ್

ಆರ್‌ಸಿಬಿ ಸಂಭಾವ್ಯ ತಂಡ

ರಜತ್ ಪಾಟೀದಾರ್ (ನಾಯಕ), ಫಿಲ್ ಸಾಲ್ಟ್, ದೇವದತ್ ಪಡಿಕ್ಕಲ್, ಜಿತೇಶ್ ಶರ್ಮಾ (ಕೀಪರ್), ಟಿಮ್ ಡೇವಿಡ್, ಕೃನಾಲ್ ಪಾಂಡ್ಯ, ರೊಮಾರಿಯೊ ಶೆಫರ್ಡ್, ಭುವನೇಶ್ವರ್ ಕುಮಾರ್, ಜೋಶ್ ಹ್ಯಾಜಲ್‌ವುಡ್, ರಸಿಖ್ ಸಲಾಮ್ ದಾರ್, ಸುಯಾಶ್ ಶರ್ಮಾ.
ಇಂಪ್ಯಾಕ್ಟ್ ಪ್ಲೇಯರ್: ವಿರಾಟ್ ಕೊಹ್ಲಿ.

ಡೆಲ್ಲಿ ಸಂಭಾವ್ಯ ತಂಡ

ಅಕ್ಷರ್ ಪಟೇಲ್ (ನಾಯಕ), ಪಾತುಮ್ ನಿಸ್ಸಾಂಕ, ಕೆಎಲ್ ರಾಹುಲ್ (ಕೀಪರ್), ಸಮೀರ್ ರಿಜ್ವಿ, ಡೇವಿಡ್ ಮಿಲ್ಲರ್, ಟ್ರಿಸ್ಟಾನ್ ಸ್ಟಬ್ಸ್, ಔಕಿಬ್ ನಬಿ ದಾರ್, ಲುಂಗಿ ಎನ್‌ಗಿಡಿ, ಕುಲದೀಪ್ ಯಾದವ್, ಟಿ ನಟರಾಜನ್, ಮುಖೇಶ್ ಕುಮಾರ್.
ಇಂಪ್ಯಾಕ್ಟ್ ಪ್ಲೇಯರ್: ಅಶುತೋಷ್ ಶರ್ಮಾ

ಇಂದಿನ ಪಂದ್ಯ

ಆರ್‌ಸಿಬಿ-ಡೆಲ್ಲಿ ಕ್ಯಾಪಿಟಲ್ಸ್
ತಾಣ: ಚಿನ್ನಸ್ವಾಮಿ ಸ್ಟೇಡಿಯಂ
ಸಮಯ: ಅಪರಾಹ್ನ 3.30

ಗಿಲ್ ಭರ್ಜರಿ ಬ್ಯಾಟಿಂಗ್ | ಕೋಲ್ಕತಾಗೆ ಸೋಲು

ಗುಜರಾತ್‌ಗೆ ತವರಲ್ಲಿ ಜಯ

ಅಹಮದಾಬಾದ್: ಇಲ್ಲಿನ ಮೋದಿ ಸ್ಟೇಡಿಯಂನಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಗುಜರಾತ್ ತಂಡವು ಶುಭ್‌ಮನ್ ಗಿಲ್ ಅವರ ಆಕರ್ಷಕ ಬ್ಯಾಟಿಂಗ್ ಮತ್ತು ಕಗಿಸೊ ರಬಡ ಅವರ ಉತ್ತಮ ಬೌಲಿಂಗ್ ನೆರವಿನಿಂದ ಕೋಲ್ಕತ್ತಾ ವಿರುದ್ಧ 5 ವಿಕೆಟ್‌ಗಳ ಜಯ ಸಾಧಿಸಿತು. ಮೊದಲು ಬ್ಯಾಟ್ ಮಾಡಿದ್ದ ಕೋಲ್ಕತಾ 180 ರನ್‌ಗೆ ಆಲೌಟ್ ಆಗಿತ್ತು. 181 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ ಗುಜರಾತ್ ಟೈಟಾನ್ಸ್ ತಂಡವು 19.4 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಗೆಲುವನ್ನು ತನ್ನದನ್ನಾಗಿಸಿಕೊಂಡಿತು.

ಗುಜರಾತ್ ಪರ ಸಾಯಿ ಸುದರ್ಶನ್-ಶುಭ್‌ಮನ್ ಜೋಡಿ ಮೊದಲ ವಿಕೆಟ್‌ಗೆ 57 ರನ್ ಕಲೆ ಹಾಕಿತು. 22 ರನ್ ಗಳಿಸಿದ್ದ ವೇಳೆ ವಿಕೆಟ್ ಕಳೆದುಕೊಂಡ ಸುದರ್ಶನ್ ಜಾಗಕ್ಕೆ ಬಂದ ಬಟ್ಲರ್ 15 ಬಾಲ್‌ಗಳಲ್ಲಿ 25 ರನ್ ಬಾರಿಸಿ ಔಟ್ ಆದರು. ವಾಷಿಂಗ್ಟನ್ ಸುಂದರ್ ಕೇವಲ 13 ರನ್ ಗಳಿಸಿದ್ದ ವೇಳೆ ವಿಕೆಟ್ ಕಳೆದುಕೊಂಡರು.

ಆ ನಂತರ ಕ್ರೀಸ್‌ಗೆ ಬಂದ ಗ್ಲೆನ್ ಫಿಲಿಪ್ಸ್ ನಾಯಕ ಗಿಲ್‌ಗೆ ಜತೆಯಾದರು. 50 ಬಾಲ್‌ಗಳಲ್ಲಿ 86 ರನ್ ಗಳಿಸಿದ್ದ ವೇಳೆ ಶುಭ್‌ಮನ್ ಗಿಲ್ ಆರೋರಾ ಬೌಲಿಂಗ್‌ನಲ್ಲಿ ಔಟ್ ಆದರು. ಅವರ ಭರ್ಜರಿ ಇನ್ನಿಂಗ್ಸ್‌ನಲ್ಲಿ 4 ಸಿಕ್ಸರ್ ಮತ್ತು 8 ಬೌಂಡರಿಗಳಿದ್ದವು. ಮೊದಲು ಬ್ಯಾಟ್ ಮಾಡಿದ ಕೊಲ್ಕತಾ ತಂಡವು ಕ್ಯಾಮರೂನ್ ಗ್ರೀನ್ ಅವರು ಆಕರ್ಷಕ ಬ್ಯಾಟಿಂಗ್ ನೆರವಿನಿಂದ 180 ರನ್ ಗಳಿಸಿತ್ತು. ಮೊದಲ ಓವರ್‌ನಲ್ಲೇ ಕೋಲ್ಕತ್ತಾ ನಾಯಕ ಅಜಿಂಕ್ಯ ರಹಾನೆ ಔಟಾದರು. 2ನೇ ಓವರ್‌ನಲ್ಲಿ ಕೆಕೆಆರ್ ತಂಡದ ಅಗ್ಕ್ರಿಶ್ ರಘುವಂಶಿ ಅವರನ್ನು ಕಗಿಸೊ ರಬಾಡ ಔಟ್ ಮಾಡಿದರು. ಬಳಿಕ ಟಿಮ್ ಸೀಫರ್ಟ್ ಅವರು 14 ಎಸೆತಗಳಲ್ಲಿ 19 ರನ್ ಗಳಿಸಿದ್ದ ವೇಳೆ ರಬಡ ಬೌಲಿಂಗ್‌ನಲ್ಲಿ ಔಟಾದರು.

ಗುಜರಾತ್‌ನ ಮಧ್ಯಮ ಕ್ರಮಾಂಕದ ಆಟಗಾರ ಕ್ಯಾಮರೂನ್ ಗ್ರೀನ್ ಅವರು ಕ್ರೀಸ್‌ನಲ್ಲಿ ಬಹಳ ಹೊತ್ತು ನಿಂತು ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದರು. ಅವರು 55 ಬಾಲ್‌ಗಳಲ್ಲಿ 79 ರನ್ ಗಳಿಸಿದ್ದ ವೇಳೆ ರಶೀದ್ ಖಾನ್ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು. ಅವರ ಇನ್ನಿಂಗ್ಸ್‌ನಲ್ಲಿ 7 ಬೌಂಡರಿ ಮತ್ತು 4 ಸಿಕ್ಸರ್‌ಗಳಿದ್ದವು. ಪೊವೆಲ್ 20 ಬಾಲ್‌ಗಳನ್ನು ಎದುರಿಸಿ 27 ರನ್ ಗಳಿಸಿ ಔಟಾದರೆ, ಅನುಕುಲ್ ರಾಯ್ ಕೇವಲ 7 ಎಸೆತಗಳನ್ನು ಎದುರಿಸಿ 9 ರನ್ ಗಳಿಸಿದ್ದ ವೇಳೆ ವಿಕೆಟ್ ಒಪ್ಪಿಸಿದರು. ರಿಂಕು ಸಿಂಗ್ ಕೇವಲ 2 ಬಾಲ್ ಎದುರಿಸಿ 1 ರನ್ ಗಳಿಸಿ ವಿಕೆಟ್ ಕಳೆದುಕೊಂಡರೆ, ರಮಣ್‌ದೀಪ್ ಸಿಂಗ್ 17 ರನ್ ಗಳಿಸಿದರು.

ಚೆನ್ನೈನಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಲೀಗ್ ಹಂತದ ಪಂದ್ಯದ ವಿರುದ್ಧ ಆರೋಪ

ಟಿ20 ವಿಶ್ವಕಪ್ ಮ್ಯಾಚ್ ಫಿಕ್ಸಿಂಗ್ ತನಿಖೆ

ದೆಹಲಿ: ಇತ್ತೀಚೆಗೆ ಮುಕ್ತಾಯಗೊಂಡ ಟಿ20 ವಿಶ್ವಕಪ್‌ನಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆದಿರುವ ಬಗ್ಗೆ ಗಂಭೀರ ಆರೋಪ ಕೇಳಿ ಬಂದಿದ್ದು ಈ ಸಂಬಂಧ ಐಸಿಸಿ ತನಿಖೆ ಪ್ರಾರಂಭಿಸಿದೆ. ಭಾರತ-ಶ್ರೀಲಂಕಾ ಜಂಟಿಯಾಗಿ ಆಯೋಜಿಸಿದ್ದ ಈ ಟೂರ್ನಿಯ ಫೈನಲ್‌ನಲ್ಲಿ ಟೀಮ್ ಇಂಡಿಯಾ ನ್ಯೂಜಿಲೆಂಡ್ ಅನ್ನು ಸೋಲಿಸುವ ಮೂಲಕ ಮೂರನೇ ಬಾರಿಗೆ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

ಪಂದ್ಯಾವಳಿ ಮುಗಿದು 1 ತಿಂಗಳಿಗೂ ಹೆಚ್ಚಿನ ಸಮಯದ ಬಳಿಕ ಟೂರ್ನಿಯ ಲೀಗ್ ಹಂತದ ಪಂದ್ಯಾವಳಿ ವೇಳೆ ಮ್ಯಾಚ್ ಫಿಕ್ಸಿಂಗ್ ನಡೆದಿದೆ ಎಂಬ ಗಂಭೀರ ಆರೋಪ ಕೇಳಿ ಬಂದಿದೆ. ಈ ಸಂಬಂಧ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) ಭ್ರಷ್ಟಾಚಾರ ನಿಗ್ರಹ ಘಟಕ (ಎಸಿಯು) ತನಿಖೆ ಯನ್ನು ಪ್ರಾರಂಭಿಸಿದೆ. ಟಿ20 ವಿಶ್ವಕಪ್‌ನ 31ನೇ ಪಂದ್ಯವು ಕೆನಡಾ ಮತ್ತು ನ್ಯೂಜಿಲೆಂಡ್ ನಡುವೆ ನಡೆದಿತ್ತು. ಆ ಪಂದ್ಯವು ಮ್ಯಾಚ್ ಫಿಕ್ಸಿಂಗ್ ಆರೋಪ ಗಳಿಂದ ತುಂಬಿದೆ. ಪಂದ್ಯದ ಸಮಯದಲ್ಲಿ ಕೆನಡಾದ ನಾಯಕ ದಿಲ್‌ಪ್ರೀತ್ ಬಾಜ್ವಾ ಬೌಲಿಂಗ್ ಮಾಡಿದ ಓವರ್ ಬಗ್ಗೆ ತನಿಖೆ ಪ್ರಾರಂಭಿಸಲಾಗಿದೆ. ಚೆನ್ನೈನ ಚೆಪಾಕ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಕೆನಡಾ ಕ್ರಿಕೆಟ್ ಮಂಡಳಿಯು ಮ್ಯಾಚ್ ಫಿಕ್ಸಿಂಗ್‌ನಲ್ಲಿ ತೊಡಗಿದೆ ಎಂದು ಆರೋಪಿಸಲಾಗಿತ್ತು.

ಇಂದು ಹೈದರಾಬಾದ್-ಚೆನ್ನೈ ಪಂದ್ಯ

ಹೈದರಾಬಾದ್: ರಾಜೀವ್ ಗಾಂಧಿ ಸ್ಟೇಡಿಯಂನಲ್ಲಿ ಆತಿಥೇಯ ಹೈದರಾಬಾದ್ ಮತ್ತು ಚೆನ್ನೈ ನಡುವಿನ ಇಂದು ಪಂದ್ಯ ಇಂದು ನಡೆಯಲಿದೆ. ಈಗಾಗಲೇ 5 ಪಂದ್ಯಗಳನ್ನು ಆಡಿರುವ ಸನ್ ರೈಸರ್ಸ್ ಹೈದರಾಬಾದ್ ತಂಡವು ಒಟ್ಟು 5 ಪಂದ್ಯಗಳನ್ನಾಡಿದ್ದು, 2 ಪಂದ್ಯಗಳಲ್ಲಿ ಗೆದ್ದು 3 ಪಂದ್ಯ ಗಳಲ್ಲಿ ಸೋತಿದೆ. ಚೆನ್ನೈ ಸೂಪರ್ ಕಿಂಗ್ಸ್ ತಂಡ ಕೂಡಾ 5 ಪಂದ್ಯಗಳನ್ನು ಆಡಿದ್ದು, 2ರಲ್ಲಿ ಗೆದ್ದು, 3ರಲ್ಲಿ ಸೋತಿದೆ. ತನ್ನ ಮೊದಲ ಪಂದ್ಯದಲ್ಲಿ ಇಶಾನ್ ಕಿಶನ್ ನಾಯಕತ್ವದ ಹೈದರಾಬಾದ್ ತಂಡವು ಆರ್‌ಸಿಬಿ ವಿರುದ್ಧ ಸೋತರೆ, 2ನೇ ಪಂದ್ಯದಲ್ಲಿ ಕೋಲ್ಕತ್ತಾ ವಿರುದ್ಧ ಜಯ ಗಳಿಸಿತ್ತು. 3ನೇ ಪಂದ್ಯದಲ್ಲಿ ಲಖನೌ ವಿರುದ್ಧ ಸೋತ ಹೈದರಾಬಾದ್, 4ನೇ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಸೋತಿತ್ತು. ಆದರೆ 5 ಪಂದ್ಯದಲ್ಲಿ ರಾಜಸ್ಥಾನದ ವಿರುದ್ಧ ಜಯ ಗಳಿಸಿತ್ತು. ಋತುರಾಜ್ ಗಾಯಕ್ವಾಡ್ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಗುಜರಾತ್ ವಿರುದ್ಧ, 2ನೇ ಪಂದ್ಯದಲ್ಲಿ ರಾಜಸ್ಥಾನ್ ವಿರುದ್ಧ ಹಾಗೂ 3ನೇ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಸೋಲುಂಡಿತ್ತು. ಆದರೆ ತನ್ನ 4ನೇ ಪಂದ್ಯದಲ್ಲಿ ಮುಂಬೈ ಮತ್ತು 5ನೇ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಅದು ಜಯ ಗಳಿಸಿ ಮತ್ತೆ ಟೂರ್ನಿಯಲ್ಲಿ ಲಯ ಕಂಡುಕೊಂಡಿದೆ.

ಇಂದಿನ ಪಂದ್ಯ

ಹೈದರಾಬಾದ್-ಚೆನ್ನೈ
ಸಮಯ: ರಾ. 7.30
ತಾಣ: ರಾಜೀವ್ ಗಾಂಧಿ ಸ್ಟೇಡಿಯಂ

ಇತ್ತೀಚೆಗಷ್ಟೇ ವಿಜಯ್ ದಳಪತಿ ಅಭಿನಯದ ಜನನಾಯಗನ್ ಚಿತ್ರದ ಸಿನಿಮಾ ಲೀಕ್ ಆಗಿತ್ತು. ಸುಮಾರು ಇಪ್ಪತ್ತೊಂದು ನಿಮಿಷಗಳ ದೃಶ್ಯ ಸೋಷಿಯಲ್ ಮೀಡಿಯಾದಲ್ಲಿ ಹರಿದಾಡಿತ್ತು. ಇದು ಚಿತ್ರತಂಡಕ್ಕೂ ನಷ್ಟ ತಂದೊಡ್ಡಿತು. ಇದನ್ನು ಕೂಡಲೇ ಗಮನಿಸಿದ ಚಿತ್ರತಂಡ ಸಿನಿಮಾದ ದೃಶ್ಯಗಳನ್ನು ಲೀಕ್ ಮಾಡಿದವರ ವಿರುದ್ಧ ಕಾನೂನು ಸಮರ ಸಾರಿ ಅವರ ವಿರುದ್ಧ ಕಾನೂನು ರೀತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮಾಡಿತ್ತು. ಆ ಬಳಿಕ ದೊಡ್ಡ ದೊಡ್ಡ ಸಿನಿಮಾಗಳಿಗೂ ಪೈರಸಿ ಕಾಟ ಆರಂಭವಾಗಿತ್ತು. ಹಾಗಾಗಿ ಹೈಬಜೆಟ್ ಸಿನಿಮಾಗಳು ಎಚ್ಚೆತ್ತುಕೊಂಡಿದ್ದವು. ಈ ನಡುವೆಯೇ ಜೈಲರ್ 2 ಚಿತ್ರದ ಕೆಲವು ಸನ್ನಿವೇಶಗಳು ಲೀಕ್ ಆಗಿವೆ. ಇದು ಚಿತ್ರತಂಡಕ್ಕೆ ತಲೆನೋವಾಗಿ ಪರಿಣಮಿಸಿದೆ. ಜೈಲರ್ ಸಿನಿಮಾದ ದೃಶ್ಯಗಳು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡಿದ್ದೇ ತಡ ಕೂಡಲೇ ಎಚ್ಚೆತ್ತುಕೊಂಡ ಸಿನಿಮಾತಂಡ ಆ ದೃಶ್ಯಗಳನ್ನು ಡಿಲೀಟ್ ಮಾಡಿಸಿದೆ. ಅಲ್ಲದೆ ಮುಂದೆ ತಮ್ಮ ಚಿತ್ರಕ್ಕೆ ಪೈರಸಿ ಕಾಟ ಕಾಡದಂತೆ ಎಚ್ಚರಿಕೆ ವಹಿಸಿದೆ. ನೆಲ್ಸನ್ ದಿಲೀಪ್ ಕುಮಾರ್, ಜೈಲರ್ 2 ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದು, ರಜನಿಕಾಂತ್ ಜೈಲರ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅಲ್ಲದೆ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ನರಸಿಂಹನಾಗಿ ಅಬ್ಬರಿಸಲಿದ್ದಾರೆ. ವಿಶೇಷ ಎಂದರೆ ಬಾಲಿವುಡ್ ನಟ ಶಾರುಖ್ ಖಾನ್ ಕೂಡ ಈ ಸಿನಿಮಾದ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಉಳಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ಜೈಲರ್‌ಗೂ ಕಾಡಿದ ಪೈರಸಿ ಕಾಟ

ಎಚ್ಚೆತ್ತುಕೊಂಡ ವಾರಣಾಸಿ: ಬಾಹುಬಲಿ ನಿರ್ದೇಶಕ ರಾಜಮೌಳಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ವಾರಣಾಸಿ ಚಿತ್ರ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ಮಹೇಶ್ ಬಾಬು ನಾಯಕನಾಗಿ ನಟಿಸುತ್ತಿರುವ ಈ ಚಿತ್ರ ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ. ಈಗ ವಾರಣಾಸಿಗೂ ಪೈರಸಿ ಕಾಟ ಕಾಡುತ್ತಿದೆ. ಆರಂಭದಲ್ಲಿಯೇ ಸಿನಿಮಾದ ಸನ್ನಿವೇಶಗಳು ಲೀಕ್ ಆಗುವ ಭಯ ವ್ಯಕ್ತವಾಗುತ್ತಿದ್ದು ಸಿನಿಮಾತಂಡ ಈಗಾಗಲೇ ಮುಂಜಾಗ್ರತೆ ಕ್ರಮಕೈಗೊಂಡಿದೆ. ಪ್ರಿಯಾಂಕಾ ಚೋಪ್ರಾ ಈ ಚಿತ್ರದ ನಾಯಕಿಯಾಗಿ ನಟಿಸುತ್ತಿದ್ದು, ಕಿಚ್ಚ ಸುದೀಪ್ ಪವರ್ ಫುಲ್ ರೋಲ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಕ್ಯಾನ್ಸ್ ಚಿತ್ರೋತ್ಸವಕ್ಕೆ ಸೆಪ್ಟೆಂಬರ್ 21

ಕರೆನ್ ಕ್ಷಿತಿ ಸುವರ್ಣ ನಿರ್ದೇಶನದ ಸೆಪ್ಟೆಂಬರ್ 21, ಎಪ್ಪತ್ತೊಂಬತ್ತನೇ ಕ್ಯಾನ್ಸ್ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ. ಆಲ್ಝೈಮರ್ ಮತ್ತು ಆರೈಕೆದಾರರ ಕುರಿತಾದ ಕಥೆಯ ಈ ಸಿನಿಮಾ, ಹಿಂದಿ ಮತ್ತು ಕನ್ನಡದಲ್ಲಿ ನಿರ್ಮಾಣವಾಗಿದೆ. ಸೆಪ್ಟೆಂಬರ್ 21 ಮೇ 16ರಂದು ಕ್ಯಾನ್ಸ್ ಚಿತ್ರೋತ್ಸವದಲ್ಲಿ ಪ್ರದರ್ಶನವಾಗಲಿದೆ. ಪ್ರಿಯಾಂಕಾ ಉಪೇಂದ್ರ, ಜರೀನಾ ವಹಾಬ್, ಪ್ರವೀಣ್ ಸಿಂಗ್ ಸಿಸೋಡಿಯಾ, ಅಜಿತ್ ಶಿಧಯೆ ಮತ್ತು ಅಮಿತ್ ಬೆಹ್ಲ್ ಚಿತ್ರ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಕ್ಷಿತಿ ಸುವರ್ಣ ಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರ ವಿಸಿಕಾ ಫಿಲಂಸ್, ಎಫ್ಎಂಡಿ ಪ್ರೊಡಕ್ಷನ್ಸ್, ಹಮಾರಾಮೂವಿ ಮತ್ತು ಫಿಲಂಮ್ಯಾಕ್ಸ್‌ನಲ್ಲಿ ನಿರ್ಮಾಣವಾಗಿದೆ. ಸೆಪ್ಟೆಂಬರ್ 21 ಬಿಡುಗಡೆಗೂ ಮೊದಲೇ ಹನ್ನೆರಡು ನಗರಗಳಲ್ಲಿ ಪ್ರೀಮಿಯರ್ ಆಗಲಿದೆ. ಮುಂಬೈ ಪಶ್ಚಿಮ, ಮುಂಬೈ ಸೆಂಟ್ರಲ್, ಪುಣೆ, ಔರಂಗಾಬಾದ್, ಹೈದರಾಬಾದ್, ಬೆಂಗಳೂರು, ಮಂಗಳೂರು, ದೆಹಲಿ-ನೋಯ್ಡಾ, ಲಕ್ನೋ, ಕೋಲ್ಕತ್ತಾ, ದುಬೈ, ಮತ್ತು ನ್ಯೂಯಾರ್ಕ್‌ನಲ್ಲಿ ಪ್ರದರ್ಶನಗೊಳ್ಳಲಿದೆ. ಆಲ್ಝೈಮರ್ ರೋಗಿಗಳಿಗಿಂತ ಅವರನ್ನು ನೋಡಿಕೊಳ್ಳುವವರ ಸಂಕಷ್ಟ ಬಹಳ ದೊಡ್ಡದು. ಪ್ರೇಕ್ಷಕರಿಗೆ ಆ ಮೌನ ಮತ್ತು ಭಾವನಾತ್ಮಕ ಭಾರವನ್ನು ಅನುಭವಿಸುವಂತೆ ಮಾಡಬೇಕೆಂದುಕೊಂಡೆ ಎನ್ನುತ್ತಾರೆ ನಿರ್ದೇಶಕಿ ಕರೆನ್. ರಾಜಶೇಖರ್ ಬರೆದು ವಿನಯ್ ಚಂದ್ರಾ, ಸಂಗೀತ ನೀಡಿರುವ ಚಿತ್ರವು, ಬುದ್ಧಿಮಾಂದ್ಯತೆಯಿಂದ ಬಳಲುವ ತಂದೆ ಮತ್ತು ಮಹತ್ವಾಕಾಂಕ್ಷೆ-ಕರ್ತವ್ಯದ ನಡುವೆ ಸಿಲುಕಿದ ಮಗನ ಕಥೆ ಹೇಳುತ್ತದೆ. ಪ್ರಿಯಾಂಕಾ ಉಪೇಂದ್ರ, ಈ ಚಿತ್ರದಲ್ಲಿ ಬಹಳ ಮಹತ್ವದ ಪಾತ್ರ ನಿರ್ವಹಿಸಿದ್ದು ಬಹು ದಿನಗಳ ಬಳಿಕ ಹಿಂದಿ ಚಿತ್ರರಂಗಕ್ಕೆ ಎಂಟ್ರಿಕೊಡುತ್ತಿದ್ದಾರೆ.

ಮ್ಯಾಂಗೋ ಪಚ್ಚದಲ್ಲಿ ಡಾಲಿ

ಕಿಚ್ಚ ಸುದೀಪ್ ಅಕ್ಕನ ಮಗ, ಸಂಚಿತ್ ಸಂಜೀವ್ ಅಭಿನಯದ ಮ್ಯಾಂಗೋ ಪಚ್ಚ ಚಿತ್ರ ಸಂಕ್ರಾಂತಿಗೆ ತೆರೆಗೆ ಬರಬೇಕಿತ್ತು. ಆದರೆ ಕಾರಣಾಂತಗಳಿಂದ ಸಿನಿಮಾದ ಬಿಡುಗಡೆಯ ದಿನಾಂಕವನ್ನು ಮುಂದೂಡಲಾಗಿತ್ತು, ಅದಕ್ಕೆ ಕಾರಣ ಚಿತ್ರದ ಕ್ಲೈಮ್ಯಾಕ್ಸ್ ಎನ್ನಲಾಗುತ್ತಿದೆ. ಯಾಕೆಂದರೆ ಮ್ಯಾಂಗೋ ಪಚ್ಚ ಸಿನಿಮಾದ ಕ್ಲೈಮ್ಯಾಕ್ಸ್ ಅನ್ನು ಅದ್ದೂರಿಯಾಗಿ ತೆರೆಯಲ್ಲಿ ಚಿತ್ರಿಸಲಾಗುತ್ತಿದೆ. ವಿಶೇಷ ಎಂದರೆ ಡಾಲಿ ಧನಂಜಯ ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದು ಚಿತ್ರದ ಬಗ್ಗೆ ಕುತೂಹಲ ಕೆರಳಿಸುವಂತೆ ಮಾಡಿದೆ. ಈಗಿನ ಎಲ್ಲಾ ಸಿನಿಮಾಗಳಲ್ಲಿ ಕ್ಲೈಮ್ಯಾಕ್ಸ್ ದೃಶ್ಯಗಳು ವಿಭಿನ್ನವಾಗಿರುತ್ತವೆ. ಅದರಲ್ಲಿಯೂ ಸ್ಟಾರ್ ನಟರೂ ಅಂತಿಮ ದೃಶ್ಯದಲ್ಲಿ ಕಾಣಿಸಿಕೊಳ್ಳುವ ಮೂಲಕ ಸಿನಿಮಾದ ನಿರೀಕ್ಷೆ ದುಪ್ಪಟ್ಟುಗೊಳಿಸುತ್ತಾರೆ. ಈ ಪ್ರಯೋಗ ಕಬ್ಜ ಸಿನಿಮಾದಲ್ಲಿ ಯಶಸ್ವಿಯಾಗಿದೆ. ಹಾಗಾಗಿ ಮ್ಯಾಂಗೋ ಪಚ್ಚದಲ್ಲಿ ಅದೇ ಪ್ರಯತ್ನ ಮಾಡಲಾಗುತ್ತಿದೆ. ಇದು ಕ್ರೈಂ ಥ್ರಿಲ್ಲರ್ ಜಾನರ್‌ನ ಸಿನಿಮಾವಾಗಿದ್ದು, ವಿವೇಕ್ ನಿರ್ದೇಶನ ಮಾಡುತ್ತಿದ್ದಾರೆ. ಕಾಜಲ್ ಕುಂದರ್ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಸಂಚಿತ್ ನಟನೆಯ ಚೊಚ್ಚಲ ಚಿತ್ರ ಇದಾಗಿದ್ದು ಆರಂಭದಿಂದಲೂ ಕುತೂಹಲ ದುಪ್ಪಟ್ಟುಗೊಳಿಸಿದೆ. ಸಿನಿಮಾದ ಹಾಡುಗಳು ದಾಖಲೆ ಬೆಲೆ ಮಾರಾಟವಾಗಿದ್ದು ಇದು ಚಿತ್ರತಂಡಕ್ಕೆ ಖುಷಿಕೊಟ್ಟಿದೆ.

ಹೊಸಬರಿಗೆ ವೇದಿಕೆ ನೀಡಿದ ನಾಗತಿಹಳ್ಳಿ

ಅಮೇರಿಕಾ ಅಮೇರಿಕಾ-2, ನನ್ನ ಪ್ರೀತಿಯ ಹುಡುಗಿ, ಅಮೃತಧಾರೆ, ಪ್ಯಾರಿಸ್ ಪ್ರಣಯ ಹೀಗೆ ಮುಂತಾದ ಹಿಟ್ ಚಿತ್ರಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದ, ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಹಲವು ಹೊಸ ಪ್ರತಿಭೆಗಳನ್ನು ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ. ಇದರಲ್ಲಿ ಗೋಲ್ಡನ್ ಸ್ಟಾರ್ ಗಣೇಶ್, ಕರಿ ಬಸವಯ್ಯ, ಧ್ಯಾನ್, ರಘು ಮುಖರ್ಜಿ, ದೀಪಾಲಿ, ಮನೋಮೂರ್ತಿ ಮುಂತಾದವರು ಸೇರಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಮೇಷ್ಟ್ರು ಎಂದೇ ಪ್ರಖ್ಯಾತಿ ಪಡೆದಿರುವ ಡಾ.ನಾಗತಿಹಳ್ಳಿ ಚಂದ್ರಶೇಖರ್ ಅವರು ಟೆಂಟ್ ಸಿನಿಮಾ ಶಾಲೆಯನ್ನು ಸ್ಥಾಪಿಸಿದ್ದು, ಕಳೆದ ಹದಿನಾಲ್ಕು ವರ್ಷದಿಂದ ಚಿತ್ರರಂಗಕ್ಕೆ ಹಲವಾರು ಪ್ರತಿಭೆಗಳನ್ನು ಪರಚಯಿಸಿದ್ದಾರೆ.

ಈ ರಂಗಶಾಲೆಯಲ್ಲಿ ಸಿನಿಮಾರಂಗದ ಅನೇಕ ಕ್ಷೇತ್ರಗಳಾದ ನಟನೆ, ನಿರ್ದೇಶನ, ಛಾಯಾಗ್ರಹಣ, ಸಂಕಲನ ಮುಂತಾದ ವಿಷಯಗಳಲ್ಲಿ ಡಿಪ್ಲೋಮಾ ಕೋರ್ಸ್‌ಗಳು ಹಾಗೂ ವರ್ಕ್‌ಶಾಪ್‌ಗಳನ್ನು ನಡೆಸಲಾಗುತ್ತಿದೆ. ಚಿತ್ರರಂಗದ ಗಣ್ಯರು, ಅನುಭವಸ್ಥರು, ನುರಿತ ತಂತ್ರಜ್ಞರು ಈ ಶಾಲೆಯ ಉಪನ್ಯಾಸಕರಾಗಿದ್ದು ಮಾರ್ಗದರ್ಶನ ನೀಡುತ್ತಿದ್ದಾರೆ. ಹಾಗಾಗಿ ನಾಗತಿಹಳ್ಳಿ ಚಂದ್ರಶೇಖರ್ ಅವರು ತಮ್ಮ ಮುಂದಿನ ಚಿತ್ರಗಳಿಗೆ ತಮ್ಮ ಗರಡಿಯಲ್ಲಿ ಪಳಗಿದ ಹೊಸ ಪ್ರತಿಭೆಗಳಿಗೆ ಅವಕಾಶ ನೀಡುತ್ತಿದ್ದಾರೆ. ನಟನೆ ಮಾತ್ರವಲ್ಲದೆ ಸಿನಿಮಾ ತಾಂತ್ರಿಕ ವಿಭಾಗದಲ್ಲಿಯೂ ಹೊಸ ಪ್ರತಿಭೆಗಳನ್ನು ರೂಪಿಸುತ್ತಿದ್ದಾರೆ.

ಬರಲಿದೆ ಅಮೇರಿಕಾ ಅಮೇರಿಕಾ-2

ಮೂವತ್ತು ವರ್ಷಗಳ ಹಿಂದೆ ತೆರೆಗೆ ಬಂದ ಅಮೇರಿಕಾ ಸಿನಿಮಾ ಚಂದನವನದಲ್ಲಿ ತಮ್ಮದೇ ಆದ ಛಾಪು ಮೂಡಿಸಿತ್ತು. ಇಂದಿಗೂ ಆ ಸಿನಿಮಾ ಸಿನಿಪ್ರಿಯರ ಮನದಾಳದಲ್ಲಿ ಉಳಿದಿದೆ. ಈ ಹಿಂದೆಯೇ ಬೆಳ್ಳಿಹಬ್ಬ ಆಚರಿಸಿಕೊಂಡ ಅಮೇರಿಕಾ ಅಮೇರಿಕಾ, ಮುಂದುವರಿದ ಭಾಗ ಮೂಡಿಬರಲಿದೆ. ಮುಂದಿನ ಭಾಗದಲ್ಲಿ ಹಿರಿಯ ನಟರ ಜತೆಗೆ ಕಿರಿಯ ಹೊಸ ಪ್ರತಿಭೆಗಳಿಗೂ ಕೂಡ ಅವಕಾಶ ಸಿಗಲಿದೆ.